BG - GPO/ 2515 /WPP-47/ 2009 - 2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬ | ಬೆಂಗಳೂರು, ಗುರುವಾರ, ಜೂನ್ ೧೬, ೨೦೧೧ (ಜ್ಯೇಷ್ಠ ೨೬, ಶಕ ವರ್ಷ ೧೯೩೩) | ಸಂಚಿಕೆ ೨೪

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ದಿನಾಂಕ 16-06-2011

ವಿಶೇಷ ರಾಜ್ಯಪತ್ರ ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
543	03-6-2011	**No. KLA/LGA/27/Bill/2011, Bangalore, Dated: 3rd June, 2011**
544	03-6-2011	**No. KLA/LGA/28/Bill/2011, Bangalore, Dated: 3rd June, 2011**
545	03-6-2011	ಸಂಖ್ಯೆ: ರಾಚುಆ.21.ಇಯುಬಿ.2011, ಬೆಂಗಳೂರು ದಿನಾಂಕ: 03-06-2011
546	04-6-2011	**No. HFW 141 HSM 2009, Bangalore, Dated: 03-06-2011**
547	04-6-2011	ಸಂಖ್ಯೆ: ಕಾಇ 26 ಎಲ್‌ಎಂಡಬ್ಲ್ಯೂ 2011, ಬೆಂಗಳೂರು, ದಿನಾಂಕ: 03-06-2011.
548	04-6-2011	ಸಂಖ್ಯೆ: ಕಾಇ 5 ಎಲ್‌ಎಂಡಬ್ಲ್ಯೂ 2011, ಬೆಂಗಳೂರು, ದಿನಾಂಕ: 03-06-2011
549	04-6-2011	ಸಂಖ್ಯೆ: ಕಾಇ 33 ಎಲ್‌ಎಂಡಬ್ಲ್ಯೂ 2011, ಬೆಂಗಳೂರು, ದಿನಾಂಕ: 03-06-2011
550	04-6-2011	ಸಂಖ್ಯೆ: ಗ್ರಾಅಪ 115 ಜಿಪಸ 2011, ಬೆಂಗಳೂರು, ದಿನಾಂಕ: 04-06-2011.
551	06-6-2011	ಸಂ.ಇಎಲ್‌ಎನ್(2)ಸಿಆರ್/02/2011-12, ದಿನಾಂಕ 06/06/2011
552	06-6-2011	ಸಂಖ್ಯೆ: ಆರ್‌ಡಿ 741 ಎಲ್‌ಜಿಬಿ 2010, ಬೆಂಗಳೂರು, ದಿನಾಂಕ: 3ನೇ ಜೂನ್, 2011
553	06-6-2011	ಸಂಖ್ಯೆ: ಸಿಐ 202 ಎಸ್.ಪಿ.ಕ್ಯೂ 2011, ಬೆಂಗಳೂರು, ದಿನಾಂಕ: 3ನೇ ಜೂನ್, 2011
554	06-6-2011	ಸಂಖ್ಯೆ: ಸಿಐ 211 ಎಸ್.ಪಿ.ಕ್ಯೂ 2011, ಬೆಂಗಳೂರು, ದಿನಾಂಕ: 3ನೇ ಜೂನ್, 2011
555	06-6-2011	**No. KLA/LGA/29/Bill/2011, Bangalore, Dated: 6th June, 2011**
556	06-6-2011	ಸಂಖ್ಯೆ: ಗ್ರಾಅಪ 17 ಪಬವ 2005, ಬೆಂಗಳೂರು, ದಿನಾಂಕ : 06.6.2011
557	07-6-2011	ಸಂ.ಇಎಲ್‌ಎನ್/ಸಿಆರ್10/ಕೆಎಲ್‌ಆರ್-1/10-11, ದಿನಾಂಕ 07/06/2011
558	07-6-2011	ಸಂ.ಇಎಲ್‌ಎನ್/ಸಿಆರ್10/ಎಂಎಲ್‌ಆರ್-2/10-11, ದಿನಾಂಕ 07/06/2011
559	07-6-2011	ಸಂ. ಇಎಲ್‌ಎನ್/ಸಿಆರ್10/ಎಂಬಿಎಲ್-4/10-11, ದಿನಾಂಕ 07/06/2011
560	07-6-2011	ಸಂ. ಇಎಲ್‌ಎನ್/ಸಿಆರ್10/ಬಿಪೇಟೆ-3/10-11, ದಿನಾಂಕ 07/06/2011
561	07-6-2011	ಸಂ.ಇಎಲ್‌ಎನ್/ಸಿಆರ್10/ಎಸ್‌ವಿಪಿ-5/10-11, ದಿನಾಂಕ 07/06/2011

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.
http//www.Kar.nic.in/gazette.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.

http//www.Kar.nic.in/gazette.

೨೦೧೧-೨೦೧೨ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು		ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ – 1	....	21-00	831-00
2.	ಭಾಗ – 2	....	5-00	182-00
3.	ಭಾಗ – 3	....	10-00	411-00
4.	ಭಾಗ – 4	....	3-00	109-00
5.	ಭಾಗ – 4ಎ	....	11-00	435-00
6.	ಭಾಗ – 5	....	22-00	879-00
7.	ಭಾಗ – 6	(ಬೆಂಗಳೂರು)................	9-00	363-00
8.	ಭಾಗ – 6ಎ	(ಮೈಸೂರು)..................	25-00	964-00
9.	ಭಾಗ – 6ಬಿ	(ಧಾರವಾಡ).................	45-00	1763-00
10.	ಭಾಗ – 6ಸಿ	(ಗುಲ್ಬರ್ಗ).................	29-00	1162-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ.ಸ. 1 ರಿಂದ 7 .... (ಭಾಗ–1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ		81-00	3210-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ,			

೨೦೧೧-೨೦೧೨ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ–4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	16-50
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗದಿಪಡಿಸಿರುವುದು
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :– 1. ಚಂದಾ ಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು **"0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು"** ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI–ಎ, VI–ಬಿ, VI–ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು–59

ಮುದ್ರಕರು :–ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು–59

KA/BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಜೂನ್ ೧೬, ೨೦೧೧, (ಜ್ಯೇಷ್ಠ ೨೬, ಶಕ ವರ್ಷ ೧೯೩೩)	ಸಂಚಿಕೆ ೨೪

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ತಾತ್ಕಾಲಿಕ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 138 ಸಆಸೇ 2009, ದಿನಾಂಕ : 30-03-2009.
2. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 184 ಸಆಸೇ 2010 ದಿನಾಂಕ : 12-04-2010.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರ ಪತ್ರಸಂಖ್ಯೆ : ಐಟಿಡಿ 16 ಡಿಐಎಸ್ 2010, ದಿನಾಂಕ : 10-03-2011.

ಪ್ರಸ್ತಾವನೆ:

ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ಸರ್ಕಾರದ ಸಚಿವಾಲಯದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ಸೃಜಿಸಲಾಗಿರುವ ತಾತ್ಕಾಲಿಕ ಹುದ್ದೆಗಳನ್ನು ದಿನಾಂಕ : 01-04-2010 ರಿಂದ 31-03-2011ರ ವರೆಗೆ ಮುಂದುವರೆಸಲಾಗಿತ್ತು. ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ : 01-04-2011 ರಿಂದ 31-03-2012ರವರೆಗೆ ಮುಂದುವರೆಸುವಂತೆ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಕೋರಿದೆ.

1.	ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ	1 ಹುದ್ದೆ
2.	ವಿಶೇಷ ಕರ್ತವ್ಯಾಧಿಕಾರಿ (ವೇತನ ಶ್ರೇಣಿ ರಹಿತ)	1 ಹುದ್ದೆ
3.	ಉಪ ಕಾರ್ಯದರ್ಶಿ	1 ಹುದ್ದೆ
4.	ಆರ್ಥಿಕ ಸಲಹೆಗಾರರು (ವೇತನ ಶ್ರೇಣಿ ರಹಿತ)	1 ಹುದ್ದೆ
5.	ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ	1 ಹುದ್ದೆ
6.	ಶಾಖಾಧಿಕಾರಿ	1 ಹುದ್ದೆ
7.	ಪತ್ರಾಂಕಿತ ಆಪ್ತ ಸಹಾಯಕರು	1 ಹುದ್ದೆ
8.	ಹಿರಿಯ ಸಹಾಯಕರು/ಶೀಘ್ರಲಿಪಿಗಾರರು	3 ಹುದ್ದೆಗಳು
9.	ಕಿರಿಯ ಸಹಾಯಕರು	1 ಹುದ್ದೆ
10.	ದಲಾಯತ್	3 ಹುದ್ದೆಗಳು
11.	ಚಾಲಕರು	2 ಹುದ್ದೆಗಳು
	ಒಟ್ಟು	16 ಹುದ್ದೆಗಳು

ಈ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 179 ಸಿಅಸೇ 2011, ಬೆಂಗಳೂರು, ದಿನಾಂಕ: 23-03-2011

ಕರ್ನಾಟಕ ಸರ್ಕಾರದ ಸಚಿವಾಲಯದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ : 01-04-2011 ರಿಂದ 31-03-2012 ವರೆಗೆ ತಾತ್ಕಾಲಿಕವಾಗಿ ಮುಂದುವರೆಸಲಾಗಿದೆ.

1.	ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ	1 ಹುದ್ದೆ
2.	ವಿಶೇಷ ಕರ್ತವ್ಯಾಧಿಕಾರಿ (ವೇತನ ಶ್ರೇಣಿ ರಹಿತ)	1 ಹುದ್ದೆ
3.	ಉಪ ಕಾರ್ಯದರ್ಶಿ	1 ಹುದ್ದೆ
4.	ಆರ್ಥಿಕ ಸಲಹೆಗಾರರು (ವೇತನ ಶ್ರೇಣಿ ರಹಿತ)	1 ಹುದ್ದೆ
5.	ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ	1 ಹುದ್ದೆ
6.	ಶಾಖಾಧಿಕಾರಿ	1 ಹುದ್ದೆ
7.	ಪತ್ರಾಂಕಿತ ಆಪ್ತ ಸಹಾಯಕರು	1 ಹುದ್ದೆ
8.	ಹಿರಿಯ ಸಹಾಯಕರು/ಶೀಘ್ರಲಿಪಿಗಾರರು	3 ಹುದ್ದೆಗಳು
9.	ಕಿರಿಯ ಸಹಾಯಕರು	1 ಹುದ್ದೆ
10.	ದಲಾಯತ್	3 ಹುದ್ದೆಗಳು
11.	ಚಾಲಕರು	2 ಹುದ್ದೆಗಳು
	ಒಟ್ಟು	16 ಹುದ್ದೆಗಳು

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ : 10-07-1996 ರಲ್ಲಿ ಪ್ರತ್ಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವೆಗಳು-3)

ಪಿ.ಆರ್. 893

ಕಂದಾಯ ಸಚಿವಾಲಯ

ವಿಷಯ : ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು, ತಳುಕು ಹೋಬಳಿ, ಉಳ್ಳರ್ತಿ ಕಾವಲ್ ಸ.ನಂ. 1ರಲ್ಲಿ 1-00 ಎಕರೆ ಜಮೀನನ್ನು ಪರಿಶಿಷ್ಟ ಜಾತಿಯವರಿಗೆ ನಿವೇಶನ ಹಂಚಿಕೆಗಾಗಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿಗಳು ಚಿತ್ರದುರ್ಗ ಜಿಲ್ಲೆ ಚಿತ್ರದುರ್ಗ ರವರ ಪತ್ರ ಸಂಖ್ಯೆ : ಎಲ್‌ಎನ್‌ಡಿ : ಸಿಆರ್/19/10-11 ದಿನಾಂಕ : 08-05-2010.

ಪ್ರಸ್ತಾವನೆ:

ಜಿಲ್ಲಾಧಿಕಾರಿಗಳು ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ, ರವರು ಮೇಲೆ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ವರದಿ ಮಾಡುತ್ತಾ, ಚಳ್ಳಕೆರೆ ತಾಲ್ಲೂಕು, ತಳುಕು ಹೋಬಳಿ, ಉಳ್ಳರ್ತಿ ಕಾವಲ್ ಸ.ನಂ. 1ರಲ್ಲಿ ಒಟ್ಟು 2143.36 ಎಕರೆ ಅಮೃತ್ ಮಹಲ್ ಕಾವಲ್ ಜಮೀನಿರುತ್ತದೆ. ಇದರಲ್ಲಿ 1410.00 ಎಕರೆ ಜಮೀನನ್ನು ಬಾಬಾ ಅಣು ಸಂಶೋಧನೆ ಕೇಂದ್ರಕ್ಕೆ, ಇಸ್ರೋ ಸಂಸ್ಥೆಗೆ 473.20 ಎಕರೆ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತಕ್ಕೆ 250-00 ಎಕರೆ ಜಮೀನು ಮಂಜೂರಾತಿಗೆ ಪ್ರಸ್ತಾಪಿಸಲಾಗಿದೆ. ಇದೇ ಸ.ನಂ.ನಲ್ಲಿ 1-00 ಎಕರೆ ಜಮೀನನ್ನು ನಿವೇಶನ ರಹಿತ ಪರಿಶಿಷ್ಟ ಜಾತಿಯ ಕುಟುಂಬದವರಿಗೆ ಮಂಜೂರಾತಿ ನೀಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ : 48 : ಎಲ್‌ಜಿಸಿ : 2010, ಬೆಂಗಳೂರು, ದಿನಾಂಕ: 21-12-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು, ತಳುಕು ಹೋಬಳಿ, ಉಳ್ಳರ್ತಿ ಕಾವಲ್ ಸ.ನಂ. 1ರಲ್ಲಿ 1-00 ಎಕರೆ ಅಮೃತ್ ಮಹಲ್ ಕಾವಲ್ ಜಮೀನನ್ನು ಕರ್ನಾಟಕ ಭೂಕಂದಾಯ ನಿಯಮಗಳು 1966ರ ನಿಯಮ 97(4)ರಡಿಯಲ್ಲಿನ ಅವಕಾಶದಂತೆ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಕರ್ನಾಟಕ ಭೂಮಂಜೂರಾತಿ ನಿಯಮಗಳು 1969ರ ನಿಯಮ 18(A)ರನ್ವಯ ನಿವೇಶನ ರಹಿತರಿಗೆ ಉಚಿತವಾಗಿ ನಿವೇಶನ ಹಂಚಲು, ಸದರಿ 1-00 ಎಕರೆ ಜಮೀನನ್ನು ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 71ರಡಿ ಕಾಯ್ದಿರಿಸಿ ಚಳ್ಳಕೆರೆ ತಾಲ್ಲೂಕು ಪಂಚಾಯಿತಿಗೆ ಹಸ್ತಾಂತರಿಸಲು ಆದೇಶಿಸಿದೆ.

ಈ ಆದೇಶವನ್ನು ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯವರ ಅನಧಿಕೃತ ಟಿಪ್ಪಣಿ ಸಂಖ್ಯೆ : ಪಸಂಮಿ : 09 : ಅಮಾಭೂ : 2010 ದಿ : 04-11-2010ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಜಿ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಮಂಜೂರಾತಿ-3)

ಪಿ.ಆರ್. 894

ಕಂದಾಯ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕಿನ ಅಣೂರು ಗ್ರಾಮದ ರಿ.ಸ.ನಂ. 28 ಮತ್ತು 60ರಲ್ಲಿ ಒಟ್ಟು 14 ಎಕರೆ 30 ಗುಂಟೆ ಜಮೀನನ್ನು ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಸಲುವಾಗಿ ಮೆ: ಸರ್ಜಾನ್ ರಿಯಾಲಿಟೀಸ್ ಲಿಮಿಟೆಡ್ ರವರಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರ ಪತ್ರ ಸಂಖ್ಯೆ : ಕ್ರಸಂ : ಪ್ರಾಆಬೆ : ಎಲ್‌ಜಿಎಲ್ : ವಿವ-35:09-10 ದಿ: 23-03-2010 ಮತ್ತು 23-06-2010.

ಪ್ರಸ್ತಾವನೆ:

ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರು ಮೇಲೆ ಓದಲಾದ ದಿನಾಂಕ : 23-03-2010ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕು, ಅಣೂರು ಗ್ರಾಮದ ಸ.ನಂ.28 ಹಾಗೂ ಸ.ನಂ.60 ರಲ್ಲಿನ ಒಟ್ಟು 14 ಎಕರೆ 30 ಗುಂಟೆ ಜಮೀನನ್ನು 30 ವರ್ಷಗಳ ಅವಧಿಗೆ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಸಲುವಾಗಿ ಮೆ: ಸರ್ಜಾನ್ ರಿಯಾಲಿಟೀಸ್ ಲಿಮಿಟೆಡ್ ರವರಿಗೆ ಗುತ್ತಿಗೆ ನೀಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2. ಪ್ರಸ್ತಾವನೆ ಪರಿಶೀಲಿಸಲಾಗಿ ಮೆ: ಸರ್ಜಾನ್ ರಿಯಾಲಿಟೀಸ್ ಲಿಮಿಟೆಡ್ ರವರಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರಾತಿಗಾಗಿ ಪ್ರಸ್ತಾಪಿಸಿರುವ ಅಣೂರು ಗ್ರಾಮದ ಸ.ನಂ.28ರ ಜಮೀನು ಆರ್‌ಟಿಸಿಯ ಕಲಂ 9ರಲ್ಲಿ **ಶ್ರೀ ಮಲ್ಲೇಶ್ವರ** ಗುಡ್ಡ ಎಂಬುದಾಗಿ ವರ್ಗೀಕೃತಗೊಂಡಿದ್ದು 140 ಎಕರೆ 34 ಗುಂಟೆ ಇರುತ್ತದೆ. ಹಾಗೆಯೇ ಸ.ನಂ. 60ರ ಜಮೀನು ಆರ್‌ಟಿಸಿಯ ಕಲಂ 9ರಲ್ಲಿ **ಗುಡ್ಡ** ಎಂಬುದಾಗಿ ವರ್ಗೀಕೃತಗೊಂಡಿದ್ದು 19 ಎಕರೆ 35 ಗುಂಟೆ ಇರುತ್ತದೆ. ಪ್ರಸ್ತಾಪಿತ ಜಮೀನು ಸರ್ಕಾರಿ ಗುಡ್ಡದ ಜಮೀನಾಗಿದ್ದು ಯಾವುದೇ ಬೆಲೆ ಬಾಳುವ ಗಿಡಮರ/ಕಟ್ಟಡಗಳು ಇರುವುದಿಲ್ಲ. ಪ್ರಸ್ತಾಪಿತ ಜಮೀನು ಅತಿಕ್ರಮಣದಿಂದ ಮುಕ್ತವಿದ್ದು ಬೇರೆ ಯಾವುದೇ ಉದ್ದೇಶಕ್ಕೆ ಜಮೀನು ಮಂಜೂರಾತಿ ಕುರಿತು ಪ್ರಸ್ತಾವನೆ ಸಲ್ಲಿಸಿರುವುದಿಲ್ಲ. ಹಾಗೂ ಅರ್ಜಿದಾರ ಸಂಸ್ಥೆಗೆ ಪ್ರಸ್ತಾಪಿತ ಜಮೀನಿನಲ್ಲಿ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸಲು ಯಾವುದೇ ಅಭ್ಯಂತರ ಇರುವುದಿಲ್ಲ ಎಂಬುದಾಗಿ ಗ್ರಾಮ ಪಂಚಾಯತ್ ಬೀಸಲಹಳ್ಳಿ ರವರು ತಿಳಿಸಿರುತ್ತಾರೆಂದು ವರದಿ ಮಾಡುತ್ತಾ ಸದರಿ 14.30 ಎಕರೆ ಜಮೀನನ್ನು ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸಲು 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಬಹುದೆಂದು ಜಿಲ್ಲಾಧಿಕಾರಿಗಳು, ಹಾವೇರಿ ರವರು ಶಿಫಾರಸ್ಸುಮಾಡಿರುತ್ತಾರೆಂದು ವರದಿ ಮಾಡಿದ್ದಾರೆ. ಹಾಗೆಯೇ ಅಣೂರು ಗ್ರಾಮದ ಜಮೀನಿನ ಮಾರುಕಟ್ಟೆ ಬೆಲೆ ಎಕರೆ ಒಂದಕ್ಕೆ ರೂ. 55,000/- ಇರುವುದಾಗಿ ವರದಿ ಮಾಡಿದ್ದಾರೆ.

3. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ : 31 : ಎಲ್‌ಜಿಡಿ : 2010, ಬೆಂಗಳೂರು, ದಿನಾಂಕ: 09-02-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕು ಅಣೂರು ಗ್ರಾಮದ ಸ.ನಂ.28 ರಲ್ಲಿನ 140 ಎಕರೆ 34 ಗುಂಟೆ ಜಮೀನಿನ ಪೈಕಿ 10 ಎಕರೆ 28 ಗುಂಟೆ ಜಮೀನು ಹಾಗೂ ಸದರಿ ಗ್ರಾಮದ ಸ.ನಂ.60 ರಲ್ಲಿನ 19 ಎಕರೆ 35 ಗುಂಟೆ ಜಮೀನಿನ ಪೈಕಿ 4 ಎಕರೆ 02 ಗುಂಟೆ ಒಟ್ಟು 14 ಎಕರೆ 30 ಗುಂಟೆ ಜಮೀನನ್ನು ಸದರಿ ಜಮೀನಿನ ಪ್ರಚಲಿತ ಮಾರುಕಟ್ಟೆ ದರದ ಶೇ. 10ರಷ್ಟು ಗುತ್ತಿಗೆ ದರ ನಿಗದಿಪಡಿಸಿ ಸದರಿ ಗುತ್ತಿಗೆ ದರವನ್ನು ಪ್ರತಿ ಎರಡು ವರ್ಷಗಳಿಗೊಮ್ಮೆ ಶೇಕಡ 10ರಷ್ಟು ಗುತ್ತಿಗೆ ದರ ಹೆಚ್ಚಿಸುವ ಷರತ್ತಿಗೊಳಪಟ್ಟು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 19(3)(ಬಿ)ರನ್ವಯ 30 ವರ್ಷಗಳ ಅವಧಿಗೆ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಉದ್ದೇಶಕ್ಕಾಗಿ ಮೆ: ಸರ್ಜಾನ್ ರಿಯಾಲಿಟೀಸ್ ಲಿಮಿಟೆಡ್ ರವರಿಗೆ ಗುತ್ತಿಗೆ ನೀಡಲು ಸರ್ಕಾರದ ಅನುಮತಿ ನೀಡಿ ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ : ಆಇ/940/ವೆಚ್ಚ-7/2011 ದಿನಾಂಕ : 01-02-2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಜೆ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಮಂಜೂರಾತಿ-3)

ಪಿ.ಆರ್. 895

ಕಂದಾಯ ಸಚಿವಾಲಯ

ವಿಷಯ : ರಾಯಚೂರು ಜಿಲ್ಲೆ, ಸಿಂದನೂರು ತಾಲ್ಲೂಕಿನ ಕಲ್ಮಂಗಿ ಗ್ರಾಮದ ಜಮೀನಿನ ಸ.ನಂ. 290 ರಲ್ಲಿನ 9.66 ಹೆಕ್ಟೇರ್ ಮತ್ತು ನಂ. 313ರಲ್ಲಿ 7.77 ಹೆಕ್ಟೇರ್ ಒಟ್ಟು 17.43 ಹೆಕ್ಟೇರ್ ಜಮೀನನ್ನು ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಸಲುವಾಗಿ ಮೆ: ಸುಜಲಾನ್ ಇನ್‌ಫ್ರಾಸ್ಟ್ರಕ್ಚರ್ ಲಿ., ಇವರಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ರಾಯಚೂರು ರವರ ಪತ್ರ ಸಂಖ್ಯೆ : ಎಲ್‌ಎನ್‌ಡಿ/142/2010-11 ದಿನಾಂಕ : 24-09-2010 ಮತ್ತು ದಿನಾಂಕ : 21-01-2011.

ಪ್ರಸ್ತಾವನೆ:

ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ರಾಯಚೂರು ರವರ ಮೇಲೆ ಓದಲಾದ ದಿನಾಂಕ : 24-09-2010ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ರಾಯಚೂರು ಜಿಲ್ಲೆ, ಸಿಂಧನೂರು ತಾಲ್ಲೂಕು, ಕಲ್ಮಂಗಿ ಗ್ರಾಮದ ಸ.ನಂ. 290ರಲ್ಲಿ 426.02 ಎಕರೆ ಮತ್ತು ಸ.ನಂ. 313ರಲ್ಲಿ 443.37 ಎಕರೆ ಜಮೀನನ್ನು ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಸಲುವಾಗಿ ಮೆ: ಸುಜಲಾನ್ ಇನ್‌ಫ್ರಾಸ್ಟ್ರಕ್ಚರ್ ಲಿ., ರವರಿಗೆ ಗುತ್ತಿಗೆ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

2. ಪ್ರಸ್ತಾವನೆ ಪರಿಶೀಲಿಸಲಾಗಿ ಮಂಜೂರಾತಿಗಾಗಿ ಪ್ರಸ್ತಾಪಿಸಿರುವ ಕಲ್ಮಂಗಿ ಗ್ರಾಮದ ಸ.ನಂ. 290ರ ಜಮೀನು ಆರ್‌ಟಿಸಿಯ ಕಲಂ 9ರಲ್ಲಿ **ಗಾಯರಾಣ ಅರಣ್ಯ ಇಲಾಖೆ** ಎಂಬುದಾಗಿ ವರ್ಗೀಕೃತಗೊಂಡಿದ್ದು 422.02 ಎಕರೆ ಇರುತ್ತದೆ. ಸ.ನಂ. 313ರ ಜಮೀನು ಆರ್‌ಟಿಸಿಯ ಕಲಂ 9ರಲ್ಲಿ **ಸರ್ಕಾರಿ ಗುಡ್ಡ ಅರಣ್ಯ ಇಲಾಖೆ** ಎಂಬುದಾಗಿ ವರ್ಗೀಕೃತಗೊಂಡಿರುತ್ತದೆ. ಜಿಲ್ಲಾಧಿಕಾರಿಗಳ ವರದಿಯಂತೆ ಕಲ್ಮಂಗಿ ಗ್ರಾಮದ ಸ.ನಂ. 290ರಲ್ಲಿ 426.02 ಎಕರೆ ಮತ್ತು ಸ.ನಂ. 313ರಲ್ಲಿ 443.37 ಎಕರೆ ಜಮೀನುಗಳನ್ನು ಕರ್ನಾಟಕ ಅರಣ್ಯ ಕಾಯ್ದೆ 1963(ಕರ್ನಾಟಕ ಕಾಯ್ದೆ 1964ರ ಕಲಂ 5) ಕಲಂ 4ರನ್ವಯ ಕಾಯ್ದಿಟ್ಟ ಅರಣ್ಯಗಳಾಗಿ ರೂಪಿಸಿ ಪ್ರಕಟಣೆ ಹೊರಡಿಸಲು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಅರಣ್ಯ ಭವನ ಬೆಂಗಳೂರು ಇವರಿಗೆ ಉಪ ಸಂರಕ್ಷಣಾಧಿಕಾರಿಗಳು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆದರೆ ಪ್ರಕಟಣೆ ಹೊರಡಿಸಲು ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಲು ಹಿಂದಿರುಗಿಸಲಾಗಿದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ತಿಳಿಸಿರುತ್ತಾರೆಂದು ವರದಿ ಮಾಡಿದ್ದಾರೆ. ಅಲ್ಲದೆ ಅರಣ್ಯ ಕ್ಷೇತ್ರ ನಿರ್ಧಾರಾಧಿಕಾರಿಗಳು ಬಳ್ಳಾರಿ ರವರು ಜಿಲ್ಲಾಧಿಕಾರಿಗಳು ರಾಯಚೂರು ರವರಿಗೆ ವಿಳಾಸಿಸಿ ಬರೆದಿರುವ ದಿನಾಂಕ : 18-01-2011ರ ಪತ್ರದಲ್ಲಿ ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ಕಲ್ಮಂಗಿ ಗ್ರಾಮದ ಜಮೀನಿನ ಸ.ನಂ.290 ಮತ್ತು 313ರ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಅರಣ್ಯ ಅಧಿನಿಯಮ 1963 ಕಲಂ 4ಅನ್ವಯ ಘೋಷಣೆಯಾದ ಬಗ್ಗೆ ಯಾವುದೇ ನೋಟಿಫಿಕೇಷನ್ ಅಥವಾ ಅಧಿಸೂಚನೆ ಈ ಕಚೇರಿಗೆ ಇದುವರೆಗೂ ಸ್ವೀಕೃತವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

3. ಮೆ: ಸುಜಲಾನ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ರವರಿಗೆ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸಲು ಮಂಜೂರಾತಿಗಾಗಿ ಪ್ರಸ್ತಾಪಿಸಿರುವ ಕಲ್ಮಂಗಿ ಗ್ರಾಮದ ಎರಡೂ ಸರ್ವೆ ನಂಬರುಗಳ ಜಮೀನು ಎತ್ತರ ಗುಡ್ಡ ಪ್ರದೇಶವಾಗಿದ್ದು ಗಾಳಿಯಂತ್ರ ಅಳವಡಿಸಲು ಯೋಗ್ಯವಾಗಿರುವುದಾಗಿ ಜಿಲ್ಲಾಧಿಕಾರಿಗಳು ವರದಿ ಮಾಡುತ್ತಾ ಸದರಿ ಜಮೀನನ್ನು ಸಂಸ್ಥೆಯವರಿಗೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡುವುದು ಸೂಕ್ತವೆಂದು ಅಭಿಪ್ರಾಯಿಸಿರುತ್ತಾರೆ.

4. ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 48 ಎಲ್‌ಜಿಆರ್ 2010, ಬೆಂಗಳೂರು, ದಿನಾಂಕ: 18-03-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಯಚೂರು ಜಿಲ್ಲೆ, ಸಿಂಧನೂರು ತಾಲ್ಲೂಕು, ಕಲ್ಮಂಗಿ ಗ್ರಾಮದ ಸ.ನಂ. 290ರಲ್ಲಿ 9.66 ಹೆಕ್ಟೇರ್ ಮತ್ತು ಸ.ನಂ. 313ರಲ್ಲಿ 7.77 ಹೆಕ್ಟೇರ್ ಒಟ್ಟು 17.43 ಹೆಕ್ಟೇರ್ ಜಮೀನನ್ನು ಸದರಿ ಜಮೀನಿನ ಪ್ರಚಲಿತ ಮಾರುಕಟ್ಟೆ ದರದ ಶೇ. 10ರಷ್ಟು ಗುತ್ತಿಗೆ ದರ ನಿಗದಿಪಡಿಸಿ ಸದರಿ ಗುತ್ತಿಗೆ ದರವನ್ನು ಪ್ರತಿ ಎರಡು ವರ್ಷಗಳಿಗೊಮ್ಮೆ ಶೇಕಡ 10ರಷ್ಟು ಗುತ್ತಿಗೆ ದರ ಹೆಚ್ಚಿಸುವ ಷರತ್ತಿಗೊಳಪಟ್ಟು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 19(3)(ಬಿ)ರನ್ವಯ 30 ವರ್ಷಗಳ ಅವಧಿಗೆ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಉದ್ದೇಶಕ್ಕಾಗಿ ಮೆ: ಸುಜಲಾನ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಬೆಂಗಳೂರು ರವರಿಗೆ ಗುತ್ತಿಗೆ ನೀಡಲು ಸರ್ಕಾರದ ಅನುಮತಿ ನೀಡಿ ಆದೇಶಿಸಲಾಗಿದೆ.

ಸದರಿ ಗುತ್ತಿಗೆಯ ವಿಧಿವಿಧಾನಗಳ ಬಗ್ಗೆ ಜಿಲ್ಲಾಧಿಕಾರಿಗಳು, ಸರ್ಕಾರಿ ಸುತ್ತೋಲೆ ಸಂಖ್ಯೆ : ಆರ್‌ಡಿ : 78 : ಎಲ್‌ಜಿಪಿ : 2009 ದಿ : 04-01-2011ರಲ್ಲಿನ ಸೂಚನೆಗಳನ್ವಯ ಸದರಿ ಸಂಸ್ಥೆಯವರೊಂದಿಗೆ ನೇರವಾಗಿ ವ್ಯವಹರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ/238/ವೆಚ್ಚ-7/2011 ದಿನಾಂಕ : 16-03-2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಜಿ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಮಂಜೂರಾತಿ-3)

ಪಿ.ಆರ್. 896

ಜಲಸಂಪನ್ಮೂಲ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಮುರುಗಣ್ಣನ ಕೆರೆ, ಏರಿ ಮತ್ತು ಕೋಡಿ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸನೀಇ 89 ಭೂಸ್ವಾಪ್ರ 2008, ದಿನಾಂಕ : 25-02-2009.
2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಮುಸದ/ಲೆಶಾಖೆ/ಲೆಸ-1/3/ಭೂಸ್ವಾಧೀನ/10-11/1545, ದಿನಾಂಕ 03-07-2010.

ಪ್ರಸ್ತಾವನೆ:

ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಮುರುಗಣ್ಣನ ಕೆರೆ, ಏರಿ ಮತ್ತು ಕೋಡಿ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಹುಲುಗಿನಕಟ್ಟೆ ಮತ್ತು ಹೊಸೂರು ಗ್ರಾಮಗಳ ಸ.ನಂ.ಗಳಿಗೆ ಸೇರಿದ ಜಮೀನುಗಳಿಗೆ ಸೊರಬ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ)ವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರ ಪಾವತಿಸಲು ಮೇಲೆ (1)ರಲ್ಲಿ ಓದಲಾದ ದಿನಾಂಕ : 25-02-09ರ ಸರ್ಕಾರದ ಆದೇಶ ಅನುಮೋದನೆ ನೀಡಿದೆ. ಈ ಆದೇಶದಲ್ಲಿ ಸೇರಿದ್ದ ಎಲ್.ಎ.ಸಿ. ಸಂಖ್ಯೆ : 51/07ರಲ್ಲಿ ಹೊಸೂರು ಗ್ರಾಮದ ಸ.ನಂ.96ರ 0-16 ಎಕರೆಗೆ ರೂ. 88,355-00ಗಳ ಪರಿಹಾರ ಧನ ಪಾವತಿಸಲು ಅನುಮೋದನೆ ನೀಡಲಾಗಿತ್ತು. ಈ ಎಲ್.ಎ.ಸಿ. ಪ್ರಕರಣದಲ್ಲಿ ಹೊಸೂರು ಗ್ರಾಮದ ಸ.ನಂ.96ರ 0-16 ಎಕರೆ ಅಲ್ಲದೆ ಇದೇ ಗ್ರಾಮದ ಸ.ನಂ.106/1ರ 3-24 ಎಕರೆಗೆ ಸಹ ನ್ಯಾಯಾಲಯವು ಹೆಚ್ಚಿನ ಪರಿಹಾರಕ್ಕೆ ಆದೇಶಿಸಿತ್ತು. ಕೈಬಿಟ್ಟು ಹೋಗಿರುವ ಸ.ಸಂ. 106/1ರ 3-24 ಎಕರೆ ಜಮೀನಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಪರಿಹಾರ ಧನ ಪಾವತಿಸಲು ರೂ. 8,09,468-00ಗಳ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರು ಮೇಲೆ (2)ರಲ್ಲಿ ಓದಲಾದ ದಿನಾಂಕ : 03-07-10ರ ಪತ್ರದಲ್ಲಿ ಕೋರಿದ್ದಾರೆ.

ಪಾವತಿಸಬೇಕಾದ ಮೊತ್ತದ ವಿವರ ಕೆಳಕಂಡಂತಿದೆ :

ಕ್ರಮ ಸಂಖ್ಯೆ	ಎಲ್‌ಎಸಿ ಸಂಖ್ಯೆ	ಹೊಸೂರು ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	51/07	106/1	3-24	5,85,733-00
ಒಟ್ಟು				5,85,733-00

ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಅರ್ಹವಲ್ಲವೆಂದು ಕಂದಾಯ ಇಲಾಖೆಯು ಪತ್ರ ಸಂಖ್ಯೆ : ಆರ್‌ಡಿ 530 ಎಲ್‌ಎಸಿ 2008, ದಿನಾಂಕ : 27-12-2008ರಲ್ಲಿ ಅಭಿಪ್ರಾಯ ನೀಡಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸನೀಇ 125 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ: 24ನೇ ಮಾರ್ಚ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಮುರುಗಣ್ಣನ ಕೆರೆ, ಏರಿ ಮತ್ತು ಕೋಡಿ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಹುಲುಗಿನಕಟ್ಟೆ ಮತ್ತು ಹೊಸೂರು ಗ್ರಾಮಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಸಂಖ್ಯೆ : 51/07 ರಲ್ಲಿ ನೀಡಿರುವ ಆದೇಶದಂತೆ ಪರಿಹಾರ ರೂ. 5,85,733-00ಗಳನ್ನು (ಐದು ಲಕ್ಷದ ಎಂಭತ್ತೈದು ಸಾವಿರದ ಏಳುನೂರ ಮೂವತ್ಮೂರು ರೂ.ಗಳು ಮಾತ್ರ) ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲು ಸರ್ಕಾರದ ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು. ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಮುಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 01 ಬಿಎಸ್‌ಜಿ 2011, ದಿನಾಂಕ 19-03-2011 ರಲ್ಲಿ ಒದಗಿಸಿರುವ ಪೂರಕ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ 20-10-2010ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೋಪಾಲ್
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿಆರ್.ನಂ. 897

ಜಲಸಂಪನ್ಮೂಲ ಸಚಿವಾಲಯ

ವಿಷಯ : ಚಿತ್ರದುರ್ಗ ತಾಲ್ಲೂಕು ಕೊಳಹಾಳ್ ಸಣ್ಣ ನೀರಾವರಿ ಕೆರೆ ನಿರ್ಮಾಣ ಕಾಮಗಾರಿಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ನ್ಯಾಯಾಲಯದ ಆದೇಶಾನುಸಾರ ಹೆಚ್ಚುವರಿ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಮುಸದ/ಲೆಶಾಖೆ/ಲೆಸ-1/3/ಭೂಸ್ವಾಧೀನ/2010-11/1623, ದಿನಾಂಕ 20-07-2010.

ಪ್ರಸ್ತಾವನೆ:

ಚಿತ್ರದುರ್ಗ ತಾಲ್ಲೂಕು ಕೊಳಹಾಳ್ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಟ್ಲಹಳ್ಳಿ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ), ಚಿತ್ರದುರ್ಗ ನೀಡಿರುವ ತೀರ್ಪಿನನುಸಾರ ಹೆಚ್ಚುವರಿ ಪರಿಹಾರ ಪಾವತಿಸಲು ರೂ. 8,87,638 ಲಕ್ಷಗಳ ಅನುದಾನ ಬಿಡುಗಡೆ ಮಾಡಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಇವರು ಮೇಲೆ ಓದಲಾದ ದಿನಾಂಕ : 20-07-2010ರ ಪತ್ರದಲ್ಲಿ ಕೋರಿರುತ್ತಾರೆ. ಭೂಸ್ವಾಧೀನ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 31-10-1991.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 11(ಎ)ರಡಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ರಚಿಸಿದ ದಿನಾಂಕ : 31-12-1993.

ಭೂಸ್ವಾಧೀನಕ್ಕೊಳಪಟ್ಟ ಜಟ್ಲಹಳ್ಳಿ ಗ್ರಾಮದ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳು ರಚಿಸಿದ ಐತೀರ್ಪಿನಂತೆ ಪರಿಹಾರ ಪಡೆದು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ 1894ರ ಕಲಂ 18(1)ರಡಿ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ), ಚಿತ್ರದುರ್ಗ ಇಲ್ಲಿ ಎಲ್.ಎ.ಸಿ. ಪ್ರಕರಣಗಳನ್ನು ಸಲ್ಲಿಸಿದ್ದು, ನ್ಯಾಯಾಲಯವು ದಿನಾಂಕ : 31-10-2003ರಂದು ನೀಡಿದ ಆದೇಶದಲ್ಲಿ ಹೆಚ್ಚಿನ ಪರಿಹಾರ ನಿಗದಿ ಮಾಡಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರ ಸಲ್ಲಿಸಿದ್ದ ಎಂ.ಎಫ್.ಎ. ಸಂಖ್ಯೆ : 6031/04 ಮತ್ತು 6033/04ನ್ನು ನ್ಯಾಯಾಲಯವು ದಿನಾಂಕ : 23-02-2010ರಂದು ವಜಾ ಮಾಡಿದೆ. ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಅಗತ್ಯವಿಲ್ಲವೆಂದು ಕಾನೂನು ಇಲಾಖೆಯು ಪತ್ರ ಸಂಖ್ಯೆ : ಲಾ 272 ಎಲ್‌ಎಸ್‌ಪಿ 2010, ದಿನಾಂಕ : 13-04-2010 ರಂದು ಅಭಿಪ್ರಾಯ ನೀಡಿರುತ್ತದೆ.

ನ್ಯಾಯಾಲಯವು ಹೆಚ್ಚುವರಿ ಪರಿಹಾರಕ್ಕೆ ತೀರ್ಮ ನೀಡಿರುವ ವಿವರ ಈ ಕೆಳಕಂಡಂತಿದೆ :

ರೂ.ಗಳಲ್ಲಿ

ಕ್ರಮ ಸಂಖ್ಯೆ	ಎಲ್‌ಎಸಿ ಸಂಖ್ಯೆ	ಎಂ.ಎಫ್.ಎ ಸಂಖ್ಯೆ	ಜಟ್ಲಹಳ್ಳಿ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಧನದ ಮೊತ್ತ (ರೂ.ಗಳಲ್ಲಿ)
1	139/95	6031/04	6/2	4-08	378361
2	5/96	6033/04	12/2ಪಿ	3-25	431905
ಒಟ್ಟು					810266

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸನೀಇ 97 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ: 23ನೇ ಮಾರ್ಚ್ 2011

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ ಚಿತ್ರದುರ್ಗ ತಾಲ್ಲೂಕು ಕೊಳಹಾಳ್ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯ ನೀಡಿದ ಆದೇಶದಂತೆ ಪರಿಹಾರ ಮೊತ್ತ ರೂ. 8,10,266-00ಗಳನ್ನು (ಎಂಟು ಲಕ್ಷದ ಹತ್ತು ಸಾವಿರದ ಇನ್ನೂರ ಅರವತ್ತಾರು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು. ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಮುಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 01 ಬಿಎಸ್‌ಜಿ 2011, ದಿನಾಂಕ 19-03-2011 ರಲ್ಲಿ ಒದಗಿಸಿರುವ ಪೂರಕ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ 20-10-2010ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್

ಪಿಆರ್.ನಂ. 898

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗಕ್ಕೆ ಸಂಬಂಧಿಸಿದಂತೆ ಮುಂದುವರಿದ ಯೋಜನೆ ಮತ್ತು ಯೋಜನೇತರ ಯೋಜನೆಗಳನ್ನು 2011-12ನೇ ಸಾಲಿನ ಅವಧಿಗೆ ಮುಂದುವರೆಸುವ ಬಗ್ಗೆ.

ಓದಲಾಗಿದೆ : ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ ಸಂಖ್ಯೆ : ಮಾತಂಇ 12 ಅಡವಿ 2010, ದಿನಾಂಕ : 18-03-2011.

ಪ್ರಸ್ತಾವನೆ:

ಮೇಲೆ ಓದಲಾದ (1)ರಲ್ಲಿನ ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನ ಪತ್ರದಲ್ಲಿ, 2011-12ನೇ ಸಾಲಿನ ಆಯವ್ಯಯದಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮುಂದುವರಿದ ಯೋಜನೆಗಳಿಗೆ ವಂಟನೆ ಮಾಡಲಾಗಿದೆ.

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ : 18-03-2011 ರಂದು ನಡೆದ ಸಭೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಅಧೀನಕ್ಕೆ ಒಳಪಡುವ ಸಂಘ ಸಂಸ್ಥೆಗಳಿಗೆ 2011-12ನೇ ಸಾಲಿನಲ್ಲಿ ಮುಂದುವರಿದ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಿಗೆ 2011-12ನೇ ಸಾಲಿಗೆ ಮುಂದುವರಿಸಿ ಅನುಮೋದನೆ ನೀಡಲು ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ವಿಯಇ 189 ವಿತ್ರಮ 2010, ಬೆಂಗಳೂರು, ದಿನಾಂಕ: 19ನೇ ಮಾರ್ಚ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಅಧೀನಕ್ಕೆ ಒಳಪಡುವ ಈ ಕೆಳಕಂಡ ಸಂಘ ಸಂಸ್ಥೆಗಳಿಗೆ 2011-12ನೇ ಆರ್ಥಿಕ ಸಾಲಿನಲ್ಲಿ ಮುಂದುವರಿದ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಿಗೆ ತಾತ್ವಿಕವಾಗಿ ಅನುಮೋದನೆಯನ್ನು ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಸರ್ಕಾರವು ಮಂಜೂರಾತಿ ನೀಡಲಾಗಿದೆ.

1.	ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ
2.	ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪಗಳ ಉಸ್ತುವಾರಿ ಕೇಂದ್ರ
3.	ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು
4.	ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ
5.	ಜವಾಹರ್‌ಲಾಲ್ ನೆಹರು ತಾರಾಲಯ
6.	ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ
7.	ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು
8.	ಭಾರತೀಯ ವಿಜ್ಞಾನ ಸಂಸ್ಥೆ, ಚಳ್ಳಕೆರೆ

ಷರತ್ತುಗಳು :

1. ಹೊಸ ಯೋಜನೆಗಳಿಗೆ ಮುಂದುವರಿದ ಯೋಜನಾ ಕಾರ್ಯಕ್ರಮಗಳ ಹೊಸ ಘಟಕಗಳಿಗೆ ಪ್ರತ್ಯೇಕವಾಗಿ ಮಂಜೂರಾತಿಯನ್ನು ಪಡೆಯುವುದು.
2. 2011-12ನೇ ಸಾಲಿಗೆ ಆರ್ಥಿಕ ಇಲಾಖೆಯು ನೀಡಿದ ಸೂಚನೆಗಳನ್ವಯ ದಿ : 01-04-2011 ರಿಂದ 31-03-2012 ರವರೆಗಿನ ಅವಧಿಯ ವೆಚ್ಚವನ್ನು ಅನುಸೂಚಿಯಲ್ಲಿ ಸೃಜಿಸಿರುವ ಮೊತ್ತಕ್ಕೆ ಸೀಮಿತಗೊಳಿಸುವುದು ಮತ್ತು ಎಲ್ಲಾ ಮಾರ್ಗಸೂಚಿಗಳನ್ನು ಚಾಚೂ ತಪ್ಪದೇ ಪಾಲಿಸುವುದು.
3. 2011-12ನೇ ಆರ್ಥಿಕ ಸಾಲಿಗೆ ನಿಗದಿಪಡಿಸಿರುವ ಮೊತ್ತವನ್ನು 4 ಸಮ ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು.
4. ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಜವಾಬ್ದಾರರಾದ ಅಧಿಕಾರಿಗಳು ಅವರಿಗೆ ನೀಡಲಾದ ಆರ್ಥಿಕ ಅಧಿಕಾರಕ್ಕೆ ಒಳಪಟ್ಟು ಯೋಜನಾ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರತಕ್ಕದ್ದು.
5. 1999ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.
6. ಸಂಘ ಸಂಸ್ಥೆಗಳಿಗೆ ಬಿಡುಗಡೆ ಮಾಡುವ ಅನುದಾನದ ಬಗ್ಗೆ ಮಾರ್ಗಸೂಚಿಯನ್ನು ರೂಪಿಸಿ ಅದರನ್ವಯ ಕ್ರಮ ತೆಗೆದುಕೊಳ್ಳುವುದು.
7. ಪುಸ್ತಕ ಪ್ರಕಟಣೆ, ಖರೀದಿ, ಮಾರಾಟ, ಪ್ರೋತ್ಸಾಹಧನಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ನು ರೂಪಿಸಿ ಅದರನ್ವಯ ಕ್ರಮ ತೆಗೆದುಕೊಳ್ಳುವುದು.
8. ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನವನ್ನು ಅದೇ ಸಾಲಿನಲ್ಲಿಯೇ ಉಪಯೋಗಿಸಿ ಉಪಯೋಗತಾ ಪ್ರಮಾಣ ಪತ್ರಗಳನ್ನು ತಪ್ಪದೇ ಸಲ್ಲಿಸತಕ್ಕದ್ದು.
9. ಹಂಚಿಕೆ ಮಾಡಲಾದ ಅನುದಾನದ ಮೊತ್ತದ ಬಿಡುಗಡೆಯು ಸರ್ಕಾರದ ಬದಲಾವಣೆಗೆ ಒಳಪಡುತ್ತದೆ. ಅನುದಾನದ ಹಂಚಿಕೆಯನ್ನು ಈ ಆದೇಶಕ್ಕೆ ಲಗತ್ತಿಸಲಾದ ಅನುಬಂಧದಲ್ಲಿ ತೋರಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ : 16-05-2008ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದನ್ವಯ ಆರ್ಥಿಕ ಇಲಾಖೆಯ ಸಹಮತಿ ಇದೆ ಎಂದು ಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಬೋರಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ : ವಿಯಇ 189 ವಿತ್ರಮ 2010, ದಿನಾಂಕ : 19-03-2011

ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ 2011-12ನೇ ಸಾಲಿನ ಮುಂದುವರೆದ ಯೋಜನೆಗಳು

ರೂ.ಲಕ್ಷಗಳಲ್ಲಿ

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಯೋಜನೆ/ವೈಜ್ಞಾನಿಕ ಸಂಸ್ಥೆ/ಚಟುವಟಿಕೆಗಳಿಗೆ ಸಹಾಯಾನುದಾನದ ವಿವರ	2011-12ನೇ ಸಾಲಿನ ಆಯವ್ಯಯ ಹಂಚಿಕೆ	ಇಲಾಖೆಯ ಹಂಚಿಕೆ
		ಮುಂದುವರೆದ ಯೋಜನೆಗಳು :		
1	3425-60-200-0-01-(101) (ಯೋಜನೆ)	ವೈಜ್ಞಾನಿಕ ಸಂಸ್ಥೆಗಳಿಗೆ ಸಹಾಯನುದಾನ	500.00	
		1. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ	–	50.00
		2. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು.	–	54.00
		3. ಜವಹಾರ್‌ಲಾಲ್ ನೆಹರು ತಾರಾಲಯ	–	60.00
		4. ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾಮಂಡಳಿ	–	56.00

		5. ಇತರೆ ವೈಜ್ಞಾನಿಕಸಂಸ್ಥೆಗಳು/ಕಾರ್ಯಚಟುವಟಿಕೆಗಳಿಗೆ ಸಹಾಯಾನುದಾನ	–	150.00
		6. ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ಕಾರ್ಯಕ್ರಮಕ್ಕೆ	–	130.00
2	3425-60-200-0-16(101) (ಯೋಜನೆ)	ವಿಜ್ಞಾನ ಮತ್ತು ತಂತ್ರಜ್ಞಾನ ಯೋಜನೆಗಳ ಸಹಾಯಾನುದಾನ	300.00	–
3	3425-60-200-0-19(101) (ಯೋಜನೆ)	ನಾನೊ ತಂತ್ರಜ್ಞಾನಕ್ಕೆ ಬೆಂಬಲ ಸಹಾಯಾನುದಾನ	100.00	–
4	3425-60-200-0-20(101)	ಜಿಲ್ಲಾ ವಿಜ್ಞಾನ ಕೇಂದ್ರಗಳು ಸಹಾಯಾನುದಾನ	560.00	
		1. ಜಿಲ್ಲಾ ವಿಜ್ಞಾನ ಕೇಂದ್ರಗಳ ಸ್ಥಾಪನೆ	–	60.00
		2. ಮಂಗಳೂರು ಪಿಲಿಕುಳದಲ್ಲಿ ತಾರಾಲಯ ಸ್ಥಾಪನೆ	–	500.00
5	3425-60-600-0-02 (059)(ಯೋಜನೆ)	ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ	1000.00	
		1. ದಾರ್ಶನಿಕ ಸಮೂಹ ಕಾರ್ಯಕ್ರಮಕ್ಕೆ	–	595.00
		2. SCSP	–	200.00
		3. TSP	–	75.00
		4. ಚಿತ್ರದುರ್ಗ ಭಾರತೀಯ ವಿಜ್ಞಾನ ಸಂಸ್ಥೆ, ಚಳ್ಳಕೆರೆ	–	130.00
6	3425-60-600-0-03 (059)(ಯೋ)	ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಸುಧಾರಣೆಗೆ ಕರ್ನಾಟಕ ನಿಧಿ (K-Fist)	500.00	
			–	322.00
		1. SCSP	–	118.40
		2. TSP	–	59.60
7	3455-00-200-0-01 (059)(ಯೋ)	ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ :	700.00	
			–	25.00
		1. ಸಂಸ್ಥೆಯ ಆಡಳಿತ ನಿರ್ವಹಣೆ ವಾರ್ಷಿಕ ಅನುದಾನ	–	400.00
		2. ಮಾಸ್ಟರ್ ಕಂಟ್ರೋಲ್ ಕೇಂದ್ರ ಸ್ಥಾಪನೆ	–	200.00
		3. SCSP	–	75.00
		4. TSP		
8	3425-60-200-0-01 (104)(ಯೋಜನೇತರ)	ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು (ಅಂಶದಾನ)	1.00	
		ಒಟ್ಟು ಮೊತ್ತ	3661.00	3661.00

ಕೆ. ಬೋರಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್.ನಂ. 899

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು ಸಾಲೇಬೀರನಹಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸಾಲೇಬೀರನಹಳ್ಳಿ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2010-11/6575, ದಿನಾಂಕ 14-12-2010.

ಪ್ರಸ್ತಾವನೆ:

ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು ಸಾಲೇಬೀರನಹಳ್ಳಿ ಸಣ್ಣ ನೀರಾವರಿ ಕೆರೆಯ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸಾಲೇಬೀರನಹಳ್ಳಿ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಮೇಲೆ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ

[illegible] ಕೋರಿದ್ದಾರೆ. ಹೆಚ್ಚಿನ ಪರಿಹಾರ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 16-01-1992.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ : 28-12-1994.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಭೂಸ್ವಾಧೀನಾಧಿಕಾರಿಗಳ ಐತೀರ್ಪಿನಂತೆ ಪರಿಹಾರ ಧನ ಪಡೆದು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಚಿಂಚೋಳಿ ಸಿವಿಲ್ (ಹಿರಿಯ ವಿಭಾಗ), ನ್ಯಾಯಾಲಯದಲ್ಲಿ ಎಲ್.ಎ.ಸಿ. ಪ್ರಕರಣವನ್ನು ದಾಖಲಿಸಿದ್ದು, ನ್ಯಾಯಾಲಯವು ಪ್ರತಿ ಎಕರೆ ರೂ. 63,000/-ಗಳನ್ನು ನಿಗದಿಪಡಿಸಿ ಇತರೆ ಸವಲತ್ತುಗಳೊಂದಿಗೆ ಪಾವತಿಸಲು ಆದೇಶಿಸಿದೆ. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಪತ್ರ ಸಂಖ್ಯೆ ಆರ್‌ಡಿ 457 ಎಲ್‌ಸಿಜಿ 10, ದಿನಾಂಕ : 09-06-10ರಲ್ಲಿ ಅಭಿಪ್ರಾಯ ನೀಡಿದೆ ನ್ಯಾಯಾಲಯವು ಹೆಚ್ಚಿನ ಪರಿಹಾರಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಈ ಕೆಳಕಂಡಂತಿದೆ :

ಕ್ರಮ ಸಂಖ್ಯೆ	ಎಲ್‌ಎಸಿ ಸಂಖ್ಯೆ	ಸಾಲೀಬೀರನಹಳ್ಳಿ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	67/06	208/1, 208/2	0-31	2,36,647-00
ಒಟ್ಟು				**2,36,647-00**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸನೀಇ 09 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ: 24ನೇ ಮಾರ್ಚ್ 2011

ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು ಸಾಲೇಬೀರನಹಳ್ಳಿ ಸಣ್ಣ ನೀರಾವರಿ ಕೆರೆಯ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸಾಲೇಬೀರನಹಳ್ಳಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು 67/06ರ ಎಲ್.ಎ.ಸಿ. ಪ್ರಕರಣವಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಹಾಕಿದ ಪರಿಹಾರ ಧನ ಮೊತ್ತ ರೂ. 2,36,619-00ಗಳನ್ನು (ಎರಡು ಲಕ್ಷದ ಮುವತ್ತಾರು ಸಾವಿರದ ಆರುನೂರ ಹತ್ತೊಂಭತ್ತು ರೂಪಾಯಿಗಳು ಮಾತ್ರ) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು. ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಮುಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 01 ಬಿಎಸ್‌ಜಿ 2011, ದಿನಾಂಕ 19-03-2011 ರಲ್ಲಿ ಒದಗಿಸಿರುವ ಪೂರಕ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ 20-10-2010ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿಆರ್.ನಂ. 900

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಸಚಿವಾಲಯ

ವಿಷಯ : ಟೆಲಿವಿಷನ್ ಕಲ್ಚರಲ್ ಮತ್ತು ಸ್ಪೋರ್ಟ್ ಕ್ಲಬ್ ಬೆಂಗಳೂರು ಇವರಿಗೆ ಸಹಾಯಾನುದಾನ ನೀಡುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು, ವಾರ್ತಾ ಇಲಾಖೆ ಇವರ ಪತ್ರ ಸಂಖ್ಯೆ ವಾಇ:ಚಚಿವಿ/2010-11/24797, ದಿನಾಂಕ: 22-03-2011

ಪ್ರಸ್ತಾವನೆ:

ಕಾರ್ಯದರ್ಶಿಗಳು, ಟೆಲಿವಿಷನ್ ಕಲ್ಚರಲ್ ಮತ್ತು ಸ್ಪೋರ್ಟ್ ಕ್ಲಬ್ ನಂ: 107/358/1.3ನೇ ಕ್ರಾಸ್, ಎಂ.ವಿ. ಸೀತಾರಾಮಯ್ಯ ರಸ್ತೆ, ಗವಿಪುರಂ ಎಕ್ಸ್‌ಟೆನ್‌ಷನ್, ಬೆಂಗಳೂರು ಇವರು ತಮಗೆ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಉತ್ತರಹಳ್ಳಿ ಬಡಾವಣೆಯಲ್ಲಿ 3767.40 ಚದರ ಮೀಟರ್ ಅಳತೆಯ ನಿವೇಶನವನ್ನು 30 ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಟೆಲಿವಿಷನ್ ಕಲ್ಚರಲ್ ಮತ್ತು ಸ್ಪೋರ್ಟ್ ಕ್ಲಬ್ ನಿರ್ಮಾಣಕ್ಕಾಗಿ ಮಂಜೂರು ಮಾಡಲಾಗಿದೆಯೆಂದು ಈ ನಿವೇಶನದಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರದ ವತಿಯಿಂದ ರೂ. 1.00 ಕೋಟಿಗಳನ್ನು ನೀಡಲು ಮಾನ್ಯ ಮುಖ್ಯಮಂತ್ರಿಯವರು ದಿನಾಂಕ: 22-08-2010ರಂದು ಗುದ್ದಲಿ ಪೂಜೆ ಮಾಡಿದ ಸಂದರ್ಭದಲ್ಲಿ ಭರವಸೆ ನೀಡಿರುವ ಹಿನ್ನೆಲೆಯಲ್ಲಿ ಈ ಸಂಸ್ಥೆಯ ಕಟ್ಟಡ ನಿರ್ಮಾಣಕ್ಕೆ ಅನುವಾಗುವಂತೆ ರೂ. 1.00 ಕೋಟಿಗಳನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ. ಹಾಗೂ ಈ ಕಟ್ಟಡದ ವಿನ್ಯಾಸ, ನೀಲಿ ನಕ್ಷೆ ಎಲ್ಲವನ್ನು ತಯಾರಿಸಿ, ನಿರ್ದೇಶಕರು, ವಾರ್ತಾ ಇಲಾಖೆ ಇವರಿಗೆ ಸಲ್ಲಿಸಿರುತ್ತಾರೆ.

ನಿರ್ದೇಶಕರು, ವಾರ್ತಾ ಇಲಾಖೆ ಇವರು ದಿನಾಂಕ: 22-03-2011ರ ಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ನೀಡಿರುವ ಭರವಸೆಯಂತೆ ಸದರಿ ಸಂಸ್ಥೆಗೆ ಸಹಾಯಧನ ಒದಗಿಸಲು ಇಲಾಖೆಯಲ್ಲಿ ಉಳಿದಿರುವ ಅನುದಾನದ ವಿವರಗಳನ್ನು ಒದಗಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ: 59:ಪಿ.ಐ.ಎಫ್. 2010, ಬೆಂಗಳೂರು, ದಿನಾಂಕ 23-03-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಟೆಲಿವಿಷನ್ ಕಲ್ಚರಲ್ ಮತ್ತು ಸ್ಪೋರ್ಟ್ ಕ್ಲಬ್ ಬೆಂಗಳೂರು ಇವರಿಗೆ ಕಟ್ಟಡ ನಿರ್ಮಾಣಕ್ಕಾಗಿ ರೂ. 50.00 ಲಕ್ಷ (ರೂಪಾಯಿ ಐವತ್ತು ಲಕ್ಷಗಳು ಮಾತ್ರ) ಗಳನ್ನು ಹಣ ಬಳಕೆ ಪ್ರಮಾಣ ಪತ್ರ ಪಡೆಯುವ ಷರತ್ತಿಗೆ ಒಳಪಟ್ಟು ಕೆಳಕಂಡ ಯೋಜನೇತರ ಲೆಕ್ಕಶೀರ್ಷಿಕೆಯಡಿ ಉಳಿತಾಯವಾಗುವ ಅನುದಾನದಿಂದ ಭರಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಲೆಕ್ಕಶೀರ್ಷಿಕೆ	ಮೊತ್ತ
1. 2220-60-103-0-01 ವಾರ್ತಾ ಕೇಂದ್ರ 051 ಸಾಮಾನ್ಯ ವೆಚ್ಚ (ಯೋಜನೇತರ)	ರೂ. 35,00,000-00
2. 2220-60-800-0-012 ಪತ್ರಕರ್ತರ ಕಲ್ಯಾಣ ನಿಧಿ 059 ಇತರೆ ವೆಚ್ಚ (ಯೋಜನೇತರ)	ರೂ. 15,00,000-00
ಒಟ್ಟು	ರೂ. 50,00,000-00

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂ:ಎಫ್.ಡಿ.1 ಟಿ.ಎಫ್.ಪಿ. 2008, ದಿನಾಂಕ: 16-05-08ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ವಿ. ರಾಮಚಂದ್ರರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ

ಪಿ.ಆರ್. 936

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಪ್ರದೇಶದ ಪರಿಷ್ಕೃತ ಕರಡು ರಚನಾ ನಕ್ಷೆ-2031ಕ್ಕೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ:ನಅಇ 51 ಬಿಎಂಆರ್ 2002, ದಿನಾಂಕ: 21-9-2005.
2) ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಇವರ ಪತ್ರ ಸಂಖ್ಯೆ: ಬಿ.ಎಂಆರ್‌ಡಿಎ/ಟಿಪಿ/ಎಸ್‌ಟಿಆರ್‌ಪ್ಲಾನ್/ 18/2007-08, ದಿನಾಂಕ: 21-6-2010 ಮತ್ತು 12-8-2010.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ: 21-9-2005ರ ಆದೇಶದಲ್ಲಿ ಸರ್ಕಾರವು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಪ್ರದೇಶದ ವ್ಯಾಪ್ತಿಯ ಯೋಜಿತ ಬೆಳವಣಿಗೆಗಾಗಿ "ರಚನಾ ನಕ್ಷೆಗೆ" ಅನುಮೋದನೆ ನೀಡಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ದಿನಾಂಕ: 21-6-2010 ಮತ್ತು 12-8-2010ರ ಪತ್ರಗಳಲ್ಲಿ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇವರು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯು ಶೀಘ್ರಗತಿಯಲ್ಲಿ ಬೆಳವಣಿಗೆ ಹೊಂದುತ್ತಿರುವುದರಿಂದ, ಸದರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ರಚನಾ ನಕ್ಷೆಯನ್ನು ತಯಾರಿಸುವ ಕಾರ್ಯವನ್ನು ಮೆ:ಗ್ರೂಪ್ ಎಸ್‌ಸಿಇ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಇವರಿಗೆ ವಹಿಸಲಾಗಿತ್ತೆಂದು, ಸದರಿ ಸಂಸ್ಥೆಯವರು ತಯಾರಿಸಿರುವ ಪರಿಷ್ಕೃತ ನಕ್ಷೆ ಮೇಲೆ ಒಂದು ನಿರೂಪಣೆಯನ್ನು ಏರ್ಪಡಿಸಿ, ಸಂಬಂಧಪಟ್ಟ ಇಲಾಖೆಗಳಿಂದ ಸಲಹೆ/ಸೂಚನೆಗಳನ್ನು ಆಹ್ವಾನಿಸಿ ಈ ಸಲಹೆ/ಸೂಚನೆಗಳನ್ನು ಹಾಗೂ ಅಬೈಡ್ ಸಮಿತಿಯು ಶಿಫಾರಸ್ಸು ಮಾಡಿರುವ ಸಲಹೆ/ಸೂಚನೆಗಳನ್ನು ಅಳವಡಿಸಿ, ಮತ್ತು ಕರಡು ರಚನಾ ನಕ್ಷೆಯಲ್ಲಿ ವ್ಯವಸಾಯ ವಲಯದಲ್ಲಿ ಅನುಮತಿಸಬಹುದಾದ ಉಪಯೋಗಗಳಲ್ಲಿ "Eco friendly/Heritage Tourist Resorts with zero discharge approved by Tourism Department" ಇವುಗಳನ್ನು ಅಳವಡಿಸಿಕೊಂಡು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಯೋಜಿತ ಬೆಳವಣಿಗೆಯ ದೃಷ್ಟಿಯಿಂದ ಪರಿಷ್ಕೃತ ಕರಡು ರಚನಾ ನಕ್ಷೆ-2031ಕ್ಕೆ ಮಂಜೂರಾತಿ ನೀಡಲು ಸರ್ಕಾರವನ್ನು ಕೋರಿರುತ್ತಾರೆ. ಕಾರಣ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ನಅಇ 204 ಬಿಎಂಆರ್ 2010, ಬೆಂಗಳೂರು, ದಿನಾಂಕ 24-2-2011

ಪ್ರಸ್ತಾವನೆಯಲ್ಲಿ ಹೇಳಿರುವ ಅಂಶಗಳನ್ನು ಪರಿಗಣಿಸಿ, ಬೆಂಗಳೂರು ಮಹಾನಗರ ಪ್ರದೇಶದ ಯೋಜಿತ ಬೆಳವಣಿಗೆಗಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇವರು ಸಿದ್ಧಪಡಿಸಿರುವ ಕರಡು ರಚನಾ ನಕ್ಷೆ-2031ಕ್ಕೆ ವ್ಯವಸಾಯ ವಲಯದಲ್ಲಿ ಅನುಮತಿಸಬಹುದಾದ ಉಪಯೋಗಗಳಲ್ಲಿ "Eco friendly/Heritage Tourist Resorts with zero discharge approved by Tourism Department" ಇವುಗಳನ್ನು ಅಳವಡಿಸಿಕೊಳ್ಳುವ ನಿಬಂಧನೆಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಿದೆ. ಅಲ್ಲದೆ, ಸಾರ್ವಜನಿಕರಿಗಾಗಿ ಈ ಪ್ರಸ್ತುತ ಕರಡು ರಚನಾ ನಕ್ಷೆಯನ್ನು ಪ್ರಕಟಿಸಿ, 30 ದಿನಗಳ ಕಾಲಾವಕಾಶ ನೀಡಿ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ಜಾಹೀರಾತು ನೀಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಪ್ರೇಮಚಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 937

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಅಮಾನಿ ಬೆಳ್ಳಂದೂರು ಖಾನೆ ಗ್ರಾಮದ ಸ.ನಂ. 173 ರಿಂದ 207 ರಲ್ಲಿನ 2 ಎಕರೆ 13 ಗುಂಟೆ ಕಾಲು ದಾರಿ ಮತ್ತು ಕಾಲುವೆ ಬಿ ಖರಾಬ್ ಜಮೀನುಗಳನ್ನು ಶ್ರೀ ಎಸ್.ಆರ್. ನಾಗರಾಜ್ ಇವರಿಗೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1) ಶ್ರೀ ಎಸ್.ಆರ್. ನಾಗರಾಜ್ ಇವರು ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರಿಗೆ ಸಲ್ಲಿಸಿದ ಮನವಿ.

2) ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ: ಎಲ್ಎನ್‌ಡಿ (ಪೂ) ಸಿಆರ್ 142/2008-09, ದಿ: 09.01.2009.

3) ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 120 ಎಲ್‌ಜಿಬಿ 2009, ದಿ: 23.12.2009

4) ಸರ್ಕಾರದ ಕಾರ್ಯದರ್ಶಿ, ಕಂದಾಯ ಹಾಗೂ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ ಇವರ ಪತ್ರದ ದಿ: 05.03.2010.

ಪ್ರಸ್ತಾವನೆ:

ಶ್ರೀ ಎಸ್.ಆರ್. ನಾಗರಾಜ್ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿನ ಪತ್ರದಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಅಮಾನಿ ಬೆಳ್ಳಂದೂರು ಖಾನೆ ಗ್ರಾಮದ ಸ.ನಂ. 173 ರಿಂದ 207ರ ಜಮೀನುಗಳಲ್ಲಿ ಹಾದು ಹೋಗುತ್ತಿರುವ ಕಾಲು ದಾರಿ ಮತ್ತು ಕಾಲುವೆ ಬಿ ಖರಾಬ್ ಜಮೀನುಗಳನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

2) ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ಪತ್ರದ ದಿ:09.01.2009ರಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿ, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಅಮಾನಿ ಬೆಳ್ಳಂದೂರು ಖಾನೆ ಗ್ರಾಮದ ಸ.ನಂ. 173 ರಿಂದ 207ರ ಮಧ್ಯೆ ಹಾದು ಹೋಗುವ ಹದ್ದುಗಿಡದ ಓಣಿ, ಕಾಲುವೆ, ಬಿ ಖರಾಬ್ ಜಮೀನುಗಳ ಸುತ್ತಮುತ್ತಲಿನ ಪ್ರದೇಶಗಳು ವ್ಯವಸಾಯೇತರ ಉದ್ದೇಶಕ್ಕೆ ಬಳಸಿಕೊಂಡಿರುವುದರಿಂದ ಅಭಿವೃದ್ಧಿ ಹೊಂದಿದ್ದು, ಕಾಲುವೆ ಮತ್ತು ಹಳ್ಳ ತನ್ನ ಸ್ವರೂಪವನ್ನು ಕಳೆದುಕೊಂಡಿರುತ್ತದೆ ಎಂದು ವರದಿ ಮಾಡಿರುತ್ತಾರೆ.

3) ಸದರಿ ಬಿ ಖರಾಬ್ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕೆ ಬೇಕಾಗಿರುವುದಿಲ್ಲವೆಂದು ತಿಳಿಸಿ, ಹಕ್ಕಿನಿಂದ ವಿಹಿತಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 68(1)ರನ್ವಯ ದಿ: 15.06.2009ರಂದು ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ಇವರು ನಮೂನೆ 27ರಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ಸದರಿ ಸಾರ್ವಜನಿಕ ಪ್ರಕಟಣೆಗೆ ಅನುಗುಣವಾಗಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ವರದಿ ಮಾಡಿರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿನ ಸರ್ಕಾರದ ಅಧಿಸೂಚನೆ ದಿ: 23.12.2009ರಲ್ಲಿ ಸದರಿ ಹದ್ದುಗಿಡದ ಹಳ್ಳ, ಕಾಲುದಾರಿ ಮತ್ತು ಕಾಲುವೆ ಬಿ ಖರಾಬ್ ಜಮೀನನ್ನು ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಲು ನಮೂನೆ 29ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

4) ಸರ್ಕಾರದ ಕಾರ್ಯದರ್ಶಿ, ಕಂದಾಯ ಮತ್ತು ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿನ ಪತ್ರದ ದಿ: 05.03.2010ರಲ್ಲಿ ಸದರಿ ಕಾಲುದಾರಿಯ ಸ್ಥಳ ಪರಿಶೀಲನೆ ಮಾಡಿ ಸಾರ್ವಜನಿಕ ಉಪಯೋಗದಲ್ಲಿ ಇಲ್ಲದಿದ್ದಲ್ಲಿ ಮತ್ತು ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇಲ್ಲದಿದ್ದಲ್ಲಿ ಕಾಲುದಾರಿಯನ್ನು ಸಾರ್ವಜನಿಕ ಉಪಯೋಗದಿಂದ ವಿಹಿತಗೊಳಿಸಬಹುದಾಗಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಅಮಾನಿ ಬೆಳ್ಳಂದೂರು ಖಾನೆ ಗ್ರಾಮದ ಸ.ನಂ. 173 ರಿಂದ 207 ರವರೆಗಿನ ಜಮೀನುಗಳಲ್ಲಿ ಹಾದು ಹೋಗುವ ಕಾಲುದಾರಿ ಮತ್ತು ಕಾಲುವೆ ಬಿ ಖರಾಬ್ ಜಮೀನುಗಳು ನಿಗದಿ ಪಡಿಸಿದ ಉದ್ದೇಶಕ್ಕಾಗಿ ಬಳಕೆಯಾಗುತ್ತಿಲ್ಲವೆಂದು ಜಿಲ್ಲಾಧಿಕಾರಿಗಳು ವರದಿ ನೀಡಿದ ಹಿನ್ನೆಲೆಯಲ್ಲಿ ಸದರಿ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 68ರ ಅಡಿಯಲ್ಲಿ ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಲು ಅಧಿಸೂಚನೆ ಹೊರಡಿಸಲಾಗಿರುತ್ತದೆ.

5) ಸದರಿ ಬಿ ಖರಾಬ್ ಜಮೀನುಗಳನ್ನು ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಲಾಗಿರುವುದರಿಂದ ಶ್ರೀ ಎಸ್.ಆರ್. ನಾಗರಾಜ್ ಇವರಿಗೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 120 ಎಲ್‌ಜಿಬಿ 2009, ಬೆಂಗಳೂರು, ದಿನಾಂಕ 23-03-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 27ರಲ್ಲಿನ ಅಧಿಕಾರವನ್ನು ಚಲಾಯಿಸಿ ನಿಯಮ 10(2)ನ್ನು ಸಡಿಲಿಸಿ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಅಮಾನಿ ಬೆಳ್ಳಂದೂರು ಖಾನೆ ಗ್ರಾಮದ ಸ.ನಂ. 173 ರಿಂದ 207 ರವರೆಗಿನ 2 ಎಕರೆ 12 ಗುಂಟೆ ಜಮೀನನ್ನು ಶ್ರೀ ಎಸ್. ಆರ್. ನಾಗರಾಜ್ ಇವರಿಗೆ ಪ್ರಸಕ್ತ ಪೂರ್ಣ ಮಾರುಕಟ್ಟೆ ದರ ವಿಧಿಸಿ ಮಂಜೂರು ಮಾಡಲು ಸರ್ಕಾರವು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 72 ವೆಚ್ಚ-7/2010, ದಿ: 03.02.2010ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೀತಾ ರಮೇಶ್

ಸರ್ಕಾರದ ಉಪ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ.ಮಂ ಮತ್ತು ಭೂ ಕಂ)

ಪಿ.ಆರ್. 938

ಕಂದಾಯ ಸಚಿವಾಲಯ

ವಿಷಯ : ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿಯಲ್ಲಿ ಕುಡಿಯುವ ನೀರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಪ್ರಸ್ತಾವನೆ:

ರಾಮನಗರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದ್ದು, ಅದಕ್ಕಾಗಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿಯಲ್ಲಿ ಅನುದಾನ ಬಿಡುಗಡೆ ಮಾಡುವುದು ಅವಶ್ಯಕವಾಗಿರುತ್ತದೆ. ಆದುದರಿಂದ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 59 ಟಿಎನ್ಆರ್ 2011, ಬೆಂಗಳೂರು, ದಿನಾಂಕ 24-03-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಮನಗರ ಜಿಲ್ಲೆಯಲ್ಲಿ ಕುಡಿಯುವ ನೀರಿಗಾಗಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿಯಲ್ಲಿ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ ಇವರಿಗೆ ರೂ. 100 ಲಕ್ಷ (ರೂಪಾಯಿ ನೂರು ಲಕ್ಷಗಳು ಮಾತ್ರ) ಗಳನ್ನು ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಪ್ರಕೃತಿ ವಿಕೋಪ ಪರಿಹಾರ ಮಾರ್ಗಸೂಚಿಗಳನ್ವಯ ಉಪಯೋಗಿಸಿಕೊಳ್ಳತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ, ಮೇಲು ರುಜು ಮಾಡಿ, ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿ ಸಿ.ಆರ್.ಎಫ್ ಪಿಡಿ ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸಿಕೊಳ್ಳತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು 2009-10ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2245-01-104-0-00-100 (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿಯ ಸಂಖ್ಯೆ:ಆಇ:177:ವೆಚ್ಚ-7/2011, ದಿನಾಂಕ: 19-03-2011 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ದೇಸಾಯಿ
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ)

ಪಿ.ಆರ್. 939

ಕಂದಾಯ ಸಚಿವಾಲಯ

ಸೇರ್ಪಡೆ ಆದೇಶ

ಸಂಖ್ಯೆ: ಆರ್‌ಡಿ 22 ಎಲ್‌ಜಿಬಿ 2011, ಬೆಂಗಳೂರು, ದಿನಾಂಕ 23-03-2011

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಕೆ. ನಿಡುಗಣೆ ಗ್ರಾಮದ ಸ.ನಂ.1/11ರಲ್ಲಿ 4.60 ಎಕರೆ ಜಮೀನನ್ನು ಕೇಂದ್ರೀಯ ವಿದ್ಯಾಲಯಕ್ಕೆ ಮಂಜೂರು ಮಾಡಲಾದ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 46 ಎಲ್‌ಜಿಬಿ 2010, ದಿ: 01.03.2011ರ ಆದೇಶ ಭಾಗದಲ್ಲಿ ಷರತ್ತನ್ನು ವಿಧಿಸಿ ಎಂಬ ಪದಗಳ ನಂತರ **"ಉಚಿತವಾಗಿ"** ಎಂಬ ಪದವನ್ನು ಸೇರ್ಪಡೆ ಮಾಡಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೀತಾ ರಮೇಶ್
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ
(ಭೂ.ಮಂ ಮತ್ತು ಭೂ ಕಂ)

ಪಿ.ಆರ್. 940

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆಯಲ್ಲಿನ ಶಾಖಾಧಿಕಾರಿ ಹುದ್ದೆಯನ್ನು ಅಧೀನ ಕಾರ್ಯದರ್ಶಿ ವೃಂದಕ್ಕೆ ಉನ್ನತೀಕರಿಸುವ ಬಗ್ಗೆ.

ಓದಲಾಗಿದೆ : ಟಿಪ್ಪಣಿ ಸಂಖ್ಯೆ ಮುಕಾ 1287/ಕಂಪ್ಯೂಟರ್/2011, ದಿನಾಂಕ: 2-2-2011

ಪ್ರಸ್ತಾವನೆ:

ಮೇಲೆ ಓದಲಾದ ಟಿಪ್ಪಣಿಯಲ್ಲಿ ಮುಖ್ಯಕಾರ್ಯದರ್ಶಿಯವರ ಆಪ್ತ ಶಾಖೆಯಲ್ಲಿನ ಒಂದು ಶಾಖಾಧಿಕಾರಿ ಹುದ್ದೆಯನ್ನು ಅಧೀನ ಕಾರ್ಯದರ್ಶಿ ವೃಂದಕ್ಕೆ ಉನ್ನತೀಕರಿಸುವಂತೆ ಕೋರಲಾಗಿದೆ.

ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆಯಲ್ಲಿನ ಹಿರಿಯ ಸಹಾಯಕರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರಿಗೆ ಶಾಖಾಧಿಕಾರಿ ಹುದ್ದೆಗೆ ಮುಂಬಡ್ತಿ ದೊರೆತ ನಂತರ ಹಿರಿಯ ಸಹಾಯಕರ ಹುದ್ದೆಯನ್ನು ತಾತ್ಕಾಲಿಕವಾಗಿ, ಅಧಿಕಾರಿಯು ಶಾಖಾಧಿಕಾರಿ ಹುದ್ದೆಯಲ್ಲಿ ಮುಂದುವರೆಯುವವರೆಗೆ ಉನ್ನತೀಕರಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 124 ಸಆಸೇ 2011, ಬೆಂಗಳೂರು, ದಿನಾಂಕ 23-03-2011

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಮುಖ್ಯಕಾರ್ಯದರ್ಶಿಯವರ ಆಪ್ತ ಶಾಖೆಗೆ ಮಂಜೂರಾಗಿರುವ ಹಿರಿಯ ಸಹಾಯಕರ (ತಾತ್ಕಾಲಿಕವಾಗಿ ಶಾಖಾಧಿಕಾರಿ ವೃಂದಕ್ಕೆ ಉನ್ನತೀಕರಿಸಲಾದ) ಹುದ್ದೆಯನ್ನು ನಿಲಂಬನೆಯಲ್ಲಿಟ್ಟು (Abeyance) ತಕ್ಷಣದಿಂದ ಜಾರಿಗೆ ಬರುವಂತೆ

ಹಾಗೂ ಒಂದು ವರ್ಷದ ಅವಧಿಗೆ ಅಥವಾ ಈ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಯ ಸೇವೆಯು ಮುಖ್ಯ ಕಾರ್ಯದರ್ಶಿಯವರ ಶ್ರೇಣಿಗೆ ಉನ್ನತೀಕರಿಸುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಒಂದು ಅಧೀನ ಕಾರ್ಯದರ್ಶಿ ಹುದ್ದೆಯನ್ನು ಸೃಜಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 272:ಸೇವೆಗಳು–3/2011, ದಿನಾಂಕ: 11–3–2011ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 941

ಎ.ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿ.ಆ.ಸು. ಇಲಾಖೆ (ಸೇವೆಗಳು–3)

DEPARTMENT OF PERSONNEL AND ADMINISTRATIVE REFORMS SECRETARIAT

Sub: Suspension of Sri. K.M. Narayanaswamy, IFS (KN-96) Deputy conservator of Forests, Kollegal Division, Kollegal-Issue of orders-reg.

Read: 1. Letter No. A1/IFS/CR-53/2010-11, dated : 21-03-2011 of PCCF (HOFF).

2. Letter No. LOK/INV(C)/M-19/CR-5/CMR, dated : 21-03-2011 from Karnataka Lokayukta, Bangalore.

3. Letter No. A1/IFS/CR-53/2010-11, dated : 25-03-2011 PCCF (HOFF).

Government Order No.: DPAR 23 SFP 2011, Bangalore, Dated: 29-03-2011

Whereas, the ADGP, Karnataka Lokayukta, Bangalore in his letter dated : 21-03-2011 read at Sl.No. 2 above has reported that on the basis of reliable sources that illegal money collected from contractors was being transported to Bangalore, Sri K.M. Narayanaswamy, IFS, Deputy Conservator of Forests, Kollegal Division, Kollegal was intercepted on his way to Bangalore from Kollegal on 20-03-2011 in Government Vehicle No. KA-10 G-335. When searched in presence of panchas unaccounted money in Indian currency amounting to Rs. 8 lakh rupees was found in a brief case in the vehicle and the officer could not give proper and convincing information as to source of the money he had in his vehicle. A case was registered in Chamarajanagar Lokayukta Police Station, Crime No. 05/2011 u/s 7, 13(1)(d) r/w 13(2) of Prevention of Corruption Act, 1988 on 20-03-2011 and took up the investigation. On the same day the Accused Officer was produced before the Principal District Session and Special Court, Chamarajanagar and the court ordered him to judicial custody till 30-03-2011.

2. Whereas, ADGP, Lokayukta in his letter dated : 21-03-2011 has apprehended that continuing the officer in his present office would prejudice the investigation and there is possibility of the Accused Officer interfering in the investigation process and may tamper the evidences. The ADGP has therefore sought Government's Order for placing the Accused Officer under suspension and to transfer his lien to other place.

3. The Principal Chief Conservator of Forests vide letter dated : 25-03-2011 has informed that the Accused Officer is released from judicial custody on bail on 22-03-2011.

4. Whereas, the Government has examined the report of ADGP, Lokayukta, in the light of relevant rules and Government of India's guidelines. The Government is satisfied that it is necessary to place Sri. K.M. Narayanaswamy, IFS (KN-96) under suspension with immediate effect in the interest of smooth completion of investigation by Lokayukta Police.

5. Now, therefore in exercise of the powers conferred under Sub rule 3 of Rule (3) of the All India Services (Discipline & Appeal) Rules, 1969 and as per Government of India guidelines dated : 10-09-1993, Sri K.M. Narayanaswamy, IFS (KN-96), Deputy Conservator of Forests, Kollegal Division, Kollegal, Chamarajanagar District is placed under suspension with immediate effect and until further orders pending further investigation by Karnataka Lokayukta Police and pending the question of initiating Departmental Disciplinary/Criminal proceedings thereon.

6. During the period of suspension, the officer shall be paid subsistence allowance in accordance with Rule 4 of All India Services (Discipline & Appeal) Rules, 1969.

7. During the period of suspension, the officer shall not leave the headquarters under any circumstances without the written permission of the State Government.

By order and in the name of the Governor of Karnataka

PR No. 942

Ashok P. Atre

Under Secretary to Government

DPAR (Services-4)

DEPARTMENT OF PERSONNEL AND ADMINISTRATIVE REFORMS SECRETARIAT

Sub: Deputation of officers to Bangor University, UK-issue of orders - reg.

Read: 1. Government Order No. DPAR 227 SME 2010, dated 19-02-2011 r/w corrigendum dated : 18-03-2011.

2. Letter No. A1/EST/CR-53/2010-11, dated 21-03-2011 of Principal Chief Conservator of Forests, Bangalore.

3. Letter dated 21-03-2011 of the Additional Director General of Police, Karnataka Lokayukta, Bangalore.

Preamble:

In Government Order dated 19-02-2011 r/w corrigendum dated 18-03-2011 read at (1) above, among others Sri K.M. Narayanaswamy, IFS, Deputy Conservator of Forests, Kollegal Division, Kollegal was deputed for the training course on "Forestry and Climate Change" at Bangor University, UK from 04-04-2011 to 03-06-2011.

The Principal Chief Conservator of Forests, Bangalore, in his letter dated 21-03-2011 read at (2) above has stated that the Karnataka Lokayukta officers have arrested Sri K.M. Narayanaswamy, IFS on 20-03-2011 and produced him before the District and Session Court, Chamarajanagar, for further investigation in the matter of the officer found carrying unaccounted money of Rs. 8.00 lakhs in his department vehicle on 20-03-2011. In the above circumstances the Principal Chief Conservator of Forests has requested to review the question of deputation of Sri K.M.Narayanaswamy, IFS for the above training abroad. In the meanwhile, the Additional Director General of Police, Karnataka Lokayukta, Bangalore in his letter dated 21-03-2011 has reported that a case under the P.C. Act has been registered against Sri K.M.Narayanaswamy and the investigation is going on.

In view of the above circumstances, it is considered necessary to cancel the deputation of Sri K. M. Narayanaswamy, IFS to the training course in United Kingdom.

Government Order No.: DPAR 227 SME 2010, Bangalore, Dated: 26-03-2011

In the circumstances explained in the preamble, the order of deputation of Sri K.M.Narayanaswamy IFS, to the training course on "Forestry and Climate Change at Bangor University, United Kingdom, from 04-04-2011 to 03-06-2011 vide Government order read at Sl.No. 1 is withdrawn and stands cancelled.

The State Government order read at (1) above shall continue to remain without change in respect of deputation of other 04 officer mentioned in the said Government order.

By order and in the name of the Governor of Karnataka

Ashok P. Atre

Under Secretary to Government (i/c)

DPAR (Services-1)

PR No. 943

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಗೌರವಧನದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ Law Clerks-cum-Research Assistants ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 29 ಸೇಉನ್ಯಾ 2006 ದಿನಾಂಕ : 12–04–2006.
2. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 84 ಸೇಉನ್ಯಾ 2006 ದಿನಾಂಕ : 25–01–2007.
3. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 9 ಸೇಉನ್ಯಾ 2008 ದಿನಾಂಕ : 05–02–2008.
4. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 2 ಸೇಉನ್ಯಾ 2009 ದಿನಾಂಕ : 09–02–2009.
5. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಅವರ ಪತ್ರ ಸಂಖ್ಯೆ : HCE 623/2006 dated : 14-01-2011.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ : 12–04–2006ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಕಾನೂನು ಪದವೀಧರರನ್ನು ರೂ. 6000–00 ಗಳ ಮಾಸಿಕ ಗೌರವಧನದ ಆಧಾರದ ಮೇಲೆ Law Clerks-cum-Research Assistants ಗಳಾಗಿ 1 ವರ್ಷದ ಅವಧಿಗೆ ನೇಮಿಸಿಕೊಳ್ಳಲು ಸರ್ಕಾರದ ಮಂಜೂರಾತಿ ನೀಡಲಾಗಿತ್ತು. ಆನಂತರ ಮೇಲೆ (2)ರಲ್ಲಿ ಓದಲಾದ ದಿನಾಂಕ : 25–01–2007ರ ಸರ್ಕಾರಿ ಆದೇಶದಲ್ಲಿ ಸದರಿ ಗೌರವಧನವನ್ನು ರೂ. 10,000–00 ಗಳಿಗೆ ಹೆಚ್ಚಿಸಲಾಗಿತ್ತು. ಸದರಿ ಹುದ್ದೆಗಳನ್ನು ಮೇಲೆ (3)ರಲ್ಲಿ ಓದಲಾದ ದಿನಾಂಕ : 05–02–2008ರ ಸರ್ಕಾರಿ ಆದೇಶದಲ್ಲಿ ದಿನಾಂಕ : 01–02–2008 ರಿಂದ 1 ವರ್ಷದ ಅವಧಿಗೆ ಮುಂದುವರೆಸಲಾಗಿತ್ತು. ಈಗ ತದನಂತರ ಸದರಿ ಹುದ್ದೆಗಳನ್ನು ಮೇಲೆ (4)ರಲ್ಲಿ ಓದಲಾದ ದಿನಾಂಕ : 09–02–2009ರ ಸರ್ಕಾರಿ ಆದೇಶದಲ್ಲಿ ದಿನಾಂಕ : 01–02–2009 ರಿಂದ 31–01–2010ರ ವರೆಗೆ ಮುಂದುವರೆಸಲಗಿತ್ತು. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಅವರು ಮೇಲೆ (4)ರಲ್ಲಿ ಓದಲಾದ ದಿನಾಂಕ : 14–01–2011ರ ಪತ್ರದಲ್ಲಿ ಸದರಿ ಹುದ್ದೆಗಳನ್ನು ಮುಂದಿನ ಎರಡು ವರ್ಷಗಳಿಗೆ ಮುಂದುವರೆಸಲು ಕೋರಿದ್ದಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 3 ಸೇಉನ್ಯಾ 2011, ಬೆಂಗಳೂರು, ದಿನಾಂಕ: 25ನೇ ಮಾರ್ಚ್–2011

ಕರ್ನಾಟಕ ಉಚ್ಚ ನ್ಯಾಯಾಲಯದ Law Clerks-cum-Research Assistants 41 ಹುದ್ದೆಗಳನ್ನು ದಿನಾಂಕ : 01–02–2011 ರಿಂದ ದಿನಾಂಕ : 31–01–2012ರ ವರೆಗೆ ವಿಸ್ತರಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 162 ವೆಚ್ಚ–12/2011 ದಿನಾಂಕ : 08–03–2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ಆರ್.ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ಸೇವೆಗಳು–3)

ಪಿಆರ್.ನಂ. 944

ಒಳಾಡಳಿತ ಸಚಿವಾಲಯ

ವಿಷಯ : ಚಿಕ್ಕಮಗಳೂರು ತಾಲ್ಲೂಕಿನ ಶ್ರೀ ಗುರು ದತ್ತಾತ್ರೇಯ ಬಾಬಾ ಬುಡನ್‌ಸ್ವಾಮಿ ದರ್ಗಾದಲ್ಲಿ ದಿನಾಂಕ : 26-03-2011 ರಿಂದ 28-03-2011ರ ವರೆಗೆ ನಡೆಸುವ ಉರುಸ್ ಕಾರ್ಯಕ್ರಮಕ್ಕೆ 3 ಜನ ವಿಶೇಷ ಕಾರ್ಯ ನಿರ್ವಾಹಕ ದಂಡಾಧಿಕಾರಿಗಳನ್ನು ನಿಯೋಜಿಸಿದ್ದಕ್ಕೆ ಸರ್ಕಾರದ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಇವರ ಪ್ರಸ್ತಾವನೆ ಸಂಖ್ಯೆ : ಜೆ1/ಎಂಎಜಿ/139 2010-11, ದಿನಾಂಕ : 22-03-2011.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ, ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಇವರು ಚಿಕ್ಕಮಗಳೂರು ತಾಲ್ಲೂಕಿನ ಶ್ರೀ ಗುರು ದತ್ತಾತ್ರೇಯ ಬಾಬಾ ಬುಡನ್‌ಸ್ವಾಮಿ ದರ್ಗಾದಲ್ಲಿ ದಿನಾಂಕ : 26-03-2011 ರಿಂದ 28-03-2011 ರವರೆಗೆ ನಡೆಸುವ ಉರುಸ್ ಕಾರ್ಯಕ್ರಮಕ್ಕೆ 3 ಜನ ವಿಶೇಷ ಕಾರ್ಯ ನಿರ್ವಾಹಕ ದಂಡಾಧಿಕಾರಿಗಳನ್ನು ನಿಯೋಜಿಸಿದ್ದಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಘಟನೋತ್ತರ ಅನುಮೋದನೆ ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : 161 ಎಸ್‌ಎಸ್‌ಟಿ 2011, ಬೆಂಗಳೂರು, ದಿನಾಂಕ: 26-03-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಚಿಕ್ಕಮಗಳೂರು ತಾಲ್ಲೂಕಿನ ಶ್ರೀ ಗುರು ದತ್ತಾತ್ರೇಯ ಬಾಬಾ ಬುಡನ್‌ಸ್ವಾಮಿ ದರ್ಗಾದಲ್ಲಿ ದಿನಾಂಕ : 26-03-2011ರಿಂದ 28-03-2011ರ ವರೆಗೆ ನಡೆಸುವ ಉರುಸ್ ಕಾರ್ಯಕ್ರಮಕ್ಕೆ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ, ಚಿಕ್ಕಮಗಳೂರು ಜಿಲ್ಲಾ ದಂಡಾಧಿಕಾರಿಗಳು 3 ಜನ ವಿಶೇಷ ಕಾರ್ಯ ನಿರ್ವಾಹಕ ದಂಡಾಧಿಕಾರಿಗಳನ್ನು ನಿಯೋಜಿಸಿ ಹೊರಡಿಸಿರುವ ದಿನಾಂಕ : 22-03-2011ರ ಆದೇಶಕ್ಕೆ ಸರ್ಕಾರವು ಘಟನೋತ್ತರ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ

(ಕಾನೂನು ಮತ್ತು ಸುವ್ಯವಸ್ಥೆ,

ಕಾಪಿಪೋಸಾ ಮತ್ತು ಅಭಿಯೋಗಗಳು)

ಪಿಆರ್.ನಂ. 945

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : 2011-12ನೇ ಸಾಲಿಗೆ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಮುಂದುವರೆದ ಯೋಜನೆಗಳಿಗೆ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ : ದಿನಾಂಕ : 21-04-2010ರ ಆದೇಶ ಸಂಖ್ಯೆ : ಮೂಅಇ 38 ಮೂಇವಿ 2010.

ಪ್ರಸ್ತಾವನೆ:

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ರಚನೆಯ ಉದ್ದೇಶವು ಸಚಿವಾಲಯದ ಮಟ್ಟದಲ್ಲಿ ರೂ. 100 ಕೋಟಿಗಳಿಗೂ ಮೀರಿದ ಮೆಗಾ ಯೋಜನೆಗಳ ರೂಪಿಸುವಿಕೆ/ಪಿಪಿಪಿ ಯೋಜನೆಗಳ ಅನುಷ್ಠಾನ ಹಾಗೂ ಸಮನ್ವೀಕರಣ ಮಾಡುವುದಾಗಿರುತ್ತದೆ. ಈ ಇಲಾಖೆಯಲ್ಲಿ ಪ್ರಧಾನವಾಗಿ ಕಾರ್ಯಗತಗೊಳಿಸುತ್ತಿರುವ ಯೋಜನೆಗಳಾದ ವಿಮಾನ ನಿಲ್ದಾಣ, ಇಳಿದಾಣ/ಹೆಲಿಪ್ಯಾಡ್ ನಿರ್ಮಾಣ ಯೋಜನೆ, ವೆಚ್ಚ ಹಂಚಿಕೆ ಆಧಾರದ ಮೇಲೆ ಕೈಗೆತ್ತಿಕೊಂಡಿರುವ ರೈಲ್ವೆ ಯೋಜನೆಗಳು, ರಸ್ತೆ ಮೇಲು ಸೇತುವೆ/ಕೆಳಸೇತುವೆ ಯೋಜನೆಗಳು/HSRL/VADA/ಬಂದರು ನಿರ್ಮಾಣ ಅನಿಲಕೊಳವೆ ಯೋಜನೆ ಮುಂತಾದವುಗಳಿಗೆ 2011-12ನೇ ಸಾಲಿನ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ.

2. 2010-11ನೇ ಸಾಲಿಗೆ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ 22 ಯೋಜನೆಗಳನ್ನು ಮುಂದುವರೆದ ಯೋಜನೆಗಳೆಂದು ಪರಿಗಣಿಸಿ ಮೇಲೆ ಓದಲಾದ ಆದೇಶದಲ್ಲಿ ಮಂಜೂರಾತಿ ನೀಡಲಾಗಿತ್ತು. 2011-12ನೇ ಸಾಲಿನಲ್ಲಿ ಮೇಲಿನ 24 ಯೋಜನೆಗಳೊಂದಿಗೆ ಇನ್ನೂ 6 ಹೊಸ ಯೋಜನೆಗಳನ್ನು ಸೇರಿಸಲಾಗಿದೆ. ಈ 6 ಯೋಜನೆಗಳನ್ನು ಹೊರತುಪಡಿಸಿ ಉಳಿದ 24 ಯೋಜನೆಗಳಲ್ಲಿ ಯಾವುದೇ ಬದಲಾವಣೆ ಇಲ್ಲದಿರುವುದರಿಂದ ಈ ಎಲ್ಲಾ ಯೋಜನೆಗಳನ್ನು ಮುಂದುವರಿದ ಯೋಜನೆಗಳೆಂದು ಪರಿಗಣಿಸಲು ದಿನಾಂಕ : 26-03-2011 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಮುಂದುವರೆದ ಯೋಜನೆಗಳನ್ನು ಮುಂದುವರೆಸುವ ಕುರಿತಂತೆ ಜರುಗಿದ ಸಭೆಯಲ್ಲಿ ತೀರ್ಮಾನಿಸಿದೆ.

3. ಅಂತೆಯೇ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಮೂಅಇ 82 ಮೂಇವಿ 2011, ಬೆಂಗಳೂರು, ದಿನಾಂಕ: 28-03-2011

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಸಂದರ್ಭಗಳಲ್ಲಿ 2011-12ನೇ ಹಣಕಾಸಿನ ವರ್ಷದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಈ ಕೆಳಕಂಡ 24 ಯೋಜನೆಗಳನ್ನು ಮುಂದುವರೆದ ಯೋಜನೆಗಳೆಂದು ಪರಿಗಣಿಸಿ ಇವುಗಳ ಅನುಷ್ಠಾನಕ್ಕೆ ಈ ಮೂಲಕ ಸರ್ಕಾರದ ಮಂಜೂರಾತಿಯನ್ನು ನೀಡಿದೆ.

(Rs. in Lakhs)

Sl. No.	Nomenclature of the Scheme	Budget provision during 2010-11	Budget provision during 2011-12
1.	5465-01-190-1-04-240 BIAP-Assistance for repayment of HUDCO loan.	2599.00	1463.00
2a)	5465-01-190-1-05-211- Development of Minor Airports Investments.	4000.00	8000.00
2b)	5465-01-190-1-05-133- Special Development Plan.	6000.00	4000.00
3	5465-01-190-2-01 Investment in BIAL through KSIIDC.	1500.00	10.00
4	5465-01-190-2-03 KSIIDC-BIAP cell-211-Investments.	25.00	25.00
5	5465-01-190-2-04-211 Providing power at the airport near BIAP site.	1.00	1.00
6a)	5465-01-190-2-05-211 Alternate Roads Investment.	1500.00	1000.00
6b)	5465-01-190-2-05-422-Special Component Plan.	350.00	350.00
6c)	5465-01-190-2-05-423-Tribal Sub Plan.	150.00	150.00
7.	5465-01-190-2-06 Land acquisition for Trumpet Interchange investments.	200.00	-
8.	5465-01-190-2-07-051-Development of 408 acres of Govt. land adjacent to BIAP.	100.00	100.00
9.	5465-01-190-2-11 - Aviation Turbine Fuel - Tax Reimbursement Investment.	36.00	1.00
10.	5465-01-190-3-06-211 Rail link to New Airport.	570.00	7570.00
11.	5465-01-190-3-01- KRIDE- Investment.	500.00	1.00
12.	5465-01-190-3-02-Hassan-Mangalore guage conversion project-Investments.	900.00	100.00
13.	5465-01-190-3-03-Sholapur-Gadag guage conversion project-Investments.	2800.00	500.00
14.	5465-01-190-3-04-211-K-RIDE - RoB/RuB project Investment fund.	3000.00	2149.00
15a)	5465-01-190-3-05-211 New Cost Sharing project-Investments.	27250.00	25652.00
15b)	5465-01-190-3-05-133 Special Development Plan.	4000.00	10000.00
15c)	5465-01-190-3-05-422 - Special Component Plan.	2500.00	2000.00
15d)	5465-01-190-3-05-423 - Tribal Sub Plan.	1250.00	1000.00
16.	5465-01-190-3-07-211 Computer Rail Service for Bangalore.	100.00	500.00
17.	5465-01-190-3-08-Cost Sharing Ramanagaram-Mysore Railway Doubling-Other expenditure.	2500.00	2500.00
19	5465-01-1-190-3-09-Land for railway cargo complex at Hubli.	1.00	1.00
19a)	5465-01-190-3-10-133-Cost sharing-Bidar-Gulbarga New Railway line - SDP.	4250.00	3909.56
19b)	5465-01-190-3-10-422-Special Component Plan.	500.00	300.00
19c)	5465-01-190-3-10-423-Tribal Sub Plan.	250.00	150.00
20.	5465-01-190-1-11-Hubli Ankola Railway project.	1.00	1.00
21.	5465-01-190-1-01-211-iDeCK-Investments.	200.00	200.00
22.	5465-01-190-1-15-Karnataka Infrastructure Project Development Fund Capital Expenses.	1000.00	1000.00
23.	3451-00-090-1-06-059-Infrastructure Preliminary Studies Other Expenditure.	797.00	300.00
24.	3451-00-090-1-06-125-Infrastructure Preliminary Studies - Modernisation.	100.00	100.00
	Grand Total	**68930.00**	**73033.56**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. ಶಿವಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಪಿಆರ್.ನಂ. 946

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯ

ವಿಷಯ : ಅವಿಭಕ್ತ ಕುಟುಂಬಗಳಿಗೆ ಒಂದಕ್ಕಿಂತ ಹೆಚ್ಚು ಪಡಿತರ ಚೀಟಿ ನೀಡುವ ಬಗ್ಗೆ ಸರ್ಕಾರದ ನೀತಿ ರಚನೆ-ಬಗ್ಗೆ.

ಪ್ರಸ್ತಾವನೆ:

ಒಂದು ಅವಿಭಕ್ತ ಅಥವಾ ಒಟ್ಟು ಕುಟುಂಬದ ಸದಸ್ಯರುಗಳಿಗೆ ಪಡಿತರ ಚೀಟಿ ನೀಡುವಲ್ಲಿ ಪರಿಪಾಲಿಸಬಹುದಾದ ಕ್ರಮದ ಬಗ್ಗೆ ಸರ್ಕಾರದ ಒಂದು ನೀತಿಯನ್ನು ರಚಿಸುವುದು ಅಗತ್ಯವಾಗಿರುತ್ತದೆ. ಪ್ರಸ್ತುತ ರಾಜ್ಯದ ತಾಲ್ಲೂಕುಗಳಲ್ಲಿ ಮತ್ತು ಜಿಲ್ಲೆಗಳಲ್ಲಿ ವಿವಿಧ ರೀತಿಯ ನೀತಿಯನ್ನು ಪಾಲಿಸಲಾಗುತ್ತಿದೆ. ಒಂದು ಅವಿಭಕ್ತ/ಒಟ್ಟು ಕುಟುಂಬದಲ್ಲಿ ಎಷ್ಟೇ ಸದಸ್ಯರು ಇರಲಿ, ಅವರಿಗೆಲ್ಲಾ ಸೇರಿ ಆಹಾರಧಾನ್ಯದ ಗರಿಷ್ಠ ಮಿತಿಯನ್ನು 23 ಕೆ.ಜಿ.ಗೆ ಸೀಮಿತಗೊಳಿಸಿ, ಪ್ರತಿ ಸದಸ್ಯರಿಗೆ 4 ಕೆ.ಜಿ.ಯಂತೆ ಕೆಲವು ತಾಲ್ಲೂಕುಗಳಲ್ಲಿ ಒಂದು ಪಡಿತರ ಚೀಟಿಯನ್ನು ನೀಡಲಾಗಿರುತ್ತದೆ. ಇನ್ನೂ ಕೆಲವು ತಾಲ್ಲೂಕುಗಳಲ್ಲಿ, ಒಟ್ಟು ಕುಟುಂಬದ ಮುಖ್ಯಸ್ಥನ ಹೆಸರಿಗೆ ಒಂದು ಪಡಿತರ ಚೀಟಿಯನ್ನು ನೀಡಿದ್ದರೆ, ವಿವಾಹಿತ ಗಂಡು ಮಕ್ಕಳ ಹೆಸರಿನಲ್ಲಿ ಪ್ರತ್ಯೇಕ ಪಡಿತರ ಚೀಟಿಯನ್ನು ನೀಡಲಾಗಿರುತ್ತದೆ. ಒಂದು ದೊಡ್ಡ ಅವಿಭಕ್ತ/ಒಟ್ಟು ಕುಟುಂಬಕ್ಕೆ ಒಂದೇ ಪಡಿತರ ಚೀಟಿ ನೀಡಿರುವಲ್ಲಿ ಅಸಮಾಧಾನ ಇದ್ದರೆ, 10-20 ಎಕರೆ ನೀರಾವರಿ ಭೂಮಿ ಇರುವಂತಹ ಒಟ್ಟು ಕುಟುಂಬದ ಮುಖ್ಯಸ್ಥನ ಹೆಸರಿಗೆ ಎ.ಪಿ.ಎಲ್. ಕಾರ್ಡು ನೀಡಿ, ವಿವಾಹಿತ ಮಕ್ಕಳ ಹೆಸರಿಗೆ ಬಿಪಿಎಲ್ ಕಾರ್ಡ್‌ಗಳನ್ನು ನೀಡಿರುವಂತಹ ಪ್ರಕರಣಗಳಲ್ಲಿ, ಪಡಿತರ ವ್ಯವಸ್ಥೆಯ ದುರುಪಯೋಗವಾಗುತ್ತಿದೆ. ಆದುದರಿಂದ ರಾಜ್ಯದ ಎಲ್ಲಾ ಜಿಲ್ಲೆಯಲ್ಲಿ ಮತ್ತು ತಾಲ್ಲೂಕುಗಳಲ್ಲಿ ಒಂದೇ ಕ್ರಮವನ್ನು ಪಾಲಿಸಲು ಸಾಧ್ಯವಾಗುವಂತೆ ಒಂದು ನೀತಿಯನ್ನು ರಚಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಒಂದು ದೊಡ್ಡ ಅವಿಭಕ್ತ/ಒಟ್ಟು ಕುಟುಂಬವನ್ನು ಪಡಿತರ ವ್ಯವಸ್ಥೆಗಾಗಿ ಒಂದು ಚಿಕ್ಕ ಸಂಸಾರಕ್ಕಾಗಿ ಸಮಾನವಾಗಿ ಪರಿಗಣಿಸುವುದು ಸಮಂಜಸವಾಗಲಾರದು. ಸಮಾಜದ ಎಲ್ಲಾ ಸದಸ್ಯರಿಗೂ ಸಾಕಷ್ಟು ಆಹಾರಧಾನ್ಯವನ್ನು ರಿಯಾಯಿತಿ ಬೆಲೆಯಲ್ಲಿ ತಲುಪಿಸಬೇಕು ಎನ್ನುವ ಸರ್ಕಾರದ ಮೂಲ ಉದ್ದೇಶ, ಈ ರೀತಿ ಮಾಡಿದಲ್ಲಿ ಸಫಲವಾಗಲಾರದು. ಆದರೆ, ಒಂದು ಶ್ರೀಮಂತ ಒಟ್ಟು ಕುಟುಂಬ ಹೊಂದಿರಬಹುದಾದ ಹತ್ತಾರು ಎಕರೆ ಜಮೀನು ಅಥವಾ ದೊಡ್ಡ ವ್ಯಾಪಾರ-ವಹಿವಾಟನ್ನು ಅವಿಭಕ್ತ ಕುಟುಂಬದ ಮುಖ್ಯಸ್ಥರೊಬ್ಬರ ಹೆಸರಿಗೆ ಮಾತ್ರ ತೋರಿಸಿ, ಆತನಿಗೆ ಎ.ಪಿ.ಎಲ್. ಪಡಿತರ ಚೀಟಿ ನೀಡಿ, ವಿವಾಹಿತ ಗಂಡು ಮಕ್ಕಳನ್ನು ಆಸ್ತಿ ರಹಿತರೆಂದು ಪರಿಗಣಿಸಿ ಬಿಪಿಎಲ್ ಪಡಿತರ ಚೀಟಿಗಳನ್ನು ನೀಡುವುದು ಸಹ ಸಮಂಜಸವಾಗಲಾರದು.

ಸರ್ಕಾರಿ ಆದೇಶ ಸಂಖ್ಯೆ : ಆನಾಸ 260 ಡಿಆರ್‌ಎ 2010, ಬೆಂಗಳೂರು, ದಿನಾಂಕ: 30ನೇ ಮಾರ್ಚ್ 2011

ಈ ಮೇಲೆ ಹೇಳಿದ ವಾಸ್ತವಾಂಶಗಳನ್ನು ಗಮನದಲ್ಲಿಟ್ಟುಕೊಂಡು, ಒಟ್ಟು ಅಥವಾ ಅವಿಭಕ್ತ ಕುಟುಂಬಕ್ಕೆ ಪಡಿತರ ಚೀಟಿ ನೀಡುವಲ್ಲಿ ಅನುಸರಿಸಬೇಕಾದ ನೀತಿಯನ್ನು ಈ ಕೆಳಗೆ ನೀಡಲಾಗಿದೆ :

ಅ) ಒಂದು ಕುಟುಂಬದಲ್ಲಿ, ಒಂದಕ್ಕಿಂತ ಹೆಚ್ಚು ತಲೆಮಾರಿನ ಸದಸ್ಯರಿದ್ದು ಅಥವಾ ಒಂದೆ ತಲೆಮಾರಿನ ಸಹೋದರರಿದ್ದು, ಒಂದು ಅವಿಭಾಜ್ಯ ಪಿತ್ರಾರ್ಜಿತ ಆಸ್ತಿ ಅಥವಾ ವ್ಯಾಪಾರ-ವಹಿವಾಟು ಅವರ ಆದಾಯ ಮೂಲ ಆಗಿದ್ದಲ್ಲಿ ಅಥವಾ ಅದರಲ್ಲಿ ಹಕ್ಕಿದ್ದಲ್ಲಿ, ಅಂತಹ ಕುಟುಂಬದ ಸದಸ್ಯರು ಒಂದು ಮನೆಯಲ್ಲಿ ವಾಸವಾಗಿರಲಿ, ಅಥವಾ ಪ್ರತ್ಯೇಕವಾಗಿ ವಾಸವಾಗಿರಲಿ, ಪಡಿತರ ವ್ಯವಸ್ಥೆಯ ಮಟ್ಟಿಗೆ ಅಂತಹ ಕುಟುಂಬವನ್ನು ಒಂದು ಅವಿಭಕ್ತ ಅಥವಾ ಒಟ್ಟು ಕುಟುಂಬ ಎಂದು ಪರಿಗಣಿಸಲಾಗುವುದು.

ಆ) ಒಂದು ಅವಿಭಕ್ತ/ಒಟ್ಟು ಕುಟುಂಬವು ಬಡತನ ರೇಖೆಗಿಂತ ಮೇಲಿದ್ದಾರೋ ಅಥವಾ ಕೆಳಗಿದ್ದಾರೋ ಎಂದು ನಿರ್ಧರಿಸಲು ಸಾಧ್ಯವಾಗುವಂತೆ ಅಂತಹ ಕುಟುಂಬದ ಎಲ್ಲಾ ಸದಸ್ಯರ ಆದಾಯವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

ಇ) ಒಂದು ಅವಿಭಕ್ತ/ಒಟ್ಟು ಕುಟುಂಬದ ಆದಾಯ ಮೂಲವಾದ ಕೃಷಿ ಭೂಮಿ ಅಥವಾ ವ್ಯಾಪಾರ-ವಹಿವಾಟು ಅವಿಭಕ್ತ ಕುಟುಂಬದ ಯಜಮಾನ ಅಥವಾ 'ಕರ್ತ'ನ ಹೆಸರಿನಲ್ಲಿ ಇದ್ದರೂ, ಅದರಲ್ಲಿ ಎಲ್ಲಾ ಗಂಡು ಮಕ್ಕಳಿಗೂ ಸಮಪಾಲು ಇರುವುದರಿಂದ, ಅದರಿಂದ ಬರುವ ಆದಾಯವನ್ನು ಒಟ್ಟು ಕುಟುಂಬದ ಎಲ್ಲಾ ಸದಸ್ಯರ ಆದಾಯವೆಂದು ಪರಿಗಣಿಸತಕ್ಕದ್ದು.

ಈ) ಅವಿಭಕ್ತ ಕುಟುಂಬದ ಆದಾಯ ಮೂಲವು ಒಂದಾಗಿದ್ದರೂ, ಒಂದು ಅವಿಭಕ್ತ ಕುಟುಂಬದ ವಿವಾಹಿತ ಗಂಡು ಮಕ್ಕಳು ಬಯಸಿದಲ್ಲಿ, ಪ್ರತ್ಯೇಕ ಪಡಿತರ ಚೀಟಿಗಳನ್ನು ನೀಡಬಹುದು. ಆದರೆ, ಕಂಪ್ಯೂಟರ್ 'ಡಾಟಾ ಬೇಸ್' ನಲ್ಲಿ ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರ ಮಾಹಿತಿಯನ್ನು ಒಂದೆ ಕಡೆ ಇಡತಕ್ಕದ್ದು, ವಿಭಕ್ತ/ಒಟ್ಟು ಕುಟುಂಬಕ್ಕೆ ಸೇರಿದ ಆಸ್ತಿ ಅಥವಾ ವ್ಯವಹಾರ ಯಾವ ಸದಸ್ಯನ ಹೆಸರಿನಲ್ಲಿ ಇದೆಯೊ, ಆತನ ಹೆಸರಿಗೆ ನೀಡುವ ಪಡಿತರ ಚೀಟಿಯಲ್ಲಿ, ಪ್ರಾಮುಖ್ಯವಾಗಿ "ಮುಖ್ಯ ಕುಟುಂಬ" - "ಉಪ-ಕುಟುಂಬಗಳಿಗೆ ಪ್ರತ್ಯೇಕ ಕಾರ್ಡು ನೀಡಲಾಗಿದೆ" ಎಂದು ನಮೂದಿಸತಕ್ಕದ್ದು. ಉಪ ಕುಟುಂಬಗಳಿಗೆ ನೀಡುವ ಕಾರ್ಡುಗಳ ಮೇಲೆ "ಉಪ ಕುಟುಂಬ" - "ಮುಖ್ಯ ಕುಟುಂಬಕ್ಕೆ ಪ್ರತ್ಯೇಕ ಕಾರ್ಡು ನೀಡಲಾಗಿದೆ" ಎಂದು ಮುದ್ರಿಸತಕ್ಕದ್ದು. ಮುಖ್ಯ ಕುಟುಂಬ ಮತ್ತು ಉಪ ಕುಟುಂಬಗಳಿಗೆ ನೀಡುವ ಕಾರ್ಡುಗಳ ಸಂಖ್ಯೆ ಒಂದೇ ಆಗಿರತಕ್ಕದ್ದು. ಆದರೆ, ಮುಖ್ಯ ಕುಟುಂಬದ ಕಾರ್ಡ್‌ನ ಸಂಖ್ಯೆ ಮುಂದೆ MF ಎಂದೂ, 1ನೇ ಉಪ ಕುಟುಂಬದ ಕಾರ್ಡ್‌ನ ಸಂಖ್ಯೆ ಮುಂದೆ SF1 ಎಂದೂ, ಎರಡನೇ ಉಪ ಕುಟುಂಬದ ಕಾರ್ಡ್‌ನ ಸಂಖ್ಯೆ ಮುಂದೆ SF2 ಎಂದೂ, ಮೂರನೆ ಉಪ ಕುಟುಂಬದ ಕಾರ್ಡ್‌ನ ಸಂಖ್ಯೆ ಮುಂದೆ SF3ಎಂದೂ, ಇತ್ಯಾದಿಯಾಗಿ ನಮೂದಿಸತಕ್ಕದ್ದು.

ಉ) ಒಂದು ಅವಿಭಕ್ತ ಕುಟುಂಬವು ಬಡತನ ರೇಖೆಗಿಂತ ಕೆಳಗೆ ಇದೆಯೆಂದು ಪರಿಗಣಿಸಲ್ಪಟ್ಟಲ್ಲಿ ಮತ್ತು ಒಂದು ಪಡಿತರ ಚೀಟಿಯನ್ನು ಬಯಸಿದಲ್ಲಿ, ಅಂತಹ ಅವಿಭಕ್ತ ಕುಟುಂಬದ ಯಜಮಾನ, ಆತನ ಹೆಂಡತಿ ಹಾಗೂ ಅವರ ಅವಿವಾಹಿತ ಮಕ್ಕಳನ್ನು ಒಂದು ಚಿಕ್ಕ ಕುಟುಂಬಕ್ಕೆ ಸಮಾನಾಂತರವೆಂದು ಪರಿಗಣಿಸಿ ಪಡಿತರ ಲೆಕ್ಕ ಹಾಕತಕ್ಕದ್ದು. ಪ್ರತಿ ವಿವಾಹಿತ ಮಗನ ಕುಟುಂಬವನ್ನು ಒಂದು ಚಿಕ್ಕ ಕುಟುಂಬವೆಂದು ಪರಿಗಣಿಸಿ ಪಡಿತರ ಲೆಕ್ಕ ಹಾಕತಕ್ಕದ್ದು. ಅಂತಹ ಒಂದು ಅವಿಭಕ್ತ ಕುಟುಂಬದಲ್ಲಿ ಇಬ್ಬರು ವಿವಾಹಿತ ಗಂಡು ಮಕ್ಕಳು ಇದ್ದರೆ ಎರಡು ಚಿಕ್ಕ ಕುಟುಂಬಗಳಿಗೆ ನೀಡುವ ಆಹಾರಧಾನ್ಯ ಇತ್ಯಾದಿಗಳನ್ನೂ : ಮೂರು ವಿವಾಹಿತ ಮಕ್ಕಳು ಇದ್ದರೆ, ಮೂರು ಚಿಕ್ಕ ಕುಟುಂಬಗಳಿಗೆ ನೀಡುವ ಆಹಾರಧಾನ್ಯ ಇತ್ಯಾದಿಗಳ ಪಡಿತರ ನೀಡತಕ್ಕದ್ದು.

ಊ) ಒಂದು ಅವಿಭಕ್ತ ಕುಟುಂಬ ಬಡತನ ರೇಖೆಗಿಂತ ಕೆಳಗೆ ಇದೆಯೆಂದು ಪರಿಗಣಿಸಲ್ಪಟ್ಟಲ್ಲಿ ಮತ್ತು "ಮುಖ್ಯ ಕುಟುಂಬ" ಮತ್ತು "ಉಪ ಕುಟುಂಬ" ಗಳಿಗೆ ಪ್ರತ್ಯೇಕ ಕಾರ್ಡುಗಳನ್ನು ನೀಡಲ್ಪಟ್ಟಲ್ಲಿ, ಮುಖ್ಯ ಕುಟುಂಬ ಮತ್ತು ಉಪ ಕುಟುಂಬಗಳನ್ನು ಪ್ರತ್ಯೇಕ ಚಿಕ್ಕ ಕುಟುಂಬಗಳು ಎಂದು ಪರಿಗಣಿಸಿ, ಪಡಿತರ ಲೆಕ್ಕ ಹಾಕತಕ್ಕದ್ದು ಮತ್ತು ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ.ಸೋಮಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ

ಪಿಆರ್.ನಂ. 947

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ರಾಜ್ಯ ವಕೀಲರ ಸಂಘಗಳಿಗೆ ಇ–ಗ್ರಂಥಾಲಯವನ್ನು ಸ್ಥಾಪಿಸಲು ಹಣ ಬಿಡುಗಡೆ ಮಾಡುವ ಬಗ್ಗೆ:–

ಓದಲಾಗಿದೆ :

1. 2010–11ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ರೂ. 1.00 ಕೋಟಿಗಳನ್ನು ರಾಜ್ಯ ನ್ಯಾಯಾಲಯಗಳಲ್ಲಿ ಡಿಜಿಟಲ್ ಲೈಬ್ರರಿಗಳ ಸೌಲಭ್ಯಗಳನ್ನು ಒದಗಿಸುವುದಾಗಿ ಘೋಷಿಸಿರುತ್ತಾರೆ.
2. ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 69 ವೆಚ್ಚ–10/2011, ದಿನಾಂಕ 15–02–2011
3. ಸರ್ಕಾರದ ಆದೇಶ ಸಂಖ್ಯೆ: ಲಾ 96 ಎಲ್‌ಸಿಎಲ್ 2010, ದಿನಾಂಕ 21–02–2011
4. ದಿನಾಂಕ 05–03–2011ರಂದು ಮುಖ್ಯ ಕಾರ್ಯದರ್ಶಿ, ಸಿಆಸುಇ (ಇ–ಆಡಳಿತ) ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಷಿಕ ಕ್ರಿಯಾ ಯೋಜನೆಗಳ ಅನುಮೋದನೆ ಸಮಿತಿ ಸಭೆಯ ನಡವಳಿಗಳು.
5. ಸರ್ಕಾರದ ಅದೇಶ ಸಂಖ್ಯೆ: ಲಾ 96 ಎಲ್‌ಸಿಎಲ್ 2010, ದಿನಾಂಕ 15–03–2011
6. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 142 ವೆಚ್ಚ 10/2011 ದಿ: 25–03–2011

ಪ್ರಸ್ತಾವನೆ :

2010–11ನೇ ಸಾಲಿನಲ್ಲಿ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ರೂ. 1.00 ಕೋಟಿಗಳನ್ನು ರಾಜ್ಯದ ನ್ಯಾಯಾಲಯಗಳಲ್ಲಿ ಡಿಜಿಟಲ್ ಲೈಬ್ರರಿ ಸೌಲಭ್ಯಗಳಿಗೆ ಒದಗಿಸುವುದಾಗಿ ಘೋಷಿಸಿರುತ್ತಾರೆ. ಯೋಜನಾ ಕಾರ್ಯಕ್ರಮಗಳ ಅಡಿ ಒದಗಿಸಿರುವ ಹಣವನ್ನು ಯೋಜನೇತರ ಲೆಕ್ಕ ಶೀರ್ಷಿಕೆಗೆ ಮರುಹೊಂದಾಣಿಕೆ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಲೆಕ್ಕ ಶೀರ್ಷಿಕೆ 2014–0–800–01–05–101ರ ಅಡಿಯಲ್ಲಿ ಒದಗಿಸಿರುವ ರೂ. 100–00 ಲಕ್ಷಗಳನ್ನು ಕೋರ್ಟ್‌ಗಳಲ್ಲಿ ಡಿಜಿಟಲ್ ಲೈಬ್ರರಿಯನ್ನು ಸ್ಥಾಪಿಸಲು ಯೋಜನಾ ಇಲಾಖೆಯು ಸಹಮತಿಸಿರುತ್ತದೆ.

ನ್ಯಾಯಾಲಯಗಳಿಗೆ ಡಿಜಿಟಲ್ ಲೈಬ್ರರಿಗಳನ್ನು ಒದಗಿಸಲು ಲೆಕ್ಕ ಶೀರ್ಷಿಕೆ 2014–00–800–1–05ರ object head 059 ಇತರೆ–ಖರ್ಚು ರಡಿ ಒದಗಿಸಲಾಗಿದ್ದ ಅನುದಾನವನ್ನು object head 101 ಸಹಾಯಾನುದಾನ ರಡಿಗೆ ಮರುಹಂಚಿಕೆ ಮಾಡಿ ತಿದ್ದುಪಡಿ ಆದೇಶವನ್ನು ಖಜಾನೆ ನಿರ್ದೇಶನಾಲಯಕ್ಕೆ ಕಳುಹಿಸಲಾಗಿದೆ. ಆದ್ದರಿಂದ ವಕೀಲರ ಸಂಘಗಳಿಗೆ ಇ–ಗ್ರಂಥಾಲಯವನ್ನು ಸ್ಥಾಪಿಸಲು ಏಕವಾರಿಯ ಅನುದಾನವಾಗಿ ರೂ. 100.00 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2014–00–800–1–05–101 ರಿಂದ ಬಿಡುಗಡೆ ಮಾಡಲು ಸಹಮತಿಸಿರುವುದಾಗಿ ಮೇಲೆ ಓದಲಾದ ದಿನಾಂಕ 15–02–2011ರ ಪತ್ರದಲ್ಲಿ ಆರ್ಥಿಕ ಇಲಾಖೆಯು ತಿಳಿಸಿರುತ್ತದೆ.

ಅದರಂತೆ ಉಲ್ಲೇಖಿತ (3)ರ ಸರ್ಕಾರದ ಆದೇಶ ಸಂಖ್ಯೆ: ಲಾ 96 ಎಲ್‌ಸಿಎಲ್ 2010 ದಿನಾಂಕ 21–02–2011ರಲ್ಲಿ ವಕೀಲರ ಸಂಘಗಳಿಗೆ ಇ–ಗ್ರಂಥಾಲಯವನ್ನು ಸ್ಥಾಪಿಸಲು ಏಕಬಾರಿಯ ಅನುದಾನವಾಗಿ ರೂ. 100–00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿತ್ತು. ನಂತರ ಉಲ್ಲೇಖಿತ (4)ರ ಸಮಿತಿ ಸಭೆಯ ತೀರ್ಮಾನದಂತೆ ರೂ. ಒಂದು ಕೋಟಿ ಅನುದಾನವನ್ನು ಎಲ್ಲಾ ವಕೀಲರ ಸಂಘಗಳಿಗೆ ತಲಾ ರೂ. 45,000 ಗಳಂತೆ ಹಂಚಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಮೂಲಕ ಬಿಡುಗಡೆ ಮಾಡಲು ಉಲ್ಲೇಖಿತ (5)ರ ಲಾ 96 ಎಲ್‌ಸಿಎಲ್ 2010, ದಿನಾಂಕ 15–03–2011ರ ಆದೇಶದಲ್ಲಿ ರಿಜಿಸ್ಟ್ರಾರ್ ಜನರಲ್ ರವರಿಗೆ ಅಧಿಕಾರ ನೀಡಲಾಗಿತ್ತು. ಪ್ರಸ್ತುತ ಆರ್ಥಿಕ ಇಲಾಖೆ ಉಲ್ಲೇಖಿತ (6)ರ ಟಿಪ್ಪಣಿ ಸಂಖ್ಯೆ: ಆಇ 142 ವೆಚ್ಚ–10/2011, ದಿನಾಂಕ 25–03–2011ರಲ್ಲಿ ಲೆಕ್ಕ ಶೀರ್ಷಿಕೆ 2014–00–800–1–05–101ರಲ್ಲಿ ನೀಡಿರುವ ಹಣವನ್ನು ಜಿಲ್ಲಾಧಿಕಾರಿಗಳಿಗೆ ನೀಡಿ ಅದನ್ನು ಆಯಾ ಜಿಲ್ಲೆಯ ವಕೀಲರ ಸಂಘಗಳಿಗೆ ಇ–ಲೈಬ್ರರಿ ಸ್ಥಾಪಿಸುವ ಸಲುವಾಗಿ ಹಂಚಲು ಆ ಬಗ್ಗೆ ಪ್ರತ್ಯೇಕ ಲೆಕ್ಕ ನಿರ್ವಹಿಸುವಂತೆ ತಿಳಿಸಿ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿ ಸಹಮತಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಲಾ 96 ಎಲ್‌ಸಿಎಲ್ 2010, ಬೆಂಗಳೂರು, ದಿನಾಂಕ : 26–3–2011

ಪ್ರಸ್ತಾವನೆಯನ್ವಯ ಕೂಲಂಕಷವಾಗಿ ಪರಿಶೀಲಿಸಿ ಉಲ್ಲೇಖಿತ (5)ರ ಅಧಿಕಾರ ಪ್ರತ್ಯಾಯೋಜಿತ ಆದೇಶವನ್ನು ರದ್ದುಗೊಳಿಸಿ ಪ್ರತಿ ವಕೀಲರ ಸಂಘಗಳಿಗೆ ತಲಾ ಒಂದು ಕಂಪ್ಯೂಟರ್, ಯುಪಿಎಸ್ ಮತ್ತು ಪ್ರಿಂಟರ್ ಖರೀದಿಸಲು ತಗಲುವ ವೆಚ್ಚವಾಗಿ ರೂ. 45,000 ಗಳಂತೆ ವಿತರಿಸಲು ಉಲ್ಲೇಖಿತ (3)ರ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಈ ಆದೇಶದ ಅನುಬಂಧದಲ್ಲಿರುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಒಟ್ಟು ರೂ. 81 ಲಕ್ಷಗಳನ್ನು (ಎಂಬತ್ತ ಒಂದು ಲಕ್ಷ ರೂಪಾಯಿಗಳು ಮಾತ್ರ) ಹಂಚಲಾಗಿದೆ.

ಸಂಬಂಧಪಟ್ಟ ವಕೀಲರ ಸಂಘಗಳು, ಇ–ಆಡಳಿತ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನ ಸೌಧ ರವರು ಪಟ್ಟಿ ಮಾಡಿರುವ ಅಧಿಕೃತ ವ್ಯಾಪಾರಿಗಳಿಂದ ಖರೀದಿಸಿ ಬಳಿಕ ಪ್ರಮಾಣ ಪತ್ರವನ್ನು ಪಡೆದು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಗೆ ಸಲ್ಲಿಸತಕ್ಕದ್ದು.

ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಅನುಬಂಧದಲ್ಲಿರುವ ಮೊತ್ತವನ್ನು ಲೆಕ್ಕ ಶೀರ್ಷಿಕೆ 2014–00–800–1–05–101 (ಯೋಜನೆ) ರಡಿಯಲ್ಲಿ ಪಡೆದು ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ನಲ್ಲಿ ಅನುಮತಿ ಪಡೆದು ನೋಂದಾಯಿಸಲ್ಪಟ್ಟಿರುವ ಅಧಿಕೃತ ವಕೀಲರ ಸಂಘಗಳಿಗೆ

ಬಿಡುಗಡೆಯಾಗಿರುವ ಹಣವನ್ನು ಹಂಚಿ ಬಳಕೆ ಪ್ರಮಾಣ ಪತ್ರವನ್ನು ಪಡೆದು ಈ ಬಗ್ಗೆ ವಿತರಿಸಿರುವ ಹಣಕ್ಕೆ ಪ್ರತ್ಯೇಕ ಲೆಕ್ಕವಿಟ್ಟು ಸರ್ಕಾರಕ್ಕೆ ವರದಿ ಮಾಡುವಂತೆ ತಿಳಿಸಲಾಗಿದೆ.

ಈ ಆದೇಶವನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆಗಳ ಅನುಮೋದನೆಗಾಗಿ ದಿನಾಂಕ 5-3-2011 ರಂದು ನಡೆದ ಸಮಿತಿ ಸಭೆಯ ನಿರ್ಣಯಗಳನ್ವಯ ಹಾಗೂ ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 142 ವೆಚ್ಚ-10/2011 ದಿನಾಂಕ 25-03-2011ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್. ಆರ್.ಶಕುಂತಲ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ: ಲಾ 96 ಎಲ್‌ಸಿಎಲ್ 2010, ದಿನಾಂಕ 26-03-2011

ರಾಜ್ಯದಲ್ಲಿನ ವಿವಿಧ ಮಟ್ಟದ ವಕೀಲರ ಸಂಘಗಳಿಗೆ 2010-11ನೇ ಸಾಲಿನಲ್ಲಿ ಇ-ಗ್ರಂಥಾಲಯಕ್ಕಾಗಿ ಬಿಡುಗಡೆ ಮಾಡಬೇಕಾದ ಅನುದಾನದ ವಿವರಗಳು.

ಕ್ರಮ ಸಂಖ್ಯೆ	ಜಿಲ್ಲೆ ಹೆಸರು	ವಕೀಲರುಗಳ ಸಂಘಗಳ ಸಂಖ್ಯೆ		ಬಿಡುಗಡೆಗೊಳಿಸಬೇಕಾದ ಮೊತ್ತ
		ಜಿಲ್ಲಾ ಮಟ್ಟದ ವಿಭಾಗ ವಕೀಲರ ಸಂಘಗಳು	ತಾಲ್ಲೂಕು ಮಟ್ಟದ ವಕೀಲರ ಸಂಘಗಳು	
1	2	3	4	5
1	ಬೆಂಗಳೂರು ನಗರ ವಕೀಲರ ಸಂಘ	1	1(ಆನೇಕಲ್)	90.000-00
2	ಬೆಂಗಳೂರು (ಗ್ರಾಮಾಂತರ)	–	4	1,80,000-00
3	ರಾಮನಗರ ಜಿಲ್ಲೆ	1	3	1,80.000-00
4	ಕೋಲಾರ	1	6	3,15,000-00
5	ಚಿಕ್ಕಬಳ್ಳಾಪುರ	1	4	2,25,000-00
6	ತುಮಕೂರು	1	9	4,50,000-00
7	ಮೈಸೂರು	1(ವಿ.ಮ)	6	3,15,000-00
8	ಚಾಮರಾಜನಗರ	1	3	1,80,000-00
9	ಮಂಡ್ಯ	1	6	3,15,000-00
10	ಹಾಸನ	1	7	3,60,000-00
11	ಶಿವಮೊಗ್ಗ	1	6	3,15,000-00
12	ಚಿಕ್ಕಮಗಳೂರು	1	6	3,15,000-00
13	ಚಿತ್ರದುರ್ಗ	1	5	2,70,000-00
14	ದಾವಣಗೆರೆ	1	5	2,70,000-00
15	ಬಳ್ಳಾರಿ	1	6	3,15,000-00
16	ಬೆಳಗಾಂ	1(ವಿ.ಮ)	11	5,40,000-00
17	ಬಿಜಾಪುರ	1	4	2,25,000-00
18	ಬಾಗಲಕೋಟೆ	1	6	3,15,000-00
19	ಧಾರವಾಡ	1	3	1,80,000-00
20	ಹಾವೇರಿ	1	6	3,15,000-00
21	ಗದಗ್	1	4	2,25,000-00
22	ಉತ್ತರ ಕನ್ನಡ	1	11	5,40,000-00
23	ಬೀದರ್	1	4	2,25,000-00
24	ಗುಲ್ಬರ್ಗ	1(ವಿ.ಮ)	7	3,60,000-00
25	ರಾಯಚೂರು	1	4	2,25,000-00
26	ಕೊಪ್ಪಳ	1	3	1,80,000-00
27	ದಕ್ಷಿಣ ಕನ್ನಡ	1	5	2,70,000-00
28	ಉಡುಪಿ	1	2	1,35,000-00
29	ಕೊಡಗು	1	2	1,35.000-00
30	ಯಾದಗಿರಿ	1	2	1,35,000-00
	ಒಟ್ಟು	29	151	81,00,000-00

ಶಕುಂತಲ ಹೆಚ್. ಆರ್.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ (ಆಡಳಿತ-2)

ಪಿ.ಆರ್. 948

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಶ್ರೀ ದ್ಯಾಮಣ್ಣ ನಿಂಗಪ್ಪ, ಬಡಿಗೇರ, ರೇಷ್ಮೆ ಪ್ರವರ್ತಕರು (ನಿವೃತ್ತ) ಇವರು ಕಾಣೆಯಾಗಿದ್ದು, ಇವರ ಪತ್ನಿ ಶ್ರೀಮತಿ ರತ್ನವ್ವ ದ್ಯಾಮಣ್ಣ ಬಡಿಗೇರ ಇವರಿಗೆ ಕುಟುಂಬ ವೇತನ ಸೌಲಭ್ಯವನ್ನು ಮಂಜೂರು ಮಾಡುವ ಬಗ್ಗೆ.-

ಓದಲಾಗಿದೆ :
1. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ: ಸಿಬ್ಬಂದಿ 1(5)ಕುಂ.ಪಿಂಚಣಿ/71/2009-10, ದಿನಾಂಕ 14-10-2010 ಹಾಗೂ 14-3-2011.
2. ಅಧಿಕೃತ ಜ್ಞಾಪನ ಸಂಖ್ಯೆ: ಆಇ(ವಿಶೇಷ) 11 ಕುವಿವೇ 87, ದಿನಾಂಕ 21-3-1988,
3. ಶ್ರೀ ರತ್ನವ್ವ ಕೋಂ. ದ್ಯಾಮಣ್ಣ ಬಡಿಗೇರ ಇವರ ದಿನಾಂಕ 12-2-2011ರ ಪತ್ರ.

ಪ್ರಸ್ತಾವನೆ :

ಶ್ರೀ ದ್ಯಾಮಣ್ಣ ನಿಂಗಪ್ಪ ಬಡಿಗೇರ, ರೇಷ್ಮೆ ಪ್ರವರ್ತಕರು (ನಿವೃತ್ತ) ಇವರು ದಿನಾಂಕ 30-11-2004 ರಂದು ವಿಶೇಷ ಸ್ವಯಂ ನಿವೃತ್ತಿ ಯೋಜನೆಯಡಿ ನಿವೃತ್ತಿ ಹೊಂದಿರುತ್ತಾರೆ. ಇವರು ದಿನಾಂಕ 15-2-2008 ರಿಂದ ಕಾಣೆಯಾಗಿರುತ್ತಾರೆ. ಈ ಸಂಬಂಧ ನಿವೃತ್ತ ನೌಕರರ ಪತ್ನಿಯಾದ ಶ್ರೀಮತಿ ರತ್ನವ್ವ ದ್ಯಾಮಣ್ಣ ಬಡಿಗೇರ ಇವರು ಹಾವೇರಿ ಪೋಲೀಸ್ ಠಾಣೆಯಲ್ಲಿ ದೂರು ನೀಡುತ್ತಾರೆ. ಸದರಿಯವರನ್ನು ಪತ್ತೆ ಮಾಡಲು ಸಾಕಷ್ಟು ಪ್ರಯತ್ನ ಮಾಡಿದರೂ ಪತ್ತೆಯಾಗುವ ಲಕ್ಷಣಗಳು ಕಂಡುಬರುತ್ತಿಲ್ಲವೆಂದು ಪ್ರಕರಣವನ್ನು ಸಧ್ಯಕ್ಕೆ ಸ್ಥಗಿತಗೊಳಿಸಿ ಡಾರ್ನಮೆಂಟ್ ಫೈಲ್‌ನಲ್ಲಿಟ್ಟು ಮಂಜೂರಾತಿ ನೀಡಿರುವ ನಾಪತ್ತೆ ದೃಢೀಕರಣ ಪತ್ರದೊಂದಿಗೆ ಕಾಣೆಯಾದ ನಿವೃತ್ತ ನೌಕರರ ಪತ್ನಿ ಮನವಿ ಸಲ್ಲಿಸಿ, ಕುಟುಂಬ ಪಿಂಚಣಿಯನ್ನು ಮಂಜೂರು ಮಾಡುವಂತೆ ಕೋರಿರುವುದರಿಂದ ಕಾಣೆಯಾದ ನೌಕರರ ಪತ್ನಿಗೆ ಕುಟುಂಬ ಪಿಂಚಣಿ ಮಂಜೂರು ಮಾಡುವಂತೆ ಮೇಲೆ ಓದಲಾದ ಕ್ರಮಸಂಖ್ಯೆ (1)ರ ಪತ್ರದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಸರ್ಕಾರವನ್ನು ಕೋರಿರುತ್ತಾರೆ ಮತ್ತು ಈ ಸಂಬಂಧ ಪತ್ರದೊಂದಿಗೆ ನೌಕರರ ಸೇವಾ ಪುಸ್ತಕ, ಪಿಂಚಣಿ ಪುಸ್ತಕದ ಪ್ರತಿ, ನಷ್ಟಬಂಧಿ ಪ್ರಮಾಣ ಪತ್ರ, ಜೀವಂತ ಸದಸ್ಯರ ಜೀವನ ದೃಢೀಕರಣ, ಪೊಲೀಸ್ ಠಾಣೆ ಪ್ರಥಮ ತನಿಖಾ ವರದಿ ಹಾಗೂ ಇನ್ನಿತರ ದಾಖಲಾತಿಗಳನ್ನು ಕಳುಹಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (2)ರ ಅಧಿಕೃತ ಜ್ಞಾಪನದನ್ವಯ ಕಣ್ಮರೆಯಾದ ದಿನಾಂಕದಿಂದ ಒಂದು ವರ್ಷದ ಅವಧಿಯ ಬಳಿಕ ನಿವೃತ್ತ ಸರ್ಕಾರಿ ನೌಕರರ ಪ್ರಕರಣಗಳಲ್ಲಿ ನಾಮನಿರ್ದೇಶನವನ್ನು ಗಮನದಲ್ಲಿಟ್ಟುಕೊಂಡು ಕುಟುಂಬ ವೇತನ ಮತ್ತು ಕಣ್ಮರೆಯಾದ ದಿನಾಂಕದಿಂದ ಬಾಕಿ ಇರುವ ಪಿಂಚಣಿ ಮೊಬಲಗನ್ನು ಮಂಜೂರು ಮಾಡಲು ಅವಕಾಶವಿದ್ದು, ಸರ್ಕಾರವು ಮಂಜೂರಾತಿಗೆ ಸಕ್ರಮ ಪ್ರಾಧಿಕಾರವಾಗಿರುವುದರಿಂದ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಕೋರಿರುವಂತೆ ಕಾಣೆಯಾದ ನಿವೃತ್ತ ನೌಕರರ ಪತ್ನಿಗೆ ಕುಟುಂಬ ವೇತನ ಸೌಲಭ್ಯ ಮಂಜೂರು ಮಾಡುವ ಕುರಿತಂತೆ ಪರಿಶೀಲಿಸಿ, ಮೇಲೆ ಓದಲಾದ ಕ್ರಮಸಂಖ್ಯೆ (2)ರ ಆದೇಶದನ್ವಯ ಎಲ್ಲಾ ಕ್ರಮಗಳನ್ನು ಪ್ರಸ್ತುತ ಪ್ರಕರಣದಲ್ಲಿ ಕೈಗೊಳ್ಳಲಾಗಿರುವುದರಿಂದ ನಿಯಮಾನುಸಾರ ನೀಡಬೇಕಾಗಿರುವ ಕುಟುಂಬ ವೇತನ ಹಾಗೂ ಕಣ್ಮರೆಯಾದ ದಿನಾಂಕದಿಂದ ಬಾಕಿ ಇರುವ ಪಿಂಚಣಿ ಮೊಬಲಗನ್ನು ಮಂಜೂರು ಮಾಡಲು ತೀರ್ಮಾನಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ವಾಕೈ 138 ರೇಇವಿ 2010, ಬೆಂಗಳೂರು, ದಿನಾಂಕ : 26-3-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ನೇಮಕಾತಿ ಪ್ರಾಧಿಕಾರವು ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಆಇ(ವಿಶೇಷ) 11 ಕುವಿವೇ 87, ದಿನಾಂಕ 21-3-1988ರಲ್ಲಿ ವಿಧಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿರುವುದನ್ನು ಖಾತ್ರಿಪಡಿಸಿಕೊಂಡ ನಂತರ ಶ್ರೀ ದ್ಯಾಮಣ್ಣ ನಿಂಗಪ್ಪ ಬಡಿಗೇರ, ರೇಷ್ಮೆ ಪ್ರವರ್ತಕರು (ನಿವೃತ್ತ) ಇವರ ಪತ್ನಿಯಾದ ಶ್ರೀ ರತ್ನವ್ವ ಕೋಂ ದ್ಯಾಮಣ್ಣ ಬಡಿಗೇರ ಇವರಿಗೆ ನಿಯಮಗಳನ್ವಯ ನೀಡಬಹುದಾದ ಕುಟುಂಬ ವೇತನ ಹಾಗೂ ನೌಕರರು ಕಣ್ಮರೆಯಾದ ದಿನಾಂಕದಿಂದ ಬಾಕಿ ಇರುವ ಪಿಂಚಣಿ-ಮೊಬಲಗನ್ನು ನೀಡುವುದಕ್ಕೆ ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಭಾರತಿ ಆರ್. ನಾಯಕ್
ಪೀಠಾಧಿಕಾರಿ (ರೇಷ್ಮೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್. 949

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ಕೆಳದರ್ಜೆಗಿಳಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್, 548 ಎಸ್.ಎ.ಎಸ್. 08, ದಿನಾಂಕ 31-01-09
2. ಸರ್ಕಾರದ ಆದೇಶ ಸಂಖ್ಯೆ: ಸಿಐ 50 ಎಸ್‌ಜಿಎಫ್ 2009, ದಿನಾಂಕ 18-03-2009
3. ಸರ್ಕಾರದ ಆದೇಶ ಸಂಖ್ಯೆ: ಸಿಐ 130 ಎಸ್‌ಜಿಎಫ್ 2010, ದಿನಾಂಕ 03-09-2010
4. ಸರ್ಕಾರದ ಪತ್ರ ಸಂಖ್ಯೆ: ಡಿಪಿಎಆರ್/365/ಎಸ್‌ಎಎಸ್/2009, ದಿನಾಂಕ 16-03-2011

ಪ್ರಸ್ತಾವನೆ :

ಮೇಲೆ ಓದಲಾದ (1)ರಲ್ಲಿನ ದಿನಾಂಕ 31-01-09ರ ಸಿ.ಆ.ಸು.ಇಲಾಖೆ ಅಧಿಸೂಚನೆಯಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ಕೆಳದರ್ಜೆಗಿಳಿಸಿ ಸದರಿ ಹುದ್ದೆಗೆ ಶ್ರೀ ಎ. ಕೆ. ಮೊನ್ನಪ್ಪ, ಭಾ.ಆ.ಸೇ. ರವರನ್ನು ನೇಮಿಸಲಾಗಿದ್ದು, ಅದರಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ಮೇಲೆ ಓದಲಾದ (2)ರಲ್ಲಿರುವ ದಿನಾಂಕ 18-03-2009ರ ಆದೇಶದಲ್ಲಿ ಐ.ಎ.ಎಸ್. ವೇತನ ಶ್ರೇಣಿ 15600+39100+pay grade 7600ಕ್ಕೆ ಕೆಳದರ್ಜೆಗಿಳಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (3)ರಲ್ಲಿರುವ ದಿನಾಂಕ 03-09-2010ರ ಆದೇಶದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ತಾತ್ಕಾಲಿಕವಾಗಿ ದಿನಾಂಕ 31-01-11ರವರೆವಿಗೆ ಅಥವಾ ಈ ಹುದ್ದೆಯನ್ನು ಪುನರ್ ಜೀವಿತಗೊಳಿಸುವವರೆವಿಗೆ (ಯಾವುದು ಮೊದಲೋ ಅಲ್ಲಿಯವರೆವಿಗೆ) ಐ.ಎ.ಎಸ್. ಸೀನಿಯರ್ ಸ್ಕೇಲ್ ವೇತನ ಶ್ರೇಣಿಗೆ ಕೆಳದರ್ಜೆಗಿಳಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (4)ರಲ್ಲಿರುವ ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು.ಇ. (ಸೇವೆಗಳು-1)ರವರ ದಿನಾಂಕ 16-03-2011ರ ಪತ್ರವಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ದಿನಾಂಕ 31-07-2011ರವರೆಗೆ ಅಥವಾ ಹುದ್ದೆಯನ್ನು ಪುನರ್ ಜೀವಿತಗೊಳಿಸುವವರೆಗೆ (ಯಾವುದು ಮೊದಲೋ ಅಲ್ಲಿಯವರೆಗೆ) ಐ.ಎ.ಎಸ್. ಸೀನಿಯರ್ ಸ್ಕೇಲ್ ವೇತನ ಶ್ರೇಣಿಗೆ ಕೆಳದರ್ಜೆಗಿಳಿಸಿ ಆದೇಶ ಹೊರಡಿಸುವಂತೆ ಸೂಚಿಸಿದ್ದಾರೆ. ಆದ್ದರಿಂದ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಐ 31 ಎಸ್‌ಜಿಎಫ್ 2011, ಬೆಂಗಳೂರು, ದಿನಾಂಕ : 23-03-2011

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಮೇರೆಗೆ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ತಾತ್ಕಾಲಿಕವಾಗಿ ದಿನಾಂಕ 31-07-2011ರವರೆಗೆ ಅಥವಾ ಈ ಹುದ್ದೆಯನ್ನು ಪುನರ್ ಜೀವಿತಗೊಳಿಸುವವರೆಗೆ (ಯಾವುದು ಮೊದಲೋ ಅಲ್ಲಿಯವರೆಗೆ) ಐ.ಎ.ಎಸ್. ಸೀನಿಯರ್ ಸ್ಕೇಲ್ ವೇತನ ಶ್ರೇಣಿಗೆ ಕೆಳದರ್ಜೆಗಿಳಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಆನಂದ್ ಕುಮಾರ್

ಪೀಠಾಧಿಕಾರಿ (ಸಕ್ಕರೆ)

ಪಿ.ಆರ್. 950 ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಸಿಐ 39 ಎಸ್‌ಜಿಎಫ್ 2011, ಬೆಂಗಳೂರು, ದಿನಾಂಕ 26-03-2011

ವಿಷಯ : ಸಾವರಿನ್ ಡಿಸ್ಟಿಲರೀಸ್ ಲಿ., ರವರು ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲ್ಲೂಕು, ತೇರ್‌ದಾಳ್ ಗ್ರಾಮದಲ್ಲಿ ಸ್ಥಾಪಿಸಲಿರುವ 30 ಮೆ.ವ್ಯಾಟ್ ಸಹ ವಿದ್ಯುತ್ ಘಟಕ ಮತ್ತು 120 ಕೆ.ಎಲ್.ಪಿ.ಡಿ. ಡಿಸ್ಟಿಲರಿ ಘಟಕವನ್ನೊಳಗೊಂಡ 3500 ಟಿಸಿಡಿ ಸಾಮರ್ಥ್ಯದ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಸರ್ಕಾರದ ತಾತ್ವಿಕ ಅನುಮೋದನೆ ನೀಡಿರುವ ಸರ್ಕಾರದ ಆದೇಶಕ್ಕೆ ತಿದ್ದುಪಡಿ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ ಸಿಐ 101 ಎಸ್‌ಜಿಎಫ್ 2009, ದಿನಾಂಕ 13-04-2010ರಲ್ಲಿ "ಸಾವರಿನ್ ಡಿಸ್ಟಿಲರೀಸ್ ಲಿಮಿಟೆಡ್"ರವರಿಗೆ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕು, ತೇರ್‌ದಾಳ್ ಎಂಬಲ್ಲಿ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ತಾತ್ವಿಕ ಅನುಮೋದನೆ ನೀಡಲಾಗಿದ್ದು, ಈ ಆದೇಶದಲ್ಲಿ "ಸಾವರಿನ್ ಡಿಸ್ಟಿಲರೀಸ್ ಲಿ." ಎಂದು ಎಲ್ಲೆಲ್ಲಿ ನಮೂದಿಸಲಾಗಿದೆಯೋ ಅಲ್ಲಿ ಇನ್ನು ಮುಂದೆ "ಸಾವರಿನ್ ಇಂಡಸ್ಟ್ರೀಸ್ ಲಿಮಿಟೆಡ್" ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ. ಆನಂದ್ ಕುಮಾರ್

ಪೀಠಾಧಿಕಾರಿ (ಸಕ್ಕರೆ)

ಪಿ.ಆರ್. ನಂ. 951 ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

COMMERCE AND INDUSTRIES SECRETARIAT

CORRIGENDUM

No. CI 39 SGF 2011, Bangalore, Dated 26-03-2011

In Government Notification No. CI 101 SGF 2009, dated 13-04-2010, wherever the words "Sovereign Distilleries Limited" the words "Sovereign Industries Limited" shall be substituted.

By Order and in the name of the Governor of Karnataka,

P. Ananda Kumar

Desk Officer (Sugar)

P.R. 952 Commerce & Industries Department

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಒಂಟಗೋಡಿ ಗ್ರಾಮದ ಹತ್ತಿರ ಬ್ಯಾರೇಜ್ ಸಹಿತ ಸೇತುವೆ ನಿರ್ಮಾಣ ಕಾಮಗಾರಿಯ ಟೆಂಡರ್ ಕುರಿತು.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರರವರ ಪತ್ರದ ಕ್ರಮಾಂಕ:ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ-9/2010-11/1301, ದಿನಾಂಕ 09-03-2011.

2. ಸರ್ಕಾರದ ಆದೇಶ ಸಂಖ್ಯೆ ಸನೀಇ 10 ನಯೋಕಾ 2010, ದಿನಾಂಕ 27-11-2010

ಪ್ರಸ್ತಾವನೆ :

ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಒಂಟಗೋಡಿ ಗ್ರಾಮದ ಹತ್ತಿರ ಬ್ಯಾರೇಜ್ ಸಹಿತ ಸೇತುವೆ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	06-12-2010
ವಿಜಯ ಕರ್ನಾಟಕ ದಿನಪತ್ರಿಕೆ	07-12-2010
ಟೈಮ್ಸ್ ಆಫ್ ಇಂಡಿಯಾ ಆಂಗ್ಲ ದಿನಪತ್ರಿಕೆ	07-12-2010

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್ ಅನ್ನು ದಿನಾಂಕ 20-01-2011 ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 1,51,06,336/-
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ (2010-11) ಟೆಂಡರಿಗೆ ಇಡಲಾದ ಮೊತ್ತ			ರೂ. 1,85,34,525/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಜಿ. ಮಸ್ತಾನಯ್ಯ ಪ್ರಥಮ ದರ್ಜೆ ಗುತ್ತಿಗೆದಾರರು	2,23,62,458/-	48.03 ಹೆಚ್ಚು	20.65 ಹೆಚ್ಚು

ಮೇಲ್ಕಂಡಂತೆ ಶ್ರೀ ಜಿ. ಮಸ್ತಾನಯ್ಯ 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 20.65 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ದಿನಾಂಕ 18-03-2011ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇ. 11.00ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,85,34,525/-ಗಳ ಮೇಲೆ ಶೇ. 10ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2,03,87,978/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 11 ಅಪಿಬಂ 2011 (ತಾಂತ್ರಿಕ) ಬೆಂಗಳೂರು, ದಿನಾಂಕ : 18-03-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಒಂಟಗೋಡಿ ಗ್ರಾಮದ ಹತ್ತಿರ ಬ್ಯಾರೇಜ್ ಸಹಿತ ಸೇತುವೆ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 1,85,34,525/-ಗಳ ಮೇಲೆ ಶೇ. 10ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2,03,87,978/-ಗಳಿಗೆ (ರೂ. ಎರಡು ಕೋಟಿ ಮೂರು ಲಕ್ಷ ಎಂಭತ್ತೇಳು ಸಾವಿರದ ಒಂಭೈನೂರ ಎಪ್ಪತ್ತೆಂಟು) ಶ್ರೀ ಜಿ. ಮಸ್ತಾನಯ್ಯ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ 20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಆಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 953

ಜಲಸಂಪನ್ಮೂಲ ಸಚಿವಾಲಯ

ವಿಷಯ : ಯಾದಗಿರ ಶಹಾಪುರ ತಾಲ್ಲೂಕಿನ ಶಿರವಾಳ ಗ್ರಾಮದ ಹತ್ತಿರ ಶಿರವಾಳ ನಾಲೆಗೆ ಅಡ್ಡಲಾಗಿ ಬ್ಯಾರೇಜ್ ಸಹಿತ ಸೇತುವೆ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಕುರಿತು.

ಓದಲಾಗಿದೆ: 1. ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ:ಮುಇಂ/ಸನೀ(ಉ)ವಲಯ/ಬಿಜಾ/ಎಇ-5/2010-11/939 ದಿನಾಂಕ 22.02.2011

2. ಸರ್ಕಾರದ ಆದೇಶ ಸಂಖ್ಯೆ ಸನೀಇ 236 ಮಸಾವಿ 2009(10) ದಿನಾಂಕ 24/12/2009

ಪ್ರಸ್ತಾವನೆ:

ಯಾದಗಿರ ಜಿಲ್ಲೆ ಶಹಾಪುರ ತಾಲ್ಲೂಕಿನ ಶಿರವಾಳ ಗ್ರಾಮದ ಹತ್ತಿರ ಶಿರವಾಳ ನಾಲೆಗೆ ಅಡ್ಡಲಾಗಿ ಬ್ಯಾರೇಜ್ ಸಹಿತ ಸೇತುವೆ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಕೈಗೊಳ್ಳಲು ಭಾರತ ಸರ್ಕಾರದ ಅನುಮೋಧನೆ ದೊರಕಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	04.12.2010
ಸಂಯುಕ್ತ ಕರ್ನಾಟಕ ದಿನಪತ್ರಿಕೆ	08.12.2010
ಕರ್ನಾಟಕ ರಾಜ್ಯ ಪತ್ರ	09.12.2010

ಈ ಟಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್‌ನ್ನು ದಿನಾಂಕ: 17.02.2011ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ		ರೂ. 84,03,848/-	
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ (2010-11) ಟೆಂಡರಿಗೆ ಇಡಲಾದ ಮೊತ್ತ		ರೂ. 1,09,51,855/-	
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಚನ್ನನಗೌಡ ಎಸ್ ಪಾಟೀಲ ಪ್ರಥಮ ದರ್ಜೆ ಗುತ್ತಿಗೆದಾರರು	1,20,71,790/-	43.65 ಹೆಚ್ಚು	10.226 ಹೆಚ್ಚು

ಮೇಲ್ಕಂಡಂತೆ ಶ್ರೀ ಚನ್ನನಗೌಡ ಎಸ್ ಪಾಟೀಲ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 10.226 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂದಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 14/03/2011ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇ. 8ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,09,51,855/-ಗಳ ಮೇಲೆ ಶೇ. 6ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,16,08,966/- ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 07 ಅಪಿಬಿಂ 2011(ತಾಂತ್ರಿಕ) ಬೆಂಗಳೂರು, ದಿನಾಂಕ: 25ನೇ ಮಾರ್ಚಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಯಾದಗಿರ ಜಿಲ್ಲೆ ಶಹಾಪುರ ತಾಲ್ಲೂಕಿನ ಶಿರವಾಳ ಗ್ರಾಮದ ಹತ್ತಿ ಶಿರವಾಳ ನಾಲೆಗೆ ಅಡ್ಡಲಾಗಿ ಬ್ಯಾರೇಜ್ ಸಹಿತ ಸೇತುವೆ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 1,09,51,855/-ಗಳ ಮೇಲೆ ಶೇ. 6ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,16,08,966/- ಗಳಿಗೆ (ರೂ ಒಂದು ಕೋಟಿ ಹದಿನಾರು ಲಕ್ಷ ಎಂಟು ಸಾವಿರದ ಒಂಬೈನೂರ ಅರವತ್ತಾರು) ಶ್ರೀ ಚನ್ನನಗೌಡ ಎಸ್ ಪಾಟೀಲ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾಯಾದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ರುದ್ರಮೂರ್ತಿ)

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಪಿ.ಆರ್. 954

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕೊಟಗಾ ಗ್ರಾಮದ ಹತ್ತಿರ ಮುಲ್ಲಮಾರಿ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಕುರಿತು.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ ಮುಇಂ/ಸನೀ(ಉ)ವ/ಬಿಜೆಪಿ/ಎಇ-5/2010-11/6793 ದಿನಾಂಕ: 28.12.2010

2. ಸರ್ಕಾರದ ಆದೇಶ ಸಂಖ್ಯೆ: ಸನೀಇ 06 ನಯೋಕಾ 2009, ದಿನಾಂಕ: 06/01/2010

ಪ್ರಸ್ತಾವನೆ:-

ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕೊಟಗಾ ಗ್ರಾಮದ ಹತ್ತಿರ ಮುಲ್ಲಮಾರಿ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋಧನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	06.08.2010
ಜಿಲ್ಲಾ ಟೆಂಡರ್ ಬುಲೆಟಿನ್	31.07.2010
ಕರ್ನಾಟಕ ರಾಜ್ಯ ಪತ್ರ	05.08.2010
ವಿಜಯ ಕರ್ನಾಟಕ ದಿನಪತ್ರಿಕೆ/ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನಪತ್ರಿಕೆ	05.08.2010

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಈ ಪೈಕಿ ಒಬ್ಬರು ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ: 19.11.2010ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ		ರೂ. 1,83,23,489/-	
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ (2010-11) ಟೆಂಡರಿಗೆ ಇಡಲಾದ ಮೊತ್ತ		ರೂ. 1,89,58,737/-	
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಶ್ರೀ ಸಿದ್ದಣ್ಣ ಸಿ. ತಿಳಗೊಳ ಪ್ರಥಮ ದರ್ಜೆ ಗುತ್ತಿಗೆದಾರರು	2,34,14,827/-	27.786 ಹೆಚ್ಚು	23.504 ಹೆಚ್ಚು

ಮೇಲ್ಕಂಡಂತೆ ಶ್ರಿ ಸಿದ್ದಣ್ಣ ಸಿ. ತಿಳಗೊಳ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಆರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 23.504 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂದಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 14/03/2011ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇ. 10ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,89,58,737/-ಗಳ ಮೇಲೆ ಶೇ. 6ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2,00,96,261/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 01 ಅಪಿಬಂ 2011 (ತಾಂತ್ರಿಕ) ಬೆಂಗಳೂರು, ದಿನಾಂಕ: 25ನೇ ಮಾರ್ಚಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕೊಟಗಾ ಗ್ರಾಮದ ಹತ್ತಿರ ಮುಲ್ಲಮಾರಿ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಟ್ಟಿರುವ ಮೊತ್ತ ರೂ. 1,89,58,737/-ಗಳ ಮೇಲೆ ಶೇ. 6ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2,00,96,261/-ಗಳಿಗೆ (ರೂ ಎರಡು ಕೋಟಿ ತೊಂಭತ್ತಾರು ಸಾವಿರದ ಇನ್ನೂರ ಅರವತ್ತೊಂದು) ಶ್ರೀ ಸದ್ದಣ್ಣ ಸಿ. ತಿಳಗೊಳ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ರುದ್ರಮೂರ್ತಿ)
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಪಿ.ಆರ್. 955

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ರಾಯಚೂರು ಜಿಲ್ಲೆ, ಲಿಂಗಸೂಗೂರು ತಾಲ್ಲೂಕು, ಬೋಗಾಪುರ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚುವರಿ ಪಾವತಿಸುವ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2010-11/5147,ದಿನಾಂಕ: 13/09/10.

ಪ್ರಸ್ತಾವನೆ:

ರಾಯಚೂರು ಜಿಲ್ಲೆ, ಲಿಂಗಸೂಗೂರು ಭೋಗಾಪುರ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಭೋಗಾಪುರ, ಬೊಮ್ಮನಾಳ ಮತ್ತು ಬಂಡಿಸುಂಕಾಪೂರ ಗ್ರಾಮಗಳ ಜಮೀನುಗಳಿಗೆ ಎಲ್.ಎ.ಸಿ.ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚುವರಿ ಪರಿಹಾರ ಪಾವತಿಸಲು ರೂ. 13,29,400/-ಗಳ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ: 13.09.2010ರ ಪತ್ರದಲ್ಲಿ ಕೋರಿದ್ದಾರೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆಯನ್ನು ದಿನಾಂಕ: 16/09/76 ಮತ್ತು 17/05/79ರಂದು ಹೊರಡಿಸಿದೆ.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರದ ಐತೀರ್ಪನ್ನು ದಿನಾಂಕ: 30/11/82 ಮತ್ತು 10/03/83ರಂದು ಘೋಷಿಸಿದ್ದಾರೆ.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಐತೀರ್ಪಿನಂತೆ ಪರಿಹಾರ ಪಡೆದು, ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಸಿವಿಲ್ (ಹಿರಿಯ ಶೇಣಿ) ನ್ಯಾಯಾಲಯ ಕುಷ್ಟಗಿಯಲ್ಲಿ ಎಲ್.ಎ.ಸಿ. ಸಂಖ್ಯೆ: 192 ರಿಂದ 201/98 ಮತ್ತು 202 ರಿಂದ 211/98ನ್ನು ಸಲ್ಲಿಸಿದ್ದು, ನ್ಯಾಯಾಲಯದ ದಿನಾಂಕ: 23/09/1984ರಂದು ನೀಡಿರುವ ಆದೇಶಗಳಲ್ಲಿ ಈ ಜಮೀನುಗಳ ಮಾರುಕಟ್ಟೆ ಬೆಲೆಯನ್ನು ರೂ.9800-00ಗಳಿಗೆ ನಿಗದಿಪಡಿಸಿದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಕ್ರ. ಸಂ	ಎಲ್‌ಎಸಿ ಸಂಖ್ಯೆ	ಇ.ಪಿ	ಸ.ನಂ	ವಿಸ್ತೀರ್ಣ ಎ-ಗುಂ	ಗ್ರಾಮ	ಪರಿಹಾರ ಮೊತ್ತ (ರೂ.ಗಳಲ್ಲಿ)
1	195/98	131/06	32/3	0-13	ಬೊಮ್ಮನಾಳ	747
2	167/98	139/06	37,33/3	4-33	ಬೊಮ್ಮನಾಳ	110114
3	198/98	138/06	18/2-3	1-08	ಭೋಗಾಪುರ	23966
4	199/98	137/06	18/2-ಎ	1-08	ಭೋಗಾಪುರ	23966
5	202/98	134/06	18/2-1	1-16	ಭೋಗಾಪುರ	27944
6	192/98	143/06	32/1, 32/7	5-12	ಬೊಮ್ಮನಾಳ	132494
7	193/98	142/06	32/2	1-39	ಬೊಮ್ಮನಾಳ	49431
8	194/98	132/06	32/6	4-15	ಬೊಮ್ಮನಾಳ	109407
9	195/98	131/06	32/4, 32/3	2-02, 0-23	ಬೊಮ್ಮನಾಳ	65667
10	197/98	139/06	37	9-00	ಬೊಮ್ಮನಾಳ	224374
11	200/98	136/06	32/5	11-12	ಬೊಮ್ಮನಾಳ	282354
12	201/98	132/06	36/ಎ	1-36	ಬಂಡಿಸುಂಕಾಪೂರ	47558
13	203/98	133/06	33/4	1-00	ಬಂಡಿಸುಂಕಾಪೂರ	25078
14	196/98	140/06	4/5	0.05	ಬಂಡಿಸುಂಕಾಪೂರ	3221
15	204/98	141/06	5/2, 5/3, 5/4, 5/6	7-33	ಬಂಡಿಸುಂಕಾಪೂರ	196354
	ಒಟ್ಟು					1322675

ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಇದು ಅರ್ಹ ಪ್ರಕರಣವಲ್ಲವೆಂದು ಕಾನೂನು ಇಲಾಖೆಯ ಪತ್ರ ಲಾ 285 ಎಲ್ಎಸ್‌ಜಿ 99 ದಿನಾಂಕ: 22/06/99ರಲ್ಲಿ ಅಭಿಪ್ರಾಯ ನೀಡಿದೆ.

ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 150 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ: 30ನೇ ಮಾರ್ಚ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ರಾಯಚೂರು ಜಿಲ್ಲೆ, ಲಿಂಗಸೂಗೂರು ಭೋಗಾಪುರ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಭೋಗಾಪುರ, ಜೊಮ್ಮನಾಳ ಮತ್ತು ಬಂಡಿಸುಂಕಾಪೂರ ಗ್ರಾಮಗಳ ಮೇಲ್ಕಂಡ ಸರ್ವೆ ನಂಬರ್‌ಗಳಿಗೆ ಸೇರಿದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ.. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಪರಿಹಾರ ಪಾವತಿಸಲು ರೂ.13,22,675–(ಹದಿಮೂರು ಲಕ್ಷದ ಇಪ್ಪತ್ತೆರಡು ಸಾವಿರದ ಆರುನೂರ ಎಪ್ಪತ್ತೈದು ರೂ.ಗಳು ಮಾತ್ರ) ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸಿತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010–11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00 ಭೂಸ್ವಾಧೀನ ವೆಚ್ಚಗಳು ಮತ್ತು ಬಿಲ್ಲುಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 01 ಬಿಎಸ್‌ಜಿ 2011, ದಿನಾಂಕ: 19/03/2011ರಲ್ಲಿ ಒದಗಿಸಿರುವ ಪೂರಕ ಅನುದಾನ–IIIರಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ: 20/10/2010ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.ನಂ:956

ಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು, ಸಾಲೇಬೀರನಹಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣ ಕಾಮಗಾರಿಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ನ್ಯಾಯಾಲಯದಂತೆ ಹೆಚ್ಚುವರಿ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ/(ಉ)ವ/ಬಿಜಾ/ಭೂಸ್ವಾಪ್ರ/2009–10/5711, ದಿನಾಂಕ: 25/09/2009.

ಪ್ರಸ್ತಾವನೆ:

ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು, ಸಾಲೇಬೀರನಹಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಸಾಲೇಬೀರನಹಳ್ಳಿ ಗ್ರಾಮದ ಜಮೀನುಗಳಿಗೆ ನ್ಯಾಯಾಲಯ ನೀಡಿರುವ ತೀರ್ಪಿನನುಸಾರ ಹೆಚ್ಚುವರಿ ಪರಿಹಾರ ಧನ ಪಾವತಿಸಲು ರೂ. 131963.00ಗಳನ್ನು ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ: 25/09/2009ರ ಪತ್ರದಲ್ಲಿ ಕೋರಿರುತ್ತಾರೆ.

1. ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ: 22/09/1988.
2. ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 11(ಎ)ರಡಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ರಚಿಸಿದ ದಿನಾಂಕ: 09/05/1991.

ಭೂಸ್ವಾಧೀನಕ್ಕೊಳಪಟ್ಟ ಸಾಲೇಬೀರನಹಳ್ಳಿಗ್ರಾಮದ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳು ರಚಿಸಿದ ಐತೀರ್ಪಿನಂತೆ ಹಣ ಪಡೆದು ಇನ್ನೂ ಹೆಚ್ಚಿನ ಪರಿಹಾರ ನೀಡುವಂತೆ ಭೂಸ್ವಾಧೀನ ಕಾಯ್ದೆ 1894ರ ಕಲಂ 18(1)ರಡಿ ಗುಲ್ಬರ್ಗಾ (ಹಿರಿಯ ಶ್ರೇಣಿ), ಸಿವಿಲ್ ನ್ಯಾಯಾಲಯದಲ್ಲಿ ಎಲ್.ಎ.ಸಿ. ಸಲ್ಲಿಸಿದ್ದು, ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರಕ್ಕೆ ತೀರ್ಪು ನೀಡಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಅಗತ್ಯವಿಲ್ಲವೆಂದು ಕಂದಾಯ ಇಲಾಖೆಯ ಅಭಿಪ್ರಾಯ ನೀಡಿರುತ್ತದೆ.

ಸಿವಿಲ್ ನ್ಯಾಯಾಲಯವು ಹೆಚ್ಚುವರಿ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣದ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಎಲ್.ಎ.ಸಿ ಸಂಖ್ಯೆ	ಸಾಲೇಬೀರನಹಳ್ಳಿ ಗ್ರಾಮದ ಸರ್ವೆ ನಂಬರ್	ವಿಸ್ತೀರ್ಣ ಎ–ಗುಂ	ಪರಿಹಾರ ಧನದ ಮೊತ್ತ
1	33/94	20/2	1–20	131963.00

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 149 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 25/03/2011.

ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು, ಸಾಲೇಬೀರನಹಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಸಾಲೇಬೀರನಹಳ್ಳಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ ಸಂಖ್ಯೆ:33194 ಪ್ರಕರಣದಲ್ಲಿ

ನೀಡಿದ ತೀರ್ಪಿನಂತೆ ಪರಿಹಾರ ರೂ.1,31,963-00 (ಒಂದು ಲಕ್ಷದ ಮೂವತ್ತೊಂದು ಸಾವಿರದ ಒಂಭೈನೂರ ಆರುವತ್ತಮೂರು ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲು ಅನುಮೋದನೆ ನೀಡಿದೆ.

ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-0-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ:ಆಇ 01 ಬಿಎಸ್‌ಜಿ 2011, ದಿನಾಂಕ: 19/03/2011ರಲ್ಲಿ ಒದಗಿಸಿರುವ ಪೂರಕ ಅನುದಾನ-IIIರಿಂದ ಭರಿಸತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ: 16/08/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೋಪಾಲ್
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಪಿ.ಆರ್.ನಂ:957

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು ಐನಾಪುರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರ ಐತೀರ್ಪಿನಂತೆ ಹೆಚ್ಚಿನ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರ ಇವರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2010-11/4972, ದಿನಾಂಕ 31.08.2010.

ಪ್ರಸ್ತಾವನೆ:

ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು ಐನಾಪುರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಐನಾಪುರ ಗ್ರಾಮದ ವಿವಿಧ ಸರ್ವೆ ನಂಬರ್‌ಗಳ ಜಮೀನುಗಳಿಗೆ ಚಿಂಚೋಳಿ ಸಿವಿಲ್ ನ್ಯಾಯಾಲಯವು (ಹಿರಿಯ ವಿಭಾಗ) ಎಲ್.ಎ.ಸಿ. ಪ್ರಕರಣ ಸಂಖ್ಯೆ:13/07ರಲ್ಲಿ ದಿನಾಂಕ: 07/08/09ರಂದು ನೀಡಿರುವ ಆದೇಶವನ್ನು ಆಧರಿಸಿ, ಸ್ವಾಧೀನಕ್ಕೊಳಪಟ್ಟ ಇತರೆ ಜಮೀನುಗಳಿಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಭೂಸ್ವಾಧೀನ ಕಾಯ್ದೆ ಕಲಂ 28 (ಎ)ರಡಿ ರಚಿಸಿರುವ ಐತೀರ್ಪಿನಂತೆ ಮೊತ್ತ ರೂ.9,05,670-00ಗಳನ್ನು ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರು ಮೇಲೆ ಓದಲಾದ ದಿನಾಂಕ: 07/06/10ರ ಪತ್ರದಲ್ಲಿ ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆಯನ್ನು ದಿನಾಂಕ: 06/07/2000ರಂದು ಹೊರಡಿಸಿದೆ. ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳಿಗೆ ಭೂಸ್ವಾಧೀನಾಧಿಕಾರಿಗಳು ದಿನಾಂಕ: 20/11/2003ರಂದು ರಚಿಸಿರುವ ಐತೀರ್ಪಿನಲ್ಲಿ ಮೇಲ್ಕಂಡ ಜಮೀನಿನ ಮಾರುಕಟ್ಟೆ ಬೆಲೆಯನ್ನು ಪ್ರತಿ ಎಕರೆ ಖುಷ್ಕಿ ಜಮೀನಿಗೆ ರೂ.16,900.00 ಮತ್ತು ಬಾಗಾಯ್ತ ಜಮೀನಿಗೆ ರೂ.25,000.00ಗಳನ್ನು ನಿಗದಿಪಡಿಸಿರುತ್ತಾರೆ. ಈ ಐತೀರ್ಪಿನಂತೆ ಪರಿಹಾರ ಪಡೆದ ಭೂಮಾಲೀಕರು ಹೆಚ್ಚಿನ ಪರಿಹಾರ ಕೋರಿ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ), ಚಿಂಚೋಳಿ ಇಲ್ಲಿ ಸಲ್ಲಿಸಿದ ಎಲ್.ಎ.ಸಿ ಸಂಖ್ಯೆ: 31/07ರಲ್ಲಿ ದಿನಾಂಕ: 07/08/2009ರಂದು ನೀಡಿದ ಆದೇಶದಲ್ಲಿ ಈ ಜಮೀನುಗಳ ಮಾರುಕಟ್ಟೆ ಬೆಲೆಯನ್ನು ಪ್ರತಿ ಎಕರೆಗೆ ರೂ.38,000.00ಗಳನ್ನು ನಿಗದಿಪಡಿಸಿರುತ್ತಾರೆ.

ಸಿವಿಲ್ ನ್ಯಾಯಾಲಯದ ತೀರ್ಪನ್ನು ಆದರಿಸಿ, ಸರ್ವೆ ನಂ: 31/ಸಿ ಜಮೀನಿನ ಭೂಮಾಲೀಕರು ಹೆಚ್ಚಿನ ಪರಿಹಾರ ಕೋರಿ ಸಲ್ಲಿಸಿದ ಮನವಿಯನ್ನು ಪರಿಶೀಲಿಸಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗಳು, ಗುಲ್ಬರ್ಗಾ ಇವರು ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ದಿನಾಂಕ: 25/02/2010ರಂದು ಐತೀರ್ಪಿನಲ್ಲಿ ರೂ.9,05,679.00ಗಳ ಪರಿಹಾರ ನಿಗದಿಪಡಿಸಿರುತ್ತಾರೆ.

ಮುಖ್ಯ ಇಂಜಿನಿಯರ್‌ರವರ ಪ್ರಸ್ತಾವವನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 138 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ: 25ನೇ ಮಾರ್ಚ್ 2011

ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು ಐನಾಪುರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಐನಾಪುರ ಗ್ರಾಮದ ಸರ್ವೆ ನಂಬರ್ 31/ಸಿ ನ ಜಮೀನುಗಳಿಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗಳು, ಗುಲ್ಬರ್ಗಾ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ರಚಿಸಿರುವ ಐತೀರ್ಪಿನಂತೆ ರೂ.9,05,679-00ಗಳನ್ನು ಒಟ್ಟು (ಒಂಭತ್ತು ಲಕ್ಷದ ಐದು ಸಾವಿರದ ಆರುನೂರ ಎಪ್ಪತ್ತೊಂಭತ್ತು ರೂಪಾಯಿಗಳು ಮಾತ್ರ) ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪರಿಹಾರ ಪಾವತಿಸಲು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಲೆಕ್ಕಾಚಾರ ತಃಖ್ತೆಯನ್ನು ಮತ್ತೊಮ್ಮೆ ದೃಢೀಕರಿಸಿಕೊಂಡು ಪಾವತಿಸಕ್ಕದ್ದು. ಎರಡನೇ ಬಾರಿ ಹೆಚ್ಚಿನ ಮೊತ್ತ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಮತ್ತೊಮ್ಮೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 01 ಬಿಎಸ್‌ಜಿ 2011, ದಿನಾಂಕ: 19/03/2011ರಲ್ಲಿ ಒದಗಿಸಿರುವ ಪೂರಕ ಅನುದಾನ-III ರಿಂದ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ: 20/10/10ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಗೋಪಾಲ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಪಿ.ಆರ್. ನಂ. 976

ಜಲಸಂಪನ್ಮೂಲ ಸಚಿವಾಲಯ

ವಿಷಯ: ಗುಲ್ಬರ್ಗಾ ಜಿಲ್ಲೆ, ಅಫಜಲಪೂರ ತಾಲ್ಲೂಕಿನ ಅಫಜಲಪೂರ ಸಣ್ಣ ನೀರಾವರಿ ಕೆರೆಯ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2008-09/4751, ದಿನಾಂಕ: 27.08.2008.

ಪ್ರಸ್ತಾವನೆ:-

ಗುಲ್ಬರ್ಗಾ ಜಿಲ್ಲೆ, ಅಫಜಲಪೂರ ತಾಲ್ಲೂಕಿನ ಅಫಜಲಪೂರ ಸಣ್ಣ ನೀರಾವರಿ ಕೆರೆಯ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಅಫಜಲಪೂರ ಗ್ರಾಮದ ಜಮೀನುಗಳಿಗೆ ನ್ಯಾಯಾಲಯದ ಆದೇಶಾನುಸಾರ ಹೆಚ್ಚಿನ ಪರಿಹಾರ ಪಾವತಿಸಲು ರೂ.9,65,400-00ಗಳ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ: 27/08/2008ರ ಪತ್ರದಲ್ಲಿ ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ: 08/02/1990ರ ಪ್ರಕಾರ ಭೂಸ್ವಾಧೀನಕ್ಕೆ ಒಳಪಟ್ಟ ಅಫಜಲಪೂರ ಗ್ರಾಮದ ಸರ್ವೆ ನಂ.55/4ರ 0-35 ಎಕರೆ ಹಾಗೂ ಸರ್ವೆ ನಂ:42/1ರ 3-20 ಎಕರೆ ಜಮೀನಿನ ಭೂಮಾಲೀಕರು ಐತೀರ್ಪಿನಂತೆ ಪರಿಹಾರ ಪಡೆದು, ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಗುಲ್ಬರ್ಗಾ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ)ದಲ್ಲಿ ಸಲ್ಲಿಸಿರುವ ಎಲ್.ಎ.ಸಿ. ಸಂಖ್ಯೆ:942/97 ಮತ್ತು 338/94ರಲ್ಲಿ ನ್ಯಾಯಾಲಯವು ದಿನಾಂಕ: 28/10/1999ರಂದು ನೀಡಿರುವ ಆದೇಶದಲ್ಲಿ ಈ ಜಮೀನುಗಳ ಮಾರುಕಟ್ಟೆ ಬೆಲೆಯನ್ನು ಪ್ರತಿ ಎಕರೆಗೆ ರೂ.20,000-00ಗಳಿಗೆ ನಿಗದಿಪಡಿಸಿದೆ. ಎಲ್.ಎ.ಸಿ. 942/97 ಆದೇಶದ ವಿರುದ್ಧ ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಜಿಲ್ಲಾ ನ್ಯಾಯಾಲಯ, ಗುಲ್ಬರ್ಗಾ ಇಲ್ಲಿ ಸಲ್ಲಿಸಿರುವ ಎಲ್.ಎ.ಸಿ.ಎ 37/2000ನ್ನು ಪುರಸ್ಕರಿಸಿ ಪರಿಹಾರ ಮೊತ್ತವನ್ನು ರೂ.50,000-00ಗಳಿಗೆ ಹೆಚ್ಚಿಸಿದ್ದು, ಎಲ್.ಎ.ಸಿ. ಸಂಖ್ಯೆ:838/94ರ ಆದೇಶದ ವಿರುದ್ಧ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿದ ಎಂ.ಎಫ್.ಎ.ಯನ್ನು ಪರಿಶೀಲಿಸಿ ದಿನಾಂಕ: 30/07/2001ರಂದು ನೀಡಿರುವ ಆದೇಶದಲ್ಲಿ ಎಲ್.ಎ.ಸಿ. ಸಂಖ್ಯೆ: 838/94ರಲ್ಲಿ ನೀಡಿದ ಆದೇಶವನ್ನು ತಿರಸ್ಕರಿಸಿದೆ.

ಮೇಲ್ಕಂಡ ಆದೇಶಗಳ ವಿರುದ್ಧ ಮೇಲ್ಮನವಿ ಸಲ್ಲಿಸಲು ಇವು ಅರ್ಹ ಪ್ರಕರಣವಲ್ಲವೆಂದು ಕಂದಾಯ ಇಲಾಖೆಯ ಕಾನೂನು ಕೋಶವು ತಿಳಿಸಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 110 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ: 25ನೇ ಮಾರ್ಚ್ 2011

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ, ಗುಲ್ಬರ್ಗಾ ಜಿಲ್ಲೆ, ಅಫಜಲಪೂರ ತಾಲ್ಲೂಕಿನ ಅಫಜಲಪೂರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಅಫಜಲ್‌ಪುರ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಸಂಖ್ಯೆ:947/99 ಮತ್ತು 838/94ರಲ್ಲಿ ನೀಡಿರುವ ಆದೇಶದಂತೆ ಪರಿಹಾರ ರೂ.9,65,400-00 (ಒಂಭತ್ತು ಲಕ್ಷದ ಅರವತ್ತೈದು ಸಾವಿರದ ನಾಲ್ಕುನೂರು ರೂಪಾಯಿಗಳು ಮಾತ್ರ) ಗಳನ್ನು ಈ ಕೆಳಕಂಡ ಷರತ್ತುಗೊಳಪಟ್ಟು ನೀಡಲು ಸರ್ಕಾರವು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರ ಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "4702-0-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಪೂರಕ ಅನುದಾನ-IIIರಿಂದ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ: 20/10/2010ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದ ಪ್ರತ್ಯಾಯೋಜನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಗೋಪಾಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಪಿ.ಆರ್. ನಂ:977

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಿಜಾಪುರ ಜಿಲ್ಲೆ ಮತ್ತು ತಾಲ್ಲೂಕಿನ ಧನರ್ಗಿ ಗ್ರಾಮದ ಹತ್ತಿರ ಕೆರೆ ನಿರ್ಮಾಣಕ್ಕಾಗಿ ಅಗತ್ಯವಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಗಾಗಿ ಮುಂಗಡ ಹಣ ಠೇವಣಿ ಮಾಡುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಭೂಸ್ವಾ/2010-11/1025, ದಿನಾಂಕ: 24/04/10.

ಪ್ರಸ್ತಾವನೆ:

ಬಿಜಾಪುರ ಜಿಲ್ಲೆ ಮತ್ತು ತಾಲ್ಲೂಕಿನ ಧನರ್ಗಿ ಗ್ರಾಮದ ಹತ್ತಿರ ಕೆರೆ ನಿರ್ಮಾಣಕ್ಕಾಗಿ ಅಗತ್ಯವಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಅವಾರ್ಡ್ ಪೂರ್ವ ಮುಂಗಡ ಹಣವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ: 24/02/11 ಪತ್ರದಲ್ಲಿ ಕೋರಿದ್ದಾರೆ.

ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ:ಕಂಇ 42 ಭೂಸ್ವಾಹಾ 2000, ದಿನಾಂಕ: 08/10/2001ರಲ್ಲಿ ಸೂಚಿಸಿರುವಂತೆ 4(1)ರ ಅಧಿಸೂಚನೆ ಹೊರಡಿಸುವ ಪೂರ್ವದಲ್ಲಿ ಭೂಸ್ವಾಧೀನ ಪ್ರಕ್ರಿಯೆಗಾಗಿ ಸಂಭವನೀಯ ವೆಚ್ಚದ ಶೇ. 50% ಮುಂಗಡ ಹಣವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಬೇಕಾಗಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 35 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ: 25ನೇ ಮಾರ್ಚ್ 2011

ಬಿಜಾಪುರ ಜಿಲ್ಲೆ ಮತ್ತು ತಾಲ್ಲೂಕಿನ ಧನರ್ಗಿ ಗ್ರಾಮದ ಹತ್ತಿರ ಕೆರೆ ನಿರ್ಮಾಣಕ್ಕಾಗಿ ಅಗತ್ಯವಿರುವ ಜಮೀನಿನ ಸ್ವಾಧೀನಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆಗಾಗಿ ಮುಂಗಡ ಹಣ ರೂ.10,25,285-00ಗಳನ್ನು (ಹತ್ತು ಲಕ್ಷದ ಇಪ್ಪತ್ತೈದು ಸಾವಿರದ ಇನ್ನೂರ ಎಂಭತ್ತೈದು ರೂ.ಗಳು ಮಾತ್ರ) ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 01 ಜಿಎಸ್‌ಜಿ 2011, ದಿನಾಂಕ: 19/03/2011ರಲ್ಲಿ ಒದಗಿಸಿರುವ ಪೂರಕ ಅನುದಾನ-IIIರಿಂದ ಭರಿಸುವುದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ: 20/10/2010ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಗೋಪಾಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಪಿ.ಆರ್. ನಂ:978

ಜಲ ಸಂಪನ್ಮೂಲ ಸಚಿವಾಲಯ

ವಿಷಯ: ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ಹರಗನಹಳ್ಳಿ ಗ್ರಾಮದ ಬಳಿ ಸೂಳೆಕೆರೆ ಹಳ್ಳಕ್ಕೆ ಅಡ್ಡಲಾಗಿ ನಿರ್ಮಿಸಿರುವ ಚೆಕ್ ಡ್ಯಾಂನ ಕೆಳಭಾಗದಲ್ಲಿ ಹಳ್ಳದ ಎಡ ಮತ್ತು ಬಲದಂಡೆಗಳ ಸಂರಕ್ಷಣಾ ಕಾಮಗಾರಿಯ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ದಿನಾಂಕ: 24/01/2011 ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ಪತ್ರ ಸಂಖ್ಯೆ:ಮುಸ(ದ)ತಾಂ-4/ಸಇಂ-10/ದಾವಣಗೆರೆ(ಜಿ)/ಹರಿಹರ ತಾ/ ಹರಗನಹಳ್ಳಿ/ 2010-11/205,

ಪ್ರಸ್ತಾವನೆ:

ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು ಹರಗನಹಳ್ಳಿ ಗ್ರಾಮದ ಬಳಿ ಸೂಳೆಕೆರೆ ಹಳ್ಳಕ್ಕೆ ಅಡ್ಡಲಾಗಿ ನಿರ್ಮಿಸಿರುವ ಚೆಕ್ ಡ್ಯಾಂನ ಕೆಳಭಾಗದಲ್ಲಿ ಹಳ್ಳದ ಎಡ ಮತ್ತು ಬಲದಂಡೆಗಳ ಸಂರಕ್ಷಣಾ ಕಾಮಗಾರಿಯ 2010-11ನೇ ಸಾಲಿನ ದರಪಟ್ಟಿಯಂತೆ ತಯಾರಿಸಲಾದ 33.07 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರು ಮೇಲೆ ಓದಲಾದ ದಿನಾಂಕ: 24/01/2011ರ ಪತ್ರದಲ್ಲಿ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಸದರಿ ಚೆಕ್ ಡ್ಯಾಂನ್ನು 2008ನೇ ಸಾಲಿನಲ್ಲಿ ರೂ.50.00ಲಕ್ಷ ವೆಚ್ಚ ಮಾಡಿ ನಿರ್ಮಿಸಲಾಗಿದೆ. ಈ ಚೆಕ್ ಡ್ಯಾಂ ನಿರ್ಮಾಣದಿಂದ ಈ ಇಲಾಖೆಯ ಹರಗನಹಳ್ಳಿ ಹಲಸಬಾಳು ಮತ್ತು ಹನಗವಾಡಿ ಏತ ನೀರಾವರಿ ಯೋಜನೆಗಳ 1800 ಎಕರೆ ಅಚ್ಚುಕಟ್ಟಿಗೆ ಅನುಕೂಲವಾಗುತ್ತಿದೆ. ಇದಲ್ಲದೆ ಈ ಹಳ್ಳದ ಎರಡು ದಂಡೆಯಲ್ಲಿ 2.50ಕಿಮಿ ಉದ್ದಕ್ಕೆ ರೈತರು ಪಂಪ್ ಸೆಟ್ ಅಳವಡಿಸಿ ನೀರಾವರಿಗೆ ಬಳಸುತ್ತಿರುವುದಾಗಿ ವರದಿಯಾಗಿದೆ.

ಸದರಿ ಚೆಕ್ ಡ್ಯಾಂ ಕೆಳಭಾಗದಲ್ಲಿ 135 ಮಿ. ವರೆಗೆ ದಂಡೆಗಳು ಕೊರೆದಿರುವುದಾಗಿ ತಿಳಿಸಿ ಸದರಿ ಚೆಕ್ ಡ್ಯಾಂ ಸಂರಕ್ಷಣೆಗಾಗಿ ಎರಡು ದಂಡೆಗೆ ಕಾಂಕ್ರಿಟ್ ಗೋಡೆ ನಿರ್ಮಿಸಲು ರೂ.33.07ಲಕ್ಷ ಮೊತ್ತ ಆಗುವುದಾಗಿ ಈ ಬಗ್ಗೆ ಅಂದಾಜನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕೆಂದು ತಿಳಿಸಿ ಇಲ್ಲದ್ದಲ್ಲಿ ಚೆಕ್ ಡ್ಯಾಂ ಕೊಚ್ಚಿ ಹೋಗುವ ಸಂಭವವಿರುವುದಾಗಿ ತಿಳಿಸಲಾಗಿದೆ.

ಸದರಿ ನದಿದಂಡೆ ಸಂರಕ್ಷಣಾ ಕಾಮಗಾರಿಯಾದ ರೂ.33.07ಲಕ್ಷ ಮೊತ್ತ ಅಂದಾಜಿಗೆ ಲೆಕ್ಕ ಶೀರ್ಷಿಕೆ "4711-01-103-1-00-140- ಪ್ರವಾಹ ನಿಯಂತ್ರಣ" ಅಡಿ ಆಡಳಿತಾತ್ಮಕ ಅನುಮೋದನೆ ನೀಡಲು ಪರಿಗಣಿಸಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 01 ಪ್ರನಿಕಾ (ತಾಂತ್ರಿಕ)2011, ಬೆಂಗಳೂರು, ದಿನಾಂಕ: 26ನೇ ಮಾರ್ಚ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ಹರಗನಹಳ್ಳಿ ಗ್ರಾಮದ ಬಳಿ ಸೂಳೆಕೆರೆ ಹಳ್ಳಕ್ಕೆ ಅಡ್ಡಲಾಗಿ ನಿರ್ಮಿಸಿರುವ ಚೆಕ್ ಡ್ಯಾಂನ ಕೆಳಭಾಗದಲ್ಲಿ ಹಳ್ಳದ ಎಡ ಮತ್ತು ಬಲದಂಡೆಗಳ ಸಂರಕ್ಷಣಾ ಕಾಮಗಾರಿಯ 2010-11ನೇ ಸಾಲಿನ ದರಪಟ್ಟಿಯಂತೆ ತಯಾರಿಸಲಾದ 33.07ಲಕ್ಷ ರೂಗಳ (ಮೂವತ್ತಮೂರು ಲಕ್ಷ ಏಳು ಸಾವಿರ ರೂ.ಗಳು ಮಾತ್ರ) ಅಂದಾಜು ಪಟ್ಟಿಗೆ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
2. ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
3. ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
4. ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ/ತಾಂತ್ರಿಕ ಸಮಿತಿಯ ತೀರುವಳಿ ಪಡೆಯುವುದು.
5. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.
6. ಇ.ಐ.ಆರ್.ಎಲ್/ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
7. ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
8. ಈ ಕಾಮಗಾರಿಯನ್ನು 2011-12ನೇ ಸಾಲಿನ ಆಯವ್ಯಯದಲ್ಲಿ ಸೂಕ್ತ ಅನುದಾನದೊಂದಿಗೆ ಸೇರಿಸಲು ಕ್ರಮ ಕೈಗೊಳ್ಳತಕ್ಕದ್ದು.

ಈ ಉದ್ದೇಶಕ್ಕಾಗಿ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "4711-01-103-1-00-140 ಪ್ರವಾಹ ನಿಯಂತ್ರಣ ಅಡಿ ಭರಿಸುವುದು.

ಈ ಆದೇಶವನ್ನು ಇಲಾಖಾ ಕಾರ್ಯದರ್ಶಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ: 16/05/08ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.ನಂ:979

(ರುದ್ರಮೂರ್ತಿ),

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ ಆಳಂದ ತಾಲ್ಲೂಕು ತಡಕಲ್ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ನ್ಯಾಯಾಲಯದ ಆದೇಶನುಸಾರ ಹೆಚ್ಚುವರಿ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಭೂಸ್ವಾಪ್ರ/2010-11/4324, ದಿನಾಂಕ: 28/07/10.

ಪ್ರಸ್ತಾವನೆ:

ಗುಲ್ಬರ್ಗಾ ಜಿಲ್ಲೆ ಆಳಂದ ತಾಲ್ಲೂಕು ತಡಕಲ್ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ತಡಕಲ್ ಗ್ರಾಮದ ಜಮೀನುಗಳಿಗೆ ಆಳಂದ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯವು ನೀಡಿರುವ ತೀರ್ಪಿನನುಸಾರ ಹೆಚ್ಚುವರಿ ಪರಿಹಾರ ಪಾವತಿಸಲು ರೂ.1,79,408/-ಗಳ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ: 28/07/2010ರ ಪತ್ರದಲ್ಲಿ ಕೋರಿರುತ್ತಾರೆ.

1. ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ದಿನಾಂಕ: 03/07/2003ರಂದು ಹೊರಡಿಸಿದೆ.
2. ಭೂಸ್ವಾಧೀನಾಧಿಕಾರಿಗಳು ಐತೀರ್ಪು ಹೊರಡಿಸಿದ ದಿನಾಂಕ: 25/07/2004.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಐತೀರ್ಪಿನಂತೆ ಹಣ ಪಡೆದು ಇನ್ನೂ ಹೆಚ್ಚಿನ ಪರಿಹಾರ ನೀಡುವಂತೆ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ಆಳಂದ ಇಲ್ಲಿ ದಾಖಲಿಸಿದ್ದ ಎಲ್.ಎ.ಸಿ. ಪ್ರಕರಣಗಳಲ್ಲಿ ನ್ಯಾಯಾಲಯವು ಪ್ರತಿ ಎಕರೆಗೆ ರೂ.51,200/-ಗಳಿಗೆ ಹೆಚ್ಚಿಸಿದೆ. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಅಗತ್ಯವಿಲ್ಲವೆಂದು ಕಾನೂನು ಇಲಾಖೆಯು ಪತ್ರ ಸಂಖ್ಯೆ:ಲಾ 819 ಎಲ್‌ಎಸ್‌ಪಿ 2007, ಲಾ 220 ಎಲ್‌ಎಸ್‌ಪಿ 2007, ಲಾ 825 ಎಲ್‌ಎಸ್‌ಪಿ 2007, ಲಾ 824 ಎಲ್‌ಎಸ್‌ಪಿ 2007, ದಿನಾಂಕ: 15/06/07ರ ಪತ್ರಗಳಲ್ಲಿ ಅಭಿಪ್ರಾಯ ನೀಡಿದೆ.

ಪಾವತಿಸಬೇಕಾದ ಪರಿಹಾರ ಮೊತ್ತದ ವಿವರ ಕೆಳಕಂಡಂತಿದೆ:

ಕ್ರಮ ಸಂಖ್ಯೆ	ಎಲ್ಎಸಿ ಸಂಖ್ಯೆ	ತಡಕಲ್ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ (ರೂ. ಗಳಲ್ಲಿ)
1.	19/06	812/D	0-09	9679
2.	20/06	812/ D1	0-27	28037
3.	21/06	812/ A2	0-06	6619

4.	22/06	815/3	0-10	10698
5.	29/06	812/3	1-12	53535
6.	30/06	812/ C	1-00	41296
ಒಟ್ಟು				149864

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

17.	ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಸಹಾಯಕ ನಿರ್ದೇಶಕರು –3 (ತನಿಖೆ ಮತ್ತು ಪರಿಶೀಲನಾ ಘಟಕ)	ಮಹಮದ್ ಇಕ್ಬಾಲ್ ಹುಸೇನ್	26604502
18.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ಸುನಿತಾ ಪ್ರಸಾದ್	–
19.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ಬಿ. ಗೋಪಾಲಕೃಷ್ಣ	–
20.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ಪಿ.ಎಂ. ಡೈಸಿ	–
21.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ವಿ. ಸರ್ವಮಂಗಳ	–
22.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ಕೆ. ಶ್ರೀಕಾಂತರಾವ್	–
23.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ಶೋಭಾ ಚಂದಕಾಂತ್	–
24.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ಎ. ಶಶಿಕಲಾ	–

ಕ್ರ. ಸಂ	ಪದನಾಮ	ಅಧಿಕಾರಿ /ನೌಕರರ ಹೆಸರು ಶ್ರೀ / ಶ್ರೀಮತಿ	ದೂರವಾಣಿ ಸಂಖ್ಯೆ
25.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ಟಿ.ಕೆ. ರಮೇಶ್	–
26.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ಕೆ. ಚಿಗರಪ್ಪ	–
27.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ಸತ್ಯಪ್ರೇಮಕುಮಾರಿ	–
28.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ಎನ್.ಭಾಸ್ಕರ್	–
29.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ಆರ್.ಸುಧಾ	–
30.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ಕೆ.ಎಸ್.ಅರುಂಧತಿ	–
31.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ಪಿ.ಎ.ಕಿರಣ್‌ಕುಮಾರ್	–
32.	ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	ಉದಯರಾಮಶರ್ಮ	–
33.	ಸಹಕಾರ ಸಂಘಗಳ ಲೆಕ್ಕಪರಿಶೋಧಕರು	ಹೇಮಲತಾ ವಿ ಸೂರಿ	–
34.	ಸಹಕಾರ ಸಂಘಗಳ ಲೆಕ್ಕಪರಿಶೋಧಕರು	ಸಿ.ಸುಶೀಲ	–
35.	ಸಹಕಾರ ಸಂಘಗಳ ಲೆಕ್ಕಪರಿಶೋಧಕರು	ಡಿ.ಕೆ. ಭಾಗ್ಯ	–
36.	ಸಹಕಾರ ಸಂಘಗಳ ಲೆಕ್ಕಪರಿಶೋಧಕರು	ಶಾಂತಕುಮಾರಿ.ಬಿ.ಎಸ್	–
37.	ಸಹಕಾರ ಸಂಘಗಳ ಲೆಕ್ಕಪರಿಶೋಧಕರು	ಹೆಚ್.ಬಸವರಾಜು	–
38.	ಸಹಕಾರ ಸಂಘಗಳ ಲೆಕ್ಕಪರಿಶೋಧಕರು	ಎಲ್.ಆರ್.ರೇಖಾ	–
39.	ಸಹಕಾರ ಸಂಘಗಳ ಲೆಕ್ಕಪರಿಶೋಧಕರು	ಎಸ್.ಮಾದೇಶ	–
40.	ಸಹಕಾರ ಸಂಘಗಳ ಲೆಕ್ಕಪರಿಶೋಧಕರು	ಪಿ.ಮಿನು	–
41.	ಪ್ರಥಮ ದರ್ಜೆ ಸಹಾಯಕರು	ಎನ್. ನಟರಾಜ್	
42.	ಪ್ರಥಮ ದರ್ಜೆ ಸಹಾಯಕರು	ಎಸ್.ಡಿ. ಸೌಭಾಗ್ಯ	
43.	ಪ್ರಥಮ ದರ್ಜೆ ಸಹಾಯಕರು	ವಿ. ಲಕ್ಷ್ಮೀನಾರಾಯಣ	
44.	ಪ್ರಥಮ ದರ್ಜೆ ಸಹಾಯಕರು	ತಹಜೀಬುನ್ನೀಸಾ	
45.	ಪ್ರಥಮ ದರ್ಜೆ ಸಹಾಯಕರು	ಆರ್.ಪಿ.ದೀನ್	
46.	ಪ್ರಥಮ ದರ್ಜೆ ಸಹಾಯಕರು	ವಿ.ಜೆ. ಸವಿತಾ	
47.	ಪ್ರಥಮ ದರ್ಜೆ ಸಹಾಯಕರು	ನಿಮಿಷಾ ಎಸ್.ಸೂರ್ಯವಂಶಿ	
48.	ಶೀಘ್ರಲಿಪಿಗಾರರು	ಎಂ. ರಜನಿ	
49.	ಶೀಘ್ರಲಿಪಿಗಾರರು	ಬಿ. ವಿಜಯಲಕ್ಷ್ಮಿ	–
50.	ಶೀಘ್ರಲಿಪಿಗಾರರು	ಬಿ.ಜಿ. ನಳಿನ	–
51.	ದ್ವಿತೀಯ ದರ್ಜೆ ಸಹಾಯಕರು	ಜಿ. ನೇತ್ರಾವತಿ	–
52.	ದ್ವಿತೀಯ ದರ್ಜೆ ಸಹಾಯಕರು	ಆರ್.ಎಂ. ಪುಷ್ಪ	–
53.	ದ್ವಿತೀಯ ದರ್ಜೆ ಸಹಾಯಕರು	ಪಿ. ಸುಶೀಲಮ್ಮ	–
54.	ದ್ವಿತೀಯ ದರ್ಜೆ ಸಹಾಯಕರು	ಮುಸ್ತಾಕ್ ಅಹ್ಮದ್ ಬೇಗ್	–
55.	ದ್ವಿತೀಯ ದರ್ಜೆ ಸಹಾಯಕರು	ಹೇಮಾವತಿ ಎಸ್.ಬಿ.	–
56.	ದ್ವಿತೀಯ ದರ್ಜೆ ಸಹಾಯಕರು	ಎನ್.ಕೆ.ತಮೀಮ್ ಅನ್ಸಾರಿ	–
57.	ದ್ವಿತೀಯ ದರ್ಜೆ ಸಹಾಯಕರು	ಭಾನುಪ್ರಕಾಶ್	–
58.	ಬೆರಳಚ್ಚುಗಾರರು	ಜೆ.ಎ. ಗಾಯತ್ರಿ	–
[illegible]	ಬೆರಳಚ್ಚುಗಾರರು	ಜಿ.ಎನ್. ಕುಸುಮ	–
60.	ಬೆರಳಚ್ಚುಗಾರರು	ಕೆ. ಲಲಿತ	–
61.	ಬೆರಳಚ್ಚುಗಾರರು	ಎಸ್. ಪ್ರೇಮ	–
62.	ಬೆರಳಚ್ಚುಗಾರರು	ಬಿ.ಆರ್. ಕೃಷ್ಣಮೂರ್ತಿ	–
63.	ಬೆರಳಚ್ಚುಗಾರರು	ಉಷಾ ನಾರಾಯಣ ಪ್ರಭು	–
64.	ವಾಹನ ಚಾಲಕರು	ಸುಬ್ರಮಣಿ	–

ಕ್ರ ಸಂ	ಪದನಾಮ	ಅಧಿಕಾರಿ /ನೌಕರರ ಹೆಸರು ಶ್ರೀ / ಶ್ರೀಮತಿ	ದೂರವಾಣಿ ಸಂಖ್ಯೆ
65.	ವಾಹನ ಚಾಲಕರು	ಸಿ. ಗಿರೀಶ್	–
66.	ದಫೇದಾರ್	ಎಸ್.ಸಿ.ಜೇವರ್ಗಿ	–
67.	ಗ್ರೂಪ್ ಡಿ ನೌಕರರು	ಸಿ. ಮುನಿರಾಜು	–
68.	ಗ್ರೂಪ್ ಡಿ ನೌಕರರು	ಕೆ. ಪುಟ್ಟೇಗೌಡ	–
69.	ಗ್ರೂಪ್ ಡಿ ನೌಕರರು	ಟಿ. ನಾರಾಯಣ	–
70.	ಗ್ರೂಪ್ ಡಿ ನೌಕರರು	ಎಂ. ರಾಜಶೇಖರ್	–
71.	ಗ್ರೂಪ್ ಡಿ ನೌಕರರು	ರಾಜಣ್ಣ	–
72.	ಗ್ರೂಪ್ ಡಿ ನೌಕರರು	ದಶರಥರಾವ್	–
73.	ಗ್ರೂಪ್ ಡಿ ನೌಕರರು	ಬಸವರಾಜು	–
74.	ಗ್ರೂಪ್ ಡಿ ನೌಕರರು	ಅಶ್ವತ್ಥನಾರಾಯಣ	–
75.	ಗ್ರೂಪ್ ಡಿ ನೌಕರರು	ಚಂದಶೇಖರ್	–
76.	ಗ್ರೂಪ್ ಡಿ ನೌಕರರು	ಪಿ.ಎಸ್. ದ್ವಾರಕನಾಥ್	–
77.	ಗ್ರೂಪ್ ಡಿ ನೌಕರರು	ಕೆ.ಜಿ. ವೆಂಕಟಲಕ್ಷ್ಮಮ್ಮ	–
78.	ಗ್ರೂಪ್ ಡಿ ನೌಕರರು	ಹೆಚ್. ಚನ್ನಕೇಶವ	–
79.	ಗ್ರೂಪ್ ಡಿ ನೌಕರರು	ಲಕ್ಷ್ಮಮ್ಮ	–
80.	ಗ್ರೂಪ್ ಡಿ ನೌಕರರು	ಬಿ. ಮಂಜುನಾಥ	–
81.	ಗ್ರೂಪ್ ಡಿ ನೌಕರರು	ಗೌರಮ್ಮ	–
82.	ಗ್ರೂಪ್ ಡಿ ನೌಕರರು	ಧನಲಕ್ಷ್ಮಿ	–
83.	ಗ್ರೂಪ್ ಡಿ ನೌಕರರು	ಗೌರಿಬಾಯಿ	–

4(1)(ಬಿ)(x)

ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ವೇತನಗಳ ವಿವರ:

ಕ್ರಮ ಸಂಖ್ಯೆ	ಹೆಸರು ಮತ್ತು ಹುದ್ದೆ ಶ್ರೀ / ಶ್ರೀಮತಿ	ವೇತನ ಶ್ರೇಣಿ	ಒಟ್ಟು ವೇತನ (Gross Salary in ₹ as on 31.03.2011)
01.	ಕೆ.ನಾರಾಯಣಸ್ವಾಮಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರು	24450–31800	57,938/–
02.	ಎನ್.ರಾಮಕೃಷ್ಣಪ್ಪ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಜಂಟಿ ನಿರ್ದೇಶಕರು (ಆಡಳಿತ ಮತ್ತು ಸಿಬ್ಬಂದಿ)	20025–28275	51,459/–
03.	ಪ್ರಕಾಶ್ ಸಿ.ಮಜ್ಗಿ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಜಂಟಿ ನಿರ್ದೇಶಕರು (ಲೆಕ್ಕ ಪರಿಶೋಧನೆ 1)	20025–28275	52,682/–
04.	ರತ್ನಾನಾಯಕ್, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಜಂಟಿ ನಿರ್ದೇಶಕರು (ಲೆಕ್ಕ ಪರಿಶೋಧನೆ 2)	20025–28275	54.869/–
05.	ಎಂ.ಎಂ.ಅಣ್ಣಿಗೇರಿ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಜಂಟಿ ನಿರ್ದೇಶಕರು (ತನಿಖೆ ಮತ್ತು ಪರಿಶೀಲನಾ ಘಟಕ)	22125–30300	54,869/–
06.	ಖಾನ್ ಪರ್ವೇಜ್ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು (ಆಡಳಿತ ಮತ್ತು ಸಿಬ್ಬಂದಿ)	19050–27600	43,179/–

ಕ್ರಮ ಸಂಖ್ಯೆ	ಹೆಸರು ಮತ್ತು ಹುದ್ದೆ ಶ್ರೀ / ಶ್ರೀಮತಿ	ವೇತನ ಶ್ರೇಣಿ	ಒಟ್ಟು ವೇತನ (Gross Salary in ₹ as on 31.03.2011)
07.	ಜಿ.ಪುಷ್ಪ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು, (ಲೆಕ್ಕ ಪರಿಶೋಧನೆ)	18150–26925	40,311/–
08.	ಬಿ.ಕೆ. ಗೋಪಾಲ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು (ತನಿಖೆ ಮತ್ತು ಪರಿಶೀಲನಾ ಘಟಕ)	19050–27600	50,325/–
09.	ಟಿ.ಕೆ. ಭಾಸ್ಕರರಾವ್, ನಿರ್ದೇಶಕರ ಪತ್ರಾಂಕಿತ ಆಪ್ತ ಸಹಾಯಕರು	11400–21600	34,213/–
10.	ಎಂ.ಎಸ್.ಕೃಷ್ಣಪ್ರಸಾದ್, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು (ಆಡಳಿತ ಮತ್ತು ಸಿಬ್ಬಂದಿ)	11400–21600	31,666/–
11.	ಟಿ.ವಿ.ಲಕ್ಷ್ಮೀನಾರಾಯಣಸ್ವಾಮಿ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು(ಲೆಕ್ಕ ಮತ್ತು ಆಯವ್ಯಯ)	11400–21600	33,663/–
12.	ಕೆ.ಟಿ. ಕಣ್ಣನ್, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು–1 (ಲೆಕ್ಕಪರಿಶೋಧನೆ–1)	11400–21600	35,644/–
13.	ಎಂ.ಯಶೋಧ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು–2 (ಲೆಕ್ಕಪರಿಶೋಧನೆ–1)	11400–21600	23,229/–
14.	ಪಿ.ವೆಂಕಟಾಚಲಯ್ಯ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು (ಲೆಕ್ಕ ಪರಿಶೋಧನೆ–2)	11400–21600	34,013/–
15.	ಎಂ.ಆಸಿಫ್ ಆಲಿ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು–1 (ತನಿಖೆ ಮತ್ತು ಪರಿಶೀಲನಾ ಘಟಕ)	11400–21600	34,013/–
16.	ಜಿ.ಎನ್.ನಾಗರಾಜರಾವ್, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು –2 (ತನಿಖೆ ಮತ್ತು ಪರಿಶೀಲನಾ ಘಟಕ)	11400–21600	34,829/–
17.	ಮಹಮದ್ ಇಕ್ಬಾಲ್ ಹುಸೇನ್, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು –3 (ತನಿಖೆ ಮತ್ತು ಪರಿಶೀಲನಾ ಘಟಕ)	11400–21600	32,847/–
18.	ಸುನಿತಾ ಪ್ರಸಾದ್ ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	8825–16000	31,525/–
19.	ಬಿ. ಗೋಪಾಲಕೃಷ್ಣ ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	8825–16000	26,825/–

ಕ್ರಮ ಸಂಖ್ಯೆ	ಹೆಸರು ಮತ್ತು ಹುದ್ದೆ ಶ್ರೀ / ಶ್ರೀಮತಿ	ವೇತನ ಶ್ರೇಣಿ	ಒಟ್ಟು ವೇತನ (Gross Salary in ₹ as on 31.03.2011)
20.	ಎನ್.ಭಾಸ್ಕರ್, ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	8825–16000	29,000/–
21.	ಆರ್.ಸುಧಾ, ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	8825–16000	26,825/–
22.	ಪಿ.ಕಿರಣ್‌ಕುಮಾರ್, ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	8825–16000	24,063/–
23.	ಉದಯರಾಮಶರ್ಮ, ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	8825–16000	32,250/–
24.	ವಿ. ಸರ್ವಮಂಗಳ, ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	8825–16000	26,825/–
25.	ಕೆ. ಶ್ರೀಕಾಂತರಾವ್, ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	8825–16000	23,913/–
26.	ಶೋಭಾ ಚಂದ್ರಕಾಂತ್, ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	8825–16000	26,200/–
27.	ಎ. ಶಶಿಕಲಾ, ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	8825–16000	26,100/–
28.	ಟಿ.ಕೆ. ರಮೇಶ್, ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	8825–16000	26,450/–
29.	ಕೆ. ಚಿಗರಪ್ಪ, ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	8825–16000	26,200/–
30.	ಕೆ.ಎಸ್.ಅರುಂಧುತಿ, ಸಹಕಾರ ಸಂಘಗಳ ಲೆಕ್ಕಪರಿಶೋಧಕರು	8825–16000	22,294/–
31.	ಪಿ.ಎಂ. ಡೈಸಿ, ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	8825–16000	24,547/–
32.	ಸತ್ಯಪ್ರೇಮಕುಮಾರಿ, ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು	8825–16000	29,000/–
33.	ಹೇಮಲತಾ ವಿ ಸೂರಿ, ಸಹಕಾರ ಸಂಘಗಳ ಲೆಕ್ಕಪರಿಶೋಧಕರು	8825–16000	22,969/–
34.	ಸಿ.ಸುಶೀಲ, ಸಹಕಾರ ಸಂಘಗಳ ಲೆಕ್ಕಪರಿಶೋಧಕರು	7275–13350	16,754/–
35.	ಡಿ.ಕೆ. ಭಾಗ್ಯ, ಸಹಕಾರ ಸಂಘಗಳ ಲೆಕ್ಕಪರಿಶೋಧಕರು	7275–13350	15,225/–
36.	ನಿಮಿಷಾ ಎಸ್.ಸೂರ್ಯವಂಶಿ, ಸಹಕಾರ ಸಂಘಗಳ ಲೆಕ್ಕಪರಿಶೋಧಕರು	7275–13350	19,031/–
37.	ಶಾಂತಕುಮಾರಿ.ಬಿ.ಎಸ್., ಸಹಕಾರ ಸಂಘಗಳ ಲೆಕ್ಕಪರಿಶೋಧಕರು	7275–13350	14,488/–
38.	ಹೆಚ್.ಬಸವರಾಜ್, ಸಹಕಾರ ಸಂಘಗಳ ಲೆಕ್ಕಪರಿಶೋಧಕರು	7275–13350	14,488/–
39.	ಎಲ್.ಆರ್.ರೇಖಾ, ಸಹಕಾರ ಸಂಘಗಳ ಲೆಕ್ಕಪರಿಶೋಧಕರು	7275–13350	14,138/–

ಕ್ರಮ ಸಂಖ್ಯೆ	ಹೆಸರು ಮತ್ತು ಹುದ್ದೆ ಶ್ರೀ / ಶ್ರೀಮತಿ	ವೇತನ ಶ್ರೇಣಿ	ಒಟ್ಟು ವೇತನ (Gross Salary in ₹ as on 31.03.2011)
40.	ಎಸ್.ಮಾದೇಶ್, ಸಹಕಾರ ಸಂಘಗಳ ಲೆಕ್ಕಪರಿಶೋಧಕರು	7275–13350	14,488/–
41.	ಪಿ.ಮಿನು, ಸಹಕಾರ ಸಂಘಗಳ ಲೆಕ್ಕಪರಿಶೋಧಕರು	7275–13350	13,670/–
42.	ಎನ್. ನಟರಾಜ್, ಪಥಮ ದರ್ಜೆ ಸಹಾಯಕರು	7275–13350	18,579/–
43.	ಎಸ್.ಡಿ. ಸೌಭಾಗ್ಯ, ಪಥಮ ದರ್ಜೆ ಸಹಾಯಕರು	7275–13350	20,000/–
44.	ವಿ. ಲಕ್ಷ್ಮೀನಾರಾಯಣ, ಪಥಮ ದರ್ಜೆ ಸಹಾಯಕರು	7275–13350	15,750/–
45.	ತಹಜೀಬುನ್ನೀಸಾ, ಪ್ರಥಮ ದರ್ಜೆ ಸಹಾಯಕರು	7275–13350	24,197/–
46.	ವಿ.ಜೆ.ಸವಿತಾ, ಪಥಮ ದರ್ಜೆ ಸಹಾಯಕರು	7275–13350	18,125/–
47.	ಆರ್.ಪಿ.ದೀನ್, ಪಥಮ ದರ್ಜೆ ಸಹಾಯಕರು	8000–14800	19,381/–
48.	ಜೆ.ಎಲ್.ಮೀನಾಕ್ಷಿ, ಪಥಮ ದರ್ಜೆ ಸಹಾಯಕರು	7275–13350	13,704/–
49.	ಎಂ.ರಜನಿ, ಶೀಘ್ರಲಿಪಿಗಾರರು	8825–16000	20,035/–
50.	ಬಿ.ವಿಜಯಲಕ್ಷ್ಮಿ, ಶೀಘ್ರಲಿಪಿಗಾರರು	7275–13350	19,685/–
51.	ಬಿ.ಜಿ. ನಳಿನ, ಶೀಘಲಿಪಿಗಾರರು,	7275–13350	18,585/–
52.	ಆರ್.ಎಂ. ಪುಷ್ಪ, ದ್ವಿತೀಯ ದರ್ಜೆ ಸಹಾಯಕರು	5800–10500	12,797/–
53.	ಸುಶೀಲಮ್ಮ, ದ್ವಿತೀಯ ದರ್ಜೆ ಸಹಾಯಕರು	6250–12000	16,754/–
54.	ಮುಸ್ತಾಕ್ ಅಹ್ಮದ್ ಬೇಗ್, ದ್ವಿತೀಯ ದರ್ಜೆ ಸಹಾಯಕರು	5800–10500	16,345/–
55.	ಹೇಮಾವತಿ ಎಸ್.ಬಿ. ದ್ವಿತೀಯ ದರ್ಜೆ ಸಹಾಯಕರು	6250–12000	16,754/–
56.	ಎನ್.ಕೆ.ತಮೀಮ್ ಅನ್ಸಾರಿ, ದ್ವಿತೀಯ ದರ್ಜೆ ಸಹಾಯಕರು	6250–12000	14,500/–
57.	ಜಿ. ನೇತ್ರಾವತಿ, ದ್ವಿತೀಯ ದರ್ಜೆ ಸಹಾಯಕರು	6250–12000	13,704/–
58.	ಬಿ.ಭಾನುಪಕಾಶ್, ದ್ವಿತೀಯ ದರ್ಜೆ ಸಹಾಯಕರು	5800–10500	12,254/–
59.	ಜಿ.ಎನ್. ಕುಸುಮ, ಬೆರಳಚ್ಚುಗಾರರು	6250–12000	14,690/–
60.	ಕೆ. ಲಲಿತಾ, ಬೆರಳಚ್ಚುಗಾರರು	6250–12000	14,590/–
61.	ಎನ್. ಪ್ರೇಮ, ಬೆರಳಚ್ಚುಗಾರರು	6250–12000	14,590/–
62.	ಜೆ.ಎ. ಗಾಯತ್ರಿ, ಬೆರಳಚ್ಚುಗಾರರು	6250–12000	14,590/–
63.	ಬಿ.ಆರ್.ಕೃಷ್ಣಮೂರ್ತಿ, ಬೆರಳಚ್ಚುಗಾರರು	6250–12000	19,665/–
64.	ಉಷಾ ನಾರಾಯಣ ಪಭು, ಬೆರಳಚ್ಚುಗಾರರು	6250–12000	13,760/–
65.	ಸುಬಮಣಿ, ವಾಹನ ಚಾಲಕರು	6250–12000	17,244/–
66.	ಸಿ.ಗಿರೀಶ್, ವಾಹನ ಚಾಲಕರು	5800–10500	12,319/–
67.	ಸಾತಪ್ಪ ಜೇವರ್ಗಿ, ದಫೇದಾರರು	5500–9500	14,598/–
68.	ಗೌರಮ್ಮ, ಗ್ರೂಪ್ ಡಿ ನೌಕರರು	5200–8200	11,779/–
69.	ಸಿ. ಮುನಿರಾಜು, ಗ್ರೂಪ್ ಡಿ ನೌಕರರು	5500–9500	15,838/–
70.	ಕೆ. ಪುಟ್ಟೇಗೌಡ, ಗ್ರೂಪ್ ಡಿ ನೌಕರರು	5500–9500	16,188/–
71.	ಟಿ. ನಾರಾಯಣ, ಗ್ರೂಪ್ ಡಿ ನೌಕರರು	5500–9500	16,188/–
72.	ಎಂ. ರಾಜಶೇಖರ್, ಗ್ರೂಪ್ ಡಿ ನೌಕರರು	5500–9500	15,475/–
73.	ರಾಜಣ್ಣ, ಗ್ರೂಪ್ ಡಿ ನೌಕರರು	5500–9500	15,895/–
74.	ದಶರಥರಾವ್, ಗ್ರೂಪ್ ಡಿ ನೌಕರರು	5500–9500	15,838/–
75.	ಬಸವರಾಜು, ಗ್ರೂಪ್ ಡಿ ನೌಕರರು	5500–9500	14,270/–

ಕ್ರಮ ಸಂಖ್ಯೆ	ಹೆಸರು ಮತ್ತು ಹುದ್ದೆ ಶ್ರೀ / ಶ್ರೀಮತಿ	ವೇತನ ಶ್ರೇಣಿ	ಒಟ್ಟು ವೇತನ (Gross Salary in ₹ as on 31.03.2011)
76.	ಅಶ್ವತ್ಥನಾರಾಯಣ, ಗ್ರೂಪ್ ಡಿ ನೌಕರರು	5500–9500	14,270/–
77.	ಚಂದಶೇಖರ್, ಗ್ರೂಪ್ ಡಿ ನೌಕರರು	5500–9500	12,969/–
78.	ಪಿ.ಎಸ್. ದ್ವಾರಕನಾಥ್, ಗ್ರೂಪ್ ಡಿ ನೌಕರರು	5200–8200	11,956/–
79.	ಕೆ.ಜಿ. ವೆಂಕಟಲಕ್ಷ್ಮಮ್ಮ, ಗ್ರೂಪ್ ಡಿ ನೌಕರರು	5200–8200	12,005/–
80.	ಹೆಚ್. ಚನ್ನಕೇಶವ, ಗ್ರೂಪ್ ಡಿ ನೌಕರರು	5200–8200	11,429/–
81.	ಲಕ್ಷ್ಮಮ್ಮ, ಗ್ರೂಪ್ ಡಿ ನೌಕರರು	5200–8200	12,425/–
82.	ಬಿ. ಮಂಜುನಾಥ, ಗ್ರೂಪ್ ಡಿ ನೌಕರರು	4800–7275	11,144/–
83.	ಧನಲಕ್ಷ್ಮಿ, ಗ್ರೂಪ್ ಡಿ ನೌಕರರು	5200–8200	13,636/–
84.	ಗೌರಿಬಾಯಿ, ಗ್ರೂಪ್ ಡಿ ನೌಕರರು	4800–7275	9,525/–
85.	ಶ್ರೀ ಹೆಚ್.ಮುನಾವರ್ ಅಹ್ಮದ್, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ನಿಯಮ 441, ಕರ್ನಾಟಕ ಹಾಲು ಮಹಾ ಮಂಡಳ ನಿ., ಬೆಂಗಳೂರು.	20025–28275	51,549/–
86.	ಶ್ರೀ ಕೆ.ಎಸ್.ಅಶೋಕ್‌ಕುಮಾರ್, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ನಿಯಮ 441, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ನಿ., ಬೆಂಗಳೂರು.	20025–28275	50,325/–
87.	ಶ್ರೀ ಎಂ.ಎಲ್.ಶಶಿಕಲಾ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ನಿಯಮ 441, ಕರ್ನಾಟಕ ರಾಜ್ಯ ಗ್ರಾಹಕರ ಸಹಕಾರ ಮಹಾ ಮಂಡಳ ನಿ., ಬೆಂಗಳೂರು.	20025–28275	50,585/–
88.	ಶ್ರೀ ಬಿ.ವಿ.ಶಶಿಧರಮೂರ್ತಿ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ನಿಯಮ 441, ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾ ಮಂಡಳ ನಿ., ಬೆಂಗಳೂರು.	20025–28275	50,585/–
89.	ಶ್ರೀ ಬಿ.ಟಿ.ಕೃಷ್ಣಪ್ಪ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ನಿಯಮ 441, ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು.	20025–28275	49,101/–

4(1)(ಬಿ)(xi)

ಎಲ್ಲಾ ಯೋಜನಾ ವಿವರದೊಂದಿಗೆ ಇಲಾಖೆಯ ಅಂಗ ಸಂಸ್ಥೆಗಳಿಗೆ ವಂಟನೆ ಮಾಡಿದ ಆಯವ್ಯಯ ವಿವರ, ಉದ್ದೇಶಿತ ವೆಚ್ಚ ಹಾಗೂ ವಿತರಣೆ ಮಾಡಿದ ವಿವರದ ತ:ಖ್ತೆ:

ಈ ಇಲಾಖೆಯಲ್ಲಿ ಯಾವುದೇ ಕೇಂದ್ರ, ರಾಜ್ಯ ಸರ್ಕಾರ ಪುರಸ್ಕೃತ ಜಾರಿಗೊಳಿಸಬೇಕಾದ ಯೋಜನಾ ಕಾರ್ಯಕ್ರಮಗಳು ಇರುವುದಿಲ್ಲ. ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳು, ಪ್ರವಾಸ ವೆಚ್ಚ ಮತ್ತು ಕಛೇರಿಯ ನಿರ್ವಹಣೆಗೆ ಸಂಬಂದಿಸಿದ ವೆಚ್ಚ ಈ ಇಲಾಖೆಯ ವೆಚ್ಚವಾಗಿದೆ. 2010-11 ನೇ ಸಾಲಿಗೆ ಈ ಇಲಾಖೆಗೆ ಬಿಡುಗಡೆಯಾದ ಆಯವ್ಯಯದ ವಿವರ ಈ ಕೆಳಕಂಡಂತೆ ಇರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ		ಆಯವ್ಯಯ ವಂಟನೆ	
			ಯೋಜನೆ	ಯೋಜನೇತರ
101	ಸಹಕಾರ ಸಂಸ್ಥೆಗಳ ಲೆಕ್ಕಪರಿಶೋಧನೆ			
	2425–00–101–0–01			
	01	ಸಿಬ್ಬಂದಿ		
1.	002	ವೇತನ – ಅಧಿಕಾರಿಗಳು	8.95	279.26

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ		ಆಯವ್ಯಯ ವಂಚನೆ	
			ಯೋಜನೆ	ಯೋಜನೇತರ
2.	003	ವೇತನ - ಸಿಬ್ಬಂದಿ	16.47	1339.75
3.	011	ತುಟ್ಟಿಭತ್ಯೆ	17.79	1133.30
4.	014	ಇತರೆ ಭತ್ಯೆ	8.85	318.32
5.	015	ಪೂರಕ ವೆಚ್ಚಗಳು	–	2.16
6.	020	ವೈದ್ಯಕೀಯ ವೆಚ್ಚಗಳು	0.08	5.60
7.	021	ವೈದ್ಯಕೀಯ ವೆಚ್ಚ ಮರುಪಾವತಿ	1.00	22.00
8.	041	ಪ್ರಯಾಣ ವೆಚ್ಚಗಳು	1.00	169.00
9.	051	ಸಾಮಾನ್ಯ ವೆಚ್ಚಗಳು	15.86	55.00
10.	052	ದೂರವಾಣಿ ವೆಚ್ಚಗಳು	–	5.88
11.	071	ಕಟ್ಟಡ ವೆಚ್ಚಗಳು	–	58.88
12.	125	ಆಧುನೀಕರಣ	–	20.00
13.	195	ಸಾರಿಗೆ ವೆಚ್ಚಗಳು	–	30.00
		ಒಟ್ಟು	**70.00**	**3439.15**

4(1)(ಬಿ)(xii)

ಸಹಾಯ ಧನ ಕಾರ್ಯಕ್ರಮ ಕಾರ್ಯಗತಗೊಳಿಸುವ ವಿಧಾನ, ಹಂಚಿಕೆ ಮಾಡಿದ ಮೊತ್ತ ಸೇರಿದಂತೆ ಹಾಗೂ ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು:

--------------------- ಇರುವುದಿಲ್ಲ. ---------------------

4(1)(ಬಿ)(xiii)

ಇಲಾಖೆ ಮಂಜೂರು ಮಾಡಿದ ರಿಯಾಯಿತಿಗಳು, ಪರ್ಮಿಟ್‌ಗಳು ಅಥವಾ ಅಧಿಕಾರ ಪತ್ರದ ಸ್ವೀಕೃತಿದಾರರ ವಿವರ:

--------------------- ಇರುವುದಿಲ್ಲ. ---------------------

4(1)(ಬಿ)(xiv)

ವಿದ್ಯುನ್ಮಾನ ರೂಪದಲ್ಲಿ ಇಲಾಖೆ ಹೊಂದಿರುವ ಅಥವಾ ಲಭ್ಯವಿರುವ ಮಾಹಿತಿಗಳು:

ಹಾಲಿ ಇಲಾಖೆಯ ಕೆಲಸ ಕಾರ್ಯಗಳು ಗಣಕೀಕರಣಗೊಂಡಿರುವುದಿಲ್ಲ. ಇದರಂತೆ ಯಾವುದೇ ಮಾಹಿತಿ ವಿದ್ಯುನ್ಮಾನ ರೂಪದಲ್ಲಿ ಲಭ್ಯವಿಲ್ಲ ಅಥವಾ ಹೊಂದಿರುವುದಿಲ್ಲ. ಇಲಾಖೆಯ ಸಂಕ್ಷಿಪ್ತ ಮಾಹಿತಿ ಹಾಗೂ ಲೆಕ್ಕಪರಿಶೋಧನಾ ಫಲಿತಾಂಶ ಆಧರಿಸಿದ ಸಹಕಾರ ಸಂಘಗಳ ಕಾರ್ಯನಿರ್ವಹಣೆಯ ಸಂಕ್ಷಿಪ್ತ ರೂಪವನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲು ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ (N.I.C.), ಬೆಂಗಳೂರು ರವರ ಸಹಯೋಗದಿಂದ ಇಲಾಖೆ **"ಸಹಕಾರ ದರ್ಪಣ"** ಎಂಬ ವೆಬ್‌ಸೈಟ್ ಅಭಿವೃದ್ಧಿ ಪಡಿಸಿದೆ. ಇಲಾಖೆಯ ವೆಬ್‌ಸೈಟ್ ಬಗ್ಗೆ ಈ ಕೆಳಕಂಡ ವಿಳಾಸಕ್ಕೆ ಭೇಟಿ ನೀಡಿ.

http://sahakaradarpana.kar.nic.in

4(1)(ಬಿ)(xv)

ಮಾಹಿತಿ ಪಡೆಯಲು ನಾಗರೀಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು , ಗ್ರಂಥಾಲಯ ಅಥವಾ ಓದುವ ಕೊಠಡಿ ನಿರ್ವಹಿಸಿದ್ದರೆ ಕೆಲಸದ ವೇಳೆಯೊಂದಿಗೆ

ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಂಥಾಲಯ ಅಥವಾ ವಾಚನಾಲಯವನ್ನು ಕಛೇರಿ ಹೊಂದಿರುವುದಿಲ್ಲ. ಸಾರ್ವಜನಿಕರು ಸಾಮಾನ್ಯ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕಛೇರಿ ಮುಖ್ಯಸ್ಥರಿಂದ/ಸಿಬ್ಬಂದಿಯವರಿಂದ ಪಡೆಯಲು ಅವಕಾಶ ಇರುತ್ತದೆ.

4(1)(ಬಿ)(xvi)

ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ, ರಾಜ್ಯ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಅಪೀಲು ವಿಚಾರಣಾ ಪ್ರಾಧಿಕಾರಿಯ ಪದನಾಮ ಮತ್ತು ಇತರೆ ವಿವರಗಳು ಈ ಕೆಳಕಂಡಂತಿದ್ದು, ಇವರುಗಳನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ, ನಂ.17, ಜಯನಿವಾಸ, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು-560 004, ಈ ವಿಳಾಸದಲ್ಲಿ ಸಂಪರ್ಕಿಸಬಹುದು.

ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳು	ರಾಜ್ಯ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ	ಅಪೀಲು ವಿಚಾರಣಾ ಪ್ರಾಧಿಕಾರಿ
ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು, ದೂ.ಸಂ.: 26604493 (ಆಡಳಿತ ಮತ್ತು ಸಿಬ್ಬಂದಿ), ಕೇಂದ್ರ ಕಛೇರಿ, ಬೆಂಗಳೂರು. (ಆಡಳಿತ ಮತ್ತು ಸಿಬ್ಬಂದಿ ವಿಷಯಕ್ಕೆ ಸಂಬಂಧಿಸಿದಂತೆ)	1. ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು (ಆಡಳಿತ ಮತ್ತು ಸಿಬ್ಬಂದಿ), ದೂ.ಸಂ.: 26610610 (ಆಡಳಿತ ಮತ್ತು ಸಿಬ್ಬಂದಿವಿಷಯಕ್ಕೆ ಸಂಬಂಧಿಸಿದಂತೆ) 2. ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು (ಲೆಕ್ಕ ಮತ್ತು ಆಯವ್ಯಯ), ದೂ.ಸಂ.: 26610610 (ಲೆಕ್ಕ ಮತ್ತು ಆಯವ್ಯಯ ವಿಷಯಕ್ಕೆ ಸಂಬಂಧಿಸಿದಂತೆ)	ಸಹಕಾರ ಸಂಘಗಳ ಲೆಕ್ಕಪರಿ ಶೋಧನಾ ಜಂಟಿ ನಿರ್ದೇಶಕರು (ಆಡಳಿತ ಮತ್ತು ಸಿಬ್ಬಂದಿ), ದೂ.ಸಂ.: 26610610 (ಆಡಳಿತ ಮತ್ತು ಸಿಬ್ಬಂದಿ, ಲೆಕ್ಕ ಮತ್ತು ಆಯವ್ಯಯ ಮತ್ತು ನಿರ್ದೇಶಕರ ಪತ್ರಾಂಕಿತ ಆಪ್ತ ಶಾಖೆಯ ವಿಷಯಕ್ಕೆ ಸಂಬಂಧಿಸಿದಂತೆ)
ನಿರ್ದೇಶಕರ ಪತ್ರಾಂಕಿತ ಆಪ್ತ ಸಹಾಯಕರು ದೂ.ಸಂ.: 26610326 (ನಿರ್ದೇಶಕರ ಆಪ್ತ ಶಾಖೆಗೆ ಸಂಬಂಧಿಸಿದಂತೆ)	1. ನಿರ್ದೇಶಕರ ಪತ್ರಾಂಕಿತ ಆಪ್ತ ಶಾಖೆಯ ಶೀಘ್ರಲಿಪಿಗಾರರು / ದ್ವಿತೀಯ ದರ್ಜೆ ಸಹಾಯಕರು, ದೂ.ಸಂ.: 26610326	
ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು (ಲೆಕ್ಕಪರಿಶೋಧನೆ) ದೂ.ಸಂ.: 26604493 (ಲೆಕ್ಕಪರಿಶೋಧನೆ–1 ವಿಷಯಕ್ಕೆ ಸಂಬಂಧಿಸಿದಂತೆ)	1. ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು (ಲೆಕ್ಕಪರಿಶೋಧನೆ–1), ದೂ.ಸಂ.: 26608579 (ಲೆಕ್ಕಪರಿಶೋಧನೆ–1 ವಿಷಯಕ್ಕೆ ಸಂಬಂಧಿಸಿದಂತೆ)	ಸಹಕಾರ ಸಂಘಗಳ ಲೆಕ್ಕಪರಿ ಶೋಧನಾ ಜಂಟಿ ನಿರ್ದೇಶಕರು (ಲೆಕ್ಕಪರಿಶೋಧನೆ–1), ದೂ.ಸಂ.: 26610372 (ಲೆಕ್ಕಪರಿಶೋಧನೆ–1 ವಿಷಯಕ್ಕೆ ಸಂಬಂಧಿಸಿದಂತೆ).
ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು (ಲೆಕ್ಕಪರಿಶೋಧನೆ–2) ದೂ.ಸಂ.: 26608579 (ಲೆಕ್ಕಪರಿಶೋಧನೆ–2 ವಿಷಯಕ್ಕೆ ಸಂಬಂಧಿಸಿದಂತೆ)	1. ಸಹಕಾರ ಸಂಘಗಳ ಹಿರಿಯ ಲೆಕ್ಕ ಪರಿಶೋಧಕರು (ಲೆಕ್ಕಪರಿಶೋಧನೆ–2), ದೂ.ಸಂ.: 26608579 (ಲೆಕ್ಕಪರಿಶೋಧನೆ–2ವಿಷಯಕ್ಕೆ ಸಂಬಂಧಿಸಿದಂತೆ)	ಸಹಕಾರ ಸಂಘಗಳ ಲೆಕ್ಕಪರಿ ಶೋಧನಾ ಜಂಟಿ ನಿರ್ದೇಶಕರು (ಲೆಕ್ಕಪರಿಶೋಧನೆ–2), ದೂ.ಸಂ.: 26604491 (ಲೆಕ್ಕಪರಿಶೋಧನೆ–2 ವಿಷಯಕ್ಕೆ ಸಂಬಂಧಿಸಿದಂತೆ).
ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು (ತನಿಖೆ ಮತ್ತುಪರಿಶೀಲನಾ ಘಟಕ) ದೂ.ಸಂ.: 26604502 (ತನಿಖಾ ಮತ್ತುಪರಿಶೀಲನಾ ಘಟಕದ ವಿಷಯಕ್ಕೆ ಸಂಬಂಧಿಸಿದಂತೆ)	1. ಸಹಕಾರ ಸಂಘಗಳ ಲೆಕ್ಕಪರಿ ಶೋಧನಾ ಸಹಾಯಕ ನಿರ್ದೇಶಕರು –1 (ತನಿಖೆ ಮತ್ತು ಪರಿಶೀಲನಾ ಘಟಕ), ದೂ.ಸಂ.: 26507307 (ತನಿಖೆ ಮತ್ತು ಪರಿಶೀಲನಾ ಘಟಕದ ವಿಷಯಕ್ಕೆ ಸಂಬಂಧಿಸಿದಂತೆ) 2. ಸಹಕಾರ ಸಂಘಗಳ ಲೆಕ್ಕಪರಿ ಶೋಧನಾ ಸಹಾಯಕ ನಿರ್ದೇಶಕರು –2 (ತನಿಖೆ ಮತ್ತು ಪರಿಶೀಲನಾ ಘಟಕ), ದೂ.ಸಂ.: 26507307 (ತನಿಖೆ ಮತ್ತು ಪರಿಶೀಲನಾ ಘಟಕದ ವಿಷಯಕ್ಕೆ ಸಂಬಂಧಿಸಿದಂತೆ)	ಸಹಕಾರ ಸಂಘಗಳ ಲೆಕ್ಕಪರಿ ಶೋಧನಾ ಜಂಟಿ ನಿರ್ದೇಶಕರು (ತನಿಖೆ ಮತ್ತು ಪರಿಶೀಲನಾ ಘಟಕ), ದೂ.ಸಂ.: 26507307 (ತನಿಖೆ ಮತ್ತು ಪರಿಶೀಲನಾ ಘಟಕ ಶಾಖೆಯ ವಿಷಯಕ್ಕೆ ಸಂಬಂಧಿಸಿದಂತೆ).

4(1)(ಬಿ)(xvii)

ನಿಗದಿಪಡಿಸಿದ ಇತರೆ ಮಾಹಿತಿಗಳು

ನಿರ್ದೇಶನಾಲಯದಲ್ಲಿ ಸಾರ್ವಜನಿಕ ಕುಂದುಕೊರತೆಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು (ತನಿಖೆ ಮತ್ತು ಪರಿಶೀಲನಾ ಘಟಕ), ಇವರನ್ನು ಜನಸ್ಪಂದನಾ ಕೋಶದ ಸಾರ್ವಜನಿಕ ಕುಂದುಕೊರತೆ ನಿವಾರಣಾ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 ರಂತೆ ಕಂಡಿಕೆ (4)(1)(ಬಿ)(xvi) ರಲ್ಲಿ ತಿಳಿಸಿದ ಅಧಿಕಾರಿಗಳನ್ನು ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ, ರಾಜ್ಯ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಅಪೀಲು ವಿಚಾರಣಾ ಪ್ರಾಧಿಕಾರಿಯನ್ನಾಗಿ ಗೊತ್ತುಪಡಿಸಲಾಗಿದೆ. ನಿರ್ದೇಶನಾಲಯದಲ್ಲಿ ಮಹಿಳಾ ಉದ್ಯೋಗಿಗಳ ಕುಂದುಕೊರತೆ ನಿವಾರಣಾ ಸಮಿತಿ ರಚಿಸಲಾಗಿದ್ದು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು (ಲೆಕ್ಕಪರಿಶೋಧನೆ–1), ಇವರನ್ನು ಅಧ್ಯಕ್ಷರನ್ನಾಗಿ ನೇಮಕಾತಿ ಮಾಡಲಾಗಿದೆ. ನಿರ್ದೇಶನಾಲಯದಲ್ಲಿ ಪ್ರತಿ ತಿಂಗಳ ಮೊದಲನೇ ಹಾಗೂ ಮೂರನೇ ಶನಿವಾರವನ್ನು ಸಾರ್ವಜನಿಕ ಕುಂದುಕೊರತೆ ನಿವಾರಣಾ ದಿನವನ್ನಾಗಿ ನಿಗದಿಪಡಿಸಲಾಗಿದ್ದು, ಸಂಬಂಧಿತ ಜಂಟಿ ನಿರ್ದೇಶಕರು ಸಾರ್ವಜನಿಕ ಕುಂದು ಕೊರತೆಗಳನ್ನು ಆಲಿಸುತ್ತಾರೆ.

ಸಹಕಾರ ಸಂಘಗಳ ಲೆಕ್ಕಪರಿಶೋಧನಾ
ಉಪ ನಿರ್ದೇಶಕರು (ಆಡಳಿತ ಮತ್ತು ಸಿಬ್ಬಂದಿ)
ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ,
ಬೆಂಗಳೂರು ಹಾಗೂ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ.

ಪಿ.ಆರ್.588

ಕರ್ನಾಟಕ ವಿಧಾನಸಭೆ

ವಿಧಾನಸಭೆಯ ಸಚಿವಾಲಯ, ಅಂಚೆ ಪೆಟ್ಟಿಗೆ ನಂ.5074, ವಿಧಾನಸೌಧ, ಬೆಂಗಳೂರು-560 233

ಸಂಖ್ಯೆ: ವಿಸಸ/ಶಾರಶಾ/24/ಸಿಎ/2011, ಬೆಂಗಳೂರು, ದಿನಾಂಕ:26.05.2011

ವಿಷಯ: ವಿಧಾನಸಭಾ ಸದಸ್ಯರ ವಿಳಾಸದ ಬದಲಾವಣೆ.

ಬಸವನಬಾಗೇವಾಡಿ ವಿಧಾನಸಭಾ ಕ್ಷೇತ್ರದ ಮಾನ್ಯ ಸದಸ್ಯರಾದ ಶ್ರೀ ಎಸ್.ಕೆ. ಬೆಳ್ಳುಬ್ಬಿ ಅವರು ಕೆಳಕಂಡಂತೆ ತಮ್ಮ ವಿಳಾಸವನ್ನು ಬದಲಾಯಿಸಿರುತ್ತಾರೆ.

ಶ್ರೀ ಎಸ್.ಕೆ. ಬೆಳ್ಳುಬ್ಬಿ

ವಿಧಾನಸಭಾ ಸದಸ್ಯರು, ನಂ.15, 3ನೇ ಮುಖ್ಯರಸ್ತೆ, ಎಫ್.ಎಂ.ಸಿಲ್ಕ್ ಎದುರು, 3ನೇ ಬ್ಲಾಕ್, ಆರ್.ಎಂ.ವಿ. 2ನೇ ಹಂತ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-560 010.

ಆದಕಾರಣ, ಮಾನ್ಯ ಸದಸ್ಯರಿಗೆ ಇನ್ನು ಮುಂದೆ ಕಳುಹಿಸಲಾಗುವ ಎಲ್ಲಾ ಕಾಗದ ಪತ್ರಗಳನ್ನು ಮೇಲ್ಕಂಡ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದು ಕೋರಲು ನಿರ್ದೇಶಿತನಾಗಿದ್ದೇನೆ.

ಕೆ.ಸಿ. ಗೋಪಿಕೃಷ್ಣ
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

ಪಿ.ಆರ್.594

ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಉತ್ತರ ಕನ್ನಡ ಜಿಲ್ಲೆ, ಕಾರವಾರ

ಅಧಿಸೂಚನೆ

ಸಂಖ್ಯೆ: ವಿಷಯ ಸಂಖ್ಯೆ-11: ಉ.ಕ: 2010-11, ದಿನಾಂಕ:24.03.2011

ಉತ್ತರ ಕನ್ನಡ ಜಿಲ್ಲೆಯ ಪ್ರಾದೇಶಿಕ ಪ್ರಾಧಿಕಾರವು ಪ್ರಯಾಣಿಕರ ಆಟೋರಿಕ್ಷಾ ಪ್ರಯಾಣದರ (ಬಾಡಿಗೆ ದರ) ಪರಿಷ್ಕರಿಸಲು ದಿನಾಂಕ:09.03.2011ರ ಪ್ರಾಧಿಕಾರದ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಹಾಲಿ ಆಟೋರಿಕ್ಷಾ ಪ್ರಯಾಣಿಕರ ಬಾಡಿಗೆ ನಿಗದಿ ಪಡಿಸಿದ ದರವನ್ನು ಉತ್ತರ ಕನ್ನಡ ಜಿಲ್ಲೆಯಾದ್ಯಂತ ವಿಧಿಸಲು ತೀರ್ಮಾನಿಸಿ, ಕಾರ್ಯದರ್ಶಿಗಳಿಗೆ ಮಂಗಳೂರು ಪ್ರಾಧಿಕಾರದಿಂದ ಆಟೋರಿಕ್ಷಾ ಪ್ರಯಾಣದ ಬಾಡಿಗೆ ದರವನ್ನು ಪಡೆದು ಕ್ರಮ ಜರುಗಿಸಲು ಸೂಚಿಸಲಾಗಿತ್ತು.

ಕಾರ್ಯದರ್ಶಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಉತ್ತರ ಕನ್ನಡ ಇವರು ದಕ್ಷಿಣ ಕನ್ನಡ ಜಿಲ್ಲೆಯ ಆಟೋರಿಕ್ಷಾ ಪ್ರಯಾಣದರ ವಿವರಗಳನ್ನು ಸಲ್ಲಿಸಿದ್ದು, ಸದರಿ ಆಟೋರಿಕ್ಷಾ ಪ್ರಯಾಣದರಗಳನ್ನು ಪರಿಷ್ಕರಿಸಿ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಈ ಕೆಳಗಿನಂತೆ ದಿನಾಂಕ:01.04.2011 ರಿಂದ ಜಾರಿಗೆ ತರಲಾಗಿದೆ.

1. ಪ್ರತಿ ಕಿ.ಮೀ. ದರ (ಮೂರು ಪ್ರಯಾಣಿಕರಿಗೆ)	: ರೂ. 11/-
2. ಕನಿಷ್ಠ ದರ ಮೊದಲ 1.5 ಕಿ.ಮೀ.	: ರೂ.15/-
3. ಕಾಯುವ ದರಗಳು: ಮೊದಲ 15 ನಿಮಿಷ ಉಚಿತ, ನಂತರ ಪ್ರತಿ 45 ನಿಮಿಷದವರೆಗೆ	: ಪ್ರಯಾಣದರದ 25%
4. ಲಗೇಜು ದರ: ಮೊದಲ 20 ಕಿ.ಗ್ರಾಂ ಉಚಿತ, ನಂತರ ಪ್ರತಿ 20 ಕಿ.ಗ್ರಾಂ ಅಥವಾ ಭಾಗಕ್ಕೆ	: ರೂ. 02/-
5. ರಾತ್ರಿ ವೇಳೆ ದರ: ರಾತ್ರಿ 10 ಗಂಟೆಯ ನಂತರ ಬೆಳಿಗ್ಗೆ 5 ಗಂಟೆಯ ಒಳಗೆ	: ಸಾಮಾನ್ಯ ದರದ ಒಂದೂವರೆ ಪಟ್ಟು

ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟ ದರದ ಪಟ್ಟಿಯನ್ನು ಪ್ರತಿಯೊಂದು ಆಟೋರಿಕ್ಷಾಗಳಲ್ಲಿಯು ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಬೇಕು.

ಅಧ್ಯಕ್ಷರು
ಪ್ರಾದೇಶಿಕ ಸಾರಿಗೆ ಪ್ರಾಧಿಕಾರ,
ಹಾಗೂ ಜಿಲ್ಲಾಧಿಕಾರಿಗಳು, ಉ.ಕ. ಕಾರವಾರ.

ಪಿ.ಆರ್.580

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ ತುಮಕೂರು ಜಿಲ್ಲೆ ತುಮಕೂರು, 2ನೇ ಮಹಡಿ, ಮಿನಿವಿಧಾನಸೌಧ, ತುಮಕೂರು ಇವರ ಕಾರ್ಯಾಲಯದ ನಡವಳಿಕೆಗಳು

ವಿಷಯ: ಸ್ಥಗಿತ ಗೊಂಡಿರುವ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕೊತ್ತಗೆರೆ ಪಾಳ್ಯ, ಕುಣಿಗಲ್ ತಾಲ್ಲೂಕು, ಇದನ್ನು ಸಮಾಪನೆಗೊಳಿಸಿ ಆದೇಶ ನೀಡುವ ವಿಚಾರ.

ಉಲ್ಲೇಖ: ಸಹಕಾರ ಸಂಘಗಳ ಸಹಾಯಕ ನಿಬಂಧಕರು ತುಮಕೂರು ಉಪವಿಭಾಗ ತುಮಕೂರು ಇವರ ಪತ್ರ ಸಂಖ್ಯೆ.ಸನಿ-32/ಸಮಾಪನೆ/ಸಿಆರ್-28/2009-10, ದಿನಾಂಕ:04-01-2010.

ಪ್ರಸ್ತಾವನೆ :

ಸ್ಥಗಿತಗೊಂಡಿರುವ ಕೊತ್ತಗೆರೆಪಾಳ್ಯ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕೊತ್ತಗೆರೆಪಾಳ್ಯ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ, ಈ ಸಹಕಾರ ಸಂಘವು ಕ್ರಮಸಂಖ್ಯೆ: ಎಆರ್‌ಟಿ/23386/1997-98, ದಿನಾಂಕ:25-11-1997 ರಲ್ಲಿ ಸಹಾಯಕ ನಿಬಂಧಕರು ತುಮಕೂರು ಉಪ-ವಿಭಾಗ ತುಮಕೂರು ಇವರಿಂದ ನೋಂದಣಿಯಾಗಿರುತ್ತದೆ. ಇದರ ಆಡಳಿತ ವ್ಯಾಪ್ತಿಯು ತಾಲ್ಲೂಕು ಮಟ್ಟಕ್ಕಿಂತ ಕಡಿಮೆಯುಳ್ಳದ್ದಾಗಿರುತ್ತದೆ. ಸದರಿ ಸಂಘದ ಕಾರ್ಯಚಟುವಟಿಕೆಗಳು 03 ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಕಾರಣ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರ ಕಲಂ 72 (2) (ಬಿ)ಯ ಪ್ರಕಾರ ಸಂಘವನ್ನು ಸಮಾಪನೆಗೊಳಿಸಿ ಆದೇಶ ನೀಡುವಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ತುಮಕೂರು ಉಪವಿಭಾಗ ತುಮಕೂರು ರವರು ಉಲ್ಲೇಖ (1) ರ ರೀತ್ಯಾ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಅದರಂತೆ ಸದರಿ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ, ಆಡಳಿತ ಮಂಡಳಿ ಅಸ್ತಿತ್ವದಲ್ಲಿಲ್ಲದ ಕಾರಣ ಹಾಗೂ ಸಂಘದ ಸದಸ್ಯರುಗಳಿಂದಾಗಲೀ, ಸಾರ್ವಜನಿಕರುಗಳಿಂದಾಗಲೀ, ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ. ಪ್ರಯುಕ್ತ ಸಂಘವನ್ನು ಮುಂದುವರಿಸಿಕೊಂಡು ಹೋಗಲು ಆಸಕ್ತಿ ಇಲ್ಲವೆಂದು ಅಭಿಪ್ರಾಯಪಡುತ್ತಾ, ಈ ಕೆಳಕಂಡಂತೆ ಆದೇಶ ನೀಡಿದೆ.

-:ಆ ದೇ ಶ :-

ನಂ.ಡಿಆರ್‌ಟಿ/ಎಲ್‌ಕ್ಯೂಡಿ/ಸಿಆರ್-05/2010-11, ದಿನಾಂಕ:28-10-2010.

ಆರ್.ಲೋಕೇಶ್. ಕೆ.ಸಿ.ಎಸ್. ಸಹಕಾರ ಸಂಘಗಳ ಉಪನಿಬಂಧಕರು ತುಮಕೂರು ಜಿಲ್ಲೆ ತುಮಕೂರು, ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರ ಕಲಂ 72(2)(ಬಿ) ಹಾಗೂ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಓ/201/ಸಿಎಲ್ಎಂ/2008. ದಿನಾಂಕ:27-05-2010ರಲ್ಲಿ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ, ಕೊತ್ತಗೆರೆಪಾಳ್ಯ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕೊತ್ತಗೆರೆಪಾಳ್ಯ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ, ಇದನ್ನು ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿಗಳು ಕುಣಿಗಲ್ ಇವರನ್ನು ಋಣಸಮಾಪನಾಧಿಕಾರಿಯನ್ನಾಗಿ ನೇಮಕಮಾಡಿ ಆದೇಶಿಸಿರುತ್ತೇನೆ.

ಋಣಸಮಾಪನಾಧಿಕಾರಿಗಳು ಸಂಘದ ಪೂರ್ಣಪ್ರಭಾರವನ್ನು ಸಂಬಂಧಪಟ್ಟವರಿಂದ ವಹಿಸಿಕೊಂಡು ಪ್ರಭಾರ ಪಟ್ಟಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಹಾಗೂ ಸಂಘದ ಲೆಕ್ಕ ಪರಿಶೋಧನಾ ವರದಿಯಂತೆ ಅಥವಾ ಸಂಘದ ಆಸ್ತಿ-ಜವಾಬ್ದಾರಿ ತ:ಖ್ತೆಯ ರೀತ್ಯಾ ಆಸ್ತಿ-ಜವಾಬ್ದಾರಿಯನ್ನು ವಿಲೇವಾರಿ ಮಾಡಲು ಆದ್ಯತಾ ಪಟ್ಟಿಯ ಮೂರು ಪ್ರತಿಗಳನ್ನು ಈ ಕಛೇರಿಗೆ ಅನುಮೋದನೆಗೆ ಸಲ್ಲಿಸಿ, ಅನುಮೋದನೆ ಪಡೆದು ಆದ್ಯತೆಮೇರೆಗೆ ವಿಲೇವಾರಿಮಾಡಿ, ಸಂಘದ ನೊಂದಣಿ ರದ್ದತಿಗೆ ಪ್ರಸ್ತಾವೆಯನ್ನು ಸಲ್ಲಿಸುವಂತೆ ಆದೇಶಿಸಿದೆ.

ಈ ಆದೇಶವನ್ನು ನನ್ನ ಸಹಿ ಹಾಗೂ ಕಚೇರಿಯ ಮುದ್ರೆಯೊಂದಿಗೆ ದಿನಾಂಕ:28-10-2010ರಂದು ನೀಡಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು,

ಪಿ.ಆರ್. 1650 ತುಮಕೂರು ಜಿಲ್ಲೆ ತುಮಕೂರು.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ ತುಮಕೂರು ಜಿಲ್ಲೆ ತುಮಕೂರು, 2ನೇ ಮಹಡಿ, ಮಿನಿವಿಧಾನಸೌಧ, ತುಮಕೂರು ಇವರ ಕಾರ್ಯಾಲಯದ ನಡವಳಿಕೆಗಳು

ವಿಷಯ: ಸ್ಥಗಿತ ಗೊಂಡಿರುವ ಸಣಬ ಬಳಕೆದಾರರ ಸಹಕಾರ ಸಂಘ ನಿ., ಸಣಬ, ಕುಣಿಗಲ್ ತಾಲ್ಲೂಕು, ಇದನ್ನು ಸಮಾಪನೆಗೊಳಿಸಿ ಆದೇಶ ನೀಡುವ ವಿಚಾರ.

ಉಲ್ಲೇಖ: 1. ಸಹಕಾರ ಸಂಘಗಳ ಸಹಾಯಕ ನಿಬಂಧಕರು ತುಮಕೂರು ಉಪವಿಭಾಗ ತುಮಕೂರು ಇವರ ಪತ್ರ ಸಂಖ್ಯೆ.ಸನಿ-32/ಸಮಾಪನೆ/ಸಿಆರ್-28/2010-11, ದಿನಾಂಕ:13-01-2010.

ಪ್ರಸ್ತಾವನೆ :

ಸ್ಥಗಿತಗೊಂಡಿರುವ ಸಣಬ ಬಳಕೆದಾರರ ಸಹಕಾರ ಸಂಘ ನಿ., ಸಣಬ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ, ಈ ಸಹಕಾರ ಸಂಘವು ಕ್ರಮಸಂಖ್ಯೆ: ಎಆರ್‌ಟಿ/ಆರ್‌ಸಿಎಸ್/29986/1973-74, ದಿನಾಂಕ:25-06-1974 ರಲ್ಲಿ ಸಹಾಯಕ ನಿಬಂಧಕರು ತುಮಕೂರು ಉಪ-ವಿಭಾಗ ತುಮಕೂರು ಇವರಿಂದ ನೊಂದಣಿಯಾಗಿರುತ್ತದೆ. ಇದರ ಆಡಳಿತ ವ್ಯಾಪ್ತಿಯು ತಾಲ್ಲೂಕು ಮಟ್ಟಕ್ಕಿಂತ ಕಡಿಮೆಯುಳ್ಳದ್ದಾಗಿರುತ್ತದೆ. ಸದರಿ ಸಂಘದ ಕಾರ್ಯಚಟುವಟಿಕೆಗಳು 13 (1997-98) ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಕಾರಣ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರ ಕಲಂ 72 (2) (ಬಿ)ಯ ಪ್ರಕಾರ ಸಂಘವನ್ನು ಸಮಾಪನೆಗೊಳಿಸಿ ಆದೇಶ ನೀಡುವಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ತುಮಕೂರು ಉಪವಿಭಾಗ ತುಮಕೂರು ರವರು ಉಲ್ಲೇಖ (1) ರ ರೀತ್ಯಾ ಕೋರಿ ಪ್ರಸ್ತಾವೆಯನ್ನು ಸಲ್ಲಿಸಿರುತ್ತಾರೆ.

ಅದರಂತೆ ಸದರಿ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ, ಆಡಳಿತ ಮಂಡಳಿ ಅಸ್ತಿತ್ವದಲ್ಲಿಲ್ಲದ ಕಾರಣ ಹಾಗೂ ಸಂಘದ ಸದಸ್ಯರುಗಳಿಂದಾಗಲೀ, ಸಾರ್ವಜನಿಕರುಗಳಿಂದಾಗಲೀ, ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ. ಪ್ರಯುಕ್ತ ಸಂಘವನ್ನು ಮುಂದುವರಿಸಿಕೊಂಡು ಹೋಗಲು ಆಸಕ್ತಿ ಇಲ್ಲವೆಂದು ಅಭಿಪ್ರಾಯಪಡುತ್ತಾ, ಈ ಕೆಳಕಂಡಂತೆ ಆದೇಶ ನೀಡಿದೆ.

-: ಆ ದೇ ಶ :-

ನಂ.ಡಿಆರ್‌ಟಿ/ಎಲ್‌ಕ್ಯೂಡಿ/ಸಿಆರ್-06/2010-11,ದಿನಾಂಕ:28-10-2010.

ಆರ್.ಲೋಕೇಶ್. ಕೆ.ಸಿ.ಎಸ್. ಸಹಕಾರ ಸಂಘಗಳ ಉಪನಿಬಂಧಕರು ತುಮಕೂರು ಜಿಲ್ಲೆ ತುಮಕೂರು, ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರ ಕಲಂ 72(2)(ಬಿ) ಹಾಗೂ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಒ/201/ಸಿಎಲ್ಎಂ/2008. ದಿನಾಂಕ:27-05-2010ರಲ್ಲಿ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ, ಸಣಬ ಬಳಕೆದಾರರ ಸಹಕಾರ ಸಂಘ ನಿ., ಸಣಬ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ, ಇದನ್ನು ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿಗಳು ಕುಣಿಗಲ್ ಇವರನ್ನು ಋಣಸಮಾಪನಾಧಿಕಾರಿಯನ್ನಾಗಿ ನೇಮಕಮಾಡಿ ಆದೇಶಿಸಿರುತ್ತೇನೆ.

ಋಣಸಮಾಪನಾಧಿಕಾರಿಗಳು ಸಂಘದ ಪೂರ್ಣಪ್ರಭಾರವನ್ನು ಸಂಬಂಧಪಟ್ಟವರಿಂದ ವಹಿಸಿಕೊಂಡು ಪ್ರಭಾರ ಪಟ್ಟಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಹಾಗೂ ಸಂಘದ ಲೆಕ್ಕ ಪರಿಶೋಧನಾ ವರದಿಯಂತೆ ಅಥವಾ ಸಂಘದ ಆಸ್ತಿ-ಜವಾಬ್ದಾರಿ ತ:ಖ್ತೆಯ ರೀತ್ಯಾ ಆಸ್ತಿ-ಜವಾಬ್ದಾರಿಯನ್ನು ವಿಲೇವಾರಿ ಮಾಡಲು ಅದ್ಯತಾ ಪಟ್ಟಿಯ ಮೂರು ಪ್ರತಿಗಳನ್ನು ಈ ಕಛೇರಿಗೆ ಅನುಮೋದನೆಗೆ ಸಲ್ಲಿಸಿ, ಅನುಮೋದನೆ ಪಡೆದು ಆದ್ಯತೆಮೇರೆಗೆ ವಿಲೇವಾರಿಮಾಡಿ. ಸಂಘದ ನೊಂದಣಿ ರದ್ದತಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆದೇಶಿಸಿದೆ.

ಈ ಆದೇಶವನ್ನು ನನ್ನ ಸಹಿ ಹಾಗೂ ಕಚೇರಿಯ ಮುದ್ರೆಯೊಂದಿಗೆ ದಿನಾಂಕ:28-10-2010ರಂದು ನೀಡಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು,
ತುಮಕೂರು ಜಿಲ್ಲೆ ತುಮಕೂರು.

ಪಿ.ಆರ್. 1651

ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಕೇಂದ್ರ ಕಛೇರಿ, ಬೆಂಗಳೂರು ಇವರ ನಡವಳಿಗಳು

ವಿಷಯ: ಸಮಾಪನೆಯಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆ ಪೊಲೀಸ್ ಇಲಾಖೆ, ನೌಕರರ ಗ್ರಾಹಕರ ಸಹಕಾರ ಸಂಘ ನಿಯಮಿತ, ಮಂಗಳೂರು. ಈ ಸಂಘದ ನೊಂದಣಿ ರದ್ದುಗೊಳಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಸಮಾಪನಾ ಆದೇಶದ ಸಂಖ್ಯೆ.ಆರ್.ಸಿ.ಎಸ್ಎಲ್‌ಕ್ಯೂಡಿ 75/2005-06, ದಿನಾಂಕ:17-09-2005.
2. ಜಂಟಿ ನಿಬಂಧಕರು, ಮೈಸೂರು ಇವರ ಪತ್ರ ಸಂಖ್ಯೆ ಜೆ.ಆರ್. ಎಂ.ಎಸ್.10 ಸಮಾಪನೆ ನೋಂ.07/06-07. ದಿನಾಂಕ:21-10-2010.

ಪ್ರಸ್ತಾವನೆ :

ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಇಲಾಖೆ ನೌಕರರ ಗ್ರಾಹಕರ ಸಹಕಾರ ಸಂಘ ನಿಯಮಿತ, ಮಂಗಳೂರು ಈ ಸಂಘವು ಸಂಖ್ಯೆ:92387 ದಿನಾಂಕ: 31-1-1988ರಲ್ಲಿ ನೋಂದಣಿಯಾಗಿದ್ದು ಇದರ ಕಾರ್ಯವ್ಯಾಪ್ತಿಯು ಜಿಲ್ಲಾ ಮಟ್ಟದ್ದಾಗಿರುತ್ತದೆ. ಈ ಸಂಘವು ಹಲವಾರು ವರ್ಷಗಳಿಂದ ಯಾವುದೇ ಕೆಲಸವನ್ನು ನಿರ್ವಹಿಸದೇ ಸ್ಥಗಿತಗೊಂಡಿದ್ದ ಕಾರಣ ಉಲ್ಲೇಖ(1) ರ ಈ ಕಛೇರಿಯ ಆದೇಶದಂತೆ ಸಂಘವನ್ನು ಸಮಾಪನೆಗೊಳಿಸಿ ಮಾರಾಟಾಧಿಕಾರಿಗಳು॥ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ. ಮಂಗಳೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು.

ಸಮಾಪನಾಧಿಕಾರಿಯವರು ಸಂಘದ ಅಸ್ತಿತ್ವದ ಬಗ್ಗೆ ಪರಿಶೀಲನೆ ನಡೆಸಿ, ಸಂಘವು ನೊಂದಣಿಯಾದ ಬಗ್ಗೆ ಕಚೇರಿಯಲ್ಲಿ ಯಾವುದೇ ದಾಖಲೆ ಹಾಗೂ ಮಾಹಿತಿಯು ಲಭ್ಯವಿರುವುದಿಲ್ಲವೆಂದು ಸಹಕಾರ ಸಂಘಗಳ ಪಟ್ಟಿಯಲ್ಲಿ ಮಾತ್ರ ಸದರಿ ಸಂಘದ ಹೆಸರು ಕಂಡುಬರುವುದಾಗಿ ಇದರಿಂದ ಸಮಾಪನಾಧಿಕಾರಿಗಳು ಸಮಾಪನಾ ನಡುವಳಿಯನ್ನು ಪೂರ್ಣಗೊಳಿಸಿರುತ್ತಾರೆ.

ಸದರಿ ಸಂಘದ ಅಸ್ತಿತ್ವದಿಂದ ಸಂಘದ ಸದಸ್ಯರಿಗಾಗಲೀ, ಸಾರ್ವಜನಿಕರಿಗಾಗಲೀ ಯಾವುದೇ ರೀತಿಯ ಪ್ರಯೋಜನವೂ ಇಲ್ಲದೇ ಇರುವುದರಿಂದ ಸಂಘದ ನೋಂದಣಿ ಸಂಖ್ಯೆಯನ್ನು ರದ್ದುಪಡಿಸುವಂತೆ ಸಹಕಾರ ಸಂಘಗಳ ಜಂಟಿ ನಿಬಂಧಕರು. ಮೈಸೂರು ಉಲ್ಲೇಖ(2) ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಸದರಿ ಸಮಾಪನಾ ಸಂಘದ ನೋಂದಣಿಯನ್ನು ರದ್ದುಗೊಳಿಸುವುದು ಸಮಂಜಸವೆಂದು ಪರಿಭಾವಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

-: ಆ ದೇ ಶ :-

ನಂ.ಆರ್‌ಸಿಎಸ್/ಎಲ್‌ಕ್ಯೂಡಿ/75/2005-06, ದಿನಾಂಕ:19-11-2010.

ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿದಂತೆ ಎಲ್ಲಾ ಅಂಶಗಳನ್ನು ಪರಿಗಣಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75 ರಂತೆ ಹಾಗೂ ಸರ್ಕಾರಿ ಅಧಿಸೂಚನೆ ಸಿ.ಓ/201/ಸಿಎಲ್ಎಂ/2008. ದಿನಾಂಕ:27-05-2010ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಕೆ.ಹೆಚ್.ತಿಮ್ಮಯ್ಯ ಸಹಕಾರ ಸಂಘಗಳ ಅಪರ ನಿಬಂಧಕರು, (ಬಳಕೆ ಮತ್ತು ಮಾರಾಟ) ಕೇಂದ್ರ ಕಛೇರಿ, ಬೆಂಗಳೂರು ಆದ ನಾನು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಇಲಾಖೆ ನೌಕರರ ಗ್ರಾಹಕರ ಸಹಕಾರ ಸಂಘ ನಿಯಮಿತ, ಮಂಗಳೂರು ಇದರ ನೋಂದಣಿ ಸಂಖ್ಯೆ 92387 ದಿನಾಂಕ:30-1-1988 ನ್ನು ರದ್ದು ಪಡಿಸಿರುತ್ತೇನೆ. ಈ ನೋಂದಣಿ ರದ್ಧತಿಯ ಆದೇಶದ ದಿನಾಂಕದಿಂದ ಈ ಸಂಘವು ಇಲ್ಲಿಂದ ಮುಂದಕ್ಕೆ ಒಂದು ಸಂಘ ಸಂಸ್ಥೆಯಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿರುತ್ತದೆ.

ಸಂಘದ ಸಮಾಪನಾಧಿಕಾರಿಗಳು ಸಂಘದ ನೋಂದಣಿ ಪತ್ರ ಹಾಗೂ ಇತರ ದಾಖಲೆಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಗಳೂರು, ಉಪ ವಿಭಾಗ, ಮಂಗಳೂರು ಇವರ ಕಛೇರಿಗೆ ಒಪ್ಪಿಸಿ ಸ್ವೀಕೃತಿಯನ್ನು ಪಡೆದುಕೊಳ್ಳತಕ್ಕದ್ದು.

ಈ ಆದೇಶವನ್ನು ನನ್ನ ಹಸ್ತಾಕ್ಷರ ಹಾಗೂ ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:19-11-2010ರಂದು ಹೊರಡಿಸಲಾಗಿದೆ.

ಕೆ.ಹೆಚ್. ತಿಮ್ಮಯ್ಯ,
ಸಹಕಾರ ಸಂಘಗಳ ಅಪರ ನಿಬಂಧಕರು,
(ಬಳಕೆ ಮತ್ತು ಮಾರಾಟ)

ಪಿ.ಆರ್. 1658

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003,

Sub: KVAT Act, 2003 – Clarification under Section 59(4) regarding the rate of tax applicable on certain commodities-reg.

Ref: Application dated:17.09.2010 of Smt. Noor Fazila, Proprietrix, Star (Confectionery, 27/8, (Behind Mariswamy Mutt), Kalasipalyam, Bangalore-560 002.

In her application cited above, Smt Noor Fazila, Proprietrix, Star Confectionery Bangalore, has sought clarification regarding the rate of tax applicable on certain commodities.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary of expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

CLARIFICATION NO. CLR. CR.151/2010-11, DATED 10.11.2010

It is hereby clarified that the rates of tax applicable on the following under,

Sl. No.	Goods	Rate of tax/Section
1	Hard boiled candy or peppermint	13.5 % under Section 4(1)(b) of the KVAT Act, 2003
2	Sugar & Jaggery syrup	13.5% under Section 4(1)(b) of the KVAT Act, 2003
3	Sugar candy	Exempt from tax under entry 47 of the First Schedule to the KVAT Act, 2003.

PRADEEP SINGH KHAROLA
Commissioner of Commercial Taxes,
(Karnataka), Bengaluru.

PR- 1659

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರ ನ್ಯಾಯಾಲಯ ಶಿವಮೊಗ್ಗ ಉಪ ವಿಭಾಗ ಶಿವಮೊಗ್ಗ

ಅಧಿಭಾರ ಅರ್ಜಿ ಸಂಖ್ಯೆ:14/2005-06/746

ಅರ್ಜಿದಾರರು		ಎದುರು ಅರ್ಜಿದಾರರು
ಕಾರ್ಯದರ್ಶಿ,	1.	ವಿ. ನರಸೇಗೌಡ, ಬಿನ್ ವೆಂಕಟರಮಣಯ್ಯ, ಗಾಡಿಕೊಪ್ಪ ವಾಸಿ, ಶಿವಮೊಗ
ಗ್ರಾಮಾಂತರ ಗೃಹನಿರ್ಮಾಣ	2.	ಎಸ್.ಟಿ. ಹಾಲಪ್ಪ, ಬಿನ್ ತಿಮ್ಮಪ್ಪ, ಪ್ರಿಯದರ್ಶಿನಿ ಬಡಾವಣೆ, ಶಿವಮೊಗ್ಗ.
ಸಹಕಾರ ಸಂಘ ನಿ.,	3.	ಬಸಪ್ಪ, ಬಿನ್ ಕೆಂಚಪ್ಪ, ಕಾಶಿಪುರ ವಾಸಿ, ವಿನೋಬನಗರ ಅಂಚೆ, ಶಿವಮೊಗ್ಗ.
ಶಿವಮೊಗ್ಗ.	3.	ಭೀಮಪ್ಪ, ಬಿನ್ ಹುರಗುಲಪ್ಪ, ಕಾಶಿಪುರ ವಾಸಿ, ವಿನೋಬನಗರ ಅಂಚೆ, ಶಿವಮೊಗ್ಗ.
	4.	ಈಶ್ವರಪ್ಪ, ಬಿನ್ ರುದ್ರಪ್ಪ, ಮುದುವಾಲ ವಾಸಿ, ಹಾರನಹಳ್ಳಿ ಅಂಚೆ, ಶಿವಮೊಗ್ಗ.
	5.	ಸೈಯದ್ ಬುಡೇನ್‌ಸಾಬ್ ಬಿನ್ ಸೈಯದ್ ಫಕ್ರುದ್ದೀನ್ ಸಾಬ್ ಸೋಮಿನಕೊಪ್ಪ ಅಂಚೆ, ಕೋಟೆಗಂಗೂರು, ಶಿವಮೊಗ್ಗ ತಾ:
	6.	ಫಾತೀಮಾ ಭೀ ಕೋಂ ಅಬ್ದುಲ್ ಸಲಾಂ, ಸೋಮಿನಕೊಪ್ಪ ಅಂಚೆ, ಕೋಟೆಗಂಗೂರು, ಶಿವಮೊಗ್ಗ ತಾ:
	7.	ಓ. ಸಿದ್ದಪ್ಪ, ಬಿನ್ ತಿಮ್ಮಪ್ಪ, ಕಲ್ಲಗಂಗೂರು, ಅಬ್ಬಲಗೆರೆ ಅಂಚೆ, ಶಿವಮೊಗ್ಗ ತಾ:
	8.	ಎಚ್. ಜಿ. ಹನುಮಂತಪ್ಪ(ಪೌತಿ) ವಾರಸುದಾರರು: ಲಕ್ಷ್ಮಮ್ಮ, ಕೋಂ ದಿ. ಹನುಮಂತಪ್ಪ, ಆಲ್ಕೊಳ ಗ್ರಾಮ, ಗಾಡಿಕೊಪ್ಪ, ಅಂಚೆ, ಶಿವಮೊಗ್ಗ.
	9.	ಆಡಿವೆಪ್ಪ ಬಿನ್ ಕಲ್ಲಣ್ಣರ ದುರ್ಗಪ್ಪ, ಹರಮಘಟ್ಟ ಗ್ರಾಮ, ಹರಮಘಟ್ಟ ಅಂಚೆ, ಶಿವಮೊಗ್ಗ.
	10.	ಎ.ಇ. ಚಂದ್ರಶೇಖರ್ (ಪೌತಿ) ವಾರಸುದಾರರು; ಶ್ರೀಮತಿ ಪಂಕಜ, ಕೋಂ. ದಿ. ಎ.ಇ. ಚಂದ್ರಶೇಖರ್ ಕೇರಾಫ್ ಈಶ್ವರಪ್ಪ, ಬಿನ್ ಬಸಪ್ಪ, ರಾಜೇಂದ್ರನಗರ ಬಲಭಾಗ, 3ನೇ ಕ್ರಾಸ್, ಶಿವಮೊಗ್ಗ.
	11.	ಶ್ರೀಮತಿ ನಾಗರತ್ನಮ್ಮ, ಕೋಂ ಶೇಖರಪ್ಪ, ಪುರದಾಳು ಅಂಚೆ, ಶಿವಮೊಗ್ಗ.

12. ಜಿ.ಎಂ. ವೀರಭದ್ರಪ್ಪ, ಬಿನ್ ಮಂಜಾನಾಯ್ಕ, ಪುರದಾಳು ಅಂಚೆ, ಶಿವಮೊಗ್ಗ.
13. ಶ್ರೀಮತಿ ಜಿ.ಎನ್. ಶೋಭಾ, ಬಿನ್ ನರಸೇಗೌಡ.
14. ಶ್ರೀಮತಿ ಜಿ.ಎನ್. ಗೀತಾ ಬಿನ್ ನರಸೇಗೌಡ.
15. ಶ್ರೀಮತಿ ಜಿ.ಎನ್. ವನಜಾಕ್ಷಿ ಬಿನ್ ನರಸೇಗೌಡ.
16. ಶ್ರೀನಿವಾಸ ಬಿನ್ ನರಸೇಗೌಡ.
17. ಶ್ರೀಮತಿ ಗೌರಮ್ಮ, ಕೋಂ ನರಸೇಗೌಡ. ಗಾಡಿಕೊಪ್ಪ ವಾಸ, ಶಿವಮೊಗ್ಗ.
18. ಶ್ರೀ ಪ್ರಭಾಕರ್ ಬಿನ್ ರಾಮಣ್ಣಗೌಡ ಸಿ.ಸಿ.ಟಿ.ಬಿ. ಲೇಔಟ್, ವಿಕಾಸ ಸ್ಕೂಲ್ ಹತ್ತಿರ ವಿನೋಬನಗರ, ಶಿವಮೊಗ್ಗ.
19. ಹನುಮಂತಮ್ಮ ಕೋಂ ಅವಲಕ್ಕಿ ರಂಗಪ್ಪ ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ..
20. ಶಿವಣ್ಣ ಬಿನ್ ಅವಲಕ್ಕಿ ರಂಗಪ್ಪ ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ..
21. ಮಂಜಪ್ಪ ಬಿನ್ ಅವಲಕ್ಕಿ ರಂಗಪ್ಪ ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ..
22. ಪರಮೇಶ್ ಬಿನ್ ಅವಲಕ್ಕಿ ರಂಗಪ್ಪ ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ..
23. ಶೇಖರ್ ಬಿನ್ ಅವಲಕ್ಕಿ ರಂಗಪ್ಪ ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ..
24. ನಾಗೇಂದ್ರಪ್ಪ ಬಿನ್ ಅವಲಕ್ಕಿ ರಂಗಪ್ಪ ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ..
25. ರಾಜಪ್ಪ ಬಿನ್ ಅವಲಕ್ಕಿ ರಂಗಪ್ಪ ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ..
26. ಸಿದ್ದಮ್ಮ ಕೋಂ ಬಸಪ್ಪ ಗಾಡಿಕೊಪ್ಪ ಗ್ರಾಮ, ಶಿವಮೊಗ್ಗ ತಾ..
27. ಶಿವಲಿಂಗಪ್ಪ ಬಿನ್ ಎಂ. ಬಸಪ್ಪ ಗಾಡಿಕೊಪ್ಪ ಗ್ರಾಮ, ಶಿವಮೊಗ್ಗ ತಾ..
28. ಕುಮಾರ ಬಿನ್ ಎಂ. ಬಸಪ್ಪ ಗಾಡಿಕೊಪ್ಪ ಗ್ರಾಮ, ಶಿವಮೊಗ್ಗ ತಾ:

(ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 103ರ ಮೇರೆಗೆ ತೀರ್ಪು ಪೂರ್ವ ಜಪ್ತು ಆದೇಶ)

ಪ್ರಸ್ತಾವನೆ:–

ಅರ್ಜಿದಾರರ ಸಂಘ ಈ ನ್ಯಾಯಾಲಯದಲ್ಲಿ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 69 ರಡಿಯಲ್ಲಿ ಎದುರು ಅರ್ಜಿದಾರರ ವಿರುದ್ಧ 1995–96 ರಿಂದ 2001–2002ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಂತೆ ರೂ 9,47,380–00 ಗಳನ್ನು ಸಾಲಿಯಾನ ಶೇ.18ರ ಬಡ್ಡಿಯೊಂದಿಗೆ ವಸೂಲಾತಿ ಬಗ್ಗೆ ಎದುರಿಗಳ ವಿರುದ್ಧ ಅಧಿಭಾರ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಈ ಸಂಬಂಧವಾಗಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ 19ನೇ ಎದುರು ಅರ್ಜಿದಾರರಿಗೆ ಸಹಕಾರ ಸಂಘಗಳ ಕಾಯ್ದೆ ಕಲಂ 103ರನ್ವಯ ಷರತ್ತು ಪೂರ್ವಕ ಜಪ್ತು ಆಜ್ಞೆಯ ನೋಟೀಸನ್ನು ದಿ:17.09.2010 ರಂದು ಈ ನ್ಯಾಯಾಲಯದಿಂದ ಹೊರಡಿಸಿದ್ದು, ಸದರೀ ಆಜ್ಞೆಯ ನೋಟೀಸ್ ಪ್ರತಿಯನ್ನು 19ನೇ ಎದುರುದಾರರು ಪಡೆದು, ಅದರಲ್ಲಿನ ಷರತ್ತುಗಳನ್ನು ಪೂರೈಸಲು ವಿಫಲರಾಗಿರುವುದರಿಂದ ದಿನಾಂಕ: 17.09.2010 ರಂದು ಹೊರಡಿಸಿದ ಷರತ್ತು ಪೂರ್ವ ಜಪ್ತು ಅಜ್ಞೆಯನ್ನು ಸ್ಥಿರೀಕರಣಗೊಳಿಸಲು ತೀರ್ಮಾನಿಸಿ (ಖಾಯಂಗೊಳಿಸಿ) ಈ ಕೆಳಕಂಡಂತೆ ಆದೇಶಿಸಿದೆ.

ಕ್ರಮಾಂಕ: ಸನಿಸಿ24/ಎಬಿಎನ್/ಕಲಂ103/2010–11 ದಿನಾಂಕ: 25–10–2010

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಎ.ಎಸ್. ಜಯಪ್ಪ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, 19ನೇ ಎದುರು ಅರ್ಜಿದಾರರಾದ ಶ್ರೀ ಪ್ರಭಾಕರ್ ಬಿನ್ ರಾಮಣ್ಣಗೌಡ ಇವರಿಗೆ ಸೇರಿದ ಈ ಕೆಳಕಂಡ "ಅನುಸೂಚಿ" ಯಲ್ಲಿ ತೋರಿಸಿದ ಸ್ಥಿರಾಸ್ತಿಯನ್ನು ಮೇಲ್ಕಂಡ ಅಧಿಭಾರ ಅರ್ಜಿಯ ತೀರ್ಪನ್ನು ಕಾಯ್ದಿರಿಸಿ, ದಿನಾಂಕ: 17–09–2010ರ ಷರತ್ತು ಪೂರ್ವಕ ಜಪ್ತು ಆಜ್ಞೆಯನ್ನು ಸ್ಥಿರೀಕರಿಸಿ ಆದೇಶಿಸಿದೆ.

ಈ ಆದೇಶದ ಅನುಸೂಚಿಯಲ್ಲಿರುವ ಸ್ವತ್ತುಗಳನ್ನು ಪಡೆಯುವ ಅಥವಾ ಖರೀದಿಸುವ ವ್ಯಕ್ತಿ ಅಥವಾ ಸಂಸ್ಥೆಗಳು ಸಹ ಷರತ್ತು ಪೂರ್ವಕ ಜಪ್ತು ಆಜ್ಞೆಗೆ ಒಳಪಡುವರು ಎಂದು ಸಹ ಆದೇಶಿಸಿದೆ.

ಜಪ್ತು ಆದೇಶಕ್ಕೆ ಒಳಗಾದ ಸ್ವತ್ತುಗಳ ಅನುಸೂಚಿ

ಕ್ರ ಸಂ.	ಖಾತೆದಾರರ ಹೆಸರು	ಸ್ಥಿರಾಸ್ತಿ ಇರುವ ಸ್ಥಳ	ನಿವೇಶನ ಸಂ.	ನಿವೇಶನ ವಿಸ್ತೀರ್ಣ ಹಾಗೂ ಕಟ್ಟಡದ ಮಾದರಿ
01.	ಬಿ.ಆರ್. ಪ್ರಭಾಕರ್, ಬಿನ್ ರಾಮಣ್ಣಗೌಡ	2ನೇ ವಾರ್ಡ್ ವಿನೋಬನಗರ, ಶಿವಮೊಗ್ಗ	409/409/7613	30ಅಡಿ x 45ಅಡಿ ನಿವೇಶನ ಮತ್ತು ಅದರಲ್ಲಿ ನಿರ್ಮಿಸಿರುವ ಆರ್.ಸಿ.ಸಿ. ಕಟ್ಟಡ

ಈ ಆದೇಶವನ್ನು ನ್ಯಾಯಾಲಯದ ಮೊಹರು ಮತ್ತು ಸ್ವಸಹಿಯೊಂದಿಗೆ ದಿನಾಂಕ:25–10–2010ರಂದು ನೀಡಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ.

ಪಿ.ಆರ್. 1660

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರ ನ್ಯಾಯಾಲಯ ಶಿವಮೊಗ್ಗ ಉಪ ವಿಭಾಗ ಶಿವಮೊಗ್ಗ

ಅಧಿಭಾರ ಅರ್ಜಿ ಸಂಖ್ಯೆ:14/2005-06/747

ಅರ್ಜಿದಾರರು	ಎದುರು ಅರ್ಜಿದಾರರು
ಕಾರ್ಯದರ್ಶಿ, ಗ್ರಾಮಾಂತರ ಗೃಹನಿರ್ಮಾಣ ಸಹಕಾರ ಸಂಘ ನಿ., ಶಿವಮೊಗ್ಗ.	1. ವಿ. ನರಸೇಗೌಡ, ಬಿನ್ ವೆಂಕಟರಮಣಯ್ಯ, ಗಾಡಿಕೊಪ್ಪ ವಾಸಿ, ಶಿವಮೊಗ್ಗ. 2. ಎಸ್.ಟಿ. ಹಾಲಪ್ಪ, ಬಿನ್ ತಿಮ್ಮಪ್ಪ, ಪ್ರಿಯದರ್ಶಿನಿ ಬಡಾವಣೆ, ಶಿವಮೊಗ್ಗ. 3. ಬಸಪ್ಪ, ಬಿನ್ ಕೆಂಚಪ್ಪ, ಕಾಶಿಪುರ ವಾಸಿ, ವಿನೋಬನಗರ ಅಂಚೆ, ಶಿವಮೊಗ್ಗ. 4. ಭೀಮಪ್ಪ, ಬಿನ್ ಹುರಗುಲಪ್ಪ, ಕಾಶಿಪುರ ವಾಸಿ, ವಿನೋಬನಗರ ಅಂಚೆ, ಶಿವಮೊಗ್ಗ.

5. ಈಶ್ವರಪ್ಪ, ಬಿನ್ ರುದ್ರಪ್ಪ, ಮುದುವಾಲ ವಾಸಿ, ಹಾರನಹಳ್ಳಿ ಅಂಚೆ, ಶಿವಮೊಗ್ಗ.
6. ಸೈಯದ್ ಬುಡೇನ್‌ಸಾಬ್ ಬಿನ್ ಸೈಯದ್ ಫಕ್ರುದ್ದೀನ್ ಸಾಬ್ ಸೋಮಿನಕೊಪ್ಪ ಅಂಚೆ, ಕೋಟೆಗಂಗೂರು, ಶಿವಮೊಗ್ಗ ತಾ:
7. ಫಾತೀಮಾ ಭೀ ಕೋಂ ಅಬ್ದುಲ್ ಸಲಾಂ, ಸೋಮಿನಕೊಪ್ಪ ಅಂಚೆ, ಕೋಟೆಗಂಗೂರು, ಶಿವಮೊಗ್ಗ ತಾ:
8. ಓ. ಸಿದ್ದಪ್ಪ, ಬಿನ್ ತಿಮ್ಮಪ್ಪ, ಕಲ್ಲಗಂಗೂರು, ಅಬ್ಬಲಗೆರೆ ಅಂಚೆ, ಶಿವಮೊಗ್ಗ ತಾ:
9. ಎಚ್. ಜಿ. ಹನುಮಂತಪ್ಪ(ಮೌತಿ) ವಾರಸುದಾರರು: ಲಕ್ಷ್ಮಮ್ಮ, ಕೋಂ ದಿ. ಹನುಮಂತಪ್ಪ, ಆಲ್ಕೊಳ ಗ್ರಾಮ, ಗಾಡಿಕೊಪ್ಪ, ಅಂಚೆ, ಶಿವಮೊಗ್ಗ.
10. ಆಡಿವೆಪ್ಪ ಬಿನ್ ಕಲ್ಲಣ್ಣರ ದುರ್ಗಪ್ಪ, ಹರಮಘಟ್ಟ ಗ್ರಾಮ, ಹರಮಘಟ್ಟ ಅಂಚೆ, ಶಿವಮೊಗ್ಗ.
11. ಎ.ಇ. ಚಂದ್ರಶೇಖರ್ (ಮೌತಿ) ವಾರಸುದಾರರು; ಶ್ರೀಮತಿ ಪಂಕಜ, ಕೋಂ. ದಿ. ಎ.ಇ. ಚಂದ್ರಶೇಖರ್ ಕೇರಾಫ್ ಈಶ್ವರಪ್ಪ, ಬಿನ್ ಬಸಪ್ಪ, ರಾಜೇಂದ್ರನಗರ ಬಲಭಾಗ, 3ನೇ ಕ್ರಾಸ್, ಶಿವಮೊಗ್ಗ.
12. ಶ್ರೀಮತಿ ನಾಗರತ್ನಮ್ಮ, ಕೋಂ ಶೇಖರಪ್ಪ, ಪುರದಾಳು ಅಂಚೆ, ಶಿವಮೊಗ್ಗ.
13. ಜಿ.ಎಂ. ವೀರಭದ್ರಪ್ಪ, ಬಿನ್ ಮಂಜಾನಾಯ್ಕ, ಪುರದಾಳು ಅಂಚೆ, ಶಿವಮೊಗ್ಗ.
14. ಶ್ರೀಮತಿ ಜಿ.ಎನ್. ಶೋಭಾ, ಬಿನ್ ನರಸೇಗೌಡ.
15. ಶ್ರೀಮತಿ ಜಿ.ಎನ್. ಗೀತಾ ಬಿನ್ ನರಸೇಗೌಡ.
16. ಶ್ರೀಮತಿ ಜಿ.ಎನ್. ವನಜಾಕ್ಷಿ ಬಿನ್ ನರಸೇಗೌಡ.
17. ಶ್ರೀನಿವಾಸ ಬಿನ್ ನರಸೇಗೌಡ.
18. ಶ್ರೀಮತಿ ಗೌರಮ್ಮ, ಕೋಂ ನರಸೇಗೌಡ. ಗಾಡಿಕೊಪ್ಪ ವಾಸ, ಶಿವಮೊಗ್ಗ.
19. ಶ್ರೀ ಪ್ರಭಾಕರ್ ಬಿನ್ ರಾಮಣ್ಣಗೌಡ ಸಿ.ಸಿ.ಟಿ.ಬಿ. ಲೇಔಟ್, ವಿಕಾಸ ಸ್ಕೂಲ್ ಹತ್ತಿರ ವಿನೋಬನಗರ, ಶಿವಮೊಗ್ಗ.
20. ಹನುಮಂತಮ್ಮ ಕೋಂ ಅವಲಕ್ಕಿ ರಂಗಪ್ಪ ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ..
21. ಶಿವಣ್ಣ ಬಿನ್ ಅವಲಕ್ಕಿ ರಂಗಪ್ಪ ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ..
22. ಮಂಜಪ್ಪ ಬಿನ್ ಅವಲಕ್ಕಿ ರಂಗಪ್ಪ ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ..
23. ಪರಮೇಶ್ ಬಿನ್ ಅವಲಕ್ಕಿ ರಂಗಪ್ಪ ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ..
24. ಶೇಖರ್ ಬಿನ್ ಅವಲಕ್ಕಿ ರಂಗಪ್ಪ ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ..
25. ನಾಗೇಂದ್ರಪ್ಪ ಬಿನ್ ಅವಲಕ್ಕಿ ರಂಗಪ್ಪ ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ..
26. ರಾಜಪ್ಪ ಬಿನ್ ಅವಲಕ್ಕಿ ರಂಗಪ್ಪ ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ..
27. ಸಿದ್ದಮ್ಮ ಕೋಂ ಬಸಪ್ಪ ಗಾಡಿಕೊಪ್ಪ ಗ್ರಾಮ, ಶಿವಮೊಗ್ಗ ತಾ..
28. ಶಿವಲಿಂಗಪ್ಪ ಬಿನ್ ಎಂ. ಬಸಪ್ಪ ಗಾಡಿಕೊಪ್ಪ ಗ್ರಾಮ, ಶಿವಮೊಗ್ಗ ತಾ..
29. ಕುಮಾರ ಬಿನ್ ಎಂ. ಬಸಪ್ಪ ಗಾಡಿಕೊಪ್ಪ ಗ್ರಾಮ, ಶಿವಮೊಗ್ಗ ತಾ:

(ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 103ರ ಮೇರೆಗೆ ತೀರ್ಪು ಪೂರ್ವ ಜಪ್ತು ಆದೇಶ)

ಪ್ರಸ್ತಾವನೆ:-

ಅರ್ಜಿದಾರರ ಸಂಘ ಈ ನ್ಯಾಯಾಲಯದಲ್ಲಿ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 69 ರಡಿಯಲ್ಲಿ ಎದುರು ಅರ್ಜಿದಾರರ ವಿರುದ್ದ 1995-96 ರಿಂದ 2001-2002ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಂತೆ ರೂ 9,47,380-00 ಗಳನ್ನು ಸಾಲಿಯಾನ ಶೇ.18ರ ಬಡ್ಡಿಯೊಂದಿಗೆ ವಸೂಲಾತಿ ಬಗ್ಗೆ ಎದುರಿಗಳ ವಿರುದ್ದ ಅಧಿಭಾರ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಈ ಸಂಬಂಧವಾಗಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ 27,28 ಮತ್ತು 29ನೇ ಎದುರು ಅರ್ಜಿದಾರರಿಗೆ ಸಹಕಾರ ಸಂಘಗಳ ಕಾಯ್ದೆ ಕಲಂ 103ರನ್ವಯ ಷರತ್ತು ಪೂರ್ವಕ ಜಪ್ತು ಆಜ್ಞೆಯ ನೋಟೀಸನ್ನು ದಿ:17.09.2010 ರಂದು ಈ ನ್ಯಾಯಾಲಯದಿಂದ ಹೊರಡಿಸಿದ್ದು, ಸದರೀ ಆಜ್ಞೆಯ ನೋಟೀಸ್ ಪ್ರತಿಯನ್ನು 27,28 ಮತ್ತು 29ನೇ

ಎದುರುದಾರರು ಪಡೆದು, ಅದರಲ್ಲಿನ ಷರತ್ತುಗಳನ್ನು ಪೂರೈಸಲು ವಿಫಲರಾಗಿರುವುದರಿಂದ ದಿನಾಂಕ: 17.09.2010 ರಂದು ಹೊರಡಿಸಿದ ಷರತ್ತು ಪೂರ್ವ ಜಪ್ತು ಆಜ್ಞೆಯನ್ನು ಸ್ಥಿರೀಕರಣಗೊಳಿಸಲು ತೀರ್ಮಾನಿಸಿ (ಖಾಯಂಗೊಳಿಸಿ) ಈ ಕೆಳಕಂಡಂತೆ ಆದೇಶಿಸಿದೆ.

ಕ್ರಮಾಂಕ: ಸನಿಸಿ24/ಎಬಿಎನ್/ಕಲಂ103/2010-11, ದಿನಾಂಕ: 25-10-2010

-: ಆ ದೇ ಶ :-

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಎ.ಎಸ್. ಜಯಪ್ಪ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, 27ನೇ ಎದುರು ಅರ್ಜಿದಾರರಾದ ಶ್ರೀಮತಿ ಸಿದ್ದಮ್ಮ, ಕೋಂ ಬಸಪ್ಪ ಇವರಿಗೆ ಸೇರಿದ ಈ ಕೆಳಕಂಡ "ಅನುಸೂಚಿ" ಯಲ್ಲಿ ತೋರಿಸಿದ ಸ್ಥಿರಾಸ್ತಿಯನ್ನು ಮೇಲ್ಕಂಡ ಅಧಿಭಾರ ಅರ್ಜಿಯ ತೀರ್ಪನ್ನು ಕಾಯ್ದಿರಿಸಿ, ದಿನಾಂಕ:17-09-2010ರ ಷರತ್ತು ಪೂರ್ವಕ ಜಪ್ತು ಆಜ್ಞೆಯನ್ನು ಸ್ಥಿರೀಕರಿಸಿ ಆದೇಶಿಸಿದೆ.

ಈ ಆದೇಶದ ಅನುಸೂಚಿಯಲ್ಲಿರುವ ಸ್ವತ್ತುಗಳನ್ನು ಪಡೆಯುವ ಅಥವಾ ಖರೀದಿಸುವ ವ್ಯಕ್ತಿ ಅಥವಾ ಸಂಸ್ಥೆಗಳು ಸಹ ಷರತ್ತು ಪೂರ್ವಕ ಜಪ್ತು ಆಜ್ಞೆಗೆ ಒಳಪಡುವರು ಎಂದು ಸಹ ಆದೇಶಿಸಿದೆ.

ಜಪ್ತು ಆದೇಶಕ್ಕೆ ಒಳಗಾದ ಸ್ವತ್ತುಗಳ ಅನುಸೂಚಿ

ಕ್ರ ಸಂ.	ಖಾತೆದಾರರ ಹೆಸರು	ಸ್ಥಿರಾಸ್ತಿ ಇರುವ ಸ್ಥಳ	ನಿವೇಶನ ಸಂ.	ನಿವೇಶನ ವಿಸ್ತೀರ್ಣ ಹಾಗೂ ಕಟ್ಟಡದ ಮಾದರಿ
01.	ಬಸಪ್ಪ, ಬಿನ್ ಮಣಪ್ಪ	35 ಗಾಡಿಕೊಪ್ಪ, ಶಿವಮೊಗ್ಗ	2840/78	$\frac{40+34}{2} \times 31$ ಈ ನಿವೇಶನ ಮತ್ತು ಅದರಲ್ಲಿ ನಿರ್ಮಿಸಿರುವ ಮಂಗಳೂರು ಹಂಚಿನ ಮನೆ

ಈ ಆದೇಶವನ್ನು ನ್ಯಾಯಾಲಯದ ಮೊಹರು ಮತ್ತು ಸ್ವಸಹಿಯೊಂದಿಗೆ ದಿನಾಂಕ:25-10-2010ರಂದು ನೀಡಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ.

ಪಿ.ಆರ್. 1661

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003,

Sub: KVAT Act, 2003 – Clarification under Section 59(4) regarding the rate of tax applicable on 'idly batter'.

Ref: Application dated:04.09.2010- of Udhaiyam Agro Freesh, No.284/13, Garvebhavipalya, Hosur Road, Bengaluru-560 068.

In the application cited above, Udhaiyam Agro Freesh Bengaluru, has sought clarification regarding the rate of tax applicable on 'idly batter'.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary of expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

CLARIFICATION NO. CLR. CR.148/10-11, DATED 10.11.2010

It is clarified that 'idly batter' is liable to tax at 13.5% under Section 4(1)(b) of the Karnataka Value Added Tax Act, 2003.

PRADEEP SINGH KHAROLA
Commissioner of Commercial Taxes,
(Karnataka), Bengaluru.

PR- 1663

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ.

ಪ್ರಸಂ.ಕಾಅದಾ:ಕಾನಪ:ಸಿಆರ್-163/10 ದಿನಾಂಕ:30/10/2010

ಅರ್ಜಿದಾರರು:

1) ಶ್ರೀಮತಿ ರೇಣುಕ ಕೋಂ ಹನುಮಂತಪ್ಪ
2) ಆದರ್ಶ ಬಿನ್ ಹನುಮಂತಪ್ಪ
3) ಆದಿತ್ಯ ಬಿನ್ ಹನುಮಂತಪ್ಪ

ಪ್ರತಿವಾದಿಗಳು

1) ಎಂ. ಭೀಮಪ್ಪ ಬಿನ್ ಮದ್ದಿಲಪ್ಪ ಟಾಟಾ ಇಂಡಿಕಾ ಕಾರ್. ಮಾಲೀಕರು ನಂ. ಕೆ.ಎ. 17 ಡಬ್ಲ್ಯೂ 8168. ಡೋರ್.8944.798 ಕೆ.ಟಿ.ಜೆ.ನಗರ, ದಾವಣಗೆರೆ.

4) ಶರಣಮ್ಮ ಕೋಂ ಹನುಮಂತಪ್ಪ
5) ಹನುಮಂತಪ್ಪ ಬಿನ್ ಲಕ್ಷ್ಮಪ್ಪ
ಶ್ರೀರಾಮ ಬಡಾವಣೆ ದಾವಣಗೆರೆ

2) ದಿ:ರೀಜನಲ್ ಮ್ಯಾನೇಜರ್
ರಿಲಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿ ಲಿ. 570
ರಿಸಿಪೇರ್ ಹೌಸ್ ಯಜಗಲುಕ್ರಾಸ್ ವಡಲಾ ಮುಂಬೈ-400031

: : ಪ್ರಕಟಣೆ : :

ಶ್ರೀಮತಿ ರೇಣುಕ, ಆದರ್ಶ, ಆದಿತ್ಯ, ಶರಣಮ್ಮ ಮತ್ತು ಹನುಮಂತಪ್ಪ ಇವರುಗಳಾದ ನಾವು ಮೃತ ಹನುಮಂತಪ್ಪ ಇವರ ಹೆಂಡತಿ ಮಕ್ಕಳು ಮತ್ತು ತಾಯಿ ತಂದೆ ಎಂದೂ ರವರ ಸಾವಿಗಾಗಿ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಹನುಮಂತಪ್ಪ ರವರು ಒಂದನೇ ಪ್ರತಿವಾದಿಗಳಾದ ಎಂ.ಭೀಮಪ್ಪ ಇವರ ಕಾರಿನಲ್ಲಿ ಚಾಲಕ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದೂ, ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೇ, ಅಂತಹವರು ಪ್ರಕಟಣೆಯು ಈ ನ್ಯಾಯಾಲಯದಲ್ಲಿ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು, ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಎಸ್.ಸಿ. ರಾಮಚಂದ್ರ
ಕಾರ್ಮಿಕ ಅಧಿಕಾರಿ ಮತ್ತು ಆಯುಕ್ತರು ಕಾರ್ಮಿಕ ನಷ್ಟ ಪರಿಹಾರ
ದಾವಣಗೆರೆ ಜಿಲ್ಲೆ, ದಾವಣಗೆರೆ,

ಪಿ.ಆರ್. 1595

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ.

ಪ್ರ.ಸಂ.ಕಾಅದಾ:ಕಾನಪ:ಸಿಆರ್-157/10 ದಿನಾಂಕ:30/10/2010

ಅರ್ಜಿದಾರರು:

1) ಶ್ರೀಮತಿ ಸುಮಕ್ಕ ಕೋಂ ಲೇಟ್ ನಾಗರಾಜ
2) ಗಂಗಾಧರ ಬಿನ್ ಲೇಟ್ ನಾಗರಾಜ
3) ತಿಪ್ಪೇಸ್ವಾಮಿ ಬಿನ್ ಲೇಟ್ ನಾಗರಾಜ
4) ಶ್ರೀಮತಿ ಫಕ್ಕೀರಮ್ಮ ಕೋಂ ತಿದ್ದು ರುದ್ರಪ್ಪ
ಲಿಂಗಣ್ಣನ ಹಳ್ಳಿ ಗ್ರಾಮ ಜಗಳೂರು ತಾಲ್ಲೂಕು
ದಾವಣಗೆರೆ ಜಿಲ್ಲೆ

ಪ್ರತಿವಾದಿಗಳು

1) ಶ್ರೀ ಜಮೀರ್ @ ಅಬ್ದುಲ್ ಜಮೀರ್ ಬಿನ್ ಅಬ್ದುಲ್ ಸದೂದ್‌ಸಾಬ್ ಲಾರಿ ಮಾಲೀಕರು ನಂ.1. ಕೆ.ಎ.ಡಿ. 02 ವಿ.2619 2ನೇ ಕ್ರಾಸ್ ಬಳ್ಳಾರಿ ರಸ್ತೆ ಚಳ್ಳಕೆರೆ ನಗರ, ಚಿತ್ರದುರ್ಗ ಜಿಲ್ಲೆ.
2) ದಿ:ಡಿವಿಜನಲ್ ಮ್ಯಾನೇಜರ್
ನ್ಯೂ ಇಂಡಿಯ ಅಶ್ಯೂರೆನ್ಸ್ ಕಂಪನಿ ಲಿ. ಆರ್ಕೇಡ್ ಕಾಂಪ್ಲೇಕ್ಸ್ ಸಿ.ಜಿ.ಆಸ್ಪತ್ರೆ ರಸ್ತೆ ವಿದ್ಯಾರ್ಥಿ ಭವನದ ಹತ್ತಿರ ದಾವಣಗೆರೆ

: : ಪ್ರಕಟಣೆ : :

ಶ್ರೀ/ಶ್ರೀಮತಿ ಸುಮಕ್ಕ, ಗಂಗಾಧರ, ತಿಪ್ಪೇಸ್ವಾಮಿ, ಮತ್ತು ಫಕ್ಕೀರಮ್ಮ ಇವರುಗಳಾದ ನಾವು ಮೃತ ಶ್ರೀ ನಾಗರಾಜ ಇವರ ಹೆಂಡತಿ ಮಕ್ಕಳು ಮತ್ತು ತಾಯಿ ಎಂದೂ ರವರ ಸಾವಿಗಾಗಿ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಶ್ರೀ ನಾಗರಾಜ ರವರು ಒಂದನೇ ಪ್ರತಿವಾದಿಗಳಾದ ಜಮೀರ್ @ ಅಬ್ದುಲ್ ಜಮೀರ್ ಸಾಬ್ ಇವರ ಲಾರಿಯಲ್ಲಿ ಹಮಾಲಿ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭಘಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದೂ, ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೇ, ಅಂತಹವರು ಪ್ರಕಟಣೆಯು ಈ ನ್ಯಾಯಾಲಯದಲ್ಲಿ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು, ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಎಸ್.ಸಿ. ರಾಮಚಂದ್ರ
ಕಾರ್ಮಿಕ ಅಧಿಕಾರಿ ಮತ್ತು ಆಯುಕ್ತರು ಕಾರ್ಮಿಕ ನಷ್ಟ ಪರಿಹಾರ
ದಾವಣಗೆರೆ ಜಿಲ್ಲೆ, ದಾವಣಗೆರೆ,

ಪಿ.ಆರ್. 1596

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ ತುಮಕೂರು ಜಿಲ್ಲೆ ತುಮಕೂರು, 2ನೇ ಮಹಡಿ, ಮಿನಿವಿಧಾನಸೌಧ, ತುಮಕೂರು ಇವರ ಕಾರ್ಯಾಲಯದ ನಡವಳಿಕೆಗಳು

ವಿಷಯ: ಸ್ಥಗಿತಗೊಂಡಿರುವ ಶ್ರೀ ಕಲ್ಲೇಶ್ವರ ಸ್ವಾಮಿ ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ಬರಗೂರು, ಚಿ.ನಾ.ಹಳ್ಳಿ ತಾಲ್ಲೂಕು, ಇದನ್ನು ಸಮಾಪನೆಗೊಳಿಸಿ ಆದೇಶ ನೀಡುವ ವಿಚಾರ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು ತಿಪಟೂರು ಉಪವಿಭಾಗ ತಿಪಟೂರು ಇವರ ಪತ್ರ ಸಂಖ್ಯೆ:ಸನಿ-32/ಸಮಾಪನೆ/ಸಿಆರ್-20/2010-11, ದಿನಾಂಕ:27-07-2010.

2) ಸಂಯುಕ್ತ ಕರ್ನಾಟಕ / ಪ್ರಜಾಪ್ರಗತಿ ದಿನಪತ್ರಿಕೆ ಪ್ರಕಟಣೆ ದಿನಾಂಕ:20-2-2010.

ಪ್ರಸ್ತಾವನೆ :

ಸ್ಥಗಿತಗೊಂಡಿರುವ ಶ್ರೀ ಕಲ್ಲೇಶ್ವರ ಸ್ವಾಮಿ ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ಬರಗೂರು, ಚಿ.ನಾ.ಹಳ್ಳಿ ತಾಲ್ಲೂಕು ತುಮಕೂರು ಜಿಲ್ಲೆ, ಈ ಸಹಕಾರ ಸಂಘವು ಕ್ರಮಸಂಖ್ಯೆ: ಸನಿ-34/ನೊಂದಣಿ/30786/2001-02, ದಿನಾಂಕ:08-06-2001 ರಲ್ಲಿ ಸಹಾಯಕ ನಿಬಂಧಕರು ತಿಪಟೂರು ಉಪ-ವಿಭಾಗ ತಿಪಟೂರು ಇವರಿಂದ ನೊಂದಣಿಯಾಗಿರುತ್ತದೆ. ಇದರ ಆಡಳಿತ ವ್ಯಾಪ್ತಿಯು ತಾಲ್ಲೂಕು ಮಟ್ಟಕ್ಕಿಂತ ಕಡಿಮೆಯುಳ್ಳದ್ದಾಗಿರುತ್ತದೆ. ಸದರಿ ಸಂಘದ ಕಾರ್ಯಚಟುವಟಿಕೆಗಳು 2001-02ನೇ ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಕಾರಣ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರ ಕಲಂ 72 (2) (ಬಿ)ಯ ಪ್ರಕಾರ ಸಂಘವನ್ನು ಸಮಾಪನೆಗೊಳಿಸಿ ಆದೇಶ ನೀಡುವಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ತಿಪಟೂರು ಉಪವಿಭಾಗ ತಿಪಟೂರು ರವರು ಉಲ್ಲೇಖ (1) ರ ರೀತ್ಯಾ ಕೋರಿ ಪ್ರಸ್ತಾವೆಯನ್ನು ಸಲ್ಲಿಸಿರುತ್ತಾರೆ.

ಅದರಂತೆ ಸದರಿ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ, ಆಡಳಿತ ಮಂಡಳಿ ಅಸ್ತಿತ್ವದಲ್ಲಿಲ್ಲದ ಕಾರಣ ಉಲ್ಲೇಖ (2) ರ ರೀತ್ಯಾ ಪತ್ರಿಕಾ ಪ್ರಕಟಣೆ ನೀಡಿ, ಸಂಘದ ಸದಸ್ಯರ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿತ್ತು. ಆದರೆ ಈ ಸಂಬಂಧ ಸಂಘದ ಸದಸ್ಯರುಗಳಿಂದಾಗಲೀ, ಸಾರ್ವಜನಿಕರುಗಳಿಂದಾಗಲೀ, ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ. ಪ್ರಯುಕ್ತ ಸಂಘವನ್ನು ಮುಂದುವರಿಸಿಕೊಂಡು ಹೋಗಲು ಆಸಕ್ತಿ ಇಲ್ಲವೆಂದು ಅಭಿಪ್ರಾಯಪಡುತ್ತಾ, ಈ ಕೆಳಕಂಡಂತೆ ಆದೇಶ ನೀಡಿದೆ.

-:ಆ ದೇ ಶ :-

ನಂ.ಡಿಆರ್‌ಟಿ/ಎಲ್‌ಕ್ಯೂಡಿ/ಸಿಆರ್-03/2010-11, ದಿನಾಂಕ:28-10-2010

ಆರ್.ಲೋಕೇಶ್. ಕೆ.ಸಿ.ಎಸ್. ಸಹಕಾರ ಸಂಘಗಳ ಉಪನಿಬಂಧಕರು ತುಮಕೂರು ಜಿಲ್ಲೆ ತುಮಕೂರು, ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರ ಕಲಂ 72(2)(ಬಿ) ಹಾಗೂ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಓ/201/ಸಿಎಲ್‌ಎಂ/2008, ದಿನಾಂಕ:27-05-2010ರಲ್ಲಿ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ, ಶ್ರೀ ಕಲ್ಲೇಶ್ವರ ಸ್ವಾಮಿ ಸಣ್ಣನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ಬರಗೂರು, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ, ಇದನ್ನು ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ ಚಿಕ್ಕನಾಯಕನಹಳ್ಳಿ ಇವರನ್ನು ಋಣಸಮಾಪನಾಧಿಕಾರಿಯನ್ನಾಗಿ ನೇಮಕಮಾಡಿ ಆದೇಶಿಸಿರುತ್ತೇನೆ.

ಋಣಸಮಾಪನಾಧಿಕಾರಿಗಳು ಸಂಘದ ಪೂರ್ಣಪ್ರಭಾರವನ್ನು ಸಂಬಂಧಪಟ್ಟವರಿಂದ ವಹಿಸಿಕೊಂಡು ಪ್ರಭಾರ ಪಟ್ಟಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಹಾಗೂ ಸಂಘದ ಲೆಕ್ಕ ಪರಿಶೋಧನಾ ವರದಿಯಂತೆ ಅಥವಾ ಸಂಘದ ಆಸ್ತಿ-ಜವಾಬ್ದಾರಿ ತ:ಖ್ತೆಯ ರೀತ್ಯಾ ಆಸ್ತಿ-ಜವಾಬ್ದಾರಿಯನ್ನು ವಿಲೇವಾರಿ ಮಾಡಲು ಆದ್ಯತಾ ಪಟ್ಟಿಯ ಮೂರು ಪ್ರತಿಗಳನ್ನು ಈ ಕಛೇರಿಗೆ ಅನುಮೋದನೆಗೆ ಸಲ್ಲಿಸಿ, ಆನುಮೋದನೆ ಪಡೆದು ಅದ್ಯತೆಮೇರೆಗೆ ವಿಲೇವಾರಿಮಾಡಿ, ಸಂಘದ ನೊಂದಣಿ ರದ್ದತಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆದೇಶಿಸಿದೆ.

ಈ ಆದೇಶವನ್ನು ನನ್ನ ಸಹಿ ಹಾಗೂ ಕಚೇರಿಯ ಮುದ್ರೆಯೊಂದಿಗೆ ದಿನಾಂಕ:28-10-2010ರಂದು ನೀಡಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು,
ತುಮಕೂರು ಜಿಲ್ಲೆ ತುಮಕೂರು.

ಪಿ.ಆರ್. 1597

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ ತುಮಕೂರು ಜಿಲ್ಲೆ ತುಮಕೂರು, 2ನೇ ಮಹಡಿ, ಮಿನಿವಿಧಾನಸೌಧ, ತುಮಕೂರು ಇವರ ಕಾರ್ಯಾಲಯದ ನಡವಳಿಕೆಗಳು

ವಿಷಯ: ಸ್ಥಗಿತಗೊಂಡಿರುವ ಶ್ರೀ ವೀರಭದ್ರಸ್ವಾಮಿ ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ಮುದ್ದೇನಹಳ್ಳಿ ಚಿ.ನಾ.ಹಳ್ಳಿ ತಾಲ್ಲೂಕು, ಇದನ್ನು ಸಮಾಪನೆಗೊಳಿಸಿ ಆದೇಶ ನೀಡುವ ವಿಚಾರ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು ತಿಪಟೂರು ಉಪವಿಭಾಗ ತಿಪಟೂರು ಇವರ ಪತ್ರ ಸಂಖ್ಯೆ.ಸನಿ-32/ಸಮಾಪನೆ/ಸಿಆರ್-19/2010-11, ದಿನಾಂಕ:26-07-2010.

2) ಸಂಯುಕ್ತ ಕರ್ನಾಟಕ / ಪ್ರಜಾಪ್ರಗತಿ ದಿನಪತ್ರಿಕೆ ಪ್ರಕಟಣೆ ದಿನಾಂಕ:20-2-2010.

ಪ್ರಸ್ತಾವನೆ :

ಸ್ಥಗಿತಗೊಂಡಿರುವ ಶ್ರೀ ವೀರಭದ್ರಸ್ವಾಮಿ ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ಮುದ್ದೇನಹಳ್ಳಿ ಚಿಕ್ಕ ನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ, ಈ ಸಹಕಾರ ಸಂಘವು ಕ್ರಮಸಂಖ್ಯೆ: ಸನಿ-34/ನೊಂದಣಿ/30776/2000-01, ದಿನಾಂಕ:22-03-2000 ರಲ್ಲಿ ಸಹಾಯಕ ನಿಬಂಧಕರು ತಿಪಟೂರು ಉಪ-ವಿಭಾಗ ತಿಪಟೂರು ಇವರಿಂದ ನೊಂದಣಿಯಾಗಿರುತ್ತದೆ. ಇದರ ಆಡಳಿತ ವ್ಯಾಪ್ತಿಯು ತಾಲ್ಲೂಕು ಮಟ್ಟಕ್ಕಿಂತ ಕಡಿಮೆಯುಳ್ಳದ್ದಾಗಿರುತ್ತದೆ. ಸದರಿ ಸಂಘದ ಕಾರ್ಯಚಟುವಟಿಕೆಗಳು 2004-05ನೇ ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಕಾರಣ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರ ಕಲಂ 72 (2) (ಬಿ)ಯ ಪ್ರಕಾರ ಸಂಘವನ್ನು ಸಮಾಪನೆಗೊಳಿಸಿ ಆದೇಶ ನೀಡುವಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ತಿಪಟೂರು ಉಪವಿಭಾಗ ತಿಪಟೂರು ರವರು ಉಲ್ಲೇಖ (1) ರ ರೀತ್ಯಾ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಅದರಂತೆ ಸದರಿ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ, ಆಡಳಿತ ಮಂಡಳಿ ಅಸ್ತಿತ್ವದಲ್ಲಿಲ್ಲದ ಕಾರಣ ಉಲ್ಲೇಖ (2) ರ ರೀತ್ಯಾ ಪತ್ರಿಕಾ ಪ್ರಕಟಣೆ ನೀಡಿ, ಸಂಘದ ಸದಸ್ಯರ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿತ್ತು. ಆದರೆ ಈ ಸಂಬಂಧ ಸಂಘದ ಸದಸ್ಯರುಗಳಿಂದಾಗಲೀ; ಸಾರ್ವಜನಿಕರುಗಳಿಂದಾಗಲೀ, ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ. ಪ್ರಯುಕ್ತ ಸಂಘವನ್ನು ಮುಂದುವರಿಸಿಕೊಂಡು ಹೋಗಲು ಆಸಕ್ತಿ ಇಲ್ಲವೆಂದು ಅಭಿಪ್ರಾಯಪಡುತ್ತಾ, ಈ ಕೆಳಕಂಡಂತೆ ಆದೇಶ ನೀಡಿದೆ.

-: ಆ ದೇ ಶ :-

ನಂ.ಡಿಆರ್‌ಟಿ/ಎಲ್‌ಕ್ಯೂಡಿ/ಸಿಆರ್-02/2010-11, ದಿನಾಂಕ:28-10-2010.

ಆರ್ ಲೋಕೇಶ್. ಕೆ.ಸಿ.ಎಸ್. ಸಹಕಾರ ಸಂಘಗಳ ಉಪನಿಬಂಧಕರು ತುಮಕೂರು ಜಿಲ್ಲೆ ತುಮಕೂರು. ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರ ಕಲಂ 72(2)(ಬಿ) ಹಾಗೂ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಓ/201/ಸಿಎಲ್‌ಎಂ/2008. ದಿನಾಂಕ:27-05-2010ರಲ್ಲಿ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ, ಶ್ರೀ ವೀರಭದ್ರಸ್ವಾಮಿ ಸಣ್ಣನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ಮುದ್ದೇನಹಳ್ಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು. ತುಮಕೂರು ಜಿಲ್ಲೆ, ಇದನ್ನು ಸಮಾಪನೆಗೊಳಿಸಿ, ಸಹಕಾರ ಅಭಿವೃದ್ಧಿ ಅಧಿಕಾರಿ ಚಿಕ್ಕನಾಯಕನಹಳ್ಳಿ ಇವರನ್ನು ಋಣಸಮಾಪನಾಧಿಕಾರಿಯನ್ನಾಗಿ ನೇಮಕಮಾಡಿ ಆದೇಶಿಸಿರುತ್ತೇನೆ.

ಋಣಸಮಾಪನಾಧಿಕಾರಿಗಳು ಸಂಘದ ಪೂರ್ಣಪ್ರಭಾರವನ್ನು ಸಂಬಂಧಪಟ್ಟವರಿಂದ ವಹಿಸಿಕೊಂಡು ಪ್ರಭಾರ ಪಟ್ಟಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಹಾಗೂ ಸಂಘದ ಲೆಕ್ಕ ಪರಿಶೋಧನಾ ವರದಿಯಂತೆ ಅಥವಾ ಸಂಘದ ಆಸ್ತಿ-ಜವಾಬ್ದಾರಿ ತ:ಖ್ತೆಯ ರೀತ್ಯಾ ಆಸ್ತಿ-ಜವಾಬ್ದಾರಿಯನ್ನು ವಿಲೇವಾರಿ ಮಾಡಲು ಅದ್ಯತಾ ಪಟ್ಟಿಯ ಮೂರು ಪ್ರತಿಗಳನ್ನು ಈ ಕಛೇರಿಗೆ ಅನುಮೋದನೆಗೆ ಸಲ್ಲಿಸಿ, ಅನುಮೋದನೆ ಪಡೆದು ಆದ್ಯತೆಮೇರೆಗೆ ವಿಲೇವಾರಿಮಾಡಿ, ಸಂಘದ ನೊಂದಣಿ ರದ್ದತಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆದೇಶಿಸಿದೆ.

ಈ ಆದೇಶವನ್ನು ನನ್ನ ಸಹಿ ಹಾಗೂ ಕಚೇರಿಯ ಮುದ್ರೆಯೊಂದಿಗೆ ದಿನಾಂಕ:28-10-2010ರಂದು ನೀಡಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು,

ಪಿ.ಆರ್. 1598 ತುಮಕೂರು ಜಿಲ್ಲೆ ತುಮಕೂರು.

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003

Sub: KVAT Act, 2003 – Clarification under Section 59(4) regarding the rate of tax applicable on 'rice mill rubber roller used in rice mills' –reg.

Ref: Application dated:12.07.2010- of Samsons, C-108, Anmol Industrial Estate, Belgaum-590 008,

In the application cited above, Samsons, Belgaum has sought clarification regarding the rate of tax applicable on 'rice mill rubber roller used in rice mills'.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary of expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

CLARIFICATION NO. CLR. CR.103/10-11, DATED 27.10.2010

It is clarified that 'rice mill rubber roller' covered by CET heading 8437 is liable to tax at 5% under Sl.No.38 of the table in the notification No FD 316 CSL 2005(I), dated: 05.08.2005 read with section 4(I)(a)(ii) of the Karnataka Value Added Tax Act, 2003.

PRADEEP SINGH KHAROLA

Commissioner of Commercial Taxes,

PR- 1601 (Karnataka), Bengaluru.

ವಸತಿ ಇಲಾಖೆ

ಅಧಿಸೂಚನೆ

ಸಂಖ್ಯೆ: ವಇ 97 ಕೊಮಂಇ 2005, ಬೆಂಗಳೂರು ದಿನಾಂಕ: 27-10-2010

ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಬೆಂಗಳೂರು ನಗರದಲ್ಲಿರುವ ಬಿನ್ನಿಪೇಟೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕನಕನಗರ (ಮಾರೇನಹಳ್ಳಿ), ಕೆಂಪಾಪುರ ಕೊಳಚೆ ಪ್ರದೇಶವನ್ನು ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು, ನಗರ ಜಿಲ್ಲೆ, ಬೆಂಗಳೂರು ರವರು ತಮ್ಮ ಅಧಿಸೂಚನೆ ಸಂಖ್ಯೆ:ಕೆಪಿಸ್‌ಎ ಸಿಆರ್. 39/90-9, ದಿನಾಂಕ:29-09-1992ರಲ್ಲಿ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973 (1974ರ ಕರ್ನಾಟಕ ಕಾಯ್ದೆ 33 ರಂತೆ) ಕಲಂ 3(1)ರಂತೆ ಕೊಳಚೆ ಪ್ರದೇಶವೆಂದು ಘೋಷಿಸಿರುತ್ತಾರೆ.

ಸದರಿ ಪ್ರದೇಶವನ್ನು ಅಭಿವೃದ್ಧಿಗೊಳಿಸಿ ಅಲ್ಲಿ ವಾಸಿಸುತ್ತಿರುವ ಕೊಳಚೆ ನಿವಾಸಿಗಳಿಗೆ ಪುನರ್ ವಸತಿ ಕಲ್ಪಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ:ವಇ 97 ಕೊಮಂಇ 2005, ದಿನಾಂಕ:06-03-2006ರಲ್ಲಿ ಕರ್ನಾಟಕ ಕೊಳಚೆ ಪ್ರದೇಶಗಳ(ಅಭಿವೃದ್ಧಿ ಮತ್ತು ನಿರ್ಮೂಲನೆ) ಅಧಿನಿಯಮ 1973ರ ಕಲಂ 17ರಡಿಯಲ್ಲಿ ಸದರಿ ಪ್ರದೇಶವನ್ನು ಭೂಸ್ವಾಧೀನಪಡಿಸಿಕೊಳ್ಳಲು ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಈ ಸಂಬಂಧವಾಗಿ

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ದಿನಾಂಕ:16-07-2009ರ ಪತ್ರದಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಕೈ ಬಿಡುವಂತೆ ತಿಳಿಸಿರುತ್ತದೆ. ಅಧಿನಿಯಮ. 17 ರಡಿಯಲ್ಲಿ ಸದರ ಪ್ರದೇಶವನ್ನು ಭೂ ಸ್ವಾಧೀನ ಪ್ರಕ್ರಿಯೆಯನ್ನು ಕೈ ಬಿಡುವಂತೆ ಕೋರಿರುವುದರಿಂದ ಸರ್ಕಾರ ದಿನಾಂಕ: 06-03-2006ರಂದು ಅಧಿನಿಯಮ 17ರಡಿಯಲ್ಲಿ ಸ್ವಾಧೀನಪಡಿಸಿಕೊಳ್ಳಲು ಹೊರಡಿಸಿದ್ದ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ ವಇ 97 ಕೊಮಂಇ 2005ನ್ನು ಜನರಲ್ ಕ್ಲಾಸಸ್ ಕಾಯ್ದೆ 1899ರ ಕಲಂ 21ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರದ್ದುಪಡಿಸಲಾಗಿದೆ.

ಷೆಡ್ಯೂಲ್

ಕೊಳಚೆ ಪ್ರದೇಶದ ಹೆಸರು ಮತ್ತು ಇರುವ ಸ್ಥಳ	ಭೂ ಮಾಲೀಕರ ಹೆಸರು	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಚಕ್ಕುಬಂದಿ
ಕನಕನಗರ ಸ್ಲಂ ಮಾರೇನಹಳ್ಳಿ ಕೆಂಪಾಪುರದ ಸಮೀಪ	1. ಇಂಡಸ್ಟ್ರಿಯಲ್ ವರ್ಕ್ ಶಾಪ್ ಹೆಚ್‌ಬಿಸಿಎಸ್ ಲಿ.	381	0.05	ಪೂರ್ವ : ಸರ್ವೆ ನಂ. 350/4 ಪಶ್ಚಿಮ : ಸರ್ವೆ ನಂ. 381
	2. ದೊಡ್ಡಯ್ಯ ಸನ್ ಆಫ್ ಹನುಮಂತಪ್ಪ	382/3	0.07	ಉತ್ತರ : ಸರ್ವೆ ನಂ. 381 ಮತ್ತು ಸರ್ವೆ ನಂ. 382/4
	3) ಹುಚ್ಚಪ್ಪ ಸನ್ ಆಫ್ ಸುಬ್ಬಣ್ಣ	382/4	1.04	ದಕ್ಷಿಣ : ಆರ್‌ಪಿಎಫ್ ಸರ್ವೆ ನಂ. 382/4
		ಒಟ್ಟು	1.16	

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಆರ್. ನಾಗರಾಜ,

ಪೀಠಾಧಿಕಾರಿ-4, ವಸತಿ ಇಲಾಖೆ.

ಪಿ.ಆರ್. 1568

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ವಾಕೈ 14 ಜಕೈಸೇ 2010, ದಿನಾಂಕ: 12-10-2010

ವಿಷಯ: ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರುಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿ ಬಗ್ಗೆ.

ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರುಗಳ ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:01-01-2010ರಲ್ಲಿದ್ದಂತೆ ತಯಾರಿಸಿ ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವಂತೆ ಪ್ರಕಟಿಸಿದೆ. ಆ ಕುರಿತಂತೆ ಯಾವುದೇ ಆಕ್ಷೇಪಣೆ / ಸಲಹೆಗಳಿದ್ದಲ್ಲಿ ಅವುಗಳನ್ನು ಈ ಅಧಿಸೂಚನೆ ಪ್ರಕಟಿಸಿದ 30 ದಿನಗಳೊಳಗೆ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರಿಗೆ ತಲುಪುವಂತೆ ಸಲ್ಲಿಸಲು ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್.ಗಣಪತಿ,

ಸರ್ಕಾರದ ಉಪ ಕಾರ್ಯದರ್ಶಿ,

(ಸಿ&ಸಿ ಮತ್ತು ಜವಳಿ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ದಿನಾಂಕ:01.01.2010ರಲ್ಲಿದ್ದಂತೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರ ತಾತ್ಕಾಲಿಕ ಜೇಷ್ಠತಾ ಪಟ್ಟಿ

ವೇತನ ಶ್ರೇಣಿ ರೂ.18150-26250

ಕ್ರಮ ಸಂಖ್ಯೆ	ಅಧಿಕಾರಿಗಳ ಹೆಸರು ಶ್ರೀಯುತರಾದ	ನೇರನೇಮಕಾತಿ ಮುಂಬಡ್ತಿ ಇತರೆ	ಮೀಸಲಾತಿ ವರ್ಗ	ಜನ್ಮದಿನಾಂಕ	ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ಹುದ್ದೆಯಲ್ಲಿ ಮುಂಬಡ್ತಿ/ ಹೊಂದಿದ ದಿನಾಂಕ	ಷರಾ
1	2	3	4	5	6	7	8
1	ಎಸ್. ಪ್ರಕಾಶ್	ಮುಂಬಡ್ತಿ	ಜಿ.ಎಂ.	14-04-1966	11-07-1994	18-08-2005	-
2	ಎ. ಸುರೇಶ್ ಕುಮಾರ್	ಮುಂಬಡ್ತಿ	ಪ.ಜಾ	07-06-1965	10-01-1994	18-08-2005	-
3	ಎಸ್. ಮುದ್ದಯ್ಯ	ಮುಂಬಡ್ತಿ	ಪ.ಜಾ	01-01-1964	15-07-1994	18-08-2005	-
4	ಬಿ. ಶ್ರೀಧರ್ ನಾಯಕ್	ಮುಂಬಡ್ತಿ	ಪ.ಜಾ	30-04-1970	03-01-1994	07-01-2006	-
5	ಹೆಚ್.ಎಸ್. ಸೋಮನಗೌಡರ್	ಮುಂಬಡ್ತಿ	ಜಿ.ಎಂ.	15-10-1961	10-01-1994	07-01-2006	-
6	ಪಿ.ಡಿ. ಪನ್ನೀರ್ ಸೆಲ್ವಂ	ಮುಂಬಡ್ತಿ	ಪ.ಜಾ	26-05-1957	16-01-1986	20-05-2009	-
7	ಜಿ.ಪಿ. ಶ್ರೀನಿವಾಸ್ ಮೂರ್ತಿ	ಮುಂಬಡ್ತಿ	ಪ.ಜಾ	28-07-1965	12-09-1988	20-05-2009	-

ಎಂ.ಎಸ್. ಗಣಪತಿ,

ಸರ್ಕಾರದ ಉಪ ಕಾರ್ಯದರ್ಶಿ,

(ಸಿ & ಸಿ ಜವಳಿ ಮತ್ತು ಬಿ & ಆರ್)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪಿ.ಆರ್. 1545

ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ರವರ ನಡವಳಿಗಳು

ವಿಷಯ: ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ನಂಗಲಿ ಗ್ರಾಮದ ಸರ್ವೆ ನಂ.447ರಲ್ಲಿ 3.20 ಎಕರೆಗೆ ಕಪ್ಪು ಶಿಲೆಗಾಗಿ ಶ್ರೀ ಎಲ್. ನಟರಾಜನ್ ರವರಿಗೆ ಮಂಜೂರಾಗಿದ್ದ ಕಲ್ಲು ಗಣಿಗುತ್ತಿಗೆ ಸಂಖ್ಯೆ:665ರ ಗುತ್ತಿಗೆಯನ್ನು ಪುನರ್ ಸ್ಥಾಪಿಸಿರುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಸಿಐ 384 ಎಂಎಂಎನ್ 2010, ದಿನಾಂಕ: 14.09.2010.

ಪ್ರಸ್ತಾವನೆ :

ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ನಂಗಲಿ ಗ್ರಾಮದ ಸರ್ವೆ ನಂ.447ರಲ್ಲಿ 3.20 ಎಕರೆ ವಿಸ್ತೀರ್ಣದಲ್ಲಿ ಕಪ್ಪು ಅಲಂಕಾರಿಕ ಶಿಲೆಗಾಗಿ ಕಲ್ಲು ಗಣಿ ಗುತ್ತಿಗೆ ಸಂಖ್ಯೆ 665ರ ಗುತ್ತಿಗೆಯನ್ನು ಶ್ರೀಮತಿ ನಿರ್ಮಲಾದೇವಿರವರ ಹೆಸರಿನಲ್ಲಿ ದಿನಾಂಕ:25.08.2004 ರಿಂದ 10 ವರ್ಷಗಳಿಗಾಗಿ ಗುತ್ತಿಗೆ ಮಂಜೂರು ಮಾಡಲಾಗಿತ್ತು ಗುತ್ತಿಗೆದಾರರು ಗುತ್ತಿಗೆ ಮೇಲಿನ ಬಾಕಿಯನ್ನು ಪಾವತಿಸದೆ ಗುತ್ತಿಗೆಯನ್ನು ನಿಷ್ಕ್ರಿಯಗೊಳಿಸಿದ ಕಾರಣ ದಿನಾಂಕ: 08.02.2010ರಿಂದ ಜಾರಿಗೆ ಬರುವಂತೆ ನಿರ್ದೇಶಕರಿಗೆ ಪ್ರತ್ಯಾಯೋಜಿಸಿರುವ ಅಡಿಯಲ್ಲಿ ಗುತ್ತಿಗೆಯನ್ನು ರದ್ದುಗೊಳಿಸಲಾಗಿತ್ತು.

ಅದರಂತೆ ಗುತ್ತಿಗೆದಾರರು ಪರಿಷ್ಕರಣ ಅರ್ಜಿಯನ್ನು ನಿಯಮ 53(2)ರ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರಂತೆ ಸರ್ಕಾರಕ್ಕೆ ಸಲ್ಲಿಸಿದ್ದು ಅದರಂತೆ ಸರ್ಕಾರವು ಉಲ್ಲೇಖಿತ ಪತ್ರದಲ್ಲಿ ಅರ್ಜಿಯನ್ನು ಪರಿಗಣಿಸಿ ಗುತ್ತಿಗೆಯನ್ನು ಪುನರ್ ಸ್ಥಾಪಿಸಲು ಆದೇಶಿಸಿರುವುದರಿಂದ ಈ ಆದೇಶ ಮಾಡಲಾಗಿದೆ.

ಆದೇಶ

ಆದೇಶ ಸಂಖ್ಯೆ:ಗಭೂಇ/ಕಗಗು/665/2010-11/10986, ದಿನಾಂಕ:26-10-2010.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ, ನಿರ್ದೇಶಕರಿಗೆ ಸರ್ಕಾರದ ಪತ್ರದ ದಿನಾಂಕ:14.09.2010ರಲ್ಲಿ ನಿರ್ದೇಶಿಸಿರುವಂತೆ ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ನಂಗಲಿಗ್ರಾಮದ ಸರ್ವೆ ನಂ.447ರಲ್ಲಿ 3.20 ಎಕರೆ ವಿಸ್ತೀರ್ಣದಲ್ಲಿ ಕಪ್ಪು ಅಲಂಕಾರಿಕ ಶಿಲೆಗಾಗಿ ಕಲ್ಲು ಗಣಿ ಗುತ್ತಿಗೆ ಸಂಖ್ಯೆ:665ರ ಗುತ್ತಿಗೆಯನ್ನು ಶ್ರೀ ಎಲ್. ನಟರಾಜನ್‌ರವರ ಹೆಸರಿನಲ್ಲಿ ಕಲ್ಲು ಗಣಿಗುತ್ತಿಗೆಯನ್ನು ಗುತ್ತಿಗೆ ರದ್ದುಗೊಳಿಸಿದ ದಿನಾಂಕ:18.02.2010ರಿಂದ ಗುತ್ತಿಗೆಯನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರ ನಿಯಮಗಳೊಳಗೊಂಡಂತೆ ಗುತ್ತಿಗೆಯನ್ನು ಪುನರ್ ಸ್ಥಾಪಿಸಲಾಗಿದೆ. ನಿಯಮ 6(3)ರ ಉಲ್ಲಂಘನ ಮಾಡಿದರಿಂದ ರೂ.10,000/-ಗಳ ದಂಡವನ್ನು ಪಾವತಿಸುವ ಷರತ್ತಿಗೆ ಒಳಪಡಿಸಿ, ಕಲ್ಲು ಗಣಿ ಗುತ್ತಿಗೆ ಅವಧಿ ಹಾಗೂ ಇನ್ನಿತರ ಷರತ್ತಿನಂತೆ ಗುತ್ತಿಗೆಯನ್ನು ಪುನರ್ ಸ್ಥಾಪಿಸಲಾಗಿದೆ.

ಪಿ.ಆರ್. 1562 ನಿರ್ದೇಶಕರು,

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ ಕುವೆಂಪು ರಸ್ತೆ, ಕೆನರಾ ಬ್ಯಾಂಕ್ ಎದುರು, ಶಿವಮೊಗ್ಗ.

ವಿಷಯ: ಗ್ರಾಮಾಂತರ ಮಹಿಳಾ ವಿವಿದೋದ್ದೇಶ ಸಹಕಾರ ಸಂಘ ನಿ., ಅರಳಿಹಳ್ಳಿ, ಭದ್ರಾವತಿ ತಾ: ಇದನ್ನು ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು ಶಿವಮೊಗ್ಗ, ರವರ ಪತ್ರ ನಂ.ಸನಿಶಿ-24/ಸಮಾಪನೆ/ಸಿಆರ್-07/2010-11/ ದಿನಾಂಕ: 30.09.2010.

2) ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಓ/201/ಸಿಎಲ್‌ಎಂ/2008 ಬೆಂಗಳೂರು ದಿ:27-05-2010.

ಪ್ರಸ್ತಾವನೆ :

ನಿಷ್ಕ್ರಿಯಗೊಂಡಿರುವ ಗ್ರಾಮಾಂತರ ಮಹಿಳಾ ವಿವಿದೋದ್ದೇಶ ಸಹಕಾರ ಸಂಘ ನಿ., ಅರಳಿಹಳ್ಳಿ, ಭದ್ರಾವತಿ ತಾ: ಈ ಸಹಕಾರ ಸಂಘವನ್ನು ಸಮಾಪನೆಗೊಳಿಸಲು ಉಲ್ಲೇಖ(1)ರ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಸಂಘವು ನೊಂದಣಿಸಂ:ಎಆರ್-24/ನೊಂದಣಿ/ಆರ್‌ಜಿಎನ್/23528/ 1997-98/ದಿನಾಂಕ:24-9-1997 ರಂದು ನೊಂದಣಿಯಾಗಿರುತ್ತದೆ. ಸಂಘದ ಕಾರ್ಯವ್ಯಾಪ್ತಿಯು ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ವ್ಯಾಪ್ತಿಯನ್ನು ಹೊಂದಿರುತ್ತದೆ.

ಸಂಘದ ಉಪನಿಯಮದ ಉದ್ದೇಶಗಳನ್ನು ಕಾರ್ಯರೂಪಕ್ಕೆ ತಂದು ಕಾರ್ಯನಿರ್ವಹಿಸದೆ 2 ವರ್ಷಗಳಿಂದ ಯಾವುದೇ ವ್ಯವಹಾರ ನಿರ್ವಹಿಸದೆ ಸ್ಥಗಿತಗೊಂಡ ಹಿನ್ನೆಲೆಯಲ್ಲಿ ಸಂಘದ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಸಂಘಕ್ಕೆ ವಿಶೇಷಾಧಿಕಾರಿಯನ್ನು ನೇಮಕ ಮಾಡಲಾಗಿತ್ತು. ವಿಶೇಷ ಅಧಿಕಾರಿಗಳು ಪ್ರಭಾರ ಪಡೆದು ವಿಶೇಷಾಧಿಕಾರಿ ಕಾರ್ಯನಿರ್ವಹಿಸಿ ದಿನಾಂಕ:27-09-2010 ರಂದು ವಿಶೇಷಾಧಿಕಾರಿ ಸಭೆ ನಡೆಸಿ, ಸಂಘದ ಆಡಳಿತ ಮಂಡಳಿ ರಚಿಸಿಕೊಂಡು ಸಂಘವನ್ನು ಮುನ್ನೆಡೆಸಿಕೊಂಡು ಹೋಗಲು ಯಾವುದೇ ಸದಸ್ಯರಲ್ಲಿ ಆಸಕ್ತಿ ಇಲ್ಲದೆ ಇರುವುದರಿಂದ ಸಂಘವನ್ನು ಸಮಾಪನೆಗೊಳಿಸಲು ತೀರ್ಮಾನಿಸಿರುತ್ತಾರೆ. ಸಹಕಾರ ಸಂಘಗಳ ಸಹಾಯಕ ನಿಬಂಧಕರು ಶಿವಮೊಗ್ಗ, ಉಪ-ವಿಭಾಗ, ಶಿವಮೊಗ್ಗ,ರವರು ವಿಶೇಷಾಧಿಕಾರಿಯವರ ತೀರ್ಮಾನವನ್ನು ಅನುಮೋದಿಸಿ ಉಲ್ಲೇಖ(1)ರ ಪತ್ರದಲ್ಲಿ ಸಮಾಪನೆಗೊಳಿಸಲು ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಪರಿಗಣಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸಂಖ್ಯೆ:ಡಿಆರ್‌ಎಸ್‌ಎಲ್‌ಕ್ಯೂಡಿ/ಡಿಎಲ್‌ಎಸ್/ಸಿಆರ್-46/2010-11/1101, ದಿನಾಂಕ:30-09-2010.

ಆದೇಶ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 72(2) ಅನ್ವಯ ಮತ್ತು ಸರ್ಕಾರದ ಅಧಿಸೂಚನೆ ಸಂ:ಸಿಓ201/ಸಿಎಲ್‌ಎಂ 2008 ಬೆಂಗಳೂರು ದಿನಾಂಕ:27-05-2010ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಸಿ.ಎನ್. ದೇವರಾಜು ಕೆ.ಸಿ.ಎಸ್. ಸಹಕಾರ ಸಂಘಗಳ ಉಪ-ನಿಬಂಧಕರು ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಆದ ನಾನು ಗ್ರಾಮಾಂತರ ಮಹಿಳಾ ವಿವಿದೋದ್ದೇಶ ಸಹಕಾರ ಸಂಘ ನಿ., ಅರಳಿಹಳ್ಳಿ, ಭದ್ರಾವತಿ ತಾ: ಈ

ಸಂಘವನ್ನು ಸಮಾಪನಗೊಳಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 73(1) ರಂತೆ ಸಹಕಾರ ಅಭಿವೃದ್ಧಿ ಅಧಿಕಾರಿ ಭದ್ರಾವತಿ ತಾಲ್ಲೂಕು, ಭದ್ರಾವತಿ ಇವರನ್ನು ಸಮಾಪನೆ ಅಧಿಕಾರಿಯಾಗಿ ನೇಮಕ ಮಾಡಿರುತ್ತೇನೆ.

ಸಮಾಪನಾಧಿಕಾರಿಗಳು ಕೂಡಲೇ ಸಂಘದ ಪ್ರಭಾರವನ್ನು ಪಡೆದು ಸಮಾಪನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಸಂಘದ ನೊಂದಣಿ ಕ್ರಮಾಂಕವನ್ನು ರದ್ದುಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿದೆ.

ಈ ಆದೇಶವನ್ನು ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ದಿನಾಂಕ:30-09-2010 ರಂದು ನೀಡಲಾಗಿದೆ.

ಸಿ.ಎನ್. ದೇವರಾಜು,
ಸಹಕಾರ ಸಂಘಗಳ ಉಪ ನಿಬಂಧಕರು,
ಶಿವಮೊಗ್ಗ ಜಿಲ್ಲ ಶಿವಮೊಗ್ಗ.

ಪಿ.ಆರ್. 1551

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇವರ ಕಛೇರಿ,

ಸಂಖ್ಯೆ:ಡಿಆರ್‌ಡಿ:ಎಲ್‌ಕ್ಯೂಡಿ:ಸಿಆರ್:8 /2009-10, ದಿನಾಂಕ:30-09-2010.

ವಿಷಯ: ಸ್ಥಗಿತಗೊಂಡಿರುವ ಮೀರಾಸಾಬಿಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ. ಚಳ್ಳಕೆರೆ ತಾಲ್ಲೂಕು ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73 ರನ್ವಯ ಸಮಾಪನೆ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿತ್ರದುರ್ಗ, ಇವರ ಪತ್ರದ ನಂ.ಸನಿ:30:ಸಮಾಪನೆ/ಸಿಆರ್:41/2009-10 ದಿನಾಂಕ: 16.01.2010.

2) ಈ ಕಛೇರಿಯ ಕಾರಣ ಕೇಳಿ ನೋಟೀಸು ಸಮ ಸಂಖ್ಯೆ ದಿ:19-01-2010

ಪ್ರಸ್ತಾವನೆ :

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ ಇವರು ಉಲ್ಲೇಖ (1) ರಲ್ಲಿ ಕಾಣಿಸಿದ ಪ್ರಸ್ತಾವನೆ ಪ್ರಕಾರ ಮೀರಾಸಾಬಿಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ. ಚಳ್ಳಕೆರೆ ತಾಲ್ಲೂಕು ಸಂಘದ ನೋಂದಣಿ ಸಂಖ್ಯೆ:ಸನಿ 30ಬಿಆರ್‌ಎಸ್‌ಆರ್/16746/1969-70 ದಿನಾಂಕ:15-03-1969 ಈ ಸಂಘದ ಕಾರ್ಯ ಚಟುವಟಿಕೆಗಳು ಅನೇಕ ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಹರಿಸುವಲ್ಲಿ ವಿಫಲರಾಗಿರುತ್ತಾರೆ ಮತ್ತು ಸಂಘವನ್ನು ಪುನ:ಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲವೆಂದು ಪ್ರಸ್ತಾವನೆ ಸಲ್ಲಿಸಿ, ಸಂಘವನ್ನು ಸಮಾಪನೆಗೊಳಿಸಲು ಕೋರಿರುತ್ತಾರೆ. ಈ ಬಗ್ಗೆ ಉಲ್ಲೇಖ (2) ರ ನೋಟೀಸನ್ನು ಈ ಕಛೇರಿಯಿಂದ ನೀಡಿದ್ದು, ಸಂಘದ ಆಡಳಿತ ಮಂಡಳಿಯವರಿಗೆ ನೋಟೀಸು ಜಾರಿ ಮಾಡಿ ಸ್ವೀಕೃತಿ ಈ ಕಛೇರಿಗೆ ತಲುಪಿದ್ದು, ಆದಾಗ್ಯೂ ಅವರು ಯಾವುದೇ ಸಮಜಾಯಿಷಿ ಅಥವಾ ಪ್ರತಿಕ್ರಿಯೆಯನ್ನು ನೀಡದೇ ನಿರುತ್ಸಾಹ ತೋರಿಸಿರುತ್ತಾರೆ. ಈ ಸಂಘದಿಂದ ಸಂಘದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ, ಇದರಿಂದ ಸಂಘವು ಪುನ:ಶ್ಚೇತನಗೊಳಿಸುವ ಹಂತವನ್ನು ಮೀರಿರುತ್ತದೆ. ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗುವ ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಅಭಿಪ್ರಾಯ ಪಟ್ಟು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

" ಆದೇಶ "

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 72(2) ರನ್ವಯ ಮತ್ತು ಸರ್ಕಾರದ ಅಧಿಸೂಚನೆ ಸಂ:ಸಿಓ201/ಸಿಎಲ್‌ಎಂ 2008 ಬೆಂಗಳೂರು ದಿನಾಂಕ:27-05-2010 ಪ್ರಕಾರ ದತ್ತವಾದ ಅಧಿಕಾರದನ್ವಯ ಇಲ್ಯಾಸ್ ಉಲ್ಲಾ ಷರೀಫ್ ಸಹಕಾರ ಸಂಘಗಳ ಉಪ-ನಿಬಂಧಕರು ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಆದ ನಾನು ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಮೀರಾಸಾಬಿಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಚಳ್ಳಕೆರೆ ತಾ: ಇದನ್ನು ಸಮಾಪನೆಗೊಳಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 73(1) ಅನ್ವಯ ಮಾರ್ಗ ಹಾಲು ವಿಸ್ತಾರಣಾಧಿಕಾರಿ, ಚಳ್ಳಕೆರೆ ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 73 (1) ಮತ್ತು 74 ರ ನಿಯಮದ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನಾಂಕ:30-09-2010 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು,
ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇವರ ಕಛೇರಿ,

ಸಂಖ್ಯೆ:ಡಿಆರ್‌ಡಿ:ಎಲ್‌ಕ್ಯೂಡಿ:ಸಿಆರ್:9 /2009-10, ದಿನಾಂಕ:30-09-2010.

ವಿಷಯ: ಸ್ಥಗಿತಗೊಂಡಿರುವ ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ. ಕಾರೆಹಳ್ಳಿ ಹೊಸದುರ್ಗ ತಾಲ್ಲೂಕು ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73 ರನ್ವಯ ಸಮಾಪನೆ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿತ್ರದುರ್ಗ, ಇವರ ಪತ್ರ ನಂ.ಸನಿ:30:ಸಮಾಪನೆ/ಸಿಆರ್:41/2009–10 ದಿನಾಂಕ: 16.01.2010.

2) ಈ ಕಛೇರಿಯ ಕಾರಣ ಕೇಳಿ ನೋಟೀಸು ಸಮ ಸಂಖ್ಯೆ ದಿ:19–01–2010

ಪ್ರಸ್ತಾವನೆ :

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ ಇವರು ಉಲ್ಲೇಖ (1) ರಲ್ಲಿ ಕಾಣಿಸಿದ ಪ್ರಸ್ತಾವನೆ ಪ್ರಕಾರ ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ. ಕಾರೆಹಳ್ಳಿ ಹೊಸದುರ್ಗ ತಾಲ್ಲೂಕು ಸಂಘದ ನೋಂದಣಿ ಸಂಖ್ಯೆ: ಸನಿ:30:72/ಆರ್‌ಜಿಎನ್/30481/2001–02 ದಿನಾಂಕ: 12–04–2001 ಈ ಸಂಘದ ಕಾರ್ಯ ಚಟುವಟಿಕೆಗಳು ಅನೇಕ ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಹರಿಸುವಲ್ಲಿ ವಿಫಲರಾಗಿರುತ್ತಾರೆ ಮತ್ತು ಸಂಘವನ್ನು ಪುನ:ಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲವೆಂದು ಪ್ರಸ್ತಾವನೆ ಸಲ್ಲಿಸಿ. ಸಂಘವನ್ನು ಸಮಾಪನೆಗೊಳಿಸಲು ಕೋರಿರುತ್ತಾರೆ. ಈ ಬಗ್ಗೆ ಉಲ್ಲೇಖ (2) ರ ನೋಟೀಸನ್ನು ಈ ಕಛೇರಿಯಿಂದ ನೀಡಿದ್ದು, ಸಂಘದ ಆಡಳಿತ ಮಂಡಳಿಯವರಿಗೆ ನೋಟೀಸು ಜಾರಿ ಮಾಡಿ ಸ್ವೀಕೃತಿ ಈ ಕಛೇರಿಗೆ ತಲುಪಿದ್ದು, ಅದಾಗ್ಯೂ ಅವರು ಯಾವುದೇ ಸಮಜಾಯಿಷಿ ಅಥವಾ ಪ್ರತಿಕ್ರಿಯೆಯನ್ನು ನೀಡದೇ ನಿರುತ್ಸಾಹ ತೋರಿಸಿರುತ್ತಾರೆ. ಈ ಸಂಘದಿಂದ ಸಂಘದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ, ಇದರಿಂದ ಸಂಘವು ಪುನ:ಶ್ಚೇತನಗೊಳಿಸುವ ಹಂತವನ್ನು ಮೀರಿರುತ್ತದೆ. ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗುವ ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಅಭಿಪ್ರಾಯ ಪಟ್ಟು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

" ಆದೇಶ "

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 72(2) ರನ್ವಯ ಸರ್ಕಾರದ ಅಧಿಸೂಚನೆ ಸಂ:ಸಿಓ201/ಸಿಎಲ್‌ಎಂ 2008 ಬೆಂಗಳೂರು ದಿನಾಂಕ:27–05–2010 ಪ್ರಕಾರ ದತ್ತವಾದ ಅಧಿಕಾರದನ್ವಯ ಇಲ್ಯಾಸ್ ಉಲ್ಲಾ ಷರೀಫ್ ಸಹಕಾರ ಸಂಘಗಳ ಉಪ–ನಿಬಂಧಕರು ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಆದ ನಾನು ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ. ಕಾರೆಹಳ್ಳಿ ಹೊಸದುರ್ಗ ತಾಲ್ಲೂಕು ಇದನ್ನು ಸಮಾಪನೆಗೊಳಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 73(1) ಅನ್ವಯ ಸಹಕಾರ ಅಭಿವೃದ್ಧಿ ಅಧಿಕಾರಿ, ಹೊಸದುರ್ಗ ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 73 (1) ಮತ್ತು 74 ರ ನಿಯಮದ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನಾಂಕ:30–09–2010 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು,
ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇವರ ಕಛೇರಿ,

ಸಂಖ್ಯೆ:ಡಿಆರ್‌ಡಿ:ಎಲ್‌ಕ್ಯೂಡಿ:ಸಿಆರ್:10/2009–10, ದಿನಾಂಕ:30–09–2010.

ವಿಷಯ: ಸ್ಥಗಿತಗೊಂಡಿರುವ ನೀರು ಬಳಕೆದಾರರ ಸಹಕಾರ ಸಂಘ ನಿ. ಶ್ರೀರಾಂಪುರ ಹೊಸದುರ್ಗ ತಾಲ್ಲೂಕು ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73 ರನ್ವಯ ಸಮಾಪನೆ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿತ್ರದುರ್ಗ, ಇವರ ಪತ್ರ ನಂ.ಸನಿ:30:ಸಮಾಪನೆ/ಸಿಆರ್:35/2009–10 ದಿನಾಂಕ: 11.01.2010.

2) ಈ ಕಛೇರಿಯ ಕಾರಣ ಕೇಳಿ ನೋಟೀಸು ಸಮ ಸಂಖ್ಯೆ ದಿ:20–01–2010

ಪ್ರಸ್ತಾವನೆ :

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ ಇವರು ಉಲ್ಲೇಖ (1) ರಲ್ಲಿ ಕಾಣಿಸಿದ ಪ್ರಸ್ತಾವನೆ ಪ್ರಕಾರ ನೀರು ಬಳಕೆದಾರರ ಸಹಕಾರ ಸಂಘ ನಿ. ಶ್ರೀರಾಂಪುರ ಹೊಸದುರ್ಗ ತಾಲ್ಲೂಕು ಸಂಘದ ನೋಂದಣಿ ಸಂಖ್ಯೆ:ಸನಿ30:30/49 ಆರ್‌ಜಿಎಸ್/30451/2000–01 ದಿನಾಂಕ:16–11–2000 ಈ ಸಂಘದ ಕಾರ್ಯ ಚಟುವಟಿಕೆಗಳು ಅನೇಕ ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಹರಿಸುವಲ್ಲಿ ವಿಫಲರಾಗಿರುತ್ತಾರೆ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲವೆಂದು ಪ್ರಸ್ತಾವನೆ ಸಲ್ಲಿಸಿ. ಸಂಘವನ್ನು ಸಮಾಪನೆಗೊಳಿಸಲು ಕೋರಿರುತ್ತಾರೆ. ಈ ಬಗ್ಗೆ ಉಲ್ಲೇಖ (2) ರ ನೋಟೀಸನ್ನು ಈ ಕಛೇರಿಯಿಂದ ನೀಡಿದ್ದು, ಸಂಘದ ಆಡಳಿತ ಮಂಡಳಿಯವರಿಗೆ ನೋಟೀಸು ಜಾರಿ ಮಾಡಿ ಸ್ವೀಕೃತಿ ಈ ಕಛೇರಿಗೆ ತಲುಪಿದ್ದು, ಅದಾಗ್ಯೂ ಅವರು ಯಾವುದೇ ಸಮಜಾಯಿಷಿ ಅಥವಾ ಪ್ರತಿಕ್ರಿಯೆಯನ್ನು ನೀಡದೇ ನಿರುತ್ಸಾಹ ತೋರಿಸಿರುತ್ತಾರೆ. ಈ ಸಂಘದಿಂದ ಸಂಘದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ, ಇದರಿಂದ ಸಂಘವು ಪುನ:ಶ್ಚೇತನಗೊಳಿಸುವ ಹಂತವನ್ನು ಮೀರಿರುತ್ತದೆ. ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗುವ ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಅಭಿಪ್ರಾಯ ಪಟ್ಟು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

" ಆದೇಶ "

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 72(2) ರನ್ವಯ ಸರ್ಕಾರದ ಅಧಿಸೂಚನೆ ಸಂ: ಸಿಓ: 201: ಸಿಎಲ್‌ಎಂ 2008/ ಬೆಂಗಳೂರು ದಿನಾಂಕ:27-05-2010 ಪ್ರಕಾರ ದತ್ತವಾದ ಅಧಿಕಾರದನ್ವಯ ಇಲ್ಯಾಸ್ ಉಲ್ಲಾ ಷರೀಫ್ ಸಹಕಾರ ಸಂಘಗಳ ಉಪ-ನಿಬಂಧಕರು ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಆದ ನಾನು ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ನೀರು ಬಳಕೆದಾರರ ಸಹಕಾರ ಸಂಘ ನಿ. ಶ್ರೀರಾಂಪುರ ಹೊಸದುರ್ಗ ತಾಲ್ಲೂಕು ಇದನ್ನು ಸಮಾಪನೆಗೊಳಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 73(1) ಅನ್ವಯ ಸಹಕಾರ ಅಭಿವೃದ್ಧಿ ಅಧಿಕಾರಿ ಹೊಸದುರ್ಗ ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 73 (1) ಮತ್ತು 74 ರ ನಿಯಮದ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನಾಂಕ:30-09-2010 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು,
ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ಪಿ.ಆರ್.1557

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇವರ ಕಛೇರಿ,

ಸಂಖ್ಯೆ:ಡಿಆರ್‌ಡಿ:ಎಲ್‌ಕ್ಯೂಡಿ:ಸಿಆರ್:5 /2009-10, ದಿನಾಂಕ:30-09-2010.

ವಿಷಯ: ಸ್ಥಗಿತಗೊಂಡಿರುವ ಸರ್.ಎಂ. ವಿಶ್ವೇಶ್ವರಯ್ಯ ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ. ಪಿ.ಮಹಾದೇವಪುರ, ಚಳ್ಳಕೆರೆ ತಾಲ್ಲೂಕು ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73 ರನ್ವಯ ಸಮಾಪನೆ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿತ್ರದುರ್ಗ, ಇವರ ಪತ್ರ ನಂ.ಸನಿ:30:ಸಮಾಪನೆ/ಸಿಆರ್:35/2009-10 ದಿನಾಂಕ: 12.01.2010.

2) ಈ ಕಛೇರಿಯ ಕಾರಣ ಕೇಳಿ ನೋಟೀಸು ಸಮ ಸಂಖ್ಯೆ ದಿ:20-01-2010

ಪ್ರಸ್ತಾವನೆ :

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ ಇವರು ಉಲ್ಲೇಖ (1) ರಲ್ಲಿ ಕಾಣಿಸಿದ ಪ್ರಸ್ತಾವನೆ ಪ್ರಕಾರ ಸರ್.ಎಂ. ವಿಶ್ವೇಶ್ವರಯ್ಯ ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ. ಪಿ.ಮಹಾದೇವಪುರ, ಚಳ್ಳಕೆರೆ ತಾಲ್ಲೂಕು ಸಂಘದ ನೋಂದಣಿ ಸಂಖ್ಯೆ:ಸನಿ 30:38/ಆರ್‌ಜಿಎನ್/26847/2000-01 ದಿನಾಂಕ:28-09-2000 ಈ ಸಂಘದ ಕಾರ್ಯ ಚಟುವಟಿಕೆಗಳು ಅನೇಕ ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ.ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಹರಿಸುವಲ್ಲಿ ವಿಫಲರಾಗಿರುತ್ತಾರೆ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲವೆಂದು ಪ್ರಸ್ತಾವನೆ ಸಲ್ಲಿಸಿ, ಸಂಘವನ್ನು ಸಮಾಪನೆಗೊಳಿಸಲು ಕೋರಿರುತ್ತಾರೆ. ಈ ಬಗ್ಗೆ ಉಲ್ಲೇಖ (2) ರ ನೋಟೀಸನ್ನು ಈ ಕಛೇರಿಯಿಂದ ನೀಡಿದ್ದು, ಸಂಘದ ಆಡಳಿತ ಮಂಡಳಿಯವರಿಗೆ ನೋಟೀಸು ಜಾರಿ ಮಾಡಿ ಸ್ವೀಕೃತಿ ಈ ಕಛೇರಿಗೆ ತಲುಪಿದ್ದು, ಅದಾಗ್ಯೂ ಅವರು ಯಾವುದೇ ಸಮಜಾಯಿಷಿ ಅಥವಾ ಪ್ರತಿಕ್ರಿಯೆಯನ್ನು ನೀಡದೇ ನಿರುತ್ಸಾಹ ತೋರಿಸಿರುತ್ತಾರೆ. ಈ ಸಂಘದಿಂದ ಸಂಘದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ, ಇದರಿಂದ ಸಂಘವು ಪುನ:ಶ್ಚೇತನಗೊಳಿಸುವ ಹಂತವನ್ನು ಮೀರಿರುತ್ತದೆ. ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿ ಹೋಗುವ ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಅಭಿಪ್ರಾಯ ಪಟ್ಟು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

" ಆದೇಶ "

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 72(2) ರನ್ವಯ ಸರ್ಕಾರದ ಅಧಿಸೂಚನೆ ಸಂ:ಸಿಓ201/ಸಿಎಲ್‌ಎಂ 2008 ಬೆಂಗಳೂರು ದಿನಾಂಕ:27-05-2010 ಪ್ರಕಾರ ದತ್ತವಾದ ಅಧಿಕಾರದನ್ವಯ ಇಲ್ಯಾಸ್ ಉಲ್ಲಾ ಷರೀಫ್ ಸಹಕಾರ ಸಂಘಗಳ ಉಪ-ನಿಬಂಧಕರು ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಆದ ನಾನು ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಸರ್.ಎಂ. ವಿಶ್ವೇಶ್ವರಯ್ಯ ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ. ಪಿ.ಮಹಾದೇವಪುರ, ಚಳ್ಳಕೆರೆ ತಾಲ್ಲೂಕು ಇದನ್ನು ಸಮಾಪನೆಗೊಳಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 73(1) ಅನ್ವಯ ಸಹಕಾರ ಅಭಿವೃದ್ಧಿ ಅಧಿಕಾರಿ, ಚಳ್ಳಕೆರೆ ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 73 (1) ಮತ್ತು 74 ರ ನಿಯಮದ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನಾಂಕ:30-09-2010 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು,
ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇವರ ಕಛೇರಿ,

ಸಂಖ್ಯೆ:ಡಿಆರ್‌ಡಿ:ಎಲ್‌ಕ್ಯೂಡಿ:ಸಿಆರ್:50 /2009-10, ದಿನಾಂಕ:30-09-2010.

ವಿಷಯ: ಸಮಾಪನೆಯಲ್ಲಿರುವ ವಾಣಿ ವಿಲಾಸ ಸಾಗರ ಜಲಾಶಯ ನೀರು ಬಳಕೆದಾರರ ಸಹಕಾರ ಸಂಘ ನಿ. ರಂಗನಾಥಪುರ, ಹಿರಿಯೂರು ತಾಲ್ಲೂಕು ಈ ಸಂಘವನ್ನು ಪುನಶ್ಚೇತನಗೊಳಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿಯ ಆದೇಶ ಸಮ ಸಂಖ್ಯೆ: ಡಿಆರ್‌ಡಿಎಲ್:ಕ್ಯೂಡಿ:ಸಿಆರ್/ 50/2009-10 ದಿನಾಂಕ: 07.12.2009.

2) ಸಮಾಪನಾಧಿಕಾರಿಗಳು ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿಗಳು ಹಿರಿಯೂರು ಇವರ ಪತ್ರದ ಸಂ. ಸಿಡಿಓ:ಹಿರಿಯೂರು: ಸಮಾಪನೆ: 2008-09 ದಿನಾಂಕ: 28-07-2010.

3) ಸಂಘದ ಸದಸ್ಯರುಗಳ ಮನವಿ ದಿ:20-07-2010

ಪ್ರಸ್ತಾವನೆ :

ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ವಾಣಿ ವಿಲಾಸ ಸಾಗರ ಜಲಾಶಯ ನೀರು ಬಳಕೆದಾರರ ಸಹಕಾರ ಸಂಘ ನಿ. ರಂಗನಾಥಪುರ, ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ, ಈ ಸಂಘವನ್ನು ಸಂಘದ ಕಾರ್ಯಚಟುವಟಿಕೆಗಳನ್ನು ನಡೆಸದೇ ಮತ್ತು ಆಡಳಿತ ಮಂಡಳಿ ಸಭೆಯನ್ನು ನಡಸದೇ ವಿಫಲಗೊಂಡಿರುವ ಕಾರಣದಿಂದ ಉಲ್ಲೇಖ (1)ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ, ಹಿರಿಯೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು.

ಉಲ್ಲೇಖ (3) ರ ಪತ್ರದಲ್ಲಿ ಸಂಘದ ಸದಸ್ಯರುಗಳು ದಿನಾಂಕ:20-07-2010 ರಂದು ಸಹಕಾರ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ ಸಂಘವನ್ನು ಪುನ:ಶ್ಚೇತನಗೊಳಿಸುವ ಬಗ್ಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿಯವರ ಮನವಿಯನ್ನು ಪರಿಶೀಲಿಸಿ ಸಂಘವನ್ನು ಪುನ:ಶ್ಚೇತನಗೊಳಿಸುವ ಬಗ್ಗೆ ಉಲ್ಲೇಖ (2) ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಸದರಿಯವರು ಶಿಫಾರಸ್ಸು ಮಾಡಿರುವ ಪ್ರಸ್ತಾವನೆಯನ್ನು ಪರಿಶೀಲಿಸಿದಾಗಿ ಭದ್ರಕಾಡಾ ಶಿವಮೊಗ್ಗ ಇವರಿಂದ ಯೋಜನೆಯಡಿಯಲ್ಲಿ ರೈತರ ಜಮೀನುಗಳಿಗೆ ನೀರು ನಿರ್ವಹಣೆ ಜವಾಬ್ದಾರಿಯನ್ನು ಭದ್ರಕಾಡದವರು ಸಂಘಕ್ಕೆ ನೀಡುವ ವ್ಯವಸ್ಥೆ ಇದ್ದು, ಕಾಡಾ ಯೋಜನೆಯ ಅನುದಾನವನ್ನು ರೈತರ ಜಮೀನುಗಳ ಕಾಲುವೆಗಳ ದುರಸ್ಥಿಗಾಗಿ ನೇರವಾಗಿ ಸಂಘಕ್ಕೆ ನೀಡುವ ವ್ಯವಸ್ಥೆ ಇದ್ದು ಮತ್ತು ಸಂಘದ ನಿರ್ದೇಶಕರುಗಳಿಗೆ ಮತ್ತು ಕಾರ್ಯದರ್ಶಿಗಳಿಗೆ ಸಹಕಾರ ಕಾಯ್ದೆ ಮತ್ತು ನೀರಾವರಿ ಕಾಯ್ದೆ ಇತ್ಯಾದಿ ವಿಷಯಗಳ ಬಗ್ಗೆ ತರಬೇತಿ ನೀಡಲಾಗುವುದು ಕಛೇರಿ ಕಂ ಗೋದಾಮು ನಿರ್ಮಾಣಕ್ಕೆ ಸಹಾಯಧನ ನೀಡಲಾಗುವುದು ಎಂದು ದಿನಾಂಕ: 15-07-2010 ರಂದು ನಡೆದ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡಿರುವುದರಿಂದ ಸಂಘವನ್ನು ಪುನ:ಶ್ಚೇತನಗೊಳಿಸಲು ಸಮಾಪನಾಧಿಕಾರಿ ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ, ಹಿರಿಯೂರು ಇವರು ಶಿಫಾರಸ್ಸು ಮಾಡಿರುತ್ತಾರೆ. ಸಂಘವನ್ನು ಪುನ:ಶ್ಚೇತನಗೊಳಿಸುವುದು ಸೂಕ್ತವೆಂದು ಮನಗಂಡು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

" ಆದೇಶ "

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಸಹಕಾರ ಸಂಘಗಳ ಕಾಯ್ದೆ 1959 ಕಲಂ 72 (3) ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂ:ಸಿಓ201/ಸಿಎಲ್‌ಎಂ 2008 ದಿನಾಂಕ:27-05-2010ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇಲ್ಯಾಸ್ ಉಲ್ಲಾ ಷರೀಫ್ ಸಹಕಾರ ಸಂಘಗಳ ಉಪ-ನಿಬಂಧಕರು ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಆದ ನಾನು ವಾಣಿ ವಿಲಾಸ ಸಾಗರ ಜಲಾಶಯ ನೀರು ಬಳಕೆದಾರರ ಸಹಕಾರ ಸಂಘ ನಿ. ರಂಗನಾಥಪುರ, ಹಿರಿಯೂರು ತಾಲ್ಲೂಕು ಸಂಘವನ್ನು ಉಲ್ಲೇಖ (1) ರ ಮೇರೆಗೆ ಆದೇಶಿಸಲಾದ ಪರಿಸಮಾಪನಾ ಆದೇಶವನ್ನು ರದ್ದುಪಡಿಸಿ, ಸಂಘದ ಪುನಶ್ಚೇತನಕ್ಕೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಆದೇಶಿಸಿರುತ್ತೇನೆ.

" ಷರತ್ತುಗಳು "

1) ಸಂಘದ ಸಮಾಪನಾಧಿಕಾರಿಗಳು ಸಂಘದ ಮೊದಲಿನ ಮಹಾಸಭೆಯನ್ನು ಕರೆದು ಆಡಳಿತ ಮಂಡಳಿ ಪುನರ್ ರಚಿಸತಕ್ಕದ್ದು. ಆಡಳಿತ ಮಂಡಳಿ ರಚನೆ ಬಗ್ಗೆ ಚುನಾವಣಾಧಿಕಾರಿಯನ್ನಾಗಿ ಸಹಕಾರ ಅಭಿವೃದ್ಧಿ ಅಧಿಕಾರಿ, ಹಿರಿಯೂರು ಇವರನ್ನು ನೇಮಿಸಲಾಗಿದೆ. ನೇಮಿಸಲಾದ ಚುನಾವಣಾಧಿಕಾರಿಯವರು ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 14 ರ ಪ್ರಕಾರ ಚುನಾವಣಾ ವೇಳಾ ಪಟ್ಟಿಯನ್ನು ನಮೂದಿಸಿ ಸಂಘಕ್ಕೆ ಮೊದಲನೆ ಆಡಳಿತ ಮಂಡಳಿ ರಚಿಸಲು ಆದೇಶಿಸಿದೆ.

ಈ ಆದೇಶವನ್ನು ನನ್ನ ಸ್ವಹಸ್ತ ಸಹಿ ಹಾಗೂ ಈ ಕಛೇರಿ ಮೊಹರಿನೊಂದಿಗೆ ಈ ದಿನ ದಿನಾಂಕ:30-09-2010 ರಂದು ನೀಡಲಾಗಿರುತ್ತದೆ.

ಸಹಕಾರ ಸಂಘಗಳ ಉಪ ನಿಬಂಧಕರು,

ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇವರ ಕಛೇರಿ,

ಸಂಖ್ಯೆ:ಡಿಆರ್‌ಡಿ:ಎಲ್‌ಕ್ಯೂಡಿ:ಸಿಆರ್:50 /2009-10, ದಿನಾಂಕ:30-09-2010

ವಿಷಯ: ಸಮಾಪನೆಯಲ್ಲಿರುವ ವಾಣಿ ವಿಲಾಸ ಸಾಗರ ಜಲಾಶಯ ನೀರು ಬಳಕೆದಾರರ ಸಹಕಾರ ಸಂಘ ನಿ. ಉಪ್ಪಳಗೆರೆ, ಹಿರಿಯೂರು ತಾಲ್ಲೂಕು ಈ ಸಂಘವನ್ನು ಪುನಶ್ಚೇತನಗೊಳಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿಯ ಆದೇಶ ಸಮ ಸಂಖ್ಯೆ: ಡಿಆರ್‌ಡಿಎಲ್:ಕ್ಯೂಡಿ:ಸಿಆರ್/ 50/2009-10 ದಿನಾಂಕ: 07.12.2009.

2) ಸಮಾಪನಾಧಿಕಾರಿಗಳು ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿಗಳು ಹಿರಿಯೂರು ಇವರ ಪತ್ರದ ಸಂ. ಸಿಡಿಓ:ಹಿರಿಯೂರು: ಸಮಾಪನೆ: 2008-09 ದಿನಾಂಕ: 28-07-2010.

3) ಸಂಘದ ಸದಸ್ಯರುಗಳ ಮನವಿ ದಿ:20-07-2010

ಪ್ರಸ್ತಾವನೆ :

ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ವಾಣಿ ವಿಲಾಸ ಸಾಗರ ಜಲಾಶಯ ನೀರು ಬಳಕೆದಾರರ ಸಹಕಾರ ಸಂಘ ನಿ. ಉಪ್ಪಳಗೆರೆ, ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ, ಈ ಸಂಘವನ್ನು ಸಂಘದ ಕಾರ್ಯಚಟುವಟಿಕೆಗಳನ್ನು ನಡೆಸದೇ ಮತ್ತು ಆಡಳಿತ ಮಂಡಳಿ ಸಭೆಯನ್ನು ನಡೆಸದೇ ವಿಫಲಗೊಂಡಿರುವ ಕಾರಣದಿಂದ ಉಲ್ಲೇಖ (1)ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ, ಹಿರಿಯೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು.

ಉಲ್ಲೇಖ (3) ರ ಪತ್ರದಲ್ಲಿ ಸಂಘದ ಸದಸ್ಯರುಗಳು ದಿನಾಂಕ:20-07-2010 ರಂದು ಸಹಕಾರ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ ಸಂಘವನ್ನು ಪುನ:ಶ್ಚೇತನಗೊಳಿಸುವ ಬಗ್ಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿಯವರ ಮನವಿಯನ್ನು ಪರಿಶೀಲಿಸಿ ಸಂಘವನ್ನು ಪುನ:ಶ್ಚೇತನಗೊಳಿಸುವ ಬಗ್ಗೆ ಉಲ್ಲೇಖ (2) ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಸದರಿಯವರು ಶಿಫಾರಸ್ಸು ಮಾಡಿರುವ ಪ್ರಸ್ತಾವನೆಯನ್ನು ಪರಿಶೀಲಿಸಿದಾಗ ಸಂಘದ ಸದಸ್ಯರುಗಳು ಸಂಘದ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಂಘದ ಉದ್ದೇಶಗಳ ರೀತ್ಯಾ ಕಾರ್ಯ ಕ್ರಮಗಳನ್ನು ರೂಪಿಸಿಕೊಂಡು ಸಂಘದ ಸದಸ್ಯರ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸಲು ನಾವೆಲ್ಲರೂ ಬದ್ಧರಾಗಿರುತ್ತೇವೆ. ಭದ್ರಕಾಡಾ ಯೋಜನೆಯಡಿಯಲ್ಲಿ ರೈತರ ಜಮೀನುಗಳಿಗೆ ನೀರು ನಿರ್ವಹಣೆ ಜವಾಬ್ದಾರಿಯನ್ನು ಭದ್ರಕಾಡಾದವರು ಸಂಘಕ್ಕೆ ನೀಡುವ ವ್ಯವಸ್ಥೆ ಇದ್ದು, ಕಾಡಾ ಯೋಜನೆಯ ಅನುದಾನವನ್ನು ರೈತರ ಜಮೀನುಗಳ ಕಾಲುವೆಗಳ ದುರಸ್ಥಿಗಾಗಿ ನೇರವಾಗಿ ಸಂಘಕ್ಕೆ ನೀಡುವ ವ್ಯವಸ್ಥೆ ಮಾಡುವುದರಿಂದ ಸಂಘವನ್ನು ಪುನ:ಶ್ಚೇತನಗೊಳಿಸಲು ಸಮಾಪನಾಧಿಕಾರಿ ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ, ಹಿರಿಯೂರು ಇವರು ಶಿಫಾರಸ್ಸು ಮಾಡಿರುತ್ತಾರೆ. ಸಂಘವನ್ನು ಪುನ:ಶ್ಚೇತನಗೊಳಿಸುವುದು ಸೂಕ್ತವೆಂದು ಮನಗಂಡು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

" ಆದೇಶ "

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಸಹಕಾರ ಸಂಘಗಳ ಕಾಯ್ದೆ 1959 ಕಲಂ 72 (3) ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂ:ಸಿಓ201/ಸಿಎಲ್ಎಂ 2008 ದಿನಾಂಕ:27-05-2010ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇಲ್ಯಾಸ್ ಉಲ್ಲಾ ಷರೀಫ್ ಸಹಕಾರ ಸಂಘಗಳ ಉಪ-ನಿಬಂಧಕರು ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಆದ ನಾನು ವಾಣಿ ವಿಲಾಸ ಸಾಗರ ಜಲಾಶಯ ನೀರು ಬಳಕೆದಾರರ ಸಹಕಾರ ಸಂಘ ನಿ. ಉಪ್ಪಳಗೆರೆ, ಹಿರಿಯೂರು ತಾಲ್ಲೂಕು ಸಂಘವನ್ನು ಉಲ್ಲೇಖ (1) ರ ಮೇರೆಗೆ ಆದೇಶಿಸಲಾದ ಪರಿಸಮಾಪನಾ ಆದೇಶವನ್ನು ರದ್ದುಪಡಿಸಿ, ಸಂಘದ ಪುನಶ್ಚೇತನಕ್ಕೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಆದೇಶಿಸಿರುತ್ತೇನೆ.

" ಷರತ್ತುಗಳು "

1) ಸಂಘದ ಸಮಾಪನಾಧಿಕಾರಿಗಳು ಸಂಘದ ಮೊದಲಿನ ಮಹಾಸಭೆಯನ್ನು ಕರೆದು ಆಡಳಿತ ಮಂಡಳಿ ಪುನರ್ ರಚಿಸತಕ್ಕದ್ದು. ಆಡಳಿತ ಮಂಡಳಿ ರಚನೆ ಬಗ್ಗೆ ಚುನಾವಣಾಧಿಕಾರಿಯನ್ನಾಗಿ ಸಹಕಾರ ಅಭಿವೃದ್ಧಿ ಅಧಿಕಾರಿ, ಹಿರಿಯೂರು ಇವರನ್ನು ನೇಮಿಸಲಾಗಿದೆ. ನೇಮಿಸಲಾದ ಚುನಾವಣಾಧಿಕಾರಿಯವರು ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 14 ರ ಪ್ರಕಾರ ಚುನಾವಣಾ ವೇಳಾ ಪಟ್ಟಿಯನ್ನು ನಮೂದಿಸಿ ಸಂಘಕ್ಕೆ ಮೊದಲನೆ ಆಡಳಿತ ಮಂಡಳಿ ರಚಿಸಲು ಆದೇಶಿಸಿದೆ.

ಈ ಆದೇಶವನ್ನು ನನ್ನ ಸ್ವಹಸ್ತ ಸಹಿ ಹಾಗೂ ಈ ಕಛೇರಿ ಈ ಮೊಹರಿನೊಂದಿಗೆ ಈ ದಿನ ದಿನಾಂಕ:30-09-2010 ರಂದು ನೀಡಲಾಗಿರುತ್ತದೆ.

ಸಹಕಾರ ಸಂಘಗಳ ಉಪ ನಿಬಂಧಕರು,

ಪಿ.ಆರ್. 1558

ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆ, ಚಾಮರಾಜಪೇಟೆ, ಬೆಂಗಳೂರು

ಅಧಿಸೂಚನೆ

ಸಂಖ್ಯೆ: ಸಿಬ್ಬಂದಿ 1/ಸಿಆರ್/41/05-06, ದಿನಾಂಕ:21.08.2010

ವಿಷಯ: ಭಾರತ ಸರ್ಕಾರದ ಮಾಹಿತಿ ಪಡೆಯುವ ಹಕ್ಕು ಅಧಿನಿಯಮ 2005ರ ಅನ್ವಯ ಧಾರ್ಮಿಕ ದತ್ತಿ ಇಲಾಖೆಗೆ ಸಂಬಂಧಪಟ್ಟಂತೆ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಿಗಳನ್ನು ನೇಮಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 37 ವಿಮಕ 2005 ದಿನಾಂಕ:08.02.2006.

2) ಈ ಕಛೇರಿಯ ಸಮ ಸಂಖ್ಯೆಯ ಅಧಿಸೂಚನೆ ದಿನಾಂಕ:16.06.2007.

ಭಾರತ ಸರ್ಕಾರದ ಮಾಹಿತಿ ಪಡೆಯುವ ಹಕ್ಕು ಅಧಿನಿಯಮ 2005ರ ಸೆಕ್ಷನ್ 5(1) 5(2) ಹಾಗೂ 19(1) ರಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಉಲ್ಲೇಖ (2)ರ ಅಧಿಸೂಚನೆಗೆ ಪೂರಕವಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರಿಗಳನ್ನು ಧಾರ್ಮಿಕ ದತ್ತಿ ಇಲಾಖೆಗೆ ಸಂಬಂಧಿಸಿದಂತೆ ನೇಮಿಸಲಾಗಿದೆ.

ಕ್ರ ಸಂ.	ಕಛೇರಿ ಹೆಸರು	ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 5(2)ರ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 19(1)ರ ಪ್ರಕಾರ ಮೇಲ್ಮನವಿ ಪ್ರಾಧಿಕಾರಿ
1.	ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.	ಅಪರ ಜಿಲ್ಲಾಧಿಕಾರಿಗಳು	ಮುಜರಾಯಿ ಸಹಾಯಕರು	ಜಿಲ್ಲಾಧಿಕಾರಿಗಳು
2.	ಜಿಲ್ಲಾಧಿಕಾರಿಗಳ ಕಛೇರಿ ದಕ್ಷಿಣ ಕನ್ನಡ ಜಿಲ್ಲೆ.	ಅಪರ ಜಿಲ್ಲಾಧಿಕಾರಿಗಳು	ಮುಜರಾಯಿ ಸಹಾಯಕರು	ಜಿಲ್ಲಾಧಿಕಾರಿಗಳು
3.	ಜಿಲ್ಲಾಧಿಕಾರಿಗಳ ಕಛೇರಿ ಉಡುಪಿ ಜಿಲ್ಲೆ.	ಅಪರ ಜಿಲ್ಲಾಧಿಕಾರಿಗಳು	ಮುಜರಾಯಿ ಸಹಾಯಕರು	ಜಿಲ್ಲಾಧಿಕಾರಿಗಳು
4.	ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲೆ.	ಅಪರ ಜಿಲ್ಲಾಧಿಕಾರಿಗಳು	ಕಛೇರಿ ಸಹಾಯಕರು	ಜಿಲ್ಲಾಧಿಕಾರಿಗಳು
5.	ಜಿಲ್ಲಾಧಿಕಾರಿಗಳ ಕಛೇರಿ, ಬೆಳಗಾವಿ ಜಿಲ್ಲೆ.	ಅಪರ ಜಿಲ್ಲಾಧಿಕಾರಿಗಳು	ಮುಜರಾಯಿ ಸಹಾಯಕರು	ಜಿಲ್ಲಾಧಿಕಾರಿಗಳು
6.	ಜಿಲ್ಲಾಧಿಕಾರಿಗಳ ಕಛೇರಿ ಉತ್ತರ ಕನ್ನಡ ಜಿಲ್ಲೆ.	ಅಪರ ಜಿಲ್ಲಾಧಿಕಾರಿಗಳು	ಮುಜರಾಯಿ ಸಹಾಯಕರು	ಜಿಲ್ಲಾಧಿಕಾರಿಗಳು
7.	ಜಿಲ್ಲಾಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ.	ಅಪರ ಜಿಲ್ಲಾಧಿಕಾರಿಗಳು	ಮುಜರಾಯಿ ಸಹಾಯಕರು	ಜಿಲ್ಲಾಧಿಕಾರಿಗಳು
8.	ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ಜಿಲ್ಲೆ.	ಅಪರ ಜಿಲ್ಲಾಧಿಕಾರಿಗಳು	ಮುಜರಾಯಿ ಸಹಾಯಕರು	ಜಿಲ್ಲಾಧಿಕಾರಿಗಳು
9.	ಜಿಲ್ಲಾಧಿಕಾರಿಗಳ ಕಛೇರಿ, ಯಾದಗಿರಿ ಜಿಲ್ಲೆ.	ಅಪರ ಜಿಲ್ಲಾಧಿಕಾರಿಗಳು	ಮುಜರಾಯಿ ಸಹಾಯಕರು	ಜಿಲ್ಲಾಧಿಕಾರಿಗಳು

ರಾಮಣ್ಣ ನಾಯ್ಕ
ಪಿ.ಆರ್.1322 ಆಯುಕ್ತರು,
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್: 74 (ಪೊಲೀಸ್)/ 2009-10, ದಿನಾಂಕ:19.02.2011

ಉಪಸ್ಥಿತರು: ಡಾ॥ ವೈ. ಮಂಜುನಾಥ್,

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು ವಿರುದ್ಧ **ಪ್ರತಿವಾದಿ/ ಆರೋಪಿ**

ಆರಕ್ಷಕ ನಿರೀಕ್ಷಕರು, ಗುರು @ ಗುರುಪ್ರಸಾದ್
ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ, ಮೈಸೂರು ಜಿಲ್ಲೆ. ನಂಜನಗೂಡು ಟೌನ್.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:23.09.2010ರಂದು ಸಂಜೆ 4.30 ಗಂಟೆ ಸಮಯದಲ್ಲಿ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆಯ ಆರಕ್ಷಕ ನಿರೀಕ್ಷಕರು ಇವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ನಂಜನಗೂಡು ತಾಲ್ಲೂಕು, ನಂಜನಗೂಡು-ಗುಂಡ್ಲುಪೇಟೆ ರಸ್ತೆ, ಸಿಂಧುವಳ್ಳಿಪುರ ಗ್ರಾಮದ ಹತ್ತಿರ ಕೆಎ-09/ಕೆ-9862 ನೋಂದಣಿ ಸಂಖ್ಯೆಯ ಹಿರೋಪುಕ್ ವಾಹನದಲ್ಲಿ ಅಕ್ರಮವಾಗಿ 30.600 ಲೀ. ಮದ್ಯ ಮತ್ತು 1.320 ಲೀ. ಬಿಯರ್‌ನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ, ಮದ್ಯ ಮತ್ತು ಬಿಯರನ್ನು ಜಪ್ತುಗೊಳಿಸಿ. ಆರೋಪಿಯಾದ ಗುರು @ ಗುರುಪ್ರಸಾದ್ ಬಿನ್ ಲೇ: ಮಲ್ಲೇಗೌಡ ಇವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ: 53/2010ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ. ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:01.10.2010ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ನಂಜನಗೂಡು ವಲಯದ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಈ ಪ್ರಕರಣದಲ್ಲಿ ಜಪ್ತುಪಡಿಸಲಾದ ಮದ್ಯ ಮತ್ತು ಬಿಯರ್‌ನ ಪೈಕಿ ಮಾದರಿ ತೆಗೆಯಲಾದ ಮಾದಕದ್ರವ್ಯಗಳನ್ನು ಕೇಂದ್ರ ರಾಸಾಯನಿಕ ಪ್ರಯೋಗಾಲಯಕ್ಕೆ ಒಳಪಡಿಸಿ ವರದಿ ಪಡೆಯಲಾಗಿ ಈಥೈಲ್ ಆಲ್ಕೋಹಾಲ್ ಅಂಶ ಕಂಡುಬಂದಿರುವುದಾಗಿ, ಮಾನವನ ಸೇವನೆಗೆ ಯೋಗ್ಯವಾಗಿರುತ್ತದೆ ಹಾಗೂ ರಾಯಲ್ ಲ್ಯಾನ್ಸರ್ ವಿಸ್ಕಿ ಬಾಟಲ್‌ನ ಮದ್ಯವು ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್ಸ್ ನಿಗದಿಪಡಿಸಿರುವ ಮಾದರಿ ಗುಣಲಕ್ಷಣಗಳಿಗೆ ಅನುಗುಣವಾಗಿಲ್ಲದಿರುವುದರಿಂದ ಅದು ನಕಲಿ ಮದ್ಯವಾಗಿರುತ್ತದೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

ನಂಜನಗೂಡು ವಲಯದ ಅಬಕಾರಿ ನಿರೀಕ್ಷಕರು ಹಾಗೂ ಮೈಸೂರು ಉಪ ವಿಭಾಗದ ಅಬಕಾರಿ ನಿರೀಕ್ಷಕರು ವರದಿಯನ್ನು ಸಲ್ಲಿಸಿ ಜಪ್ತುಪಡಿಸಲಾದ ವಾಹನವನ್ನು ನಿಯಮಾನುಸಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಬೇಕೆಂದು ಕೋರಿರುತ್ತಾರೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ:23.09.2010 ರಂದು ನಂಜನಗೂಡು ತಾಲ್ಲೂಕು, ನಂಜನಗೂಡು-ಗುಂಡ್ಲುಪೇಟೆ ರಸ್ತೆ, ಸಿಂಧುವಳ್ಳಿಪುರ ಗ್ರಾಮದ ಹತ್ತಿರ ಕೆಎ-09/ಕೆ-9862 ನೋಂದಣಿ ಸಂಖ್ಯೆಯ ಹಿರೋಪುಕ್ ವಾಹನದಲ್ಲಿ ಅಕ್ರಮವಾಗಿ 30.600 ಲೀ. ಮದ್ಯ ಮತ್ತು 1.320 ಲೀ. ಬಿಯರ್‌ನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿಯಾದ ಗುರು @ ಗುರುಪ್ರಸಾದ್ ಬಿನ್ ಲೇ: ಮಲ್ಲೇಗೌಡ ಎಂಬುವರನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ

ಅರ್ಜಿದಾರರ ಮೇಲ ಜವಾಬ್ದಾರಿಗಳಿದ್ದು, ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಕಾರಣದಿಂದಾಗಿ ಆತ ನೇರವಾಗಿ ಈ ಪ್ರಕರಣದಲ್ಲಿ ಭಾಗಿಯಾಗಿಲ್ಲದಿದ್ದರೂ ಕೂಡಾ ಪರೋಕ್ಷವಾಗಿ ಆತನೇ ಹೊಣೆಗಾರನಾಗಿರುತ್ತಾನೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (5) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಫ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ. ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾವ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/ 74/(ಪೊಲೀಸ್)/2010–11, ದಿನಾಂಕ:19.02.2011

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ, ಇವರು ಹೂಡಲಾದ ಪ್ರ.ಮಾ. ವರದಿ ಸಂಖ್ಯೆ: 53/2010, ದಿನಾಂಕ:23.09.2010 ರಂದು ವಶಪಡಿಸಿಕೊಂಡ ಕೆಎ–09/ಕೆ–9862 ನೋಂದಣಿ ಸಂಖ್ಯೆಯ ಹಿರೋಹುಕ್ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಫೆಬ್ರವರಿ ತಿಂಗಳ 19ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ. ಮಂಜುನಾಥ್
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.320

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ
ಸಂಖ್ಯೆ: ಡಿಟಿಸಿಆರ್: 78 (ಪೊಲೀಸ್)/ 2010–11, ದಿನಾಂಕ:19.02.2011

ಉಪಸ್ಥಿತರು: ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು **ವಿರುದ್ಧ** **ಪ್ರತಿವಾದಿ/ ಆರೋಪಿ**

ಆರಕ್ಷಕ ಉಪ ನಿರೀಕ್ಷಕರು, ರಾಜು ಬಿನ್ ಲೇ: ಮಹದೇವಪ್ಪ ಪಿಲ್ಲಹಳ್ಳಿ, ಮೈಸೂರು ತಾ:
ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ, ಮೈಸೂರು ಜಿಲ್ಲೆ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:05.10.2010 ರಂದು ಬೆಳಿಗ್ಗೆ 8–15 ಗಂಟೆ ಸಮಯದಲ್ಲಿ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆಯ ಆರಕ್ಷಕ ಉಪ ನಿರೀಕ್ಷಕರು ಇವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ನಂಜನಗೂಡು ತಾಲ್ಲೂಕು, ಸುತ್ತೂರು ಕುಪ್ಪರವಳ್ಳಿ ಗ್ರಾಮದ ರಸ್ತೆಯ ಬಳಿ ಕೆಎ–05/ಎಕ್ಸ್–2174 ನೋಂದಣಿ ಸಂಖ್ಯೆಯ ಕವಾಸಕಿ ಬಜಾಜ್ ವಾಹನದಲ್ಲಿ ಅಕ್ರಮವಾಗಿ 5 ಪ್ಲಾಸ್ಟಿಕ್ ಕ್ಯಾನ್‌ಗಳಲ್ಲಿ 140 ಲೀ. ಸೇಂದಿಯನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಆರೋಪಿಯಾದ ರಾಜು ಬಿನ್ ಲೇ: ಮಹದೇವಪ್ಪ ಇವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ: 59/2010ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಸೇಂದಿಯನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:11.10.2010ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ನಂಜನಗೂಡು ವಲಯದ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಈ ಪ್ರಕರಣದಲ್ಲಿ ಜಪ್ತುಪಡಿಸಲಾದ ಸೇಂದಿಯ ಪೈಕಿ ಮಾದರಿ ತೆಗೆಯಲಾದ ಸೇಂದಿಯನ್ನು ಕೇಂದ್ರ ರಾಸಾಯನಿಕ ಪ್ರಯೋಗಾಲಯಕ್ಕೆ ಒಳಪಡಿಸಿ ವರದಿ ಪಡೆಯಲಾಗಿ ಈಥೈಲ್ ಆಲ್ಕೋಹಾಲ್ ಮತ್ತು ಕ್ಲೋರಲ್ ಹೈಡ್ರೇಡ್ ಅಂಶ ಕಂಡುಬಂದಿರುವುದಾಗಿ ಹಾಗೂ ಮಾನವನ ಸೇವನೆಗೆ ಯೋಗ್ಯವಾಗಿರುವುದಿಲ್ಲವೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

ನಂಜನಗೂಡು ವಲಯದ ಅಬಕಾರಿ ನಿರೀಕ್ಷಕರು ಹಾಗೂ ಮೈಸೂರು ಉಪ ವಿಭಾಗದ ಅಬಕಾರಿ ನಿರೀಕ್ಷಕರು ವರದಿಯನ್ನು ಸಲ್ಲಿಸಿ ಜಪ್ತುಪಡಿಸಲಾದ ವಾಹನವನ್ನು ನಿಯಮಾನುಸಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಬೇಕೆಂದು ಕೋರಿರುತ್ತಾರೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ:05.10.2010 ರಂದು ನಂಜನಗೂಡು ತಾಲ್ಲೂಕು, ಸುತ್ತೂರು ಕುಪ್ಪರವಳ್ಳಿ ಗ್ರಾಮದ ರಸ್ತೆಯ ಬಳಿ ಕೆಎ–05/ಎಕ್ಸ್–2174 ನೋಂದಣಿ ಸಂಖ್ಯೆಯ ಕವಾಸಕಿ ಬಜಾಜ್ ವಾಹನದಲ್ಲಿ ಅಕ್ರಮವಾಗಿ 5 ಪ್ಲಾಸ್ಟಿಕ್ ಕ್ಯಾನ್‌ಗಳಲ್ಲಿ 140 ಲೀ., ಸೇಂದಿಯನ್ನು

ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ.. ಈ ಸಂದರ್ಭದಲ್ಲಿ ಆರೋಪಿಯಾದ ರಾಜು ಬಿನ್ ಲೇ: ಮಹದೇವಪ್ಪ ಎಂಬುವರನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ ಅರ್ಜಿದಾರರ ಮೇಲೆ ಜವಾಬ್ದಾರಿಗಳಿದ್ದು, ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಕಾರಣದಿಂದಾಗಿ ಆತ ನೇರವಾಗಿ ಈ ಪ್ರಕರಣದಲ್ಲಿ ಭಾಗಿಯಾಗಿಲ್ಲದಿದ್ದರೂ ಕೂಡಾ ಪರೋಕ್ಷವಾಗಿ ಆತನೇ ಹೊಣೆಗಾರನಾಗಿರುತ್ತಾನೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (4) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ. ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/ 78/(ಪೊಲೀಸ್)/2010-11, ದಿನಾಂಕ:19.02.2011

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ, ಇವರು ಹೂಡಲಾದ ಪ್ರಮಾ. ವರದಿ ಸಂಖ್ಯೆ: 59/2010, ದಿನಾಂಕ:11.10.2010 ರಂದು ವಶಪಡಿಸಿಕೊಂಡ ಕೆಎ-05/ಎಕ್ಸ್-2174 ನೋಂದಣಿ ಸಂಖ್ಯೆಯ ಕವಾಸಕಿ ಬಜಾಜ್ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಫೆಬ್ರವರಿ ತಿಂಗಳ 19ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ. ಮಂಜುನಾಥ್
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.321

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ
ಸಂಖ್ಯೆ: ಡಿಟಿಸಿಆರ್: 151 (ಪೊಲೀಸ್)/ 2010-11, ದಿನಾಂಕ:26.02.2011

ಉಪಸ್ಥಿತರು: ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	**ವಿರುದ್ಧ**	**ಪ್ರತಿವಾದಿ/ ಆರೋಪಿ**
ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ.		ಪರಾರಿ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:24.12.2010 ರಂದು ಬೆಳಿಗ್ಗೆ 10-00 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ ಇವರು ಠಾಣಾ ಉಸ್ತುವಾರಿಯಲ್ಲಿರುವ ಸಮಯದಲ್ಲಿ ಬಾತ್ಮೀದಾರರಿಂದ ಬಂದ ಖಚಿತ ವರ್ತಮಾನದ ಮೇರೆಗೆ ಟಿ.ನರಸೀಪುರ ತಾ: ತಲಕಾಡು-ಟಿ.ನರಸೀಪುರ ಮುಖ್ಯ ರಸ್ತೆ, ಚೌಹಳ್ಳಿ ಬಳಿ ವೈಕೆಪಿ-4427 ನೋಂದಣಿ ಸಂಖ್ಯೆಯ ಬಜಾಜ್ ಸ್ಕೂಟರ್ ವಾಹನದಲ್ಲಿ ಅಕ್ರಮವಾಗಿ 17.280 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಆರೋಪಿ ಪರಾರಿಯಾಗಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ: 73/2010ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:04.01.2011 ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ಟಿ.ನರಸೀಪುರ ವಲಯದ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ:24.12.2010 ರಂದು ಟಿ.ನರಸೀಪುರ ತಾ: ತಲಕಾಡು-ಟಿ.ನರಸೀಪುರ, ಮುಖ್ಯರಸ್ತೆ ಚೌಹಳ್ಳಿ ಬಳಿ ವೈಕೆಪಿ-4427 ನೋಂದಣಿ ಸಂಖ್ಯೆಯ ಬಜಾಜ್ ಸ್ಕೂಟರ್ ವಾಹನದಲ್ಲಿ ಅಕ್ರಮವಾಗಿ 17.280 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಕಲಂ 32, 38(ಎ)ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಯು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಈ ಪ್ರಾಧಿಕಾರದ ಮುಂದೆ ಹಾಜರಾಗಿ ನಿರೂಪಿಸಿರುವುದಿಲ್ಲ. ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (2) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ. ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇಲ್ಲದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/ 151/(ಪೊಲೀಸ್)/2010-11, ದಿನಾಂಕ:26.02.2011

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ, ಇವರು ಹೂಡಲಾದ ಪ್ರ.ಮಾ. ವರದಿ ಸಂಖ್ಯೆ: 73/2010, ದಿನಾಂಕ:24.12.2010 ರಂದು ವಶಪಡಿಸಿಕೊಂಡ ವೈಕೆಪಿ-4427 ನೋಂದಣಿ ಸಂಖ್ಯೆಯ ಬಜಾಜ್ ಸ್ಕೂಟರ್ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಫೆಬ್ರವರಿ ತಿಂಗಳ 26ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ|| ವೈ. ಮಂಜುನಾಥ್
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.322

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ
ಸಂಖ್ಯೆ: ಡಿಟಿಸಿಆರ್: 147 (ಪೊಲೀಸ್)/ 2010-11, ದಿನಾಂಕ:26.02.2011

ಉಪಸ್ಥಿತರು: ಡಾ|| ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	**ವಿರುದ್ಧ**	**ಪ್ರತಿವಾದಿ/ ಆರೋಪಿ**
ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ.		ಪರಾರಿ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:27.12.2010 ರಂದು ರಾತ್ರಿ 10-30 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ ಇವರು ಗಸ್ತು ನಿರತ ಸಮಯದಲ್ಲಿ ಬಾತ್ಮೀದಾರದಿಂದ ಬಂದ ಖಚಿತ ವರ್ತಮಾನದ ಮೇರೆಗೆ ಟಿ.ನರಸೀಪುರ ಟೌನ್, ಚಾಮುಂಡೇಶ್ವರಿ ನರ್ಸಿಂಗ್ ಹೋಂ ಮುಂಭಾಗ ಲಿಂಕ್ ರಸ್ತೆಯಲ್ಲಿ ಬಳಿ ಕೆಎ-09/ಇಜೆ-8445 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಪ್ಯಾಷನ್ ಪ್ಲಸ್ ವಾಹನದಲ್ಲಿ ಅಕ್ರಮವಾಗಿ 8.460 ಲೀ. ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಆರೋಪಿ ಪರಾರಿಯಾಗಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ: 81/2010ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:28.12.2010ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ಟಿ.ನರಸೀಪುರ ವಲಯದ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ:27.12.2010 ರಂದು ಟಿ.ನರಸೀಪುರ ಟೌನ್, ಚಾಮುಂಡೇಶ್ವರಿ ನರ್ಸಿಂಗ್ ಹೋಂ ಮುಂಭಾಗ ಲಿಂಕ್ ರಸ್ತೆಯಲ್ಲಿ ಬಳಿ ಕೆಎ-09/ಇಜೆ-8445 ನೋಂದಣಿ ಸಂಖ್ಯೆಯ ಹೀರೋ ಹೊಂಡಾ ಪ್ಯಾಷನ್ ಪ್ಲಸ್ ವಾಹನದಲ್ಲಿ ಅಕ್ರಮವಾಗಿ 8.460 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಕಲಂ 32, 38(ಎ)ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಯು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಈ ಪ್ರಾಧಿಕಾರದ ಮುಂದೆ ಹಾಜರಾಗಿ ನಿರೂಪಿಸಿರುವುದಿಲ್ಲ ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (2) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ. ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/

ವಿಷಯದಲ್ಲಿ ಯಾರಿಗೆ ಸೇರಿದೆ ಮತ್ತು ಅವರುಗಳು ಹಾಜರಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದದೆ ಎಂಬುದನ್ನು ಸ್ಪಷ್ಟವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇಲ್ಲದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/ 147/(ಪೊಲೀಸ್)/2010-11, ದಿನಾಂಕ:26.02.2011

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಪಿ)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ, ಇವರು ಹೂಡಲಾದ ಪ್ರ.ಮಾ. ವರದಿ ಸಂಖ್ಯೆ: 81/2010, ದಿನಾಂಕ:27.12.2010 ರಂದು ವಶಪಡಿಸಿಕೊಂಡ ಕೆಎ-09/ಇಜೆ-8445 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಪ್ಯಾಷನ್ ಪ್ಲಸ್ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಫೆಬ್ರವರಿ ತಿಂಗಳ 26ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ. ಮಂಜುನಾಥ್
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.323

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ
ಸಂಖ್ಯೆ: ಡಿಟಿಸಿಆರ್: 432 (ಪೊಲೀಸ್)/ 2008-09, ದಿನಾಂಕ:19.02.2011

ಉಪಸ್ಥಿತರು: ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	**ವಿರುದ್ಧ**	**ಪ್ರತಿವಾದಿ/ ಆರೋಪಿ**
ಆರಕ್ಷಕ ಉಪ ನಿರೀಕ್ಷಕರು, ಟಿ.ನರಸೀಪುರ ಪೊಲೀಸ್ ಠಾಣೆ, ಟಿ.ನರಸೀಪುರ ತಾಲ್ಲೂಕು.		ಸುಂದ್ರ ಮತ್ತು ಕೆಂಪಣ್ಣ, ಮಾವಿನಹಳ್ಳಿ ಗ್ರಾಮ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ: 26.06.2008ರಂದು ಮಧ್ಯಾಹ್ನ 2-00 ಗಂಟೆ ಸಮಯದಲ್ಲಿ ಆರಕ್ಷಕ ಉಪ ನಿರೀಕ್ಷಕರು, ಟಿ.ನರಸೀಪುರ ಪೊಲೀಸ್ ಠಾಣೆ ಇವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಟಿ.ನರಸೀಪುರ ಟೌನ್, ಮೈಸೂರು-ಚಾಮರಾಜನಗರ ರಸ್ತೆ, ನಾಗರತ್ನ ಇಂಡಸ್ಟ್ರೀಸ್ ಆಧುನಿಕ ಅಕ್ಕಿಗಿರಣಿ ಮುಂಭಾಗ ಕೆಎ-09/ಆರ್-2623 ನೋಂದಣಿ ಸಂಖ್ಯೆಯ ಟಿವಿಎಸ್ ಎಕ್ಸೆಲ್ ವಾಹನದಲ್ಲಿ ಅಕ್ರಮವಾಗಿ 7.800 ಲೀ. ಮದ್ಯ ಹಾಗೂ 1.320 ಲೀ. ಬಿಯರನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ, ಮಾದಕ ದ್ರವ್ಯವನ್ನು ಜಪ್ತುಗೊಳಿಸಿ, ಆರೋಪಿಗಳಾದ ಸುಂದ್ರ ಮತ್ತು ಕೆಂಪಣ್ಣ ಇವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ: 238/2008ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:10.02.2009ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ಟಿ.ನರಸೀಪುರ ವಲಯದ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ದಿನಾಂಕ:11.02.2009ರಂದು ಅನುಮತಿ ನೀಡಲಾಗಿದೆ.

ಆರಕ್ಷಕ ಅಧಿಕಾರಿಗಳು ಪ್ರಕರಣದ ದಾಖಲಾತಿಗಳನ್ನು ಸಲ್ಲಿಸುವ ಪೂರ್ವದಲ್ಲಿ ಅರ್ಜಿದಾರರಾದ ಎಂ. ಸುಧೀರ್ ಬಿನ್ ವಿ.ಕೆ. ಮಲಹರರಾವ್ ಇವರ ಜಿಪಿಎ ಹೋಲ್ಡರ್ ಸಿದ್ಧರಾಜು ಬಿನ್ ನಿಂಗಶೆಟ್ಟಿ ಇವರ ಪರ ವಕೀಲರು ದಿನಾಂಕ:08.12.2008ರಂದು ವಕಾಲತ್ತಿನೊಂದಿಗೆ ಅರ್ಜಿಯನ್ನು ಸಲ್ಲಿಸಿ ಜಪ್ತುಪಡಿಸಲಾದ ವಾಹನವನ್ನು ಬಿಡುಗಡೆಗಾಗಿ ಕೋರಿರುತ್ತಾರೆ.

ವಶಪಡಿಸಿಕೊಂಡ ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ ಮೈಸೂರು ಪೂರ್ವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:18.03.2009ರಂದು ಪತ್ರವನ್ನು ಬರೆಯಲಾಗಿದ್ದು, ಇದೂವರೆವಿಗೂ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ:26.06.2008 ರಂದು ಟಿ.ನರಸೀಪುರ ಟೌನ್, ಮೈಸೂರು-ಚಾಮರಾಜನಗರ ರಸ್ತೆ, ನಾಗರತ್ನ ಇಂಡಸ್ಟ್ರೀಸ್ ಆಧುನಿಕ ಅಕ್ಕಿಗಿರಣಿ ಮುಂಭಾಗ ಕೆಎ-09/ಆರ್.2623 ನೋಂದಣಿ ಸಂಖ್ಯೆಯ ಟಿವಿಎಸ್ ಎಕ್ಸೆಲ್ ವಾಹನದಲ್ಲಿ ಅಕ್ರಮವಾಗಿ 7.800 ಲೀ. ಮದ್ಯ ಹಾಗೂ 1.320 ಲೀ. ಬಿಯರನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿಯಾದ ಸುಂದ್ರ ಮತ್ತು ಕೆಂಪಣ್ಣ ಎಂಬುವರನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ ಅರ್ಜಿದಾರರ ಮೇಲೆ ಜವಾಬ್ದಾರಿಗಳಿದ್ದು, ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಕಾರಣದಿಂದಾಗಿ ಆತ ನೇರವಾಗಿ ಈ ಪ್ರಕರಣದಲ್ಲಿ ಭಾಗಿಯಾಗಿಲ್ಲದಿದ್ದರೂ ಕೂಡಾ ಪರೋಕ್ಷವಾಗಿ ಆತನೇ ಹೊಣೆಗಾರನಾಗಿರುತ್ತಾನೆ. ಈ ಪ್ರಕರಣದಲ್ಲಿ ಎಂ.ಸುಧೀರ್ ಬಿನ್ ಕೆ.ವಿ. ಮಲಹರರಾವ್, ನಂ.79, 9ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು ಇವರ ಒಡೆತನದಲ್ಲಿದ್ದು, ಮಾಲೀಕರು ಎನ್ನುವುದಕ್ಕೆ ಆರ್.ಸಿ. ಪುಸ್ತಕದ ನಕಲನ್ನು ಹಾಜರುಪಡಿಸಿರುತ್ತಾರೆ. ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (31) ತಿಂಗಳಿಗೂ ಹೆಚ್ಚು ಕಾಲ ಗತಿಸಿರುತ್ತದೆ. ವಾಹನವನ್ನು ಬಿಡುಗಡೆಗಾಗಿ ವಕೀಲರೊಂದಿಗೆ

ಅರ್ಜಿಯನ್ನು ಸಲ್ಲಿಸಿರುವುದನ್ನು ಹೊರತುಪಡಿಸಿ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆದಿರುವುದಿಲ್ಲ ಹಾಗೂ ವಾಹನದಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುವಾಗ ಸಿಕ್ಕಿಬಿದ್ದಿದ್ದು, ವಾಹನ ಮಾಲೀಕರ ತಿಳುವಳಿಕೆಯಲ್ಲಿ ಈ ಕೃತ್ಯ ನಡೆದಿಲ್ಲ ಎಂಬುದರ ಬಗ್ಗೆ ಯಾವುದೇ ಸಾಕ್ಷ್ಯ ಪುರಾವೆಗಳನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/ 432/(ಪೊಲೀಸ್)/2008-09, ದಿನಾಂಕ:19.02.2011

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ. ಆರಕ್ಷಕ ಉಪ ನಿರೀಕ್ಷಕರು, ಟಿ.ನರಸೀಪುರ ಪೊಲೀಸ್ ಠಾಣೆ ಇವರು ಹೂಡಲಾದ ಪ್ರಮಾ. ವರದಿ ಸಂಖ್ಯೆ: 238/2008, ದಿನಾಂಕ:24.06.2010 ರಂದು ವಶಪಡಿಸಿಕೊಂಡ ಕೆಎ-09/ಆರ್-2623 ನೋಂದಣಿ ಸಂಖ್ಯೆಯ ಟಿವಿಎಸ್ ಎಕ್ಸೆಲ್ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಫೆಬ್ರವರಿ ತಿಂಗಳ 19ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ. ಮಂಜುನಾಥ್
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.324

ತಾಲ್ಲೂಕು ಕಛೇರಿ, ಕುಂದಾಪುರ

ರೆಫ್.ಪಿ.ಪಿ.ಡಿ.ಆರ್.ಸಿ.ಆರ್.244/11-12, ದಿನಾಂಕ:25.04.2011

ನಮೂನೆ-27

68(1)ನೇಯ ಪ್ರಕರಣ ನಿಯಮ 94ರನ್ವಯ ಘೋಷಣೆ ಈ ಕೆಳಗಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಸಾರ್ವಜನಿಕ ರಸ್ತೆ ಹಾಗೂ ನೀರು ತೋಡು ಯಾವುದು ಸರ್ಕಾರದ ಸ್ವತ್ತಾಗಿದೆಯೋ? ಅದು ಸಾರ್ವಜನಿಕರ ಬಳಕೆಗಾಗಿ ಅವಕಾಶವಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದಿದೆ.

ಪ್ರಯುಕ್ತ ಈಗ ಕರ್ನಾಟಕ ಸರ್ಕಾರದವರು ಕರ್ನಾಟಕ ಭೂಕಂದಾಯ ಅಧಿನಿಯಮ 68ನೇಯ ಪ್ರಕರಣದ (1)ನೇಯ ಉಪಪ್ರಕರಣದಿಂದ ಕೂಡಾ ಮಾಡಲಾದ ಅಧಿಕಾರಗಳನ್ನು ಉಪಯೋಗಿಸುತ್ತಾ ಪ್ರಸ್ತುತ ಸಾರ್ವಜನಿಕ ರಸ್ತೆಯ ಭಾಗ ಹಾಗೂ ಪೋರಂಬೋಕು ತೋಡು ಸಾರ್ವಜನಿಕಕ್ಕಾಗಿ ಅವಶ್ಯಕತೆ ಇಲ್ಲ. ಮತ್ತು ಪೂರ್ವೋಕ್ತ ಸಾರ್ವಜನಿಕ ರಸ್ತೆಯ ಭಾಗದಲ್ಲಿ ಅಥವಾ ಮೇಲೆ ಸಾರ್ವಜನಿಕರಿಗೆ ಅಥವಾ ಎಲ್ಲಾ ವ್ಯಕ್ತಿಗಳಿಗೆ ಇರುವಂತಹ ಹಕ್ಕುಗಳು ರದ್ದುಪಡಿಸತಕ್ಕದ್ದೆಂದು ಈ ಮೂಲಕ ಘೋಷಿಸಿರುತ್ತಾರೆ.

2) ಪೂರ್ವೋಕ್ತ ಸಾರ್ವಜನಿಕ ರಸ್ತೆಯ ಭಾಗದಲ್ಲಿ ಅಥವಾ ಮೇಲೆ ಸಾರ್ವಜನಿಕ ರಸ್ತೆಯ ಭಾಗದಲ್ಲಿ ಅಥವಾ ಮೇಲೆ ಸಾರ್ವಜನಿಕ ಅಥವಾ ಎಲ್ಲಾ ವ್ಯಕ್ತಿಗಳಿಗೆ ಇರುವಂತಹ ಹಕ್ಕುಗಳು ಪಿಡಬ್ಲ್ಯೂಡಿ ರಸ್ತೆ ಹಾದು ಹೋಗುವ ಅಧಿಕಾರವಲ್ಲದೇ ಇತರೆ ಹೊಂದುವ ಹಿತಾಸಕ್ತಿಯನ್ನುಳ್ಳ ಅಥವಾ ಅಧಿಕಾರವನ್ನು ಹೊಂದಿರುವ ವ್ಯಕ್ತಿ ಯಾವೊಬ್ಬ ಸದಸ್ಯರು ಅಥವಾ ಯಾವೊಬ್ಬ ವ್ಯಕ್ತಿ ಅಥವಾ ಇಂತಹ ಪ್ರಸ್ತಾವನೆಯನ್ನು ಅನ್ಯತಾ ಬಾಧಿತವಾಗಿರುವ ಇತರೇ ಯಾವುದೇ ಹಿತಾಸಕ್ತಿಯುಳ್ಳ ಯಾವೊಬ್ಬ ವ್ಯಕ್ತಿಯು ಈ ತಿಳುವಳಿಕೆಯುಳ್ಳ ಯಾವೊಬ್ಬ ವ್ಯಕ್ತಿಯೂ ಈ ತಿಳುವಳಿಕೆ ಪತ್ರ (ನೋಟೀಸು)ವು ಹೊರಟ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ತಹಶೀಲ್ದಾರರಿಗೆ ಆ ಪ್ರಸ್ತಾವಿತ ಬಗ್ಗೆ ತನಗಿರುವ ಆಕ್ಷೇಪಗಳನ್ನು ಕುರಿತು ಮತ್ತು ಅಂಶ ಹಿತಾಸಕ್ತಿ ಅಥವಾ ಹಕ್ಕಿನ ಬಗೆಗಿನ ಪರಿಹಾರದ ಮೊಬಲಗು ಮತ್ತು ವಿವರಗಳನ್ನು ಲೇಖನದಲ್ಲಿ ಕೊಡತಕ್ಕದ್ದು. ಮತ್ತು ಉಕ್ತ ಆಕ್ಷೇಪಣೆಗಳು ಮತ್ತು ಹಕ್ಕುಗಳು ಉಕ್ತ ಪ್ರಕರಣದಲ್ಲಿ ಉಪಪ್ರಕರಣದಲ್ಲಿ ಉಪಬಂಧಿಸಿದೆ. ಪ್ರಕಾರ ತಹಶೀಲ್ದಾರರಿಂದ ಪರ್ಯಾಲೋಕಿಸಲ್ಪಡತಕ್ಕದ್ದು.

ಅನುಸೂಚಿ

ಗ್ರಾಮ: ವಡೇರಹೋಬಳಿ

ತಾಲ್ಲೂಕು: ಕುಂದಾಪುರ

ಜಿಲ್ಲೆ: ಉಡುಪಿ

ವಿವರ

ಪರಂಬೋಕು ಹೊಳೆ

ಸ.ನಂ.	ವಿಸ್ತೀರ್ಣ
211/4A	0.38

ಗಡಿಗಳು (ಎಲ್ಲೆಗಳು)

ಸ.ನಂ.	ಕಿ.ಸಂ.	ವಿಸ್ತೀರ್ಣ
211/4	ಪೊರಂಬೋಕು	0.38

ತಹಶೀಲ್ದಾರರು,
ಕುಂದಾಪುರ.

ಪಿ.ಆರ್.581

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು 2ನೇ ಮಹಡಿ, ಮಿನಿ ವಿಧಾನಸೌಧ, ತುಮಕೂರು ಜಿಲ್ಲೆ, ತುಮಕೂರು ಇವರ ಕಾರ್ಯಾಲಯದ ನಡವಳಿಕೆಗಳು

ವಿಷಯ: ಸಮಾಪನೆಯಲ್ಲಿರುವ ಶ್ರೀತೋಂಟದ ಸಿದ್ದಲಿಂಗೇಶ್ವರ ಪ್ರೌಢಶಾಲಾ ವಿದ್ಯಾರ್ಥಿಗಳ ಬಳಕೆದಾರರ ಸಹಕಾರ ಸಂಘ ನಿ., ಕಗ್ಗೆರೆ ಕುಣಿಗಲ್ ತಾಲ್ಲೂಕು ಇದರ ನೋಂದಣಿಯನ್ನು ರದ್ದುಗೊಳಿಸುವ ಕುರಿತು

ಉಲ್ಲೇಖ: 1) ಈ ಕಛೇರಿಯ ಸಮಾಪನಾ ಆದೇಶದ ಕ್ರಮಸಂಖ್ಯೆ:ಡಿಆರ್‌ಟಿ:ಡಿಎಲ್‌ಎಸ್:ಎಲ್‌ಕ್ಯೂಡಿ:163:2004-05 ದಿನಾಂಕ:13-1-2005.

2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ, ತುಮಕೂರು ರವರ ಪತ್ರದ ಕ್ರಮಸಂಖ್ಯೆ:ಸನಿ32:ಸಮಾಪನೆ:01:2010-11 ದಿನಾಂಕ:26-8-2010

ಪ್ರಸ್ತಾವನೆ:

ಶ್ರೀತೋಂಟದ ಸಿದ್ದಲಿಂಗೇಶ್ವರ ಪ್ರೌಢಶಾಲಾ ವಿದ್ಯಾರ್ಥಿಗಳ ಬಳಕೆದಾರರ ಸಹಕಾರ ಸಂಘ ನಿ., ಕಗ್ಗೆರೆ ಕುಣಿಗಲ್ ತಾಲ್ಲೂಕು ಈ ಸಂಘವು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ, ತುಮಕೂರು ಇವರ ನೋಂದಣಿ ಸಂಖ್ಯೆ ಸನಿ32:ಆರ್‌ಜಿಎನ್:20342:93-94 ದಿನಾಂಕ:26-8-1993ರಂದು ನೋಂದಣಿಯಾಗಿದ್ದು, ಈ ಸಂಘವು ನೋಂದಾಯಿತ ಉಪನಿಯಮದ ಉದ್ದೇಶದ ಅನುಸಾರ ಕರ್ತವ್ಯ ನಿರ್ವಹಿಸುತ್ತಿಲ್ಲದ ಕಾರಣ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಇವರ ಶಿಫಾರಸ್ಸಿನ ಅನುಸಾರ ಉಲ್ಲೇಖ(1)ರ ಆದೇಶದಲ್ಲಿ ಸಮಾಪನಾಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ ಕುಣಿಗಲ್ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶ ನೀಡಲಾಗಿತ್ತು. ಸಮಾಪನಾಧಿಕಾರಿಯವರು ಸಂಘದ ಪ್ರಭಾರವನ್ನು ವಹಿಸಿಕೊಂಡು ಸಂಘದ ಆಸ್ತಿ ಜವಾಬ್ದಾರಿಯನ್ನು ಶೂನ್ಯಗೊಳಿಸಿ ಸಂಘದ ನೋಂದಣಿಯನ್ನು ರದ್ದುಗೊಳಿಸಿ ಆದೇಶಿಸಲು ಉಲ್ಲೇಖ(2)ರ ಪತ್ರದಲ್ಲಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಈ ಕಛೇರಿಯಲ್ಲಿ ಪರಿಶೀಲಿಸಿರುತ್ತದೆ.

ಸಂಘದ ಸದಸ್ಯರಿಗೆ ಸಂಘವನ್ನು ನಡೆಸಲು ಆಸಕ್ತಿ ಇಲ್ಲದಿರುವುದು ಸಂಘವನ್ನು ಪುನಶ್ಚೇತನಗೊಳಿಸಿದಲ್ಲಿ ಶಕ್ತವಾಗಿ ನಡೆಯುವುದೆಂದು ಮನವರಿಕೆ ಆಗಿರುವುದಿಲ್ಲ ಮತ್ತು ಸಂಘವನ್ನು ಮುಂದುವರೆಸುವುದು ಸಹ ಉಪಯುಕ್ತವಲ್ಲವೆಂದು ಸಂಘದ ವ್ಯವಹಾರಗಳು ಸಮಾಪ್ತಿಗೊಂಡಿರುವುದೆಂದು ಮನಗಂಡು ಸಂಘದ ನೋಂದಣಿಯನ್ನು ರದ್ದುಗೊಳಿಸುವುದು ಸೂಕ್ತವೆಂದು ಮನವರಿಕೆಯಾಗಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ ನೀಡಿದೆ.

ಆದೇಶ

ನಂ.ಡಿಆರ್‌ಟಿ:ಎಲ್‌ಕ್ಯೂಡಿ:ನೊ.ರದ್ದತಿ:04:2010-11, ದಿನಾಂಕ:20ನೇ ಸೆಪ್ಟೆಂಬರ್ 2010

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಅಧಿನಿಯಮ 75ನೇ ಕಲಂ ಮತ್ತು ನಂ.ಸಿ.ಒ:2001:ಸಿಎಲ್‌ಎಂ:2008 ದಿನಾಂಕ:27-5-2010 ಅಧಿಸೂಚನೆಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ, ಆರ್. ಲೋಕೇಶ್, ಸಹಕಾರ ಸಂಘಗಳ ಉಪ ನಿಬಂಧಕರು, ತುಮಕೂರು ಜಿಲ್ಲೆ, ತುಮಕೂರು ಆದ ನಾನು ಶ್ರೀತೋಂಟದ ಸಿದ್ದಲಿಂಗೇಶ್ವರ ಪ್ರೌಢಶಾಲಾ ವಿದ್ಯಾರ್ಥಿಗಳ ಬಳಕೆದಾರರ ಸಹಕಾರ ಸಂಘ ನಿ., ಕಗ್ಗೆರೆ ಕುಣಿಗಲ್ ತಾಲ್ಲೂಕು ಈ ಸಂಘದ ನೋಂದಣಿ ಸನಿ32:ಆರ್‌ಜಿಎನ್:20342:93-94 ದಿನಾಂಕ:26-8-1993 ಅನ್ನು ಈ ಆದೇಶದ ದಿನಾಂಕದಿಂದಲೇ ಜಾರಿಗೆ ಬರುವಂತೆ ರದ್ದುಗೊಳಿಸಿರುತ್ತೇನೆ.

ನೊಂದಣಿ ರದ್ದತಿ ಆಗಿರುವ ತತ್ಪರಿಣಾಮದಿಂದ ಸದರಿ ಹೆಸರಿನ ಸಂಘವು ವಿಸರ್ಜಿತಗೊಂಡಿರುತ್ತದೆ.

2010ನೇ ಇಸವಿ ಸೆಪ್ಟೆಂಬರ್ ಮಾಹೆ 20 ದಿನಾಂಕದಂದು ನನ್ನ ಸಹಿ ಮತ್ತು ಈ ಕಛೇರಿ ಮೊಹರಿನೊಂದಿಗೆ ಆದೇಶಿಸಿದೆ.

ಆರ್. ಲೋಕೇಶ್,
ಸಹಕಾರ ಸಂಘಗಳ ಉಪ ನಿಬಂಧಕರು.
ತುಮಕೂರು ಜಿಲ್ಲೆ, ತುಮಕೂರು.

ಪಿಆರ್-1424

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು-1 ಬೆಂಗಳೂರು ನಗರ ಜಿಲ್ಲೆರವರ ಕಛೇರಿ,

ನಂ.146, 8ನೇ ಅಡ್ಡರಸ್ತೆ, 3ನೇ ಮುಖ್ಯ ರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-03

ಕ್ರಮಾಂಕ:ಡಿಆರ್‌ಬಿ:1:ಸಮಾಪನೆ:07:2010-11, ದಿನಾಂಕ:18ನೇ ಫೆಬ್ರವರಿ 2011

ವಿಷಯ: ಸ್ಥಗಿತಗೊಂಡಿರುವ ಹಾಗೂ ನಿಷ್ಕ್ರಿಯಗೊಂಡು ಅಸ್ತಿತ್ವದಲ್ಲಿರದ/ಆಡಳಿತ ಮಂಡಳಿ ಚುನಾವಣೆ ನಡೆಸದ ಸಹಕಾರ ಸಂಘಗಳನ್ನು ಸಮಾಪನೆಗೊಳಿಸಿ ಸಮಾಪನಾಧಿಕಾರಿಗಳನ್ನು ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ: ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು ರವರ ಪತ್ರ ಕ್ರಮ ಸಂಖ್ಯೆ ಸನಿ44/ಸಮಾಪನೆ 28/2008-09 ಮತ್ತು /29/2008-09 ದಿನಾಂಕ:23-11-2010.

2) ಈ ಕಛೇರಿಯ ನೋಟೀಸ್ ಸಮ ಸಂಖ್ಯೆ ದಿನಾಂಕ:22-1-2011.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಒಂದನೇ ವಲಯ, ಬೆಂಗಳೂರು ಇವರು ಉಲ್ಲೇಖಿತ ಪತ್ರಗಳಲ್ಲಿ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಬೆಂಗಳೂರು ನಗರ ಜಿಲ್ಲೆ-1 ರವರ ಕಛೇರಿ ವ್ಯಾಪ್ತಿಯಲ್ಲಿ ಈ ಕೆಳಗೆ ಆದೇಶದಲ್ಲಿ ತಿಳಿಸಿರುವ ಸಹಕಾರ ಸಂಘಗಳು ಹಲವಾರು ವರ್ಷಗಳಿಂದ

ಕಾರ್ಯನಿರ್ವಹಿಸದೆ ಸ್ಥಗಿತಗೊಂಡಿದ್ದು, ಈ ಸಂಘಗಳಿಗೆ, ಆಡಳಿತಾಧಿಕಾರಿಗಳನ್ನು ನೇಮಕಾತಿ ಮಾಡಿದ್ದು, ಸಂಘವು ಅಸ್ತಿತ್ವದಲ್ಲಿರದ ಕಾರಣದಿಂದ ಹಾಗೂ ಈ ಸಂಘಗಳ ಬಗ್ಗೆ ಹಿತಾಸಕ್ತಿಯುಳ್ಳ ಸದಸ್ಯರುಗಳಾಗಲೀ ಪದಾಧಿಕಾರಿಗಳಾಗಲೀ ಅಥವಾ ನೌಕರರಾಗಲೀ ಸಿಗದ ಕಾರಣಗಳಿಂದಾಗಿ ಆಡಳಿತಾಧಿಕಾರಿಗಳು ಸ್ವಯಂಪ್ರಭಾರ ವಹಿಸಿಕೊಂಡು ಈ ಸಂಘಗಳನ್ನು ಸಮಾಪನೆಗೊಳಿಸಿ ಸಮಾಪನಾಧಿಕಾರಿಗಳನ್ನು ನೇಮಕಾತಿ ಮಾಡಲು ವರದಿ ಮಾಡಿರುವುದಾಗಿ ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿರುತ್ತಾರೆ. ಈ ಸಂಘಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಹಾಗೂ ಸಂಘದ ಚಟುವಟಿಕೆಗಳಾದ ವಾರ್ಷಿಕ ಮಹಾಸಭೆ, ಲೆಕ್ಕಪರಿಶೋಧನಾ ವರದಿ ಇತ್ಯಾದಿಗಳ ಬಗ್ಗೆ ಈ ಕಛೇರಿಗೂ ಸಹ ಹಲವಾರು ವರ್ಷಗಳಿಂದ ಯಾವುದೇ ಮಾಹಿತಿ ಸ್ವೀಕೃತವಾಗಿರುವುದಿಲ್ಲ.

ಸಂಘದ ಸದಸ್ಯರ ಹಾಗೂ ಹಿತಾಸಕ್ತಿಯುಳ್ಳವರಿಗೆ ಒಂದು ಅವಕಾಶವನ್ನು ಕಲ್ಪಿಸುವ ಉದ್ದೇಶದಿಂದ ಸದರಿ ಸಂಘಗಳಿಗೆ ಉಲ್ಲೇಖ(2)ರನ್ವಯ ಕಾರಣ ಕೇಳುವ ನೋಟೀಸ್ ನೋಂದಣಿ ಅಂಚೆ ಮೂಲಕ ಕಳುಹಿಸಲಾಗಿತ್ತು. ಸದರಿ ನೋಟೀಸ್ ಸದರಿ ಸಂಘವು ವಿಳಾಸದಲ್ಲಿ ಇರುವುದಿಲ್ಲವೆಂದು ಅಂಚೆ ಕಛೇರಿಯ ಷರಾದೊಂದಿಗೆ ಹಿಂದಿರುಗಿದೆ ಮತ್ತು ಸ್ಥಗಿತಗೊಂಡು, ನಿಷ್ಕ್ರಿಯವಾಗಿರುವ ನಿಯಮಗಳನ್ನು ಉಲ್ಲಂಘಿಸಿರುವ ಇಂತಹ ಸಂಘಗಳನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗುವುದರಿಂದ ಸಾರ್ವಜನಿಕರಿಗಾಗಲೀ, ಸಂಘದ ಸದಸ್ಯರುಗಳಿಗಾಗಲೀ ಯಾವುದೇ ಪ್ರಯೋಜನ ಆಗದೆ ಇರುವುದು ಕಂಡು ಬಂದಿರುವುದರಿಂದ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಒಂದನೇ ವಲಯ, ಬೆಂಗಳೂರು ರವರು ಈ ಸಂಘಗಳನ್ನು ಸಮಾಪನೆಗೊಳಿಸಲು ಉಲ್ಲೇಖ(1)ರನ್ವಯ, ಆದೇಶದ ಅವಶ್ಯಕತೆ ಕಂಡು ಬಂದಿರುವುದರಿಂದ, ಸಮಾಪನಾ ಅಧಿಕಾರಿಗಳ ಹುದ್ದೆಯ ಅನುಸಾರವಾಗಿ, ಸಮಾಪನಾಧಿಕಾರಿಗಳನ್ನು ನೇಮಕಾತಿ ಮಾಡುವುದು ಸೂಕ್ತವೆಂದು ಅಭಿಪ್ರಾಯ ಪಟ್ಟು ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)(ಬಿ) ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿ ಓ/201/ ಸಿಎಲ್‌ಎಂ/2008 ದಿನಾಂಕ:27–05–2010 ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಡಿ.ಪಾಂಡುರಂಗಪ್ಪ, ಸಹಕಾರ ಸಂಘಗಳ ಉಪನಿಬಂಧಕರು–1, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಆದ ನಾನು ಈ ಕೆಳಕಂಡ ಸಹಕಾರ ಸಂಘಗಳನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 72(2)(ಬಿ) ರೀತ್ಯಾ ಸಮಾಪನೆಗೊಳಿಸಿರುತ್ತೇನೆ ಹಾಗೂ ಕಲಂ 73 ರ ರೀತ್ಯಾ ಈ ಆದೇಶದ ಕೆಳಗೆ ತಿಳಿಸಿರುವ ಆಯಾ ಸಂಘಗಳ ಎದುರಿಗೆ ನಮೂದಿಸಿರುವ ಅಧಿಕಾರಿಗಳನ್ನು ಸದರಿ ಸಂಘಗಳ ಸಮಾಪನಾಧಿಕಾರಿಗಳನ್ನಾಗಿ 6 ತಿಂಗಳ ಅವಧಿಗೆ ನೇಮಕಾತಿ ಮಾಡಿರುತ್ತೇನೆ. ಆದೇಶದಲ್ಲಿ ನೇಮಕವಾದ ಸಮಾಪನಾಧಿಕಾರಿಗಳು ಸಹಕಾರ ಸಂಘಗಳ ಕಾಯ್ದೆ ಕಲಂ 75 ರ ರೀತ್ಯಾ ಕ್ರಮ ತೆಗೆದುಕೊಂಡು 6 ತಿಂಗಳೊಳಗೆ ನೋಂದಣಿ ರದ್ದತಿಗೆ ಪ್ರಸ್ತಾವನೆ ಸಲ್ಲಿಸುವಂತೆ ನಿರ್ದೇಶಿಸಲಾಗಿದೆ.

ಕ್ರ. ಸಂ.	ಸಮಾಪನೆಗೊಳಿಸಿರುವ ಸಂಘಗಳ ಹೆಸರು	ಕಲಂ 73 ರ ರೀತ್ಯಾ ನೇಮಕಗೊಂಡ ಸಮಾಪನಾಧಿಕಾರಿಗಳ ಹೆಸರು ಮತ್ತು ಪದನಾಮ
1	ವೈಭವ ಲಕ್ಷ್ಮೀ ಮಹಿಳಾ ವಿವಿದೋದ್ದೇಶ ಸಹಕಾರ ಸಂಘ ನಿ. ನಂ.12, 8ನೇ ಅಡ್ಡರಸ್ತೆ, ಅರುಂಧತಿ ನಗರ, ಶ್ರೀರಾಮಪುರ, ಬೆಂಗಳೂರು–21	ದ್ವಿತೀಯ ದರ್ಜೆ ಸಹಾಯಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಒಂದನೇ ವಲಯ ರವರ ಕಛೇರಿ ಬೆಂಗಳೂರು

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿಯ ಮೊಹರ್ ನಿಶಿಯೊಂದಿಗೆ ದಿನಾಂಕ:18–2–2011ರಂದು ನೀಡಲಾಗಿದೆ.

ಡಿ.ಪಾಂಡುರಂಗಪ್ಪ
ಸಹಕಾರ ಸಂಘಗಳ ಉಪ ನಿಬಂಧಕರು–1,
ಬೆಂಗಳೂರು ನಗರ ಜಿಲ್ಲೆ

ಪಿಆರ್–260

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿ ಬಾಗಲಕೋಟೆ

ಅಧಿಸೂಚನೆ

ಇ2:1549:ಪ್ರಾಶಾಶಿ:ದಸ್ತಗಿರಿ:42:2009–10/4143, ದಿನಾಂಕ:15ನೇ ಫೆಬ್ರವರಿ 2011

ವಿಷಯ: ಶ್ರೀ ಎಸ್.ಕೆ.ಗೌಡರ, ಸಶಿ, ಸ.ಹಿ.ಪ್ರಾ. ಶಾಲೆ ಯಂಡಿಗೇರಿ, ತಾಲ್ಲೂಕು ಬಾದಾಮಿ ಇವರು ಶಾಲಾ ಕರ್ತವ್ಯಕ್ಕೆ ಪದೇ ಪದೇ ಅನಧಿಕೃತ ಗೈರು ಉಳಿಯುತ್ತಿರುವ ಕುರಿತು.

ಉಲ್ಲೇಖ:
1) ಸರಕಾರಿ ಆದೇಶ ಸಂಖ್ಯೆ ಸಿಆಸುಇ:18 ಸೇಇವಿ:2001, ಬೆಂಗಳೂರು, ದಿನಾಂಕ:14–09–2001.
2) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ ಸಿ2(5): ಇತರೆ:62/2002–03 ದಿನಾಂಕ:01–01–2003.
3) ಈ ಕಚೇರಿ ಪತ್ರ ಸಮಸಂಖ್ಯೆ ದಿನಾಂಕ:18–03–2010.
4) ವಿಚಾರಣಾಧಿಕಾರಿಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಬಾದಾಮಿ ಇವರ ಪ್ರಸ್ತಾವನೆ ಪತ್ರ ಸಂಖ್ಯೆ ಅ2(3): ಇಎಸ್‌ಟಿ:ಪ್ರಾಶಾಶಿ: ಆಪ: ಎಸ್.ಕೆ.ಜಿ. 2007–08/865 ದಿನಾಂಕ:17–01–2011.

ಪ್ರಸ್ತಾವನೆ:

ಶ್ರೀ ಎಸ್.ಕೆ.ಗೌಡರ, ಸಶಿ, ಸ.ಹಿ.ಪ್ರಾ.ಶಾಲೆ ಯಂಡಿಗೇರಿ, ತಾಲ್ಲೂಕು ಬಾದಾಮಿ. ಇವರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಜಲಗೇರಿ ಎಲ್.ಟಿ. ಇಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಕುಡಿತಕ್ಕಾಗಿ, ಕುಡಿತದ ಅಮಲಿನಲ್ಲಿ ತಮ್ಮ ಪತ್ನಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದುದರಿಂದ ಪ್ರಕರಣ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿ ಇರುತ್ತದೆ. ಸದರಿ ಶಿಕ್ಷಕರು ತಮ್ಮ ಪತ್ನಿಯನ್ನು

ಪೂರ್ವಾನುಮತಿಯಿಲ್ಲದೇ ಅನಧಿಕೃತವಾಗಿ ಶಾಲಾ ಕರ್ತವ್ಯಕ್ಕೆ ಗೈರು ಉಳಿಯುತ್ತಿದ್ದುದರಿಂದ ಕ.ನಾ.ಸೇ (ನಡತೆ ನಿಯಮಗಳು) 1966 ರ ನಿಯಮಾವಳಿಗಳ ನಿಯಮ 03 ಹಾಗೂ 29 ರ ಸ್ಪಷ್ಟ ಉಲ್ಲಂಘನೆಯಾಗಿದ್ದರಿಂದ ಸದರಿ ಶಿಕ್ಷಕರನ್ನು ಉಲ್ಲೇಖ 03 ರಡಿ ಅಮಾನತ್ತುಗೊಳಿಸಿ ಆದೇಶಿಸಲಾಗಿತ್ತು.

ಅಮಾನತ್ತಿನ ಅವಧಿಯನ್ನು ನಿರ್ಣಯಿಸಲೋಸುಗ ವಿಚಾರಣೆಗಾಗಿ ವಿಚಾರಣಾಧಿಕಾರಿಗಳನ್ನು ಹಾಗೂ ಮಂಡನಾಧಿಕಾರಿಗಳನ್ನು ನೇಮಿಸಲಾಗಿತ್ತು. ಅದರನ್ವಯ ಉಲ್ಲೇಖ 04 ರಡಿ ವಿಚಾರಣೆಗೆ ಸದರಿ ಶಿಕ್ಷಕರು ಹಾಜರಾಗುತ್ತಿಲ್ಲ. ಪದೇ ಪದೇ ಶಾಲಾ ಕರ್ತವ್ಯಕ್ಕೆ ಅನಧಿಕೃತ ಗೈರ ಉಳಿಯುತ್ತಿದ್ದು ದಿನಾಂಕ:06-12-2010 ರಿಂದ ಶಾಲಾ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಪ್ರಯುಕ್ತ ಸದರ ಶಿಕ್ಷಕರನ್ನು ಕ.ನಾ.ಸೇ.ನಿ. ನಿಯಮ 285 ರನ್ವಯ ಕಡ್ಡಾಯ ನಿವೃತ್ತಿಗೊಳಿಸುವಂತೆ ಅಭಿಪ್ರಾಯ ವ್ಯಕ್ತಪಡಿಸಿ ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಈ ಕಚೇರಿಗೆ ಸಲ್ಲಿಸಿರುತ್ತಾರೆ.

ಪ್ರಯುಕ್ತ ಸದರಿ ಶಿಕ್ಷಕರು ಸೇವೆಯಲ್ಲಿ ಮುಂದುವರೆಯುವದರಿಂದ ಶಾಲಾ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಅಡೆತಡೆಯುಂಟಾಗುತ್ತಿರುವುದನ್ನು ಮನಗಂಡು ಉಲ್ಲೇಖ 01ರ ಕ್ರಮಸಂಖ್ಯೆ 02ರ ನಿರ್ದೇಶನ ಹಾಗೂ ಉಲ್ಲೇಖ 02 ರ ಅಧಿಕಾರದ ಪ್ರತ್ಯಾಯೋಜನೆಯಂತೆ ಕ.ನಾ.ಸೇ.ನಿಯಮಾವಳಿಗಳ ನಿಯಮ 285 (1) ಎ ರನ್ವಯ ಸದರಿ ಶಿಕ್ಷಕರನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವುದನ್ನು ಸೂಕ್ತವೆಂದು ಭಾವಿಸಿ ಸದರಿ ಪ್ರಕರಣ ನ್ಯಾಯಾಲಯದಲ್ಲಿ ದಾಖಲಾಗಿರುವುದರಿಂದ ನ್ಯಾಯಾಲಯದ ತೀರ್ಪಿಗನುಗುಣವಾಗಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿಷದೀಕರಿಸಿದಂತೆ ಉಲ್ಲೇಖ 4ರ ಶಿಫಾರಸಿನ ಮೇರೆಗೆ ಶ್ರೀ ಎಸ್.ಕೆ.ಗೌಡರ, ಸಶಿ, ಸ.ಹಿ.ಪ್ರಾ.ಶಾಲೆ ಯಂಡಿಗೇರಿ ತಾಲ್ಲೂಕು ಬಾದಾಮಿ. ಇವರಿಗೆ ಘನ ನ್ಯಾಯಾಲಯದ ತೀರ್ಪಿಗನುಗುಣವಾಗಿ ಕ.ನಾಸೇ.ನಿ. (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) 1957ರ ನಿಯಮ 8 (6) ಹಾಗೂ 9 (2) (ಸಿ) ರಲ್ಲಿಯ ಪ್ರದತ್ತವಾದ ಅಧಿಕಾರದಡಿ ಕ.ನಾ.ಸೇ.ನಿ. ನಿಯಮ 285-1(A) ರನ್ವಯ ದಿನಾಂಕ:06-12-2010 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಕಡ್ಡಾಯ ಸೇವಾ ನಿವೃತ್ತಿಗೊಳಿಸಿ ಆದೇಶಿಸಿದೆ.

ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಕುರಿತು ಕ್ರಮವಹಿಸಿ ಈ ಕಚೇರಿಗೆ ವರದಿ ಸಲ್ಲಿಸುವಂತೆ ಸೂಚಿಸಿದೆ.

ಪಿಆರ್-264 ಉಪನಿರ್ದೇಶಕರು (ಆಡಳಿತ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಸಂಖ್ಯೆ:ಆಕುಕ 5 ಹೆಚ್‌ಎಸ್‌ಡಿ 2009 ಬೆಂಗಳೂರು, ದಿನಾಂಕ:21ನೇ ಡಿಸೆಂಬರ್ 2010

ಅಧಿಸೂಚನೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಮುಖ್ಯ ದಂತ ಆರೋಗ್ಯಾಧಿಕಾರಿಗಳ ವೃಂದದ ಜೇಷ್ಠತಾ ಪಟ್ಟಿಯನ್ನು ದಿನಾಂಕ: 01-01-2009 ರಲ್ಲಿದ್ದಂತೆ ತಯಾರಿಸಲು ತೀರ್ಮಾನಿಸಿ, ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಾವಳಿ 1957ರ ನಿಯಮ 10ನ್ನು ಅನುಸರಿಸಿ ಸಂಬಂಧಿಸಿದ ಮುಖ್ಯ ದಂತ ಆರೋಗ್ಯಾಧಿಕಾರಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಆಕುಕ 05 ಹೆಚ್‌ಎಸ್‌ಡಿ 2009 ದಿನಾಂಕ:22-01-2010 ರಲ್ಲಿ ಪ್ರಕಟಿಸಲಾಗಿತ್ತು.

ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಮೇಲೆ ಬಾಧಿತರಾದ ವೈದ್ಯರುಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಸ್ವೀಕೃತವಾಗಿರುವ ಆಕ್ಷೇಪಣೆ: ಸಲಹೆಗಳನ್ನು ಸರ್ಕಾರವು ಪರಿಶೀಲಿಸಿದೆ. ಅವುಗಳನ್ನು ಪರಿಶೀಲಿಸಿರುವ ಕುರಿತ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ ಹಾಗೂ ದಿನಾಂಕ:01-01-2010 ರಲ್ಲಿದ್ದಂತೆ ಮುಖ್ಯ ದಂತ ಆರೋಗ್ಯಾಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಅನುಬಂಧ-2 ರಲ್ಲಿರುವಂತೆ ಈ ಮೂಲಕ ಪ್ರಕಟಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಚಿಕ್ಕೇಗೌಡ,

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು-1)

ಅಧಿಸೂಚನೆ ಸಂಖ್ಯೆ:ಆಕುಕ 05 ಹೆಚ್‌ಎಸ್‌ಡಿ 2009

ದಿನಾಂಕ:21-12-2010 ಕ್ಕೆ ಅನುಬಂಧ-1

ಕ್ರ ಸಂ.	ವೈದ್ಯಾಧಿಕಾರಿಯ ಹೆಸರು	ಆಕ್ಷೇಪಣೆ/ಸಲಹೆ ವಿವರ	ಪರಿಗಣಿಸಿರುವುದಕ್ಕೆ / ತಿರಸ್ಕರಿಸಿರುವುದಕ್ಕೆ ಕಾರಣಗಳು
1.	ಡಾ: ಸೈಯದ್ ತಾಜೂದ್ದೀನ್	ಸಂಖ್ಯೆ: ಎಲ್‌ಆರ್‌ಓ/184/2002-03 ರ ದಿನಾಂಕ:05-11-03ರಲ್ಲಿ ಪ್ರಕಟಿಸಿದ ಜೇಷ್ಠತಾ ಪಟ್ಟಿಯಲ್ಲಿ ಡಾ: ಡಿ.ಡಿ. ನಾಯಕ್ ರವರ ಹೆಸರು ಇರುವುದಿಲ್ಲ. ಇದರಿಂದ ಈಗ ಪ್ರಕಟಿಸಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ನನ್ನ ಹೆಸರು ಮೊದಲು ಬರಬೇಕು	ದಿನಾಂಕ:05-11-03 ರಂದು ಇವರಿಗೆ ಕಾಲಬದ್ಧ ವೇತನ ಬಡ್ತಿಯನ್ನು ಮಂಜೂರು ಮಾಡಲಾಗಿದ್ದು, ಇದು ಜೇಷ್ಠತಾ ಪಟ್ಟಿಯಾಗಿರುವುದಿಲ್ಲ. ಆದ್ದರಿಂದ ಪ್ರಸ್ತುತ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಇವರಿಗೆ ನಿಗದಿಪಡಿಸಿರುವ ಜೇಷ್ಠತೆ ಕ್ರಮಬದ್ಧವಾಗಿದೆ ಎಂದು ಆಯುಕ್ತರು ಸಲ್ಲಿಸಿರುವ ಅಭಿಪ್ರಾಯವನ್ನು ಸರ್ಕಾರವು ಅಂಗೀಕರಿಸಿ ಇವರ ಆಕ್ಷೇಪಣೆಯನ್ನು ತಳ್ಳಿಹಾಕಿದೆ.

1	2	3	4
	ಡಾ: ವೀರಣ್ಣ ಸಾತನೂರು	ಇವರು ಸೇವೆಗೆ ಸೇರಿದ ದಿನಾಂಕ: 27–10–86 ರ ಬದಲು 24–10–86 ಆಗಿದ್ದು, ಮುಖ್ಯ ದಂತ ಆರೋಗ್ಯಾಧಿಕಾರಿ ವೃಂದಕ್ಕೆ ಸೇರಿದ ದಿನಾಂಕ:27–10–99 ರ ಬದಲು 24–10–99 ಎಂದು ತಿದ್ದುಪಡಿ ಮಾಡುವುದು.	ಆಯುಕ್ತರು ದೃಢೀಕರಿಸಿ ಸಲ್ಲಿಸಿದ ವರದಿಯನ್ನು ಸರ್ಕಾರವು ಅಂಗೀಕರಿಸಿ ಇವರ ಕೋರಿಕೆಯನ್ನು ಪರಿಗಣಿಸಿ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ತಿದ್ದುಪಡಿ ಮಾಡಿದೆ.

ಚಿಕ್ಕೇಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಹಕಾರ ಅಭಿವೃದ್ಧಿ ಅಧಿಕಾರಿ, ಬಂಗಾರಪೇಟೆ ರವರು ಸಲ್ಲಿಸಿರುವ ಪ್ರಸ್ತಾವೆಯನ್ನು ಪರಿಶೀಲಿಸಿ, ಸಹಕಾರ ಸಂಘದ ಆಸ್ತಿ-ಜವಾಬ್ದಾರಿಗಳು ಶೂನ್ಯವಾಗಿರುವುದನ್ನು ಖಚಿತಪಡಿಸಿ, ಸಂಘದ ಸದಸ್ಯರಿಗೆ ಅಥವಾ ಸಾರ್ವಜನಿಕರಿಗೆ ಈ ಸಂಘವನ್ನು ಮುಂದುವರೆಸಿಕೊಂಡು ಹೋಗುವುದರಿಂದ ಯಾವುದೇ ರೀತಿಯ ಪ್ರಯೋಜನ ಇರುವುದಿಲ್ಲವೆಂದು ಅಭಿಪ್ರಾಯಿಸಿ, ಋಣ ಸಮಾಪನಾ ಸಹಕಾರ ಸಂಘವನ್ನು ಸಹಕಾರ ಕಾಯ್ದೆ ಕಲಂ 75 ರ ರೀತ್ಯಾ ನೋಂದಣಿ ರದ್ಧತಿ ಮಾಡಲು, ಸಂಘವನ್ನು ವಿಸರ್ಜಿಸಲು ಶಿಫಾರಸ್ಸು ಮಾಡಿ ಪ್ರಸ್ತಾವೆಯನ್ನು ಈ ಕಛೇರಿಗೆ ಉಲ್ಲೇಖ (3) ರಂತೆ ಸಲ್ಲಿಸಿರುತ್ತಾರೆ.

ಸಮಾಪನಾಧಿಕಾರಿಗಳು ಸಮಾಪನಾ ಸಹಕಾರ ಸಂಘದ ಸಮಾಪನಾ ಕಾರ್ಯವನ್ನು ಪೂರ್ಣಗೊಳಿಸಿರುವುದರಿಂದ ಸಹಕಾರ ಅಭಿವೃದ್ಧಿ ಅಧಿಕಾರಿ, ಬಂಗಾರಪೇಟೆ ಇವರ ಶಿಫಾರಸ್ಸಿನೊಂದಿಗೆ ಸಲ್ಲಿಸಿರುವ ಸಮಾಪನಾ ಸಹಕಾರ ಸಂಘದ ನೊಂದಣಿ ರದ್ಧತಿ ಪ್ರಸ್ತಾವನೆ ಸೂಕ್ತವಾಗಿರುವುದರಿಂದ ಈ ಕೆಳಕಂಡ ಆದೇಶ ಹೊರಡಿಸಿದೆ.

ಆದೇಶ

ನಂ:ಡಿಆರ್‌ಕೆ/ಎಲ್‌ಕ್ಯೂಡಿ/ಸಿಆರ್/12/2010-11, ದಿನಾಂಕ:30ನೇ ಸೆಪ್ಟೆಂಬರ್ 2010

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 75 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಎಂಡಬ್ಲ್ಯೂ/ಸಿಎಲ್‌ಎಂ/2001 ದಿನಾಂಕ:21-11-2001 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಕೆ.ಎಲ್.ನರಸಿಂಹಮೂರ್ತಿ, ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ ಆದ ನಾನು ಎಸ್.ಸಿ./ಎಸ್.ಟಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ರಾಬರ್ಟ್‌ಸನ್‌ಪೇಟೆ, ಕೆಜಿಎಫ್, ಬಂಗಾರಪೇಟೆ ತಾಲ್ಲೂಕು ಈ ಸಹಕಾರ ಸಂಘದ ನೋಂದಣಿ ಸಂಖ್ಯೆ:ಎಆರ್‌ಕೆ/ಬಿ-614 ದಿನಾಂಕ:21-12-59 ನ್ನು ರದ್ದುಗೊಳಿಸಿ, ಸಂಘವನ್ನು ವಿಸರ್ಜಿಸಿ ಆದೇಶಿಸಿದ್ದೇನೆ.

ಈ ಆದೇಶದ ದಿನಾಂಕದಿಂದ ಸದರಿ ಸಂಘವು ಅಸ್ತಿತ್ವದಲ್ಲಿಲ್ಲದೆ ಸಂಪೂರ್ಣವಾಗಿ ವಿಸರ್ಜಿತವಾಗಿದೆ ಎಂದು ಪರಿಗಣಿಸತಕ್ಕದ್ದು.

ಈ ಆದೇಶವನ್ನು ಈ ದಿನ ಅಂದರೆ, ದಿನಾಂಕ:30-09-2010 ರಂದು ನನ್ನ ಸಹಿ ಹಾಗೂ ಈ ಕಛೇರಿಯ ಮೊಹರಿನೊಂದಿಗೆ ಹೊರಡಿಸಿದೆ.

ಕೆ.ಎಲ್. ನರಸಿಂಹಮೂರ್ತಿ,
ಸಹಕಾರ ಸಂಘಗಳ ಉಪ ನಿಬಂಧಕರು.
ಕೋಲಾರ ಜಿಲ್ಲೆ, ಕೋಲಾರ.

ಪಿಆರ್-174

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ

ವಿಷಯ: ಬಿಜಿಎಂಎಲ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಕೆ.ಜಿ.ಎಫ್, ಬಂಗಾರಪೇಟೆ ತಾಲ್ಲೂಕು ಈ ಸಂಘದ ನೋಂದಣಿಯನ್ನು ರದ್ದುಪಡಿಸುವ ಬಗ್ಗೆ

ಉಲ್ಲೇಖ: 1) ಈ ಕಛೇರಿಯ ಆದೇಶದ ಸಮಸಂಖ್ಯೆ ದಿನಾಂಕ:12-1-2006.
2) ಕಛೇರಿಯಿಂದ ನೀಡಿರುವ ಪತ್ರಿಕಾ ಪ್ರಕಟಣೆ ದಿನಾಂಕ:8-6-2010 ಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕ:9-6-2010.
3) ಸಹಕಾರ ಅಭಿವೃದ್ಧಿ ಅಧಿಕಾರಿ, ಬಂಗಾರಪೇಟೆ ತಾಲ್ಲೂಕುರವರ ಪ್ರಸ್ತಾವೆ ದಿನಾಂಕ:9-9-2010.

ಪ್ರಸ್ತಾವನೆ:

ಬಿ.ಜಿ.ಎಂ.ಎಲ್. ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಕೆಜಿಎಫ್, ಬಂಗಾರಪೇಟೆ ತಾಲ್ಲೂಕು ಈ ಸಂಘವು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕೋಲಾರ ಇವರ ಆದೇಶ ಸಂಖ್ಯೆ: ಎಆರ್‌ಕೆ/ಬಿ/ಸಿಆರ್.4/9852/83-84 ದಿನಾಂಕ:5-8-83 ರಂತೆ ನೋಂದಣಿಯಾಗಿರುತ್ತದೆ. ಈ ಸಹಕಾರ ಸಂಘವು ಉದ್ದೇಶಿತ ಬೈಲಾ, ಸಹಕಾರ ಸಂಘಗಳ ಕಾಯ್ದೆ ರೀತ್ಯಾ ಹಾಗೂ ಸಂಘದ ಸದಸ್ಯರ ಹಿತದೃಷ್ಟಿಯಿಂದ ಸಂಘವು ಕಾರ್ಯನಿರ್ವಹಿಸದೆ, ಕೆಲವು ವರ್ಷಗಳಿಂದ ಸ್ಥಗಿತಗೊಂಡ ಪ್ರಯುಕ್ತ ಈ ಕಛೇರಿಯ ಉಲ್ಲೇಖ (1)ರ ಆದೇಶದಲ್ಲಿ ಈ ಸಂಘವ

ಋಣಸಮಾಪನೆಗೊಳಿಸಿ, ಸಹಕಾರ ಅಭಿವೃದ್ಧಿ ಅಧಿಕಾರಿ, ಬಂಗಾರಪೇಟೆ ಇವರನ್ನು ಸಮಾಪನಾಧಿಕಾರಿನ್ನಾಗಿ ನೇಮಿಸಲಾಗಿತ್ತು. ಸಮಾಪನಾಧಿಕಾರಿಗಳು ಸಮಾಪನಾ ಸಹಕಾರ ಸಂಘದ ಆಸ್ತಿ ಮತ್ತು ಜವಾಬ್ದಾರಿಯನ್ನು ಶೂನ್ಯಗೊಳಿಸಿ, ಸಹಕಾರ ಅಭಿವೃದ್ಧಿ ಅಧಿಕಾರಿ, ಬಂಗಾರಪೇಟೆ ರವರು ಸಮಾಪನಾ ಸಹಕಾರ ಸಂಘದ ನೊಂದಣಿ ರದ್ಧತಿ ಮಾಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸಹಕಾರ ಅಭಿವೃದ್ಧಿ ಅಧಿಕಾರಿ, ಬಂಗಾರಪೇಟೆ ರವರು ಸಲ್ಲಿಸಿರುವ ಪ್ರಸ್ತಾವೆಯನ್ನು ಪರಿಶೀಲಿಸಿ, ಸಹಕಾರ ಸಂಘದ ಆಸ್ತಿ-ಜವಾಬ್ದಾರಿಗಳು ಶೂನ್ಯವಾಗಿರುವುದನ್ನು ಖಚಿತಪಡಿಸಿ, ಸಂಘದ ಸದಸ್ಯರಿಗೆ ಅಥವಾ ಸಾರ್ವಜನಿಕರಿಗೆ ಈ ಸಂಘವನ್ನು ಮುಂದುವರೆಸಿಕೊಂಡು ಹೋಗುವುದರಿಂದ ಯಾವುದೇ ರೀತಿಯ ಪ್ರಯೋಜನ ಇರುವುದಿಲ್ಲವೆಂದು ಅಭಿಪ್ರಾಯಿಸಿ, ಋಣ ಸಮಾಪನಾ ಸಹಕಾರ ಸಂಘವನ್ನು ಸಹಕಾರ ಕಾಯ್ದೆ ಕಲಂ 75 ರ ರೀತ್ಯಾ ನೋಂದಣಿ ರದ್ಧತಿ ಮಾಡಲು, ಸಂಘವನ್ನು ವಿಸರ್ಜಿಸಲು ಶಿಫಾರಸ್ಸು ಮಾಡಿ ಪ್ರಸ್ತಾವೆಯನ್ನು ಈ ಕಛೇರಿಗೆ ಉಲ್ಲೇಖ (3) ರಂತೆ ಸಲ್ಲಿಸಿರುತ್ತಾರೆ.

ಸಮಾಪನಾಧಿಕಾರಿಗಳು ಸಮಾಪನಾ ಸಹಕಾರ ಸಂಘದ ಸಮಾಪನಾ ಕಾರ್ಯವನ್ನು ಪೂರ್ಣಗೊಳಿಸಿರುವುದರಿಂದ ಸಹಕಾರ ಅಭಿವೃದ್ಧಿ ಅಧಿಕಾರಿ, ಬಂಗಾರಪೇಟೆ ಇವರ ಶಿಫಾರಸ್ಸಿನೊಂದಿಗೆ ಸಲ್ಲಿಸಿರುವ ಸಮಾಪನಾ ಸಹಕಾರ ಸಂಘದ ನೊಂದಣಿ ರದ್ಧತಿ ಪ್ರಸ್ತಾವನೆ ಸೂಕ್ತವಾಗಿರುವುದರಿಂದ ಈ ಕೆಳಕಂಡ ಆದೇಶ ಹೊರಡಿಸಿದೆ.

ಆದೇಶ

ನಂ:ಡಿಆರ್‌ಕೆ/ಎಲ್‌ಕ್ಯೂಡಿ/ಸಿಆರ್/13/2010-11, ದಿನಾಂಕ:30ನೇ ಸೆಪ್ಟೆಂಬರ್ 2010

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 75 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಎಂಡಬ್ಲ್ಯೂ/ಸಿಎಲ್‌ಎಂ/2001 ದಿನಾಂಕ:21-11-2001 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಕೆ.ಎಲ್.ನರಸಿಂಹಮೂರ್ತಿ, ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ ಆದ ನಾನು ಜಜಿಎಂಎಲ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಕೆ.ಜಿ.ಎಫ್, ಬಂಗಾರಪೇಟೆ ತಾಲ್ಲೂಕು ಈ ಸಹಕಾರ ಸಂಘದ ನೋಂದಣಿ ಸಂಖ್ಯೆ:ಎಆರ್‌ಕೆ/ಜಿಸಿಆರ್-4/9852/83-84 ದಿನಾಂಕ:5-8-83 ನ್ನು ರದ್ದುಗೊಳಿಸಿ, ಸಂಘವನ್ನು ವಿಸರ್ಜಿಸಿ ಆದೇಶಿಸಿದ್ದೇನೆ.

ಈ ಆದೇಶದ ದಿನಾಂಕದಿಂದ ಸದರಿ ಸಂಘವು ಅಸ್ತಿತ್ವದಲ್ಲಿಲ್ಲದೆ ಸಂಪೂರ್ಣವಾಗಿ ವಿಸರ್ಜಿತವಾಗಿದೆ ಎಂದು ಪರಿಗಣಿಸತಕ್ಕದ್ದು.

ಈ ಆದೇಶವನ್ನು ಈ ದಿನ ಅಂದರೆ, ದಿನಾಂಕ:30-09-2010 ರಂದು ನನ್ನ ಸಹಿ ಹಾಗೂ ಈ ಕಛೇರಿ ಮೊಹರಿನೊಂದಿಗೆ ಹೊರಡಿಸಿದೆ.

ಕೆ.ಎಲ್. ನರಸಿಂಹಮೂರ್ತಿ,
ಸಹಕಾರ ಸಂಘಗಳ ಉಪ ನಿಬಂಧಕರು.
ಕೋಲಾರ ಜಿಲ್ಲೆ, ಕೋಲಾರ.

ಪಿಆರ್-175

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ

ವಿಷಯ: ಚಾಪೆ ಹೆಣೆಯುವವರ ಕುಶಲ ಕೈಗಾರಿಕಾ ಸಹಕಾರ ಸಂಘ ನಿ., ಕಲ್ಕೆರೆ, ಮಾಲೂರು ತಾಲ್ಲೂಕು ಈ ಸಂಘದ ನೋಂದಣಿಯನ್ನು ರದ್ದುಪಡಿಸುವ ಬಗ್ಗೆ

ಉಲ್ಲೇಖ: 1) ಈ ಕಛೇರಿಯ ಆದೇಶದ ಸಂಖ್ಯೆ ಡಿಆರ್‌ಕೆ/ಎಲ್‌ಕ್ಯೂಡಿ/ಸಿಆರ್.12/2005-06 ದಿನಾಂಕ:25-8-2005.

2) ಕಛೇರಿಯಿಂದ ನೀಡಿರುವ ಪತ್ರಿಕಾ ಪ್ರಕಟಣೆ ದಿನಾಂಕ:8-6-2010 ಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕ:9-6-2010.

3) ಸಹಕಾರ ಅಭಿವೃದ್ಧಿ ಅಧಿಕಾರಿ, ಮಾಲೂರು ತಾಲ್ಲೂಕುರವರ ಪ್ರಸ್ತಾವೆ ದಿನಾಂಕ:30-9-2010.

ಪ್ರಸ್ತಾವನೆ:

ಚಾಪೆ ಹೆಣೆಯುವವರ ಕುಶಲ ಕೈಗಾರಿಕಾ ಸಹಕಾರ ಸಂಘ ನಿ., ಕಲ್ಕೆರೆ, ಮಾಲೂರು ತಾಲ್ಲೂಕು ಈ ಸಂಘವು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕೋಲಾರ ಇವರ ಆದೇಶ ಸಂಖ್ಯೆ: ಎಆರ್‌ಕೆ/49/ಯೋ/ಸಿಆರ್.140/61-62 ದಿನಾಂಕ:31-3-1961 ರಂತೆ ನೋಂದಣಿಯಾಗಿರುತ್ತದೆ. ಈ ಸಹಕಾರ ಸಂಘವು ಉದ್ದೇಶಿತ ಬೈಲಾ, ಸಹಕಾರ ಸಂಘಗಳ ಕಾಯ್ದೆ ರೀತ್ಯಾ ಹಾಗೂ ಸಂಘದ ಸದಸ್ಯರ ಹಿತದೃಷ್ಟಿಯಿಂದ ಸಂಘವು ಕಾರ್ಯನಿರ್ವಹಿಸದೆ, ಕೆಲವು ವರ್ಷಗಳಿಂದ ಸ್ಥಗಿತಗೊಂಡ ಪ್ರಯುಕ್ತ ಈ ಕಛೇರಿಯ ಉಲ್ಲೇಖ (1)ರ ಆದೇಶದಲ್ಲಿ ಈ ಸಂಘವನ್ನು ಋಣಸಮಾಪನೆಗೊಳಿಸಿ, ಸಹಕಾರ ಅಭಿವೃದ್ಧಿ ಅಧಿಕಾರಿ, ಮಾಲೂರು ಇವರನ್ನು ಸಮಾಪನಾಧಿಕಾರಿನ್ನಾಗಿ ನೇಮಿಸಲಾಗಿತ್ತು. ಸಮಾಪನಾಧಿಕಾರಿಗಳು ಸಮಾಪನಾ ಸಹಕಾರ ಸಂಘದ ಆಸ್ತಿ ಮತ್ತು ಜವಾಬ್ದಾರಿಯನ್ನು ಶೂನ್ಯಗೊಳಿಸಿ, ಸಹಕಾರ ಅಭಿವೃದ್ಧಿ ಅಧಿಕಾರಿ, ಮಾಲೂರು ರವರು ಸಮಾಪನಾ ಸಹಕಾರ ಸಂಘದ ನೊಂದಣಿ ರದ್ಧತಿ ಮಾಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸಹಕಾರ ಅಭಿವೃದ್ಧಿ ಅಧಿಕಾರಿ, ಮಾಲೂರು ರವರು ಸಲ್ಲಿಸಿರುವ ಪ್ರಸ್ತಾವೆಯನ್ನು ಪರಿಶೀಲಿಸಿ, ಸಹಕಾರ ಸಂಘದ ಆಸ್ತಿ-ಜವಾಬ್ದಾರಿಗಳು ಶೂನ್ಯವಾಗಿರುವುದನ್ನು ಖಚಿತಪಡಿಸಿ, ಸಂಘದ ಸದಸ್ಯರಿಗೆ ಅಥವಾ ಸಾರ್ವಜನಿಕರಿಗೆ ಈ ಸಂಘವನ್ನು ಮುಂದುವರೆಸಿಕೊಂಡು ಹೋಗುವುದರಿಂದ ಯಾವುದೇ ರೀತಿಯ ಪ್ರಯೋಜನ ಇರುವುದಿಲ್ಲವೆಂದು ಅಭಿಪ್ರಾಯಿಸಿ, ಋಣ ಸಮಾಪನಾ ಸಹಕಾರ ಸಂಘವನ್ನು ಸಹಕಾರ ಕಾಯ್ದೆ ಕಲಂ 75 ರ ರೀತ್ಯಾ ನೋಂದಣಿ ರದ್ಧತಿ ಮಾಡಲು, ಸಂಘವನ್ನು ವಿಸರ್ಜಿಸಲು ಶಿಫಾರಸ್ಸು ಮಾಡಿ ಪ್ರಸ್ತಾವೆಯನ್ನು ಈ ಕಛೇರಿಗೆ ಉಲ್ಲೇಖ (3) ರಂತೆ ಸಲ್ಲಿಸಿರುತ್ತಾರೆ.

ಸಮಾಪನಾಧಿಕಾರಿಗಳು ಸಮಾಪನಾ ಸಹಕಾರ ಸಂಘದ ಸಮಾಪನಾ ಕಾರ್ಯವನ್ನು ಪೂರ್ಣಗೊಳಿಸಿರುವುದರಿಂದ ಸಹಕಾರ ಅಭಿವೃದ್ಧಿ ಅಧಿಕಾರಿ, ಮಾಲೂರು ಇವರ ಶಿಫಾರಸ್ಸಿನೊಂದಿಗೆ ಸಲ್ಲಿಸಿರುವ ಸಮಾಪನಾ ಸಹಕಾರ ಸಂಘದ ನೊಂದಣಿ ರದ್ಧತಿ ಪ್ರಸ್ತಾವನೆ ಸೂಕ್ತವಾಗಿರುವುದರಿಂದ ಈ ಕೆಳಕಂಡ ಆದೇಶ ಹೊರಡಿಸಿದೆ.

ಆದೇಶ

ನಂ:ಡಿಆರ್‌ಕೆ/ಎಲ್‌ಕ್ಯೂಡಿ/ಸಿಆರ್/14/2010-11, ದಿನಾಂಕ:30ನೇ ಸೆಪ್ಟೆಂಬರ್ 2010

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 75 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಎಂಡಬ್ಲ್ಯೂ/ಸಿಎಲ್‌ಎಂ/2001 ದಿನಾಂಕ:21-11-2001 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಕೆ.ಎಲ್.ನರಸಿಂಹಮೂರ್ತಿ, ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ ಆದ ನಾನು ಚಾಪೆ ಹೆಣೆಯುವವರ ಕುಶಲ ಕೈಗಾರಿಕಾ ಸಹಕಾರ ಸಂಘ ನಿ., ಕಲ್ಕೆರೆ, ಮಾಲೂರು ತಾಲ್ಲೂಕು ಈ ಸಹಕಾರ ಸಂಘದ ನೋಂದಣಿ ಸಂಖ್ಯೆ:ಎಆರ್‌ಕೆ/49/ಯೋ/ಸಿಆರ್.140/61-62 ದಿನಾಂಕ:31-3-1961 ನ್ನು ರದ್ದುಗೊಳಿಸಿ, ಸಂಘವನ್ನು ವಿಸರ್ಜಿಸಿ ಆದೇಶಿಸಿದ್ದೇನೆ.

ಈ ಆದೇಶದ ದಿನಾಂಕದಿಂದ ಸದರಿ ಸಂಘವು ಅಸ್ತಿತ್ವದಲ್ಲಿಲ್ಲದೆ ಸಂಪೂರ್ಣವಾಗಿ ವಿಸರ್ಜಿತವಾಗಿದೆ ಎಂದು ಪರಿಗಣಿಸತಕ್ಕದ್ದು.

ಈ ಆದೇಶವನ್ನು ಈ ದಿನ ಅಂದರೆ, ದಿನಾಂಕ:30-09-2010 ರಂದು ನನ್ನ ಸಹಿ ಹಾಗೂ ಈ ಕಛೇರಿ ಮೊಹರಿನೊಂದಿಗೆ ಹೊರಡಿಸಿದೆ.

ಕೆ.ಎಲ್. ನರಸಿಂಹಮೂರ್ತಿ,
ಸಹಕಾರ ಸಂಘಗಳ ಉಪ ನಿಬಂಧಕರು.
ಕೋಲಾರ ಜಿಲ್ಲೆ, ಕೋಲಾರ.

ಪಿಆರ್-176

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ:ಡಿಟಿಸಿಆರ್:581/2009-10, ದಿನಾಂಕ:25ನೇ ಜನವರಿ, 2011

ಉಪಸ್ಥಿತರು: ಡಾ॥ ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	**ವಿರುದ್ಧ**	**ಪ್ರತಿವಾದಿ**
ಅಬಕಾರಿ ನಿರೀಕ್ಷಕರು, ಹೆಚ್.ಡಿ.ಕೋಟೆ ವಲಯ, ಹೆಚ್.ಡಿ.ಕೋಟೆ		ಮುರುಗೇಶ್ ಬಿನ್ ಲೇ.ಕುಮಾರಸ್ವಾಮಿ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:27-05-2010ರಂದು ಬೆಳಿಗ್ಗೆ 10-00 ಗಂಟೆಯ ಸಮಯದಲ್ಲಿ ಅಬಕಾರಿ ನಿರೀಕ್ಷಕರು, ಹೆಚ್.ಡಿ.ಕೋಟೆ ವಲಯ ಇವರು ಹೆಚ್.ಡಿ.ಕೋಟೆ ತಾಲ್ಲೂಕು, ಕಸಬಾ ಹೋಬಳಿ, ಜಕ್ಕಳ್ಳಿ ಗ್ರಾಮದ ಹೆಬ್ಬಲಗುಪ್ಪೆ ರಸ್ತೆಗೆ ಹೋಗುವ ಸೇತುವೆ ಬಳಿ **ಕೆಎ-45/ಎಚ್-176 ನೋಂದಣಿ ಸಂಖ್ಯೆಯ ಟಿ.ವಿ.ಎಸ್. ವಿಕ್ಟರ್ ಜಿಎಲ್‌ಎಸ್** ವಾಹನದಲ್ಲಿ ಅಕ್ರಮವಾಗಿ 70 ಲೀ. ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ವಶಪಡಿಸಿಕೊಂಡು ಮುರುಗೇಶ್ ಬಿನ್ ಲೇ ಕುಮಾರಸ್ವಾಮಿ ಎಂಬುವವನನ್ನು ದಸ್ತಗಿರಿ ಮಾಡಿರುವುದಾಗಿ ಪ್ರಕರಣ ಸಂ:54/09-10ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 13(1) ಮತ್ತು 32(1), 38(ಎ) ಮತ್ತು 43ರ ರೀತ್ಯಾ ಮೊಕದ್ದಮೆಯನ್ನು ದಾಖಲಿಸಿ, ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಪುಟ್ಟಸ್ವಾಮಿ ಗೌಡ ಬಿನ್ ಲೇಟ್ ಚಿಕ್ಕಣ್ಣೇಗೌಡ, ಚೆನ್ನೀಗೌಡನಹುಂಡಿ, ಕಸಬಾ ಹೋಬಳಿ, ಹೆಚ್.ಡಿ. ಕೋಟೆ ತಾಲ್ಲುಕು ಇವರು ದಿನಾಂಕ 16-06-2010 ರಂದು ತಮ್ಮ ವಕೀಲರ ಮುಖೇನ ವಕಾಲತ್ತಿನೊಂದಿಗೆ ಅರ್ಜಿಯನ್ನು ಸಲ್ಲಿಸಿ ವಾಹನವನ್ನು ತನ್ನ ಮಧ್ಯಕಾಲಿನ ಸುಪರ್ದಿಗೆ ನೀಡಬೇಕೆಂದು ಕೋರಿರುತ್ತಾರೆ.

ವಶಪಡಿಸಿಕೊಂಡ ವಾಹನದ ಬಿ ವಹಿ ಪ್ರತಿಯನ್ನು ಕೋರಿ ದಿನಾಂಕ:19-07-2010 ರಂದು ಹುಣಸೂರು ತಾಲ್ಲೂಕು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದ್ದು, ಸದರಿಯವರಿಂದ ಇದುವರೆವಿಗೂ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:27-05-10 ರಂದು ಹೆಚ್.ಡಿ.ಕೋಟೆ ತಾಲ್ಲೂಕು ಕಸಬಾ ಹೋಬಳಿ ಚಿಕ್ಕಹ ಗ್ರಾಮದ ಹೆಬ್ಬಲಗುಪ್ಪೆಗೆ ಹೋಗುವ ಸೇತುವೆ ಬಳಿ **ಕೆಎ-45/ಎಚ್/-176 ನೋಂದಣಿ ಸಂಖ್ಯೆಯ ಟಿ.ವಿ.ಎಸ್. ವಿಕ್ಟರ್** ವಾಹನದಲ್ಲಿ ಅಕ್ರಮವಾಗಿ 70 ಲೀ ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿಯಾದ ಮುರುಗೇಶ್ ಎಂಬುವವರನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ವಾಹನವು ಪುಟ್ಟಸ್ವಾಮಿಗೌಡ ಬಿನ್ ಚಿಕ್ಕಣ್ಣೇಗೌ ಚೆನ್ನೇಗೌಡನಹುಂಡಿ, ಹೆಚ್.ಡಿ.ಕೋಟೆ ತಾಲ್ಲೂಕು ಇವರ ಒಡೆತನದಲ್ಲಿರುತ್ತದೆ. ಸದರಿ ವಾಹನವನ್ನು ಮುರುಗೇಶ್ ಎಂಬುವವರಿಗೆ ಅರ್ಜಿದಾರರು ಯಾ ಕಾರಣಕ್ಕಾಗಿ ವಾಹನವನ್ನು ನೀಡಿದ್ದರು ಎಂಬುದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಅಲ್ಲದೇ ಸೇಂದಿಯು ಜಿಲ್ಲೆಯಲ್ಲಿ ನಿಷೇಧವಿದ್ದು, ಇಂತಹ ವಸ್ತುಗಳನ್ನು ಸಾಗಾಣಿಕೆ ಮಾಡುವುದು, ಹೊಂದುವುದು, ಮಾರಾಟವು ಅಬಕಾರಿ ಕಾನೂನಿಗೆ ವಿರುದ್ಧವಾಗಿರುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಅರ್ಜಿದಾರರ ತಿಳುವಳಿಕೆಯಲ್ಲಿ ಈ ಕೃತ್ಯ ನಡೆದಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಅಲ್ಲದೇ ಸದರಿಯವರು ತನ್ನ ಮೇಲೆ ಹೊರಿಸಿರು ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವು ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಕೆಳಕಂಡ ಆದೇಶ.

ಆದೇಶ ಸಂಖ್ಯೆ:ಡಿಟಿಸಿಆರ್/581/2009-10, ದಿನಾಂಕ:25-01-2011

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2)ರ ಅಡಿಯಲ್ಲಿ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ನಿರೀಕ್ಷಕರು, ಹೆಚ್.ಡಿ.ಕೋಟೆ ವಲಯ ಇವರು ಹೂಡಿದಾದ ಪ್ರ.ಮಾ.ವರದಿ ಸಂಖ್ಯೆ:54/09-10, ದಿನಾಂಕ:27-05-2010 ರಂದು ವಶಪಡಿಸಿಕೊಂಡ **ಕೆಎ-45 ಎಚ್-176 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ವಿಕ್ಟರ್** ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011 ನೇ ಇಸವಿ ಜನವರಿ ತಿಂಗಳ 25ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

ಪಿಆರ್-181

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ
ಸಂಖ್ಯೆ:ಡಿಟಿಸಿಆರ್/15/2010-11, ದಿನಾಂಕ:25ನೇ ಜನವರಿ, 2011

ಉಪಸ್ಥಿತರು: ಡಾ॥ ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	ವಿರುದ್ಧ	**ಪ್ರತಿವಾದಿ / ಆರೋಪಿ**
ಅಬಕಾರಿ ನಿರೀಕ್ಷಕರು, ನಂಜನಗೂಡು ವಲಯ, ನಂಜನಗೂಡು.		ಆರೋಪಿ ಪರಾರಿ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:21-07-2010ರಂದು ಮಧ್ಯಾಹ್ನ 1-30 ಗಂಟೆ ಸಮಯದಲ್ಲಿ ಅಬಕಾರಿ ನಿರೀಕ್ಷಕರು, ನಂಜನಗೂಡು ವಲಯ ಇವರು ನಂಜನಗೂಡು ತಾಲ್ಲೂಕು, ಬಿಲಿಗೆರೆ ಹೋಬಳಿ, ತಾಯೂರು ರಸ್ತೆಯ ಈಶ್ವರ ಗೌಡನ ಹಳ್ಳಿಗೇಟ್ ಹತ್ತಿರ ಕೆಎ-11/ಎಲ್-3293 ನೋಂದಣಿ ಸಂಖ್ಯೆಯ **ಹೊಂಡಾ ಡಿಯೋ** ವಾಹನದಲ್ಲಿ ಅಕ್ರಮವಾಗಿ 8.640 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಆರೋಪಿ ಪರಾರಿಯಾಗಿರುವುದಾಗಿ ಪ್ರಥಮ ಮಾಹಿತಿ ವರದಿ ಸಂಖ್ಯೆ:03/10-11ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 14ರ ರೀತ್ಯಾ ಅಪರಾಧವಾಗಿದ್ದು, ಕಲಂ 32, 38(ಎ) ಮತ್ತು 43ರ ರೀತ್ಯಾ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಪ್ರಥಮ ಮಾಹಿತಿ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ನಂಜನಗೂಡು ವಲಯದ ಅಬಕಾರಿ ನಿರೀಕ್ಷಕರು ದಿನಾಂಕ:11-12-2010ರಂದು ಅಬಕಾರಿ ಉಪ ಅಧೀಕ್ಷಕರ ಮುಖೇನ ವರದಿಯನ್ನು ಸಲ್ಲಿಸಿ ಈ ಪ್ರಕರಣದಲ್ಲಿ ಮಾದರಿ ತೆಗೆಯಲಾದ ಮಾದಕ ದ್ರವ್ಯಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ವರದಿ ಪಡೆಯಲಾಗಿ ಸದರಿ ಮದ್ಯದ ಬಾಟಲ್‌ಗಳಲ್ಲಿ ಈಥೈಲ್ ಅಲ್ಕೋಹಾಲ್ ಅಂಶ ಪತ್ತೆಯಾಗಿದ್ದು ಅವುಗಳು ಬ್ಯೂರೋ ಆಫ್ ಇಂಡಿಯನ್ ಸ್ಟಾಡರ್ಡ್ಸ್ ನಿಗದಿಪಡಿಸಿರುವ ಮಾದರಿ ಗುಣಲಕ್ಷಣಗಳಿಗೆ ಅನುಗುಣವಾಗಿಲ್ಲದಿರುವುದರಿಂದ ಅವು ನಕಲಿ ಮದ್ಯವಾಗಿರುತ್ತವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಹಾಗೆಯೇ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ರೀತ್ಯಾ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:21-07-2010ರಂದು ನಂಜನಗೂಡು ತಾಲ್ಲೂಕು ಬಿಲಿಗೆರೆ ಹೋಬಳಿ, ತಾಯೂರು ರಸ್ತೆಯ ಈಶ್ವರ ಗೌಡನ ಹಳ್ಳಿಗೇಟ್ ಹತ್ತಿರ ಕೆಎ-11/ಎಲ್-3293 ನೋಂದಣಿ ಸಂಖ್ಯೆ **ಹೊಂಡಾ ಡಿಯೋ** ವಾಹನದಲ್ಲಿ ಅಕ್ರಮವಾಗಿ 8,640 ಲೀ. ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ.

ಈ ಪ್ರಕರಣದ ದಾಖಲಾತಿಗಳನ್ನು ಅವಲೋಕಿಸಲಾಗಿ ಪ್ರಥಮ ಮಾಹಿತಿ ವರದಿ ಮತ್ತು ಮಹಜರನಲ್ಲಿ ಆರೋಪಿಯು ಪರಾರಿಯಾಗಿರುವುದಾಗಿ ಮೊಕದ್ದಮೆಯನ್ನು ದಾಖಲಿಸಿ, ಸುಮಾರು (5) ತಿಂಗಳಿಗೂ ಹೆಚ್ಚು ಕಾಲ ಕಳೆದಿರುತ್ತದೆ. ಇಂತಹ ಪ್ರಕರಣದಲ್ಲಿ ಕಲಂ 43(ಸಿ)ರ ಅಡಿಯಲ್ಲಿ ಮೊಕದ್ದಮೆ ದಾಖಲಾದ ದಿನದಿಂದ ಒಂದು ತಿಂಗಳೊಳಗಾಗಿ ವಾಹನ ಮತ್ತು ಮಾದಕ ದ್ರವ್ಯಗಳು ತನ್ನದೆಂದು ಮಾಲೀಕತ್ವ ನಿರೂಪಿಸಲು ಯಾರೊಬ್ಬರೂ ಮುಂದೆ ಬಾರದಿದ್ದ ಪಕ್ಷದಲ್ಲಿ ಅಂತಹ ವಾಹನ ಮತ್ತು ಮಾದಕ ದ್ರವ್ಯಗಳನ್ನು ಕಲಂ 43(ಸಿ)ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಲ್ಲಿ ಅವಕಾಶವಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (5) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ:ಡಿಟಿಸಿಆರ್/15/2010-11, ದಿನಾಂಕ:25-01-2011

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ನಿರೀಕ್ಷಕರು ನಂಜನಗೂಡು ವಲಯ ಇವರು ಹೂಡಲಾದ ಪ್ರಮಾ.ವರದಿ ಸಂಖ್ಯೆ:03/2010-11, ದಿನಾಂಕ:21-07-2010 ರಂದು ವಶಪಡಿಸಿಕೊಂಡ ಕೆಎ-11/ಎಲ್-3293 ನೋಂದಣಿ ಸಂಖ್ಯೆಯ **ಹೊಂಡಾ ಡಿಯೋ** ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011 ನೇ ಇಸವಿ ಜನವರಿ ತಿಂಗಳ 25ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

ಪಿಆರ್-183

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ
ಸಂಖ್ಯೆ:ಡಿಟಿಸಿಆರ್/09/2010-11, ದಿನಾಂಕ:25ನೇ ಜನವರಿ, 2011

ಉಪಸ್ಥಿತರು: ಡಾ॥ ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	ವಿರುದ್ಧ	**ಪ್ರತಿವಾದಿ / ಆರೋಪಿ**
ಅಬಕಾರಿ ನಿರೀಕ್ಷಕರು, ಹುಣಸೂರು ವಲಯ, ಹುಣಸೂರು.		ಆರೋಪಿ ಪರಾರಿ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:13-07-2010ರಂದು ಮಧ್ಯಾಹ್ನ 3-30 ಗಂಟೆ ಸಮಯದಲ್ಲಿ ಅಬಕಾರಿ ನಿರೀಕ್ಷಕರು, ಹುಣಸೂರು ವಲಯ ಇವರು ಹುಣಸೂರು ತಾಲ್ಲೂಕು, ಹನಗೋಡು ಹೋಬಳಿ, ಒಡ್ಡಂಬಾಳು ಗ್ರಾಮದ ಮುಖ್ಯ ರಸ್ತೆಯ ಪಕ್ಕದಲ್ಲಿ ಕೆಎ-20/ಎನ್-5959 ನೋಂದಣಿ ಸಂಖ್ಯೆಯ **ಮಾರುತಿ ಒಮ್ನಿ** ವಾಹನದಲ್ಲಿ ಅಕ್ರಮವಾಗಿ 146.880 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ ಆರೋಪಿ ಪರಾರಿಯಾಗಿರುವುದಾಗಿ ಪ್ರಥಮ ಮಾಹಿತಿ ವರದಿ ಸಂಖ್ಯೆ:02/2010-11ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 14ರ ರೀತ್ಯಾ ಅಪರಾಧವಾಗಿದ್ದು ಕಲಂ 32, 38(ಎ) ಮತ್ತು 43ರ ರೀತ್ಯಾ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಪ್ರಥಮ ಮಾಹಿತಿ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮಾದಕ ದ್ರವ್ಯಗಳ ಪೈಕಿ ಮಾದರಿ ತೆಗೆಯಲಾದ ಮದ್ಯವನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ವರದಿ ಪಡೆಯಲಾಗಿ ಈಥೈಲ್ ಆಲ್ಕೋಹಾಲ್ ಅಂಶ ಕಂಡು ಬಂದಿದ್ದು ಮಾನವ ಸೇವನೆಗೆ ಯೋಗ್ಯವಾಗಿರುತ್ತದೆಂದು ವರದಿ ನೀಡಿರುತ್ತಾರೆ.

ಹುಣಸೂರು ವಲಯದ ಅಬಕಾರಿ ನಿರೀಕ್ಷಕರು ಈ ಪ್ರಕರಣದ ತನಿಖೆಯನ್ನು ಕೈಗೊಂಡು ವಶಪಡಿಸಿಕೊಂಡ ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆದಿದ್ದು, 'ಬಿ' ವಹಿಯ ರೀತ್ಯಾ ವಾಹನವು ಶೌಕತ್ ಬಿನ್ ಎನ್.ಕೆ. ಮೊಹಮ್ಮದ್, ಸಂ.127, ಸಿಎಂಎಫ್ ಕಾಂಪೌಂಡ್, ತೋಡಾರ್, ಬಡಗನಿಜರು, ಮೂಡಬಿದ್ರೆ ಇವರಿಗೆ ಸೇರಿದ್ದಾಗಿರುತ್ತದೆಂದು ತಿಳಿದುಬಂದಿರುತ್ತದೆ. ಅದರಂತೆ ವಾಹನದ ಮಾಲೀಕರಿಗೆ ದಿನಾಂಕ:12-11-2010ರಂದು ಕಾರಣ ಕೇಳುವ ನೋಟಿಸನ್ನು ಜಾರಿ ಮಾಡಲಾಗಿದ್ದು, ಸದರಿ ವಿಳಾಸದಲ್ಲಿ ಈ ವ್ಯಕ್ತಿಯು ವಾಸವಾಗಿಲ್ಲವೆಂಬ ಷರಾದೊಂದಿಗೆ ಅಂಚೆ ಇಲಾಖೆಯವರು ನೋಟೀಸ್ಸನ್ನು ಹಿಂದಿರುಗಿಸಿರುತ್ತಾರೆ. ಈ ಪ್ರಕರಣದ ಆರೋಪಿತರು ಇದೂವರೆವಿಗೂ ಪತ್ತೆಯಾಗಿರುವುದಿಲ್ಲ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:13-07-2010 ರಂದು ಹುಣಸೂರು ತಾಲ್ಲೂಕು ಹನಗೋಡು ಹೋಬಳಿ ಒಡ್ಡಂಬಾಳು ಗ್ರಾಮದ ಮುಖ್ಯ ರಸ್ತೆಯ ಪಕ್ಕದಲ್ಲಿ ಕೆಎ-20/ಎನ್-5959 ನೋಂದಣಿ ಸಂಖ್ಯೆಯ **ಮಾರುತಿ ಒಮ್ನಿ** ವಾಹನದಲ್ಲಿ ಅಕ್ರಮವಾಗಿ 146.88 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಬಗ್ಗೆ ಆರೋಪಿಯಾಗಲಿ ಹಾಗೂ ಪ್ರತಿವಾದಿಯಾಗಲಿ ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಪ್ರಾಧಿಕಾರದ ಮುಂದೆ ಇದುವರೆವಿಗೂ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣದ ದಾಖಲಾತಿಗಳನ್ನು ಅವಲೋಕಿಸಲಾಗಿ ಪ್ರಥಮ ಮಾಹಿತಿ ವರದಿ ಮತ್ತು ಮಹಜರನಲ್ಲಿ ಆರೋಪಿಯು ಪರಾರಿಯಾಗಿರುವುದಾಗಿ ಮೊಕದ್ದಮೆಯನ್ನು ದಾಖಲಿಸಿ, ಸುಮಾರು (5) ತಿಂಗಳಿಗೂ ಹೆಚ್ಚು ಕಾಲ ಕಳೆದಿರುತ್ತದೆ. ಇಂತಹ ಪ್ರಕರಣಗಳಲ್ಲಿ ಕಲಂ 43(ಸಿ)ರ ಅಡಿಯಲ್ಲಿ ಮೊಕದ್ದಮೆ ದಾಖಲಾದ ದಿನದಿಂದ ಒಂದು ತಿಂಗಳೊಳಗಾಗಿ ವಾಹನ ಮತ್ತು ಮಾದಕ ದ್ರವ್ಯಗಳು ತನ್ನದೆಂದು ಮಾಲೀಕತ್ವ ನಿರೂಪಿಸಲು ಯಾರೊಬ್ಬರೂ ಮುಂದೆ ಬಾರದಿದ್ದ ಪಕ್ಷದಲ್ಲಿ ಅಂತಹ ವಾಹನ ಮತ್ತು ಮಾದಕ ದ್ರವ್ಯಗಳನ್ನು ಕಲಂ 43(ಸಿ)ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಲ್ಲಿ ಅವಕಾಶವಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (5) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ

ಬವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ:ಡಿಟಿಸಿಆರ್/09/2010-11, ದಿನಾಂಕ:25-01-2011

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ನಿರೀಕ್ಷಕರು, ಹುಣಸೂರು ವಲಯ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:02/2010-11, ದಿನಾಂಕ:13-07-2010 ರಂದು ವಶಪಡಿಸಿಕೊಂಡ ಕೆಎ-20/ಎನ್-5959 ನೋಂದಣಿ ಸಂಖ್ಯೆಯ **ಮಾರುತಿ ಒಮ್ನಿ** ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011 ನೇ ಇಸವಿ ಜನವರಿ ತಿಂಗಳ 25ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಖ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

ಪಿಆರ್-184

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ
ಸಂಖ್ಯೆ:ಡಿಟಿಸಿಆರ್/19/2010-11, ದಿನಾಂಕ:25ನೇ ಜನವರಿ, 2011

ಉಪಸ್ಥಿತರು: ಡಾ॥ ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು	ವಿರುದ್ಧ	**ಪ್ರತಿವಾದಿ / ಆರೋಪಿ**
ಅಬಕಾರಿ ನಿರೀಕ್ಷಕರು, ಹುಣಸೂರು ವಲಯ, ಹುಣಸೂರು.		ಆರೋಪಿ ಪರಾರಿ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:28-07-2010ರಂದು ಮಧ್ಯಾಹ್ನ 3-45 ಗಂಟೆ ಸಮಯದಲ್ಲಿ ಅಬಕಾರಿ ನಿರೀಕ್ಷಕರು, ಹುಣಸೂರು ವಲಯ ಇವರು ಹುಣಸೂರು ತಾಲ್ಲೂಕು, ಉಮ್ಮತ್ತೂರು ಗ್ರಾಮದ ರಸ್ತೆಯ ಬಳಿ ಕೆಎ-09/ಎಚ್-1339 ನೋಂದಣಿ ಸಂಖ್ಯೆ **ಬಜಾಜ್ ಚೇತಕ್** ವಾಹನದಲ್ಲಿ ಅಕ್ರಮವಾಗಿ 35 ಲೀ. ಕಲಬೆರಕೆ ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಆರೋಪಿ ಪರಾರಿಯಾಗಿರುವುದಾಗಿ ಪಥಮ ಮಾಹಿತಿ ವರದಿ ಸಂಖ್ಯೆ:03/2010-11ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 13, 14ರ ರೀತ್ಯಾ ಅಪರಾಧವಾಗಿದ್ದು, ಕಲಂ 32, 38(ಎ)ರ ರೀತ್ಯಾ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಪ್ರಥಮ ಮಾಹಿತಿ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮಾದಕ ದ್ರವ್ಯಗಳ ಪೈಕಿ ಮಾದರಿ ತೆಗೆಯಲಾದ ಮದ್ಯವನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ವರದಿ ಪಡೆಯಲಾಗಿ ಸೇಂದಿಯಲ್ಲಿ ಈಥೈಲ್ ಆಲ್ಕೋಹಾಲ್ ಅಂಶ ಕಂಡು ಬಂದಿದ್ದು ಅದು ಕೊಳೆತ ವಾಸನೆಯಿಂದ ಕೂಡಿದ್ದು, ಮಾನವ ಸೇವನೆಗೆ ಯೋಗ್ಯವಲ್ಲವೆಂದು ವರದಿ ನೀಡಿರುತ್ತಾರೆ.

ಹುಣಸೂರು ವಲಯದ ಅಬಕಾರಿ ನಿರೀಕ್ಷಕರು ಈ ಪ್ರಕರಣದ ತನಿಖೆಯನ್ನು ಕೈಗೊಂಡು ವಶಪಡಿಸಿಕೊಂಡ ವಾಹನದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆಯಲಾಗಿದ್ದು ಸದರಿ 'ಬಿ' ವಹಿಯಂತೆ ಕೆ.ಎಂ.ನಟರಾಜು ಬಿನ್ ಕೆ.ಎಂ.ಮರಿದೇವರು, ಶಂಕರ ವಿದ್ಯಾಪೀಠ, 13ನೇ ಮೈನ್, 2ನೇ ಕ್ರಾಸ್, ಸಿದ್ಧಾರ್ಥನಗರ, ಮೈಸೂರು ಇವರಿಗೆ ಸೇರಿದ್ದಾಗಿರುತ್ತದೆಂದು ತಿಳಿದುಬಂದಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳು ಯಾರೆಂದು ಪತ್ತೆಯಾಗದ ಕಾರಣ ವಾಹನ ಮಾಲೀಕರಾದ ಕೆ.ಎಂ.ನಟರಾಜು ಬಿನ್ ಕೆ.ಎಂ.ಮರಿದೇವರು ಇವರಿಗೆ ವಿಳಾಸವನ್ನು ಪತ್ತೆಹಚ್ಚಿ ಸದರಿ ಕೃತ್ಯದ ಬಗ್ಗೆ ವಿಚಾರಿಸಿದಾಗ ದಿನಾಂಕ:16-11-2010ರಂದು ಕೆ.ಎಂ. ನಟರಾಜುರವರು ಲಿಖಿತ ಮೂಲಕ ಮನವಿಯನ್ನು ಸಲ್ಲಿಸಿ ತಾನು ರಾಜ್ಯ ಲೆಕ್ಕಪತ್ರ ಇಲಾಖೆಯಲ್ಲಿ ಸರ್ಕಾರಿ ನೌಕರನಾಗಿ ಸೇವೆ ಸಲ್ಲಿಸಿ ಈಗ ವಿಶ್ರಾಂತಿ ಜೀವನ ನಡೆಸುತ್ತಿದ್ದೇನೆ. ವಾಹನವು ಬಹಳ ಹಳೆಯ 2 ವರ್ಷಗಳ ಹಿಂದೆಯೇ ಮನೆಯ ಮುಂದೆ ಬಂದ ಗುಜರಿ ವ್ಯಾಪಾರಿಗಳಿಗೆ ಮಾರಾಟ ಮಾಡಿರುವುದಾಗಿ ತಿಳಿಸಿ, ಈ ಕೃತ್ಯಕ್ಕೂ ತನಗೂ ಯಾವುದೇ ಸಂಬಂಧವಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:28-07-2010 ರಂದು ಹುಣಸೂರು ತಾಲ್ಲೂಕು, ಉಮ್ಮತ್ತೂರು ಗ್ರಾಮದ ರಸ್ತೆಯ ಬಳಿ ಕೆಎ-09/ಎಚ್-1339 ನೋಂದಣಿ ಸಂಖ್ಯೆ **ಬಜಾಜ್ ಚೇತಕ್** ವಾಹನದಲ್ಲಿ ಅಕ್ರಮವಾಗಿ 35 ಲೀ. ಕಲಬೆರಕೆ ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ.

ಈ ಪ್ರಕರಣದ ದಾಖಲಾತಿಗಳನ್ನು ಅವಲೋಕಿಸಲಾಗಿ ಪ್ರಥಮ ಮಾಹಿತಿ ವರದಿ ಮತ್ತು ಮಹಜರನಲ್ಲಿ ಆರೋಪಿಯು ಪರಾರಿಯಾಗಿರುವುದಾಗಿ ಮೊಕದ್ದಮೆಯನ್ನು ದಾಖಲಿಸಿ, ಸುಮಾರು (5) ತಿಂಗಳಿಗೂ ಹೆಚ್ಚು ಕಾಲ ಕಳೆದಿರುತ್ತದೆ. ಇಂತಹ ಪ್ರಕರಣದಲ್ಲಿ ಕಲಂ 43(ಸಿ)ರ ಅಡಿಯಲ್ಲಿ ಮೊಕದ್ದಮೆ ದಾಖಲಾದ ದಿನದಿಂದ ಒಂದು ತಿಂಗಳೊಳಗಾಗಿ ವಾಹನ ಮತ್ತು ಮಾದಕ ದ್ರವ್ಯಗಳು ತನ್ನದೆಂದು ಮಾಲೀಕತ್ವ ನಿರೂಪಿಸಲು ಯಾರೊಬ್ಬರೂ ಮುಂದೆ ಬಾರದಿದ್ದ ಪಕ್ಷದಲ್ಲಿ ಅಂತಹ ವಾಹನ ಮತ್ತು ಮಾದಕ ದ್ರವ್ಯಗಳನ್ನು ಕಲಂ 43(ಸಿ)ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಲ್ಲಿ ಅವಕಾಶವಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (5) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ:ಡಿಟಿಸಿಆರ್/19/2010-11, ದಿನಾಂಕ:25-01-2011

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ನಿರೀಕ್ಷಕರು, ಹುಣಸೂರು ವಲಯ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:03/2010-11, ದಿನಾಂಕ:28-07-2010 ರಂದು ವಶಪಡಿಸಿಕೊಂಡ ಕೆಎ-09/ಎಚ್-1339 ನೋಂದಣಿ ಸಂಖ್ಯೆಯ **ಬಜಾಜ್ ಚೇತಕ್** ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011 ನೇ ಇಸವಿ ಜನವರಿ ತಿಂಗಳ 25ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಖ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

ಪಿಆರ್-185

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ
ಸಂಖ್ಯೆ:ಡಿಟಿಸಿಆರ್: 54 (ಪೋಲೀಸ್)/2010-11, ದಿನಾಂಕ:25ನೇ ಜನವರಿ, 2011

ಉಪಸ್ಥಿತರು: ಡಾ॥ ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	**ವಿರುದ್ಧ**	**ಪ್ರತಿವಾದಿ / ಆರೋಪಿ**
ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ, ಮೈಸೂರು ಜಿಲ್ಲೆ		ಮಹೇಶ್ ಬಿನ್ ಬಸವರಾಜು ಅಂತರಸಂತೆ, ಹೆಚ್.ಡಿ.ಕೋಟೆ ತಾಲ್ಲೂಕು

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:14-09-2010 ರಂದು ಮಧ್ಯಾಹ್ನ 3-45 ಗಂಟೆ ಸಮಯದಲ್ಲಿ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆಯ ಆರಕ್ಷಕ ನಿರೀಕ್ಷಕರು ಇವರು ಹೆಚ್.ಡಿ.ಕೋಟೆ ತಾಲ್ಲೂಕು, ಅಂತರಸಂತೆ ಗ್ರಾಮ, ಅಂತರಸಂತೆ ಹುಣಸೆಕುಪ್ಪೆ ರಸ್ತೆಯಲ್ಲಿರುವ ತಾರಕ ಉಪ ಚಾನಲ್ ಸೇತುವೆ ಬಳಿ **ಕೆಎ-45/ಇ-6679 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಮೋಟಾರ್ ಸೈಕಲ್** ವಾಹನದಲ್ಲಿ 25.920 ಲೀ. ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಆರೋಪಿಯಾದ ಮಹೇಶ ಬಿನ್ ಬಸವರಾಜು ಇವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ:51/2010ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:15-09-10ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ಹೆಚ್.ಡಿ.ಕೋಟೆ ವಲಯದ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ:14-09-2010 ರಂದು ಅಂತರಸಂತೆ ಗ್ರಾಮ, ಅಂತರಸಂತೆ ಹುಣಸೆಕುಪ್ಪೆ ರಸ್ತೆಯಲ್ಲಿರುವ ತಾರಕ ಉಪ ಚಾನಲ್ ಸೇತುವೆ ಮೇಲೆ **ಕೆಎ-45/ಇ-6679 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಮೋಟಾರ್ ಸೈಕಲ್** ವಾಹನದಲ್ಲಿ 25.920 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿಯಾದ ಮಹೇಶ ಬಿನ್ ಬಸವರಾಜು ಎಂಬುವರನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ ಕಾನೂನಿನಲ್ಲಿ ವಿವಿಧ

ಹೊಂದಿದ್ದು, ಅದನ್ನು ನಿರ್ವಹಿಸುವ ತಮ್ಮ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಕಾರಣದಿಂದಾಗಿ ಆತ ನೇರವಾಗಿ ಈ ಪ್ರಕರಣದಲ್ಲಿ ಭಾಗಿಯಾಗಿಲ್ಲದಿದ್ದರೂ ಕೂಡಾ ಪರೋಕ್ಷವಾಗಿ ಆತನೇ ಹೊಣೆಗಾರನಾಗಿರುತ್ತಾನೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (4) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತಮ್ಮ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ:ಡಿಟಿಸಿಆರ್/54(ಪೋಲೀಸ್/2010-11, ದಿನಾಂಕ:25-01-2011

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:51/2010, ದಿನಾಂಕ:14-09-2010 ರಂದು ವಶಪಡಿಸಿಕೊಂಡ **ಕೆಎ-45/ಇ-6679 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಮೋಟಾರ್ ಸೈಕಲ್** ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011 ನೇ ಇಸವಿ ಜನವರಿ ತಿಂಗಳ 25ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

ಪಿಆರ್-191

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ
ಸಂಖ್ಯೆ:ಡಿಟಿಸಿಆರ್/468/2009-10, ದಿನಾಂಕ:25ನೇ ಜನವರಿ, 2011

ಉಪಸ್ಥಿತರು: ಡಾ॥ ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	ವಿರುದ್ಧ	**ಪ್ರತಿವಾದಿ / ಆರೋಪಿ**
ಅಬಕಾರಿ ಉಪ ನಿರೀಕ್ಷಕರು, ಹುಣಸೂರು ಉಪ ವಿಭಾಗ, ಹುಣಸೂರು		ರಮೇಶ್ ಬಿನ್ ಲೇ॥ ಬಾಲಕೃಷ್ಣ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ: 02-05-2010ರಂದು ರಾತ್ರಿ 9-00 ಗಂಟೆ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು, ಹುಣಸೂರು ಉಪ ವಿಭಾಗ ಇವರು ಕೆ.ಆರ್.ನಗರ ತಾಲ್ಲೂಕು, ಡಿ.ಕೆ.ಕೊಪ್ಪಲು ಗೇಟ್ ಬಳಿ ಕೆಎ-45/ಇ-4120 ನೋಂದಣಿ ಸಂಖ್ಯೆಯ **ಹಿರೋ ಹೊಂಡಾ ಸ್ಪ್ಲೆಂಡರ್** ವಾಹನದಲ್ಲಿ ಅಕ್ರಮವಾಗಿ 17.280 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಆರೋಪಿಯಾದ ರಮೇಶ್ ಬಿನ್ ಲೇ॥ ಬಾಲಕೃಷ್ಣ ಎಂಬುವವರನ್ನು ದಸ್ತಗಿರಿ ಮಾಡಿರುವುದಾಗಿ ಪ್ರಥಮ ಮಾಹಿತಿ ವರದಿ ಸಂಖ್ಯೆ:15/2009-10ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 14ರ ರೀತ್ಯಾ ಅಪರಾಧವಾಗಿದ್ದು, ಕಲಂ 32, 38(ಎ), 43ರ ರೀತ್ಯಾ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಪ್ರಥಮ ಮಾಹಿತಿ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಶಪಡಿಸಿಕೊಂಡ ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯನ್ನು ಕೋರಿ, ಹುಣಸೂರು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಈ ಪ್ರಾಧಿಕಾರದಿಂದ ದಿನಾಂಕ:19-07-2010ರಂದು ಪತ್ರ ಬರೆಯಲಾಗಿದ್ದು, ಇದುವರೆವಿಗೂ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:02-05-2010 ರಂದು ಕೆ.ಆರ್.ನಗರ ತಾಲ್ಲೂಕು ಡಿ.ಕೆ.ಕೊಪ್ಪಲು ಗೇಟ್ ಬಳಿ ಕೆಎ-45/ಇ-4120 ನೋಂದಣಿ ಸಂಖ್ಯೆಯ **ಹಿರೋ ಹೊಂಡಾ ಸ್ಪ್ಲೆಂಡರ್** ವಾಹನದಲ್ಲಿ ಅಕ್ರಮವಾಗಿ 17.280 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಬಗ್ಗೆ ಆರೋಪಿಯಾಗಲಿ ಹಾಗೂ ಪ್ರತಿವಾದಿಯಾಗಲಿ ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು

ಪ್ರಾಧಿಕಾರದ ಮುಂದೆ ಇದುವರೆವಿಗೂ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (7) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ ಈ ಬಗ್ಗೆ ಹಾಜರಾಗಿ ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮುಖಾಂತರವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಅವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ ಈ ಅಪರಾಧ ಕೃತ್ಯಕ್ಕೆ ಬಾಧ್ಯತೆ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ:ಡಿಟಿಸಿಆರ್/468/2009-10, ದಿನಾಂಕ:25-01-2011

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(2)(ಎ) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ನಿರೀಕ್ಷಕರು ಹುಣಸೂರು ವಲಯ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:15/2009-10, ದಿನಾಂಕ:02-05-10 ರಂದು ವಶಪಡಿಸಿಕೊಂಡ ಕೆಎ-45/ಇ-412[illegible] ನೋಂದಣಿ ಸಂಖ್ಯೆಯ ಹಿರೋ ಹೊಂಡಾ ಸ್ಪ್ಲೆಂಡರ್ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011 ನೇ ಇಸವಿ ಜನವರಿ ತಿಂಗಳ 25ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಖ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

ಪಿಆರ್-192

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ
ಸಂಖ್ಯೆ:ಡಿಟಿಸಿಆರ್/08/2010-11, ದಿನಾಂಕ:25ನೇ ಜನವರಿ, 2011

ಉಪಸ್ಥಿತರು: ಡಾ॥ ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು ವಿರುದ್ಧ **ಪ್ರತಿವಾದಿ / ಆರೋಪಿ**
ಅಬಕಾರಿ ನಿರೀಕ್ಷಕರು, ಹುಣಸೂರು ವಲಯ, ಹುಣಸೂರು ಆರೋಪಿ ಪರಾರಿ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:12-07-2010ರಂದು ರಾತ್ರಿ 8-30 ಗಂಟೆ ಸಮಯದಲ್ಲಿ ಅಬಕಾರಿ ನಿರೀಕ್ಷಕರು, ಹುಣಸೂರು ವಲಯ ಇವರು ಹುಣಸೂರು ತಾಲ್ಲೂಕು ಹನಗೋಡು ಹೋಬಳಿ, ಕಿರಂಗೂರು ಗ್ರಾಮದ ಮುಖ್ಯ ರಸ್ತೆಯ, ಬಳಿ ಕೆಎ-12/ಎಂ-1981 ನೋಂದಣಿ ಸಂಖ್ಯೆಯ **ಮಾರುತಿ ಒಮ್ನಿ** ವಾಹನದಲ್ಲಿ ಅಕ್ರಮವಾಗಿ 103.680 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಆರೋಪಿ ಪರಾರಿಯಾಗಿರುವುದಾಗಿ ಪ್ರಥಮ ಮಾಹಿತಿ ವರದಿ ಸಂಖ್ಯೆ:01/2010-11ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 14ರ ರೀತ್ಯಾ ಅಪರಾಧವಾಗಿದ್ದು, ಕಲಂ 32, 38(ಎ), 43ರ ರೀತ್ಯಾ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಪ್ರಥಮ ಮಾಹಿತಿ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ12-07-2010 ರಂದು ಹುಣಸೂರು ತಾಲ್ಲೂಕು ಹನಗೋಡು ಹೋಬಳಿ, ಕಿರಂಗೂರು ಗ್ರಾಮದ ಮುಖ್ಯ ರಸ್ತೆಯ, ಬಳಿ ಕೆಎ-12/ಎಂ-1981 ನೋಂದಣಿ ಸಂಖ್ಯೆಯ **ಮಾರುತಿ ಒಮ್ನಿ** ವಾಹನದಲ್ಲಿ ಅಕ್ರಮವಾಗಿ 103.680 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಬಗ್ಗೆ ಆರೋಪಿಯಾಗಲಿ ಹಾಗೂ ಪ್ರತಿವಾದಿಯಾಗಲಿ ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಪ್ರಾಧಿಕಾರದ ಮುಂದೆ ಇದುವರೆವಿಗೂ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣದ ದಾಖಲಾತಿಗಳನ್ನು ಅವಲೋಕಿಸಲಾಗಿ ಪ್ರಥಮ ಮಾಹಿತಿ ವರದಿ ಮತ್ತು ಮಹಜರನಲ್ಲಿ ಆರೋಪಿಯು ಪರಾರಿಯಾಗಿರುವುದಾಗಿ ಮೊಕದ್ದಮೆಯನ್ನು ದಾಖಲಿಸಿ, ಸುಮಾರು (5) ತಿಂಗಳಿಗೂ ಹೆಚ್ಚು ಕಾಲ ಕಳೆದಿರುತ್ತದೆ. ಇಂತಹ ಪ್ರಕರಣಗಳಲ್ಲಿ ಕಲಂ 43(1)ರ ಅಡಿಯಲ್ಲಿ ಮೊಕದ್ದಮೆ ದಾಖಲಾದ ದಿನದಿಂದ ಒಂದು ತಿಂಗಳೊಳಗಾಗಿ ವಾಹನ ಮತ್ತು ಮಾದಕ ದ್ರವ್ಯಗಳು ತನ್ನದೆಂದು ಮಾಲೀ

ನಿಯೋಜಿಸಲು ಯಾರೊಬ್ಬರೂ ಮುಂದೆ ಬಾರದಿದ್ದ ಪಕ್ಷದಲ್ಲಿ ಅಂತಹ ವಾಹನ ಮತ್ತು ಮಾದಕ ದ್ರವ್ಯಗಳನ್ನು ಕಲಂ 43(ಸಿ)ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಲ್ಲಿ ಅವಕಾಶವಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (5) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತಮ್ಮ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ:ಡಿಟಿಸಿಆರ್/08/2010-11, ದಿನಾಂಕ:25-01-2011

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ನಿರೀಕ್ಷಕರು, ಹುಣಸೂರು ವಲಯ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:01/2010-11, ದಿನಾಂಕ:12-07-10 ರಂದು ವಶಪಡಿಸಿಕೊಂಡ ಕೆಎ-12/ಎಂ-1981 ನೋಂದಣಿ ಸಂಖ್ಯೆಯ **ಮಾರುತಿ ಒಮ್ನಿ** ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011 ನೇ ಇಸವಿ ಜನವರಿ ತಿಂಗಳ 25ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಖ್ತ್ಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ|| ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

ಪಿಆರ್-193

ಮಾರಾಟಾಧಿಕಾರಿ ನಿ, 441 ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯ ಹೊನ್ನಾಳಿ ದಾವಣಗೆರೆ ಜಿಲ್ಲೆ, ದಾವಣಗೆರೆ

ಆದೇಶ

ಸಅಅಹೊ/ವಸೂಲಾತಿ/ಜಪ್ತಿ/ /2010-11, ದಿನಾಂಕ:11-01-2011

ವಿಷಯ: 1960ರ ಕರ್ನಾಟಕ ಸಹಕಾರ ಸಂಘಗಳ ನಿಯಮ 38(2) (ಸಿ) ದರನ್ವಯ ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕು ಚಟ್ನಹಳ್ಳಿ ಗ್ರಾಮದಲ್ಲಿರುವ ಬಾಕಿದಾರರಾದ ಚಂದ್ರಪ್ಪ ಬಿನ್ ತೋಟಪ್ಪ ಮಾಜಿ ಕಾರ್ಯದರ್ಶಿ ಹಾಗೂ ಬಿ.ಜಿ. ನಾಗರಾಜಪ್ಪ ಬಿನ್ ಹನುಮಂತಪ್ಪ ಮಾಜಿ ಅಧ್ಯಕ್ಷರು ಹಾ.ಉ.ಸ.ಸಂಘ ನಿ, ಚಟ್ನಹಳ್ಳಿ ಇವರುಗಳಿಂದ ಒಟ್ಟು ಅಸಲು ರೂ. 5,48,349/- ಹಾಗೂ ಬಡ್ಡಿ ಮತ್ತು ಇತರೆ ಸದರಿ ಸಂಘಕ್ಕೆ ಬರಬೇಕಾದ ಬಾಕಿಗೆ ಸದರಿಯವರುಗಳ ಮಾಲೀಕತ್ವದಲ್ಲಿರುವ ಆಸ್ತಿಗಳ ಜಪ್ತಿ ಕುರಿತು.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು ದಾವಣಗೆರೆ ಇವರ ತಗಾದೆ ಪತ್ರ ಫಾರಂ ನಂ2 ದಿನಾಂಕ:14-08-2009.
2) ಫಾರಂ ನಂ7ನ್ನು ನೀಡಿದ ದಿನಾಂಕ:27-12-2010

ಪ್ರಸ್ತಾವನೆ:

ಚಟ್ನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಶ್ರೀ ಬಿ.ಚಂದ್ರಪ್ಪ ಕಾರ್ಯದರ್ಶಿಯಾಗಿ ಹಾಗೂ ಬಿ.ನಾಗರಾಜಪ್ಪ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ ಅವಧಿಯಲ್ಲಿ ಸಂಘದ ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ಸಂಘದವರು ಸದರಿಯವರುಗಳ ಮೇಲೆ 1959 ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 69 ರಡಿ ಅವಾರ್ಡ್ ಪಡೆದು ಸಂಘದವರು ಸದರಿ ಅವಾರ್ಡ್ ಸಂಖ್ಯೆ:4/2007-08 ದಿನಾಂಕ:12-09-2008ರ ಮೇರೆಗೆ ಹಣ ವಸೂಲು ಮಾಡಿಕೊಡಲು ಕೋರಿ 1960ರ ಕರ್ನಾಟಕ ಸಹಕಾರ ಸಂಘಗಳ ನಿಯಮಗಳ ನಿಯಮ 34(3) ರ ಪ್ರಕಾರ ಅಮಲ್ಜಾರಿ ಪ್ರಕರಣವನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿಗಳು ದಾವಣಗೆರೆ ಉಪವಿಭಾಗ ದಾವಣಗೆರೆ ಇವರು ಪ್ರಕರಣವನ್ನು ಅಮಲ್ಜಾರಿಗಾಗಿ ಈ ಕೆಳಗೆ ಸಹಿ ಮಾಡಿರುವ ನನಗೆ ವಹಿಸಿಕೊಟ್ಟಿರುತ್ತಾರೆ. ಸದರಿ ಅಮಲ್ಜಾರಿ ಪ್ರಕರಣದನ್ವಯ ಸದರಿ ಸಂಘಕ್ಕೆ ಪಾವ್ತಿಸಬೇಕಾದ ಸಂಪೂರ್ಣ ಹಣವನ್ನು ದಿನಾಂಕ:27-01-2011 ರೊಳಗಾಗಿ ಪಾವ್ತಿಸಲು ಬಾಕಿದಾರರಿಗೆ ತಿಳಿಸಿ 1960ರ ಕರ್ನಾಟಕ ಸಹಕಾರ ಸಂಘಗಳ ನಿಯಮ 38(2)(ಸಿ) ರನ್ವಯ ದಿನಾಂಕ:27-12-2010ರಂದು ನೋಟೀಸ್ ಕೊಡಲಾಗಿತ್ತು. ಸದರಿ ನೋಟೀಸ್‌ನಲ್ಲಿ ದಿನಾಂಕ:27-01-2011 ರೊಳಗಾಗಿ ಸದರಿ ಬಾಕಿದಾರರು ಸಂಪೂರ್ಣ ಬಾಕಿ ಹಣ ಪಾವತಿಸದೇ ಇದ್ದರೆ ಇವರ ಈ ಕೆಳಕಂಡ ಸ್ಥಿರಾಸ್ತಿಗಳನ್ನು ಜಪ್ತಿ ಮಾಡಲಾಗುವುದೆಂದು ತಿಳಿಸಲಾಗಿರುತ್ತದೆ. ಆದರೆ ಸದರಿಯವರಿಂದ ಸಂಘಕ್ಕೆ ಸಂಪೂರ್ಣ ಹಣ ರೂ 5,48,319/- (ಐದು ಲಕ್ಷದ ನಲವತ್ತೆಂಟು ಸಾವಿರದ ಮೂರು ನೂರಾ ನಲವತ್ತೊಂಬತ್ತು

ಮಾತ್ರ) ದಿನಾಂಕ:11-01-2011 ರಂದು ಇದ್ದಂತೆ ಹಾಗೂ ಬಡ್ಡಿ ಮತ್ತು ಇತರೆ ಖರ್ಚು ಬಾಕಿ ಇರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

1960ರ ಕರ್ನಾಟಕ ಸಹಕಾರ ಸಂಘಗಳ ನಿಯಮಗಳ ನಿಯಮ 38(2)(ಸಿ) ರನ್ವಯ ಅಧಿಕಾರವನ್ನು ಚಲಾಯಿಸಿ ಶ್ರೀ ಹೆಚ್. ತಿಮ್ಮಪ್ಪ, ಸಹಕಾರ ಅಭಿವೃದ್ಧಿ ಅಧಿಕಾರಿ ಹೊನ್ನಾಳಿ ಹಾಗೂ ಮಾರಾಟಾಧಿಕಾರಿ ಆದ ನಾನು ಬಾಕಿದಾರರಾದ ಶ್ರೀ ಬಿ.ಚಂದ್ರಪ್ಪ ಬಿನ್ ತೋಟಪ್ಪ ಮಾಜಿ ಕಾರ್ಯದರ್ಶಿ ಇವರ ಪ್ರತ್ಯೇಕವಾಗಿ ಹಾಗೂ ಸಂಯುಕ್ತವಾಗಿ ಇರುವ ಈ ಕೆಳಕಂಡ ಸ್ಥಿರಾಸ್ತಿಗಳನ್ನು ಇಂದು ಜಪ್ತಿಮಾಡಿದ್ದೇನೆ. ಈ ಆದೇಶವನ್ನು ದಿನಾಂಕ: 11-01-2011 ರಂದು ನನ್ನ ಸ್ವಹಸ್ತ ಸಹಿಯೊಂದಿಗೆ ಹೊರಡಿಸಲಾಗಿದೆ.

ಹೆಚ್.ತಿಮ್ಮಪ್ಪ,

-: ಷಡ್ಯೂಲ್ :-

ಕ್ರ.ಸಂ.	ತಾಲ್ಲೂಕು	ಹೋಬಳಿ	ಗ್ರಾಮ	ಆಸ್ತಿಯ ಹಕ್ಕುದಾರರ ಹೆಸರು	ಜಪ್ತಿಯಾದ ಸ್ಥಿರಾಸ್ತಿಗಳ ವಿವರ ಸರ್ವೆ ನಂಬರ್	ಅಂದಾಜು ವಿಸ್ತೀರ್ಣ	ಭೂ ಕಂದಾಯ	ಷರಾ
1	2	3	4	5	6	7	8	9
1	ಹೊನ್ನಾಳಿ	ಬೆಳಗುತ್ತಿ	ಚಟ್ನಹಳ್ಳಿ	ಬಿ.ಚಂದ್ರಪ್ಪ ಬಿನ್ ತೋಟಪ್ಪ	10/5	1-15		
		-"-	-"-	-"-	40/4	2-10		
		-"-	-"-	-"-	10/2ಪಿ1	1-00		
		-"-	-"-	-"-	114/4	1-11		

ಹೆಚ್.ತಿಮ್ಮಪ್ಪ,
ಮಾರಾಟಾಧಿಕಾರಿ
ಸಹಕಾರ ಅಭಿವೃದ್ಧಿ ಅಧಿಕಾರಿ
ಹೊನ್ನಾಳಿ ದಾವಣಗೆರೆ ಜಿಲ್ಲೆ

ಪಿಆರ್-212

ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕಾರ್ಯಾಲಯ ಬಳ್ಳಾರಿ

ಸಂ.ಜಿಪಕಲ/ಕಾನೂನು ಪದವೀಧರ/ಆಡಳಿತ ತರಬೇತಿ/ಸಿಆರ್-3/2010-11/237, ದಿನಾಂಕ:05-02-2011

ಪ್ರಕಟಣೆ

ವಿಷಯ: 2010-11ನೇ ಸಾಲಿನಲ್ಲಿ ಪರಿಶಿಷ್ಟ ವರ್ಗದ ಕಾನೂನು ಪದವಿಧರರಿಗೆ ಆಡಳಿತ ನ್ಯಾಯಾಧಿಕರಣದಲ್ಲಿ ತರಬೇತಿ ನೀಡಲು ಅರ್ಜಿಗಳನ್ನು ಆಹ್ವಾನಿಸುವುದರ ಕುರಿತು.

ಉಲ್ಲೇಖ: 1) ಸರಕಾರದ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಸ್-681/ಎಸ್‌ಡಬ್ಲ್ಯೂ-89 ಬೆಂಗಳೂರು ದಿನಾಂಕ:02-11-2009, 28-03-2001 ಮತ್ತು 28-01-2006.

2) ಕ್ರಿಯಾಯೋಜನೆ 2010-11ನೇ ತ್ರೈಮಾಸಿಕ ಕಂತು ಬಿಡುಗಡೆ.

ಬಳ್ಳಾರಿ ಜಿಲ್ಲೆಯಲ್ಲಿರುವ ಪರಿಶಿಷ್ಟ ವರ್ಗಕ್ಕೆ ಸೇರಿರುವ ಕಾನೂನು ಪದವೀಧರರಿಗೆ 2010-11ನೇ ಸಾಲಿಗೆ ಆಡಳಿತ ನ್ಯಾಯಾಧಿಕರಣದಲ್ಲಿ 4 ವರ್ಷಗಳ ತರಬೇತಿಯನ್ನು ನೀಡುವ ಸಲುವಾಗಿ ಅರ್ಹ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಂದ ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ತರಬೇತಿಯನ್ನು ಪಡೆಯಲು ಇಚ್ಛಿಸುವ ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಈ ಕೆಳಕಂಡ ಅರ್ಹತೆಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

1. ಅಭ್ಯರ್ಥಿಗಳು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು.
2. ಬಳ್ಳಾರಿ ಜಿಲ್ಲೆಗೆ ಮಾತ್ರ ಸಂಬಂಧಿಸಿದ ಹಾಗೂ ವಕೀಲ ವೃತ್ತಿ ನಡೆಸಲು ಅರ್ಹತೆಯುಳ್ಳ ಕಾನೂನು ಪದವೀಧರರು ಮಾತ್ರ ಈ ತರಬೇತಿಗೆ ಅರ್ಹರು.
3. ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದಂದು (2) ವರ್ಷದೊಳಗೆ ಕಾನೂನು ಪದವಿಯನ್ನು ಪಡೆದಿರಬೇಕು ಅರ್ಜಿಯೊಂದಿಗೆ ಕಾನೂನು ಪಧವಿಯ (3) ವರ್ಷದ ಅಂಕಪಟ್ಟಿ ಪ್ರತಿ ಲಗತ್ತಿಸಬೇಕು.

4. ಅಭ್ಯರ್ಥಿಯ ವಯಸ್ಸು, ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕದಂದು 35 ವರ್ಷಗಳನ್ನು ಮೀರಿರಬಾರದು ಈ [illegible] ಅಧಿಕೃತ ಪ್ರಮಾಣ ಪತ್ರ (SSLC) ಅಂಕಪಟ್ಟಿ ಲಗತ್ತಿಸಬೇಕು.

5. ತರಬೇತಿಗಾಗಿ ಅರ್ಜಿಯನ್ನು ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಗಳನ್ನು ದ್ವಿಪತ್ರಿಗಳಲ್ಲಿ ನಿಗಧಿಪಡಿಸಿರುವ ಕೊನೆಯ ದಿನಾಂಕದೊ[illegible] ಪರೀಕ್ಷೆಗಳ ಅಂಕಪಟ್ಟಿಗಳ ಜೆರಾಕ್ಸ್ ಮತ್ತು ಜಾತಿ ಪ್ರಮಾಣ ಪತ್ರ ಬಾರ್ ಕೌನ್ಸಿಲ್‌ನಲ್ಲಿ ನೊಂದಣಿ ಮಾಡಿದ ಪ್ರಮಾಣ ಪತ್ರದ [illegible] ಪ್ರತಿಯೊಂದಿಗೆ ಸಲ್ಲಿಸಬೇಕು.

6. ಈಗಾಗಲೇ ಕಾನೂನು ವಿಷಯದಲ್ಲಿ ಯಾವುದಾದರು ತರಬೇತಿ ಪಡೆದಿರಬಾರದು.

ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು:-

1. ಈ ತರಬೇತಿಗೆ ಪರಿಶಿಷ್ಟ ವರ್ಗದ (12) ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು.
2. ಆಯ್ಕೆಯಾದ ಅಭ್ಯರ್ಥಿಗಳಿಗೆ (4) ವರ್ಷಗಳ ನ್ಯಾಯಾಂಗ ಆಡಳಿತ ತರಬೇತಿಯನ್ನು ಸರ್ಕಾರಿ ವಕೀಲರು, ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ 20 ವರ್ಷಗಳ ಅನುಭವ ಹೊಂದಿರುವ ಹಿರಿಯ ವಕೀಲರಲ್ಲಿ ತರಬೇತಿಯನ್ನು ನೀಡಲಾಗುವುದು ಈ ವಿಷಯದ ಬಗ್ಗೆ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾದದ್ದು.
3. ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಹೆಯಾನ ರೂ.1,000 (ರೂಪಾಯಿ ಒಂದು ಸಾವಿರ ಮಾತ್ರ) 4 ವರ್ಷದವರೆಗೆ ಸ್ಟೈಪೆಂಡ್ ನೀಡಲಾಗುವುದು.
4. ಈ ತರಬೇತಿಗೆ ಅಭ್ಯರ್ಥಿಗಳನ್ನು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬಳ್ಳಾರಿ ಇವರ ಅಧ್ಯಕ್ಷತೆಯಲ್ಲಿ ರಚಿತವಾದ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.
5. ಆಯ್ಕೆಯಾದ ಅಭ್ಯರ್ಥಿಗಳು ತರಬೇತಿಯನ್ನು ಮಧ್ಯದಲ್ಲಿ ಬಿಟ್ಟು ಹೋಗಬಾರದು (ಕೇಂದ್ರ/ರಾಜ್ಯ ಸರ್ಕಾರದಲ್ಲಿ ಉದ್ಯೋಗ ದೊರೆತ ಅಭ್ಯರ್ಥಿಗಳಿಗೆ ಈ ನಿಬಂಧನೆ ಅನ್ವಯಿಸುವುದಿಲ್ಲ.
6. ಆಯ್ಕೆಯಾದ ಅಭ್ಯರ್ಥಿಗಳು ಸುಳ್ಳು ಮಾಹಿತಿ ದಾಖಲಾತಿ ಒದಗಿಸಿದಲ್ಲಿ ಅಂತಹವರನ್ನು ಕಾನೂನು ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು ಹಾಗೂ ತರಬೇತಿಯನ್ನು ಮದ್ಯದಲ್ಲಿ ಬಿಟ್ಟುಹೋದಲ್ಲಿ ಅಂತಹವರಿಗೆ ನೀಡಿದ ಸ್ಟೈಪಂಡ್ ಹಣವನ್ನು ಶೇ 10% ರಷ್ಟು ಬಡ್ಡಿ ಸೇರಿಸಿ, ಭೂ ಕಂದಾಯ ಬಾಕಿ ಎಂದು ಪರಿಗಣಿಸಿ, ವಸೂಲಿ ಮಾಡಲಾಗುವುದು. ಈ ಬಗ್ಗೆ ಆಯ್ಕೆಯಾದ ಅಭ್ಯರ್ಥಿಗಳು ಕರಾರು ಪತ್ರವನ್ನು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಬಳ್ಳಾರಿ ಇವರಿಗೆ ಕರಾರು ಬರೆದು ಕೊಡತಕ್ಕದ್ದು.
7. ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾತ್ರ ಈ ಕಛೇರಿಯಿಂದ ತಿಳಿಸಲಾಗುವುದು ಹಾಗೂ ತರಬೇತಿ ಪಡೆಯಲು ಆಯ್ಕೆಯಾದ ಅಭ್ಯರ್ಥಿಗಳು ಆಯ್ಕೆ ಪತ್ರ ತಲುಪಿದ 15 ದಿನಗಳೊಳಗಾಗಿ ತಮ್ಮ ಒಪ್ಪಿಗೆ ಪತ್ರವನ್ನು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಬಳ್ಳಾರಿ ಇವರಿಗೆ ಸಲ್ಲಿಸತಕ್ಕದ್ದು.
8. ಈ ಎಲ್ಲಾ ಷರತ್ತುಗಳಿಗೆ ರೂ.20/-ಛಾಪ ಕಾಗದದಲ್ಲಿ ಒಪ್ಪಿಗೆ ಪ್ರಮಾಣ ಪತ್ರ ನೀಡಬೇಕು.
9. ಅಭ್ಯರ್ಥಿಯು ಪ್ರತಿ ತಿಂಗಳು ತರಬೇತಿಗೆ ವರದಿ ಮಾಡಿಕೊಂಡು ನ್ಯಾಯವಾದಿಗಳಿಂದ ತರಬೇತಿಗೆ ಹಾಜರಾದ ಬಗ್ಗೆ ಹಾಜರಿ ಪ್ರಮಾಣ ಪತ್ರವನ್ನು ಹಾಗೂ ದಿನಚರಿಯನ್ನು ಸಂಬಂಧ ಪಟ್ಟ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿಗೆ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಕಳುಹಿಸಬೇಕು ಕಳುಹಿಸದೆ ಇದ್ದಲ್ಲಿ ಆ ತಿಂಗಳ ಸ್ಟೈಪಂಡ್ ನೀಡಲಾಗುವುದಿಲ್ಲ.
10. ಪೂರ್ಣಮಾಡಿದ ಅರ್ಜಿಗಳನ್ನು (ದ್ವಿ ಪ್ರತಿಗಳಲ್ಲಿ) ಕಾರ್ಯದರ್ಶಿಗಳು ಜಿಲ್ಲಾ ಮಟ್ಟದ ನ್ಯಾಯಾಂಗ ತರಬೇತಿ ಆಯ್ಕೆ ಸಮಿತಿ ಮತ್ತು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಬಳ್ಳಾರಿ ಇವರಿಗೆ ದಿನಾಂಕ:14-02-2011 ರಂದು ಸಾಯಂಕಾಲ 5-30 ಗಂಟೆಯೊಳಗೆ ನೇರವಾಗಿ ಅಥವಾ ಆಯಾ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಮುಖಾಂತರ ಸಲ್ಲಿಸತಕ್ಕದ್ದು.

ಶ್ರೀ ಸಿ. ಪೊಲಯ್ಯ
ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು
ಹಾಗೂ ಸದಸ್ಯ ಮತ್ತು ಕಾರ್ಯದರ್ಶಿ, ಕಾನೂನು
ಪದವೀಧರ ನ್ಯಾಯಾಂಗ ಆಡಳಿತ ತರಬೇತಿ
ಆಯ್ಕೆ ಸಮಿತಿ ಬಳ್ಳಾರಿ

ಪಿಆರ್-221

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

ಸಂಖ್ಯೆ:ಸಂವ್ಯಶಾಇ 8 ಭಾನಿವಿ 2011, ಬೆಂಗಳೂರು ದಿನಾಂಕ:01-03-2011

ಅಧಿಸೂಚನೆ

ವಿಷಯ: ಭಾಷಾಂತರ ನಿರ್ದೇಶನಾಲಯದ ಗ್ರೂಪ್-ಎ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ದಿನಾಂಕ:01-01-2011ರಲ್ಲಿರುವಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ: ಭಾಷಾಂತರ ನಿರ್ದೇಶಕರ ಪತ್ರ ಸಂಖ್ಯೆ:ಭಾನಿ 16/ಆಡಳಿತ/ಗ್ರೂಪ್ ಎ/ಜ್ಯೇಷ/2011, ದಿನಾಂಕ:02-02-2011.

ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು, 1957ರ 10ನೇ ನಿಯಮದ (1)ನೇ ಉಪ-ನಿಯಮದನ್ವಯ ಭಾಷಾಂತರ ನಿರ್ದೇಶನಾಲಯದ ಗ್ರೂಪ್-ಎ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ದಿನಾಂಕ:01-01-2011ರಲ್ಲಿರುವಂತೆ ಅನುಬಂಧದಲ್ಲಿ ಲಗತ್ತಿಸಿ ಪ್ರಕಟಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರಿಚಾರ್ಡ್ ಲೋಬೊ,
ಜಂಟಿ ಪ್ರಾರೂಪಕಾರ ಮತ್ತು ಪದನಿಮಿತ್ತ,
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

ಅನುಬಂಧ

ದಿನಾಂಕ:1-1-2011 ರಲ್ಲಿ ಇರುವಂತೆ ಭಾಷಾಂತರ ನಿರ್ದೇಶನಾಲಯದ ಗ್ರೂಪ್-ಎ ಅಧಿಕಾರಿಗಳ ಜ್ಯೇಷ್ಠತಾ ಪಟ್ಟಿ

ಕ್ರ ಸಂ.	ಅಧಿಕಾರಿಗಳ ಹೆಸರು	ನೇರ/ ನೇಮಕಾತಿ/ ಮುಂಬಡ್ತಿ ಇತರೆ	ಮೀಸಲಾತಿ/ ವರ್ಗ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ನೇಮಕಾತಿಗೆ/ ಜ್ಯೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ
1	2	3	4	5	6	7	8
ಗ್ರೂಪ್-ಎ ಭಾಷಾಂತರ ನಿರ್ದೇಶಕರು (ರೂ. 20025-525-22650-600-26250-675-28275)							
1.	ಡಾ॥ ಕೆ.ಎಸ್. ಗೀತಾ	ಮುಂಬಡ್ತಿ	ಸಾಮಾನ್ಯ	23-10-1951	01-05-1975	03-04-2010	03-04-2010
ಉಪ ನಿರ್ದೇಶಕರು (ರೂ. 18150-450-19500-525-22650-600-26250-675-26925)							
1.	ಎಂ. ಜೈಕುಮಾರ್	ಮುಂಬಡ್ತಿ	ಸಾಮಾನ್ಯ	22-02-1951	14-10-1974	20-03-2003	20-03-2003
2.	ರತ್ನಕುಮಾರಿ	ಮುಂಬಡ್ತಿ	ಪರಿಶಿಷ್ಟ ಜಾತಿ	08-10-1951	12-12-1974	11-10-2005	11-10-2005
3.	ದೇವರಾಜು	ಮುಂಬಡ್ತಿ	ಪರಿಶಿಷ್ಟ ಜಾತಿ	06-04-1952	08-12-1983	13-12-2010	13-12-2010
ಸಹಾಯಕ ನಿರ್ದೇಶಕರು (ರೂ. 14050-350-14400-400-16800-450-19500-525-22650-600-25050)							
5.	ವೆಂಕಟಾಚಲಪತಿ	ಮುಂಬಡ್ತಿ	ಸಾಮಾನ್ಯ	04-04-1952	23-10-1974	11-10-2006	11-10-2006
6	ಶೋಭಾ ಎಂ.ಕಟ್ಟಿ	ಮುಂಬಡ್ತಿ	ಸಾಮಾನ್ಯ	27-07-1954	15-06-1983	18-06-2008	18-06-2008
7	ವೀರಭದ್ರಸ್ವಾಮಿ	ಮುಂಬಡ್ತಿ	ಪರಿಶಿಷ್ಟ ಜಾತಿ	15-07-1954	07-12-1983	18-06-2008	18-06-2008
8	ಐ.ಎಂ. ಕಂಬಳಿ	ಮುಂಬಡ್ತಿ	ಸಾಮಾನ್ಯ	05-08-1958	14-06-1983	18-06-2008	18-06-2008
9.	ಜಿ. ಮಹದೇವ್	ಮುಂಬಡ್ತಿ	ಸಾಮಾನ್ಯ	17-05-1955	12-12-1983	08-09-2010	08-09-2010
10.	ಎಸ್.ಎಸ್. ಪರಮೇಶ್	ಮುಂಬಡ್ತಿ	ಸಾಮಾನ್ಯ	20-04-1952	14-12-1983	13-12-2010	13-12-2010
ಆಡಳಿತಾಧಿಕಾರಿ (ರೂ. 14050-350-14400-400-16800-450-19500-525-22650-600-25050)							
11.	ಬೈಲರಂಗಯ್ಯ	ಮುಂಬಡ್ತಿ	ಪರಿಶಿಷ್ಟ ಜಾತಿ	04-03-1952	08-08-1977	04-12-2009	04-12-2009

ರಿಚಾರ್ಡ್ ಲೋಬೊ,
ಜಂಟಿ ಪ್ರಾರೂಪಕಾರ ಮತ್ತು ಪದನಿಮಿತ್ತ,
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

ಪಿಆರ್-302

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ ದಾವಣಗೆರೆ ಉಪ ವಿಭಾಗ ಆಂಜನೇಯ ದೇವಸ್ಥಾನದ ಎದುರು, ವಿದ್ಯಾನಗರ ದಾವಣಗೆರೆ

ನಂ.ಎ.ಆರ್.31/ದಾವಾ/ಅಮಲ್ಜಾರಿ/ಇ.ಪಿ. 69/2001–02, ದಿನಾಂಕ:21–02–2011

ವಿಷಯ: ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ದಾವಣಗೆರೆ ಇದರ ಸುಸ್ತಿ ಸಾಲಗಾರರಾದ ಮೆ॥ನಾಡಿಗ್ ರೈಸ್ ಇಂಡಸ್ಟ್ರೀಸ್ ಅಂಡ್ ರೈಸ್ ಮಿಲ್ ಸರ್ವೆ ನಂ.85/1 ಬಿ. ಖಾತೆ ನಂ.505 ಅಳತೆ 2 ಎಕರೆ, 8 ಗುಂಟೆ, ಲೋಕಿಕೆರೆ ರಸ್ತೆ ಶಿರಮಗೊಂಡನಹಳ್ಳಿ ದಾವಣಗೆರೆ ತಾಲ್ಲೂಕು ಇದರ ಸ್ಥಿರಾಸ್ತಿ ಮಾರಾಟವನ್ನು ಸ್ಥಿರೀಕರಿಸುವ ಬಗ್ಗೆ.

ಉಲ್ಲೇಖ: 1) ರಿಟ್ ಪಿಟಿಷನ್ ಸಂಖ್ಯೆ:32734/2010 (CS-RES) ದಿನಾಂಕ:20–10–2010

2) ಮಾರಾಟಾಧಿಕಾರಿಗಳು ನಿ.441 ಇವರ ಪ್ರಸ್ತಾವನೆ ದಿನಾಂಕ:03–11–2010

3) ಈ ಕಛೇರಿಯ ಪತ್ರ ದಿನಾಂಕ:09–11–2010

4) ಶ್ರೀ ಎಂ.ಇ. ರವಿರಾಜ್ ಇವರ ಪತ್ರ ದಿನಾಂಕ:23–11–2010

5) ಬ್ಯಾಂಕಿನ ಸಲಹೆಗಾರರು ಹಾಗೂ ವಕೀಲರ ಪತ್ರ ದಿನಾಂಕ:26–11–2010

ಪ್ರಸ್ತಾವನೆ:

ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ. ದಾವಣಗೆರೆ ಇದರಲ್ಲಿ ಸ್ಥಿರಾಸ್ತಿ ಆಧಾರ ಸಾಲ ರೈಸ್ ಮಿಲ್ ವ್ಯವಹಾರದ ಅಭಿವೃದ್ಧಿ ಉದ್ದೇಶಕ್ಕಾಗಿ ರೂ. 50.00 ಲಕ್ಷ ಸಾಲ ಪಡೆದು ಸುಸ್ತಿದಾರರಾದ ಮೆ.ನಾಡಿಗ್ ರೈಸ್ ಇಂಡಸ್ಟ್ರೀಸ್ ಅಂಡ್ ರೈಸ್ ಮಿಲ್ ಇದರ ಮಾಲೀಕರಾದ ಶ್ರೀ ಎನ್. ಶೇಖರಪ್ಪ ಇವರಿಗೆ ಸೇರಿದ ಸ್ಥಿರಾಸ್ತಿಯಾದ ಸರ್ವೇ ನಂ.85/1 ಬಿ.ಖಾತೆ ನಂ.505, ಅಳತೆ 2 ಎಕರೆ 8 ಗುಂಟೆ, ಲೋಕಿಕೆರೆ ರಸ್ತೆ, ಶಿರಮಗೊಂಡನಹಳ್ಳಿ ದಾವಣಗೆರೆ ತಾಲ್ಲೂಕು ಇದರ ಅಳತೆ ಪೂರ್ವಕ್ಕೆ ಲೋಕಿಕೆರೆ ದಾವಣಗೆರೆ ರಸ್ತೆ, ಪಶ್ಚಿಮಕ್ಕೆ ಶ್ರೀ ಎನ್. ಶೇಖರಪ್ಪನವರ ಆಸ್ತಿ, ಉತ್ತರಕ್ಕೆ ಶ್ರೀ ಎನ್. ಶೇಖರಪ್ಪನವರ ಆಸ್ತಿ, ದಕ್ಷಿಣಕ್ಕೆ ಚಾನಲ್ ಇದರ ಸ್ಥಿರಾಸ್ತಿಯನ್ನು ಮಾರಾಟಾಧಿಕಾರಿ ನಿಯಮ 441 ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ. ದಾವಣಗೆರೆ ರವರು ದಾವಾ ಸಂಖ್ಯೆ/ಜೆಆರ್‌ಬಿ/ಡಿ.ಐ.ಎಸ್./2282/1999–2000 ದಿನಾಂಕ 30–03–2000 ನಂತರ ಸಾಲ ಮರುಪಾವತಿಸದೇ ಇರುವುದರಿಂದ ಬ್ಯಾಂಕಿನವರು ಅಮಲ್ಜಾರಿ ಪ್ರಕರಣ ದಾಖಲು ಮಾಡಿರುತ್ತಾರೆ. ಅಮಲ್ಜಾರಿ ಪ್ರಕರಣ ಸಂಖ್ಯೆ:69/2001–02 ಆಗಿರುತ್ತದೆ. ಸಾಲಗಾರರು ಬ್ಯಾಂಕಿಗೆ ಸಾಲದ ಬಾಕಿಯನ್ನು ಮರುಪಾವತಿಸಲು ವಿಫಲರಾದ ಪ್ರಯುಕ್ತ ಬ್ಯಾಂಕಿನ ಮಾರಾಟಾಧಿಕಾರಿಯವರು ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳನ್ವಯ ಸಾಲಗಾರನು ಬ್ಯಾಂಕಿಗೆ ಆಧಾರ ಮಾಡಿದ್ದ ಸ್ಥಿರ ಸ್ವತ್ತನ್ನು ಮಾರಾಟ ಮಾಡಲು ದಿನಾಂಕ 20–10–2010 ರಂದು ಬಹಿರಂಗ ಹರಾಜು ನಡೆಸಿರುತ್ತಾರೆ. ಈ ಬಹಿರಂಗ ಹರಾಜಿನಲ್ಲಿ ಒಟ್ಟು 22 ಜನ ಬಿಡ್‌ದಾರರು ತಲಾ ರೂ.50,000/– ಗಳಂತೆ ಹಣ ಪಾವತಿಸಿ ಭಾಗವಹಿಸಿರುತ್ತಾರೆ. ಈ ಬಹಿರಂಗ ಹರಾಜಿನಲ್ಲಿ ಬಹಿರಂಗ ಹರಾಜಿನ ಕ್ರಮಸಂಖ್ಯೆ: 11 ನೇ ಬಿಡ್ ದಾರರಾದ ಶ್ರೀ ಎಂ.ಇ. ರವಿರಾಜ್ ಬಿನ್ ಇ.ಎಂ.ಪಾಂಡಿಯನ್, ಮಹಾರಾಜ ಇಂಡಸ್ಟ್ರೀಸ್ ಲೋಕಿಕೆರೆ ರಸ್ತೆ, ದಾವಣಗೆರೆ ಇವರು ರೂ. 1,41,00,000/– (ರೂ. ಒಂದು ಕೋಟಿ ನಲ್ವತ್ತೊಂದು ಲಕ್ಷ) ಗಳಿಗೆ ಬಿಡ್ ಮಾಡಿ ಅತೀ ಹೆಚ್ಚಿನ ಮೊತ್ತದ ಬಿಡ್‌ದಾರರಾಗಿದ್ದು, ಹರಾಜಿನ ಸ್ಥಳದಲ್ಲಿಯೇ ಬಿಡ್ ಮೊತ್ತದ ಶೇಕಡಾ 15 ರಷ್ಟು ಹಣ ರೂ.21,15,000/– ಗಳನ್ನು ಬ್ಯಾಂಕಿಗೆ ಪಾವತಿ ಮಾಡಿರುತ್ತಾರೆ. ಬ್ಯಾಂಕಿನ ಮಾರಾಟಾಧಿಕಾರಿಯವರು ಸಲ್ಲಿಸಿರುವ ವರದಿಯ ಪ್ರಕಾರ ಸಾಲಗಾರರು ಬ್ಯಾಂಕಿಗೆ ದಿನಾಂಕ:20–10–2010 ಕ್ಕೆ ಮರು ರೂ.1,39,10,256–84 ಗಳು ಮತ್ತು ತದನಂತರ ಬಡ್ಡಿ ಮತ್ತು ಇತರೇ ವೆಚ್ಚವನ್ನು ಪಾವತಿಸಲು ಬಾಕಿ ಇದ್ದು, ರಿಜಿಸ್ಟರ್ಡ್ ಮೌಲ್ಯಮಾಪಕರು ಹಾಗು ಇಂಜಿನಿಯರ್‌ರಾದ ಶ್ರೀ ಹೆಚ್.ಎಸ್. ನಟರಾಜ್ ಸಿವಿಲ್ ಇಂಜಿನಿಯರ್ ಅಂಡ್ ವ್ಯಾಲ್ಯೂಯರ್ ದಾವಣಗೆರೆರವರು ಆಸ್ತಿ ಮೌಲ್ಯ ಮಾಪನ ಮಾಡಿರುತ್ತಾರೆ. ಮಾರಾಟಾಧಿಕಾರಿಯವರು ದಿನಾಂಕ:20–10–2010 ರಂದು ನಡೆಸಿದ ಹರಾಜಿನಲ್ಲಿ ಶ್ರೀ ಎಂ.ಇ.ರವಿರಾಜ್ ಬಿನ್ ಇ.ಎಂ. ಪಾಂಡಿಯನ್‌ರವರಿಗೆ ರೂ.1.41,00,000/– ಗಳಿಗೆ ಮಾರಾಟವಾಗಿರುತ್ತದೆ. ಆದುದರಿಂದ ಈ ಕಛೇರಿಗೆ ಮಾರಾಟ ಸ್ಥಿರೀಕರಣ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯಲ್ಲಿ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಕರ್ನಾಟಕ ಉಚ್ಛ ನ್ಯಾಯಾಲಯ ಬೆಂಗಳೂರು ರಿಟ್ ಅರ್ಜಿ ಸಂಖ್ಯೆ 32734/2010 ರ (CS-RES) ಇವರಲ್ಲಿ ಬಿಡ್‌ನ ಸಂಬಂಧ ದಾವೆ ಹೂಡಿರುತ್ತಾರೆ. ಸದರಿ ನ್ಯಾಯಾಲಯದಿಂದ ಯಾವುದೇ ರೀತಿಯಾಗಿ ಮಧ್ಯಂತರ ಆದೇಶ ಅಥವಾ ತಡೆಯಾಜ್ಞೆ ಇರುವುದಿಲ್ಲ. ದಿನಾಂಕ:29–01–2011 ರಂದು ಪ್ರಧಾನ ವ್ಯವಸ್ಥಾಪಕರು ಪತ್ರ ಬರೆಯುತ್ತಾ, ಪತ್ರದ ಜೊತೆಯಲ್ಲಿ ತಮ್ಮ ಬ್ಯಾಂಕಿನ ಕಾನೂನು ಸಲಹೆಗಾರರ ಪತ್ರ ಲಗತ್ತಿಸಿರುತ್ತಾರೆ. ಬ್ಯಾಂಕಿನ ಕಾನೂನು ಸಲಹೆಗಾರರ ಪತ್ರದಲ್ಲಿ ಮಾರಾಟ ಸ್ಥಿರೀಕರಣ ಯಾವುದೇ ರೀತಿಯಾಗಿ ಮಧ್ಯಂತರ ಆದೇಶ ಅಥವಾ ತಡೆಯಾಜ್ಞೆ ಇರುವುದಿಲ್ಲ. ಹಾಗೂ ಯಾವುದೇ ಅಡೆ ತಡೆಗಳು ಇಲ್ಲದ ಕಾರಣ, ಸಹಕಾರ ಸಂಘಗಳ ನಿಯಮದನ್ವಯ ಮಾರಾಟ ಸ್ಥಿರೀಕರಿಸಬಹುದಾಗಿದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಶ್ರೀ ಎಂ.ಇ. ರವಿರಾಜ್‌ರವರು ಬಿಡ್ಡಿನ ಮೊತ್ತವನ್ನು ನಿಗದಿತ ವೇಳೆಯಲ್ಲಿ ಬ್ಯಾಂಕಿಗೆ ಪಾವತಿಸಲಾಗಿದ್ದು, ಹರಾಜು ಮಾಡಿ ಸುಮಾರು 4 ತಿಂಗಳ ಕಾಲ ವಿಳಂಬವಾಗಿದ್ದು, ಕೂಡಲೇ ಮಾರಾಟ ಸ್ಥಿರೀಕರಿಸಲು ಈ ಕಛೇರಿಗೆ ಪತ್ರ ಬರೆದು ಕೋರಿಕೊಂಡಿರುತ್ತಾರೆ. ದಿನಾಂಕ:20–10–2010 ರಿಂದ ಇದುವರೆವಿಗೂ ಕರ್ನಾಟಕ ಉಚ್ಛ ನ್ಯಾಯಾಲಯದಿಂದ ಯಾವ ಆದೇಶ ಅಥವಾ ನಿರ್ದೇಶನವಾಗಲೀ, ಈ ತಹಲ್‌ವರೆವಿಗೂ ಈ ಕಛೇರಿಗೆ ಬಂದಿರುವುದಿಲ್ಲ.

ಬ್ಯಾಂಕುಗಳು ಠೇವಣಿ ಸಂಗ್ರಹಣೆ ಮಾಡಿ, ಸಾಲ ನೀಡುವುದು ಬ್ಯಾಂಕಿನ ಉದ್ದೇಶದಲ್ಲಿದ್ದು, ಆ ಸಾಲವನ್ನು ಕಾನೂನು ರೀತ್ಯಾ ಸಾಲ ವಸೂಲಿ ಮಾಡುವುದು ಕೂಡ ಬ್ಯಾಂಕಿನ ಕರ್ತವ್ಯವಾಗಿರುತ್ತದೆ. ನಂತರ ಬ್ಯಾಂಕಿನವರು ಠೇವಣಿದಾರರಿಗೆ ನಿಗದಿತ ಸಮಯದಲ್ಲಿ ವಾಪಾಸ್ಸು ಮಾಡುವುದು ಶಾಸನ ಬದ್ಧವಾಗಿರುತ್ತದೆ. ಅದಲ್ಲದೇ, ಭಾರತೀಯ ರಿಜರ್ವ್ ಬ್ಯಾಂಕಿನ ನಿಯಮಾನುಸಾರ, ಸುಸ್ತಿ ಸಾಲಗಳ ಎನ್‌ಪಿಎಯಾಗಿ, ಬ್ಯಾಂಕಿನ ಅಡಾವು ಪತ್ರಿಕೆಯಲ್ಲಿ ಅಳವಡಿಸಿಕೊಳ್ಳುವುದರಿಂದ ಆ ಬ್ಯಾಂಕು ನಷ್ಟ ಅನುಭವಿಸಿದಂತೆಯಾಗುತ್ತದೆ. ಈ ಹಿನ್ನಲೆಯಲ್ಲಿ ಬ್ಯಾಂಕಿನ ಸಾಲದ ವಸೂಲಾತಿಯ ಹಿತದೃಷ್ಟಿಯಿಂದ ಠೇವಣಿದಾರರ ಹಿತದೃಷ್ಟಿಯಿಂದ ಮಾರಾಟ ಸ್ಥಿರೀಕರಣ ಮಾಡುವುದು ಅತ್ಯಗತ್ಯವಾಗಿರುತ್ತದೆ. ಇದರಿಂದಾಗಿ ಬ್ಯಾಂಕಿನಲ್ಲಿ ಸುಸ್ತಿ ಸಾಲಗಾರರ ಸಂಖ್ಯೆ

ಕಡಿಮೆಯಾಗಿ, ಬ್ಯಾಂಕಿನ ಆರ್ಥಿಕ ಮಟ್ಟ ಹೆಚ್ಚಲು ಅನುಕೂಲವಾಗುತ್ತೆಂದು ಅಭಿಪ್ರಾಯ ಪಟ್ಟು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದ ಮೇಲ್ಕಂಡ ರಿಟ್ ಪಿಟಿಷನ್ ಸಂ: 32734/2010 ರ ಆದೇಶಕ್ಕೆ ಒಳಪಟ್ಟು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಜಿ. ಮಲ್ಲಪ್ಪ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹಾಗೂ ವಸೂಲಾಧಿಕಾರಿಗಳು ದಾವಣಗೆರೆ ಉಪ ವಿಭಾಗ, ದಾವಣಗೆರೆ, ಆದ ನಾನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 38(6)ಎ(7) ರನ್ವಯ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ ಅಮಲ್ಜಾರಿ ಅರ್ಜಿ ಸಂ:69/2001-02 ರಲ್ಲಿ ಮೆ: ನಾಡಿಗ್ ರೈಸ್ ಇಂಡಸ್ಟ್ರೀಸ್ ಅಂಡ್ ರೈಸ್ ಮಿಲ್ ಇದರ ಮಾಲೀಕರಾದ ಶ್ರೀ ಎನ್. ಶೇಖರಪ್ಪ ಇವರಿಗೆ ಸೇರಿದ ಸ್ಥಿರಾಸ್ತಿ ಸರ್ವೆ ನಂ: 85/1ಬಿ ಖಾತೆ ಸಂ:505 ಅಳತೆ 2 ಎಕರೆ 8 ಗುಂಟೆ ಲೋಕಿಕೆರೆ ರಸ್ತೆ ಶಿರಮಗೊಂಡನಹಳ್ಳಿ, ದಾವಣಗೆರೆ ತಾಲ್ಲೂಕು ಇದರ ಅಳತೆ ಪೂರ್ವಕ್ಕೆ ಲೋಕಿಕೆರೆ ದಾವಣಗೆರೆ ರಸ್ತೆ, ಪಶ್ಚಿಮಕ್ಕೆ ಶ್ರೀ ಎನ್. ಶೇಖರಪ್ಪನವರ ಆಸ್ತಿ, ಉತ್ತರಕ್ಕೆ ಶ್ರೀ ಎನ್. ಶೇಖರಪ್ಪನವರ ಆಸ್ತಿ, ದಕ್ಷಿಣಕ್ಕೆ ಚಾನಲ್ ಇದರ ಸ್ಥಿರಾಸ್ತಿಯನ್ನು ದಿನಾಂಕ:20-10-2010 ರಂದು ವಾದಿ ಬ್ಯಾಂಕಿನ ಮಾರಾಟಾಧಿಕಾರಿಯವರು ಮಾಡಿದ ಬಹಿರಂಗ ಹರಾಜಿನಲ್ಲಿ ಶ್ರೀ ಎಂ.ಇ. ರವಿರಾಜ್ ಬಿನ್ ಇ.ಎಂ. ಪಾಂಡಿಯನ್ ಮಹಾರಾಜ ಇಂಡಸ್ಟ್ರೀಸ್ ಲೋಕಿಕೆರೆ ರಸ್ತೆ, ದಾವಣಗೆರೆ ಇವರು ಅತಿ ಹೆಚ್ಚಿನ ಬಿಡ್ಡುದಾರರಾಗಿದ್ದು, ಇವರಿಗೆ ರೂ. 1,41,00,000-00 (ರೂ. ಒಂದು ಕೋಟಿ ನಲವತ್ತೊಂದು ಲಕ್ಷ) ಗಳಿಗೆ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು ಬಹಿರಂಗವಾಗಿ ಹರಾಜು ಮೂಲಕ ಮಾರಾಟ ಮಾಡಿರುವುದನ್ನು ಸ್ಥಿರೀಕರಿಸಿರುತ್ತೇನೆ.

ಸ್ಥಿರಾಸ್ತಿಯ ವಿವರ

ದಾವಣಗೆರೆ ಮಹಾನಗರ ಪಾಲಿಕೆಯ ವಿಭಾಗಕ್ಕೆ ಸೇರಿದ ಮೆ: ನಾಡಿಗ್ ರೈಸ್ ಇಂಡಸ್ಟ್ರೀಸ್ ಅಂಡ್ ರೈಸ್ ಮಿಲ್ ಇದರ ಮಾಲೀಕರಾದ ಶ್ರೀ ಎನ್. ಶೇಖರಪ್ಪ ಇವರಿಗೆ ಸೇರಿದ ಸ್ಥಿರಾಸ್ತಿ ಸರ್ವೆ ನಂ: 85/1ಬಿ ಖಾತೆ ಸಂ:505 ಅಳತೆ 2 ಎಕರೆ 8 ಗುಂಟೆ ಲೋಕಿಕೆರೆ ರಸ್ತೆ ಶಿರಮಗೊಂಡನಹಳ್ಳಿ, ದಾವಣಗೆರೆ ತಾಲ್ಲೂಕು ಇದರ ಅಳತೆವುಳ್ಳ ಸ್ವತ್ತಿಗೆ ಚಕ್ಕು ಬಂದಿ:

ಪೂರ್ವಕ್ಕೆ :- ಲೋಕಿಕೆರೆ ದಾವಣಗೆರೆ ರಸ್ತೆ,

ಪಶ್ಚಿಮಕ್ಕೆ :- ಶ್ರೀ ಎನ್. ಶೇಖರಪ್ಪನವರ ಆಸ್ತಿ,

ಉತ್ತರಕ್ಕೆ :- ಶ್ರೀ ಎನ್. ಶೇಖರಪ್ಪನವರ ಆಸ್ತಿ,

ದಕ್ಷಿಣಕ್ಕೆ :- ಚಾನಲ್

ಈ ಮೇಲ್ಕಂಡ ಅಳತೆ ಮತ್ತು ಚಕ್ಕುಬಂದಿಗಳ ಪಟ್ಟಿ ಸ್ವತ್ತು ಈ ಮಾರಾಟದ ಕ್ರಯಕ್ಕೆ ಒಳಪಟ್ಟಿರುತ್ತೆ.

ಸೇಲ್ ಸರ್ಟಿಪಿಕೇಟ್‌ನ್ನು ಜಾರಿ ಮಾಡುವ ಸಂಬಂಧವಾಗಿ ಖರೀದಿದಾರರು ಹರಾಜಿನ ಮೊತ್ತಕ್ಕೆ ಅವಶ್ಯವಿರುವ ಸ್ಟಾಂಪ್ ಪೇಪರ್‌ನ್ನು ಖರೀದಿಸಿ, ಈ ಆದೇಶ ತಲುಪಿದ 15 ದಿನಗಳೊಳಗಾಗಿ ಈ ಕೆಳ ಸಹಿ ಮಾಡಿರುವವರ ಸಮ್ಮುಖದಲ್ಲಿ ಹಾಜರುಪಡಿಸಲು ಸೂಚಿಸಿದೆ.

ಈ ಆದೇಶವನ್ನು ನನ್ನ ಸ್ವಹಸ್ತ ಸಹಿ ಹಾಗೂ ಈ ಕಛೇರಿಯ ಮೊಹರಿನೊಂದಿಗೆ ದಿನಾಂಕ:21-02-2011 ರಂದು ಹೊರಡಿಸಲಾಗಿದೆ.

ಜಿ. ಮಲ್ಲಪ್ಪ
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಹಾಗೂ ವಸೂಲಾಧಿಕಾರಿಗಳು ದಾವಣಗೆರೆ ಉಪ ವಿಭಾಗ, ದಾವಣಗೆರೆ

ಪಿಆರ್-312

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ, ಕುವೆಂಪು ರಸ್ತೆ, ಕೆನರಾ ಬ್ಯಾಂಕ್ ಎದುರು, ಶಿವಮೊಗ್ಗ

ವಿಷಯ: ರತನ್ ಕ್ರಾಫ್ಟ್ ಅಂಡ್ ಇಂಡಸ್ಟ್ರಿಯಲ್ ಕೋ ಆಪರೇಟಿವ್ ಸೊಸೈಟಿ ನಿ., ಕಾರ್ಗಲ್ ಸಾಗರ ತಾಲ್ಲೂಕು ಇದನ್ನು ಸಮಾಪನೆಗೊಳಿಸುವ ಬಗ್ಗೆ

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಾಗರ, ರವರ ಪತ್ರ ನಂ:ಎಆರ್-25/ಎಲ್‌ಕ್ಯೂಡಿ/ಸಿಆರ್/2010-11/ ದಿನಾಂಕ:28-01-2011.

2) ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಓ/201/ಸಿಎಲ್‌ಎಂ/2008 ಬೆಂಗಳೂರು ದಿನಾಂಕ:27-05-2010.

ಪ್ರಸ್ತಾವನೆ:

ನಿಷ್ಕ್ರಿಯಗೊಂಡಿರುವ, ರತನ್ ಕ್ರಾಫ್ಟ್ ಅಂಡ್ ಇಂಡಸ್ಟ್ರಿಯಲ್ ಕೋ ಆಪರೇಟಿವ್ ಸೊಸೈಟಿ ನಿ., ಕಾರ್ಗಲ್ ಸಾಗರ ತಾಲ್ಲೂಕು ಈ ಸಹಕಾರ ಸಂಘವನ್ನು ಸಮಾಪನೆಗೊಳಿಸಲು ಉಲ್ಲೇಖ(1)ರ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಸಂಘವು ನೊಂದಣಿ ಸಂ:ಎಆರ್-25/3124/ 1974-75 ದಿನಾಂಕ:16-02-1975 ರಂದು ನೊಂದಣಿಯಾಗಿರುತ್ತದೆ. ಸಂಘದ ಕಾರ್ಯವ್ಯಾಪ್ತಿಯು ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ವ್ಯಾಪ್ತಿಯನ್ನು ಹೊಂದಿರುತ್ತದೆ.

ಸಂಘದ ಉಪನಿಯಮದ ಉದ್ದೇಶವನ್ನು ಕಾರ್ಯರೂಪಕ್ಕೆ ತಂದು ಕಾರ್ಯನಿರ್ವಹಿಸದೆ 2 ವರ್ಷದಿಂದ ಯಾವುದೇ ವ್ಯವಹಾರ ನಿರ್ವಹಿಸದೆ ಸ್ಥಗಿತಗೊಂಡ ಹಿನ್ನಲೆಯಲ್ಲಿ ಸಂಘದ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿತ್ತು. ಆಡಳಿತಾಧಿಕಾರಿಗಳು ಪ್ರಭಾರ ಪಡೆದು ಆಡಳಿತಾಧಿಕಾರಿ ದಿನಾಂಕ:06-09-2010 ರಂದು ಆಡಳಿತಾಧಿಕಾರಿ ಸಭೆ ನಡೆಸಿ, ಸಂಘದ ಆಡಳಿತ ಮಂಡಳಿ

ನಡೆಸಿಕೊಂಡು ಸಂಘವನ್ನು ಮುನ್ನಡೆಸಿಕೊಂಡು ಹೋಗಲು ಯಾವುದೇ ಸದಸ್ಯರಲ್ಲಿ ಆಸಕ್ತಿ ಇಲ್ಲದೆ ಇರುವುದರಿಂದ ಸಂಘವನ್ನು ಸಮಾಪನೆಗೊಳಿಸಲು ತೀರ್ಮಾನಿಸಿರುತ್ತಾರೆ. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಾಗರ ಉಪ-ವಿಭಾಗ, ಸಾಗರ,ರವರು ಆಡಳಿತಾಧಿಕಾರಿಯವರ ತೀರ್ಮಾನವನ್ನು ಅನುಮೋದಿಸಿ ಉಲ್ಲೇಖ(1)ರ ಪತ್ರದಲ್ಲಿ ಸಮಾಪನೆಗೊಳಿಸಲು ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ, ಪರಿಗಣಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸಂ:ಡಿಆರ್‌ಎಸ್‌ಎಲ್‌ಕ್ಯೂಡಿ/ಡಿಎಲ್‌ಎಸ್/ಸಿಆರ್-/2010-11/1760 ದಿನಾಂಕ:03-02-2011

ಆದೇಶ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 72(2) ಅನ್ವಯ ಮತ್ತು ಸರ್ಕಾರದ ಅಧಿಸೂಚನೆ ಸಂ:ಸಿಒ/201/ಸಿಎಲ್‌ಎಂ 2008 ಬೆಂಗಳೂರು ದಿನಾಂಕ:27-05-2010 ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಸಿ.ಎನ್.ದೇವರಾಜು ಕೆ.ಸಿ.ಎಸ್. ಸಹಕಾರ ಸಂಘಗಳ ಉಪ-ನಿಬಂಧಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಆದ ನಾನು ರತನ್ ಕ್ರಾಫ್ಟ್ ಅಂಡ್ ಇಂಡಸ್ಟ್ರಿಯಲ್ ಕೋ ಆಪರೇಟಿವ್ ಸೊಸೈಟಿ ನಿ., ಕಾರ್ಗಲ್ ಸಾಗರ ತಾಲ್ಲೂಕು ಈ ಸಂಘವನ್ನು ಸಮಾಪನೆಗೊಳಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 73(1) ರಂತೆ ಎಂ. ಚಂದ್ರಶೇಖರ್ ಸಹಬೋಧಕರು ರತನ್ ಕ್ರಾಫ್ಟ್ ಬಿದಿರು ಬೆತ್ತದ ವಿಭಾಗ, ಕುಶಲ ಕರ್ಮಿಗಳ ತರಬೇತಿ ಸಂಸ್ಥೆ ಸಾಗರ, ಇವರನ್ನು ಸಮಾಪನೆ ಅಧಿಕಾರಿಯಾಗಿ ನೇಮಕ ಮಾಡಿರುತ್ತೇನೆ.

ಸಮಾಪನಾಧಿಕಾರಿಗಳು ಕೂಡಲೇ ಸಂಘದ ಪ್ರಭಾರವನ್ನು ಪಡೆದು ಸಮಾಪನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಸಂಘದ ನೊಂದಣಿ ಕ್ರಮಾಂಕವನ್ನು ರದ್ದುಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿದೆ.

ಈ ಆದೇಶವನ್ನು ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ದಿನಾಂಕ:03-02-2011 ರಂದು ನೀಡಲಾಗಿದೆ.

ಸಿ.ಎನ್. ದೇವರಾಜು,
ಸಹಕಾರ ಸಂಘಗಳ ಉಪ ನಿಬಂಧಕರು,
ಪಿಆರ್-258 ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

ಕರ್ನಾಟಕ ಲೋಕಸೇವಾ ಆಯೋಗ

ವಿಷಯ: 2010ನೇ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಯಲ್ಲಿ ದುರಾಚಾರ ಎಸಗಿರುವ ಪ್ರಕರಣಕ್ಕೆ ದಂಡನೆ ವಿಧಿಸುವ ಕುರಿತು.

ಓದಲಾಗಿದೆ: 1) ಮೇಲ್ವಿಚಾರಕರು ಟಿಳಕವಾಡಿ ಪ್ರೌಢಶಾಲೆ, ಬೆಳಗಾಂ, ಇವರ ಪತ್ರದ ದಿನಾಂಕ:13-06-2010.

2) ಶ್ರೀ ಅರವಿಂದ ದುರುಗಪ್ಪ ಅಂಗಡಿ ಮತ್ತು ಶ್ರೀ ಯಲ್ಲಪ್ಪ ನಾಗಪ್ಪ ಪೂಜೇರಿ ಇವರಿಗೆ ಆಯೋಗದ ನೋಟೀಸ್ ಜಾರಿ ಮಾಡಿದ ಸಂಖ್ಯೆ:ಇಪ(1)1993-97/2010-11/ಪಿಎಸ್‌ಸಿ, ದಿನಾಂಕ:25-08-2010.

3) ಶ್ರೀ ಅರವಿಂದ ದುರುಗಪ್ಪ ಅಂಗಡಿ ಮತ್ತು ಶ್ರೀ ಯಲ್ಲಪ್ಪ ನಾಗಪ್ಪ ಪೂಜೇರಿ ಇವರನ್ನು ಆಯೋಗದ ಕಛೇರಿಗೆ ಖುದ್ದಾಗಿ ಹಾಜರಾಗಲು ಜಾರಿ ಮಾಡಿದ ಹಿಂಬರಹದ ಸಂಖ್ಯೆ ವಿಚಾರಣೆ 1-3/ಆರ್.ಎನ್.ಆರ್(3)ಶಾಖೆ, ದಿನಾಂಕ:14-10-2010

4) ವಿಚಾರಣಾ ವರದಿ ದಿನಾಂಕ:15-11-2010.

ಪ್ರಸ್ತಾವನೆ:

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು=ಇಪ್ಪತ್ತು ಮೀಟರ್‌ಗಳು **ಸರಪಳಿ–ಕೊಂಡಿಗಳು**
8	9	179^0	8–10
9	10	ಬಿಂತ್ರವಳ್ಳಿ ಸರ್ವೆ ನಂಬರ್ 79, 80 ರ ಪೂರ್ವ ದಿಕ್ಕಿನ ಕೂಡುಬಾಂದಿನಲ್ಲಿ	9–30
			17–40
10	11	ಬಿಂತ್ರವಳ್ಳಿ ಸರ್ವೆ ನಂಬರ್ 80 ರ ಉತ್ತರದ ಗಡಿ	7–30
11	12	ಬಿಂತ್ರವಳ್ಳಿ ಸರ್ವೆ ನಂಬರ್ 80 ರ ಪಶ್ಚಿಮದ ಗಡಿ	6–50
			13–80
12	13	ಬಿಂತ್ರವಳ್ಳಿ ಸರ್ವೆ ನಂಬರ್ 80 ರ ದಕ್ಷಿಣ ಗಡಿ	5–50

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು=ಇಪ್ಪತ್ತು ಮೀಟರ್‌ಗಳು **ಸರಪಳಿ-ಕೊಂಡಿಗಳು**
13	14	248^0	5-00
14	15	181^0	2-95
15	16	214^0	5-40
16	17	121^0	6-25
17	18	183^0	5-00
			30-10

ದಕ್ಷಿಣ: ಸೀಮಾರೇಖೆಯು ಸ್ಥಾನ ಸಂಖ್ಯೆ 18 ರಿಂದ ಮುಂದುವರೆದು ಬಿಂತ್ರವಳ್ಳಿ ಸರ್ವೆ ನಂಬರ್ 232, 81, 85 ರಲ್ಲಿ ಕೊಪ್ಪ-ನುಗ್ಗಿ ರಸ್ತೆಯ ಎಡಪಾರ್ಶ್ವದಲ್ಲಿ ವಿವಿಧ ಕೋನಗಳಲ್ಲಿ **42-45** ಸರಪಳಿ ದೂರ ಚಲಿಸಿ ಬಿಂತ್ರವಳ್ಳಿ ಸರ್ವೆ ನಂಬರ್ 81, 53, 85 ರ ಕೂಡುಬಾಂದಿನಿಂದ 297^0 ಕೋನ **4-90** ಸರಪಳಿ ದೂರದಲ್ಲಿ ಸ್ಥಾನ ಸಂಖ್ಯೆ 24 ನ್ನು ಸೇರುತ್ತದೆ.

ದಕ್ಷಿಣದಲ್ಲಿ ಸೀಮಾರೇಖೆಯು ಈ ಕೆಳಗಿನಂತೆ ಚಲಿಸುತ್ತದೆ;

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು =ಇಪ್ಪತ್ತು ಮೀಟರ್‌ಗಳು **ಸರಪಳಿ-ಕೊಂಡಿಗಳು**
18	19	242^0	5-00
19	20	284^0	7-20
20	21	253^0	3-55
21	22	304^0	8-70
22	23	221^0	13-90
23	24	209^0	4-10
			42-45

ಪಶ್ಚಿಮ: ಸೀಮಾರೇಖೆಯು ಸ್ಥಾನ ಸಂಖ್ಯೆ 24 ರಿಂದ ಮುಂದುವರೆದು ಬಿಂತ್ರವಳ್ಳಿ ಸರ್ವೆ ನಂಬರ್ 85 ಮತ್ತು 81 ರಲ್ಲಿ ವಿವಿಧ ಕೋನಗಳಲ್ಲಿ **26-70** ಸರಪಳಿ ದೂರ ಚಲಿಸಿ ಬಿಂತ್ರವಳ್ಳಿ ಸರ್ವೆ ನಂಬರ್ 82ರ ಆಗ್ನೇಯ ಬಾಂದಿನಿಂದ 166^0 ಕೋನ 1-30 ಸರಪಳಿ ದೂರದಲ್ಲಿರುವ ಸ್ಥಾನ ಸಂಖ್ಯೆ 29 ನ್ನು ಸೇರುತ್ತದೆ. ಮುಂದುವರೆದು ಸೀಮಾರೇಖೆಯು ಬಿಂತ್ರವಳ್ಳಿ ಸರ್ವೆ ನಂಬರ್ 81 ರಲ್ಲಿ ವಿವಿಧ ಕೋನ ಗಳಲ್ಲಿ **26-00** ಸರಪಳಿ ದೂರ ಚಲಿಸಿ ಬಿಂತ್ರವಳ್ಳಿ ಸರ್ವೆ ನಂಬರ್ 90 ಮತ್ತು 92 ರ ದಕ್ಷಿಣ ದಿಕ್ಕಿನ ಕೂಡುಬಾಂದಿನಿಂದ 124^0 ಕೋನ 5-30 ಸರಪಳಿ ದೂರದಲ್ಲಿ ಸ್ಥಾನ ಸಂಖ್ಯೆ 33 ನ್ನು ಸೇರುತ್ತದೆ. ಮುಂದುವರೆದು ಸೀಮಾರೇಖೆಯು ಬಿಂತ್ರವಳ್ಳಿ ಸರ್ವೆ ನಂಬರ್ 81 ರಲ್ಲಿ ವಿವಿಧ ಕೋನಗಳಲ್ಲಿ **16-15** ಸರಪಳಿ ದೂರ ಚಲಿಸಿ ಸ್ಥಾನ ಸಂಖ್ಯೆ 34 ರ ಮುಖಾಂತರ ಪ್ರಾರಂಭಿಕ ಸ್ಥಾನ ಸಂಖ್ಯೆ 1ನ್ನು ಸೇರುತ್ತದೆ.

ಪಶ್ಚಿಮದಲ್ಲಿ ಸೀಮಾರೇಖೆಯು ಈ ಕೆಳಗಿನಂತೆ ಚಲಿಸುತ್ತದೆ;

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು=ಇಪ್ಪತ್ತು ಮೀಟರ್‌ಗಳು **ಸರಪಳಿ-ಕೊಂಡಿಗಳು**
24	25	308^0	6-65
25	26	354^0	4-30
26	27	003^0	4-65
27	28	126^0	4-55
28	29	076^0	6-55
			26-70

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು=ಇಪ್ಪತ್ತು ಮೀಟರ್‌ಗಳು **ಸರಪಳಿ–ಕೊಂಡಿಗಳು**
29	30	027^0	3–10
30	31	001^0	9–00
31	32	057^0	9–80
32	33	029^0	4–10
			26–00
33	34	057^0	12–30
34	1	011^0	3–85
			16–15

ಬಿಂತ್ರವಳ್ಳಿ ಬ್ಲಾಕ್–IV

ಸಂಕ್ಷಿಪ್ತ ಸರಹದ್ದುಗಳು ಈ ಕೆಳಗಿನಂತಿವೆ;

ಉತ್ತರ – ನಿಲಗುಳಿ–ಕೊಪ್ಪ ರಸ್ತೆ, ಬಿಂತ್ರವಳ್ಳಿ ಗ್ರಾಮದ ಸರ್ವೆ ನಂಬರ್ 188 ರ ಉಳಿಕೆ ಪ್ರದೇಶ.

ಪೂರ್ವ – ಬಿಂತ್ರವಳ್ಳಿ ಗ್ರಾಮದ ಸರ್ವೆ ನಂಬರ್ 188 ರ ಪೂರ್ವ ಗಡಿ.

ದಕ್ಷಿಣ – ಬಿಂತ್ರವಳ್ಳಿ ಗ್ರಾಮದ ಸರ್ವೆ ನಂಬರ್ 188 ರ ಉಳಿಕೆ ಪ್ರದೇಶ.

ಪಶ್ಚಿಮ – ನಿಲಗುಳಿ–ಕೊಪ್ಪ ರಸ್ತೆ.

ಸವಿವರವಾದ ಸರಹದ್ದು ವಿವರಣೆ

ಉತ್ತರ: ಸೀಮಾರೇಖೆಯು ಬಿಂತ್ರವಳ್ಳಿ ಗ್ರಾಮದ ಸರ್ವೆ ನಂಬರ್ 131 ರ ಆಗ್ನೇಯ ಬಾಂದಿನಿಂದ 132^0 ಕೋನ 7–20 ಸರಪಳಿ ದೂರದಲ್ಲಿ ನಿಲಗುಳಿ–ಕೊಪ್ಪ ರಸ್ತೆ ಬಲಬದಿಯಲ್ಲಿ ಸ್ಥಾನ ಸಂಖ್ಯೆ 1 ರಿಂದ ಪ್ರಾರಂಭವಾಗಿ ನಿಲಗುಳಿ–ಕೊಪ್ಪ ರಸ್ತೆಯ ಬಲಬದಿಯಲ್ಲಿಯೇ ಸರ್ವೆ ನಂಬರ್ 188 ರಲ್ಲಿ **17–50** ಸರಪಳಿ ದೂರ ಚಲಿಸಿ ಸೋಮ್ಲಾಪುರ ಮತ್ತು ಬಿಂತ್ರವಳ್ಳಿ ಗ್ರಾಮಗಳ ಸಾಮಾನ್ಯ ಗಡಿಯಲ್ಲಿರುವ ಬಿಂತ್ರವಳ್ಳಿ ಗ್ರಾಮದ ಸರ್ವೆ ನಂಬರ್ 3 ಮತ್ತು 85 ರ ಕೂಡುಬಾಂದಿನಿಂದ 354^0 ಕೋನ 11–00 ಸರಪಳಿ ದೂರದಲ್ಲಿ ಸರ್ವೆ ನಂಬರ್ 188 ಮತ್ತು 85 ರ ಸಾಮಾನ್ಯ ಗಡಿಯಲ್ಲಿ ಸ್ಥಾನ ಸಂಖ್ಯೆ 3 ನ್ನು ಸೇರುತ್ತದೆ.

ಉತ್ತರದಲ್ಲಿ ಸೀಮಾರೇಖೆಯು ಈ ಕೆಳಗಿನಂತೆ ಚಲಿಸುತ್ತದೆ;

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು=ಇಪ್ಪತ್ತು ಮೀಟರ್‌ಗಳು **ಸರಪಳಿ–ಕೊಂಡಿಗಳು**
1	2	ನಿಲಗುಳಿ–ಕೊಪ್ಪ ರಸ್ತೆಯ ಬಲಬದಿ	10–65
2	3	144^0	6–85
			17–50

ಪೂರ್ವ: ಸೀಮಾರೇಖೆಯು ಸ್ಥಾನ ಸಂಖ್ಯೆ 3 ರಿಂದ ಮುಂದುವರೆದು ಬಿಂತ್ರವಳ್ಳಿ ಸರ್ವೆ ನಂಬರ್ 188 ಮತ್ತು ಸರ್ವೆ ನಂಬರ್ 85 ರ ಸಾಮಾನ್ಯ ಗಡಿಯಲ್ಲಿ ದಕ್ಷಿಣಾಭಿಮುಖವಾಗಿ **11–70** ಸರಪಳಿ ದೂರ ಚಲಿಸಿ ಸೋಮ್ಲಾಪುರ ಮತ್ತು ಬಿಂತ್ರವಳ್ಳಿ ಗ್ರಾಮಗಳ ಸಾಮಾನ್ಯ ಗಡಿಯಲ್ಲಿರುವ ಬಿಂತ್ರವಳ್ಳಿ ಸರ್ವೆ ನಂಬರ್ 3 ಮತ್ತು 85ರ ಕೂಡುಬಾಂದಿನಿಂದ 276^0 ಕೋನ 4–25 ಸರಪಳಿ ದೂರದಲ್ಲಿ ಸೋಮ್ಲಾಪುರ ಮತ್ತು ಬಿಂತ್ರವಳ್ಳಿ ಗ್ರಾಮಗಳ ಸಾಮಾನ್ಯ ಗಡಿಯಲ್ಲಿರುವ ಸ್ಥಾನ ಸಂಖ್ಯೆ 4 ನ್ನು ಸೇರುತ್ತದೆ.

ಪೂರ್ವದಲ್ಲಿ ಸೀಮಾರೇಖೆಯು ಈ ಕೆಳಗಿನಂತೆ ಚಲಿಸುತ್ತದೆ;

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು=ಇಪ್ಪತ್ತು ಮೀಟರ್‌ಗಳು **ಸರಪಳಿ–ಕೊಂಡಿಗಳು**
3	4	ಬಿಂತ್ರವಳ್ಳಿ ಸರ್ವೆ ನಂಬರ್ 188 ಮತ್ತು 85 ರ ಸಾಮಾನ್ಯ ಗಡಿ	11–70
			11–70

ದಕ್ಷಿಣ: ಸೀಮಾರೇಖೆಯು ಸ್ಥಾನ ಸಂಖ್ಯೆ 4 ರಿಂದ ಮುಂದುವರೆದು ಬಿಂತ್ರವಳ್ಳಿ ಸರ್ವೆ ನಂಬರ್ 188 ರಲ್ಲಿ ವಾಯುವ್ಯಾಭಿಮುಖವಾಗಿ **18-00** ಸರಪಳಿ ದೂರ ಚಲಿಸಿ ಬಿಂತ್ರವಳ್ಳಿ ಸರ್ವೆ ನಂಬರ್ 131 ರ ಆಗ್ನೇಯ ಬಾಂದಿನಿಂದ 196^0 ಕೋನ 9-80 ಸರಪಳಿ ದೂರದಲ್ಲಿ ಸ್ಥಾನ ಸಂಖ್ಯೆ 5 ನ್ನು ನಿಲಗುಳಿ-ಕೊಪ್ಪ ರಸ್ತೆಯ ಬಲಬದಿಯಲ್ಲಿ ಸೇರುತ್ತದೆ.

ದಕ್ಷಿಣದಲ್ಲಿ ಸೀಮಾರೇಖೆಯು ಈ ಕೆಳಗಿನಂತೆ ಚಲಿಸುತ್ತದೆ.

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು =ಇಪ್ಪತ್ತು ಮೀಟರ್‌ಗಳು **ಸರಪಳಿ-ಕೊಂಡಿಗಳು**
4	5	290^0	18-00
			18-00

ಪಶ್ಚಿಮ: ಸೀಮಾರೇಖೆಯು ಸ್ಥಾನ ಸಂಖ್ಯೆ 5 ರಿಂದ ಮುಂದುವರೆದು ನಿಲುಗುಳಿ-ಕೊಪ್ಪ ರಸ್ತೆಯ ಬಲ ಬದಿಯಲ್ಲಿ (ಸರ್ವೆ ನಂಬರ್ 188 ರಲ್ಲಿ) **5-70** ಸರಪಳಿ ಚಲಿಸಿ ಸ್ಥಾನ ಸಂಖ್ಯೆ 6 ನ್ನು ಸೇರುತ್ತದೆ. ಮುಂದುವರೆದು ಸೀಮಾರೇಖೆಯು ಬಿಂತ್ರವಳ್ಳಿ ಸರ್ವೆ ನಂಬರ್ 188 ರಲ್ಲಿ ವಿವಿಧ ಕೋನಗಳಲ್ಲಿ **8-30** ಸರಪಳಿ ಚಲಿಸಿ ಸ್ಥಾನ ಸಂಖ್ಯೆ 8 ರ ಮುಖಾಂತರ ಪ್ರಾರಂಭಿಕ ಸ್ಥಾನ ಸಂಖ್ಯೆ 1 ನ್ನು ಸೇರುತ್ತದೆ.

ಪಶ್ಚಿಮದಲ್ಲಿ ಸೀಮಾರೇಖೆಯು ಈ ಕೆಳಗಿನಂತೆ ಚಲಿಸುತ್ತದೆ;

ಸ್ಥಾನ ದಿಂದ	ಸ್ಥಾನಕ್ಕೆ	ಕೋನ ಡಿಗ್ರಿಗಳಲ್ಲಿ ಸೀಮಾರೇಖೆಯ, ಸ್ಥಾನ ಸಂಖ್ಯೆಯ ವಿವರಣೆ	ಅಂತರ ಸರಪಳಿಗಳಲ್ಲಿ ಒಂದು ಸರಪಳಿ= ಒಂದು ನೂರು ಕೊಂಡಿಗಳು =ಇಪ್ಪತ್ತು ಮೀಟರ್‌ಗಳು **ಸರಪಳಿ-ಕೊಂಡಿಗಳು**
5	6	**ನಿಲುಗುಳಿ-ಕೊಪ್ಪ ರಸ್ತೆಯ ಬಲಬದಿ**	5-70
			5-70
6	7	136	3-30
7	8	049	3-05
8	1	330	1-95
			8-30

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ಪಿ. ರಾಮಕೃಷ್ಣ

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪಿ.ಆರ್.504

ಅರಣ್ಯ, ಪರಿಸರ ಮತ್ತು ಜೀವಿ ಪರಿಸ್ಥಿತಿಶಾಸ್ತ್ರ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಅಪಜೀ 10 ಎಫ್‌ಎಎಫ್ 2011, ಬೆಂಗಳೂರು, ದಿನಾಂಕ:09.03.2011

ಸರ್ಕಾರಿ ಅಧಿಸೂಚನೆ ಸಂಖ್ಯೆ: ಅಪಜೀ 146 ಎಫ್‌ಎಎಫ್ 2009, ದಿನಾಂಕ:26.08.2010ರಲ್ಲಿ ಕರ್ನಾಟಕ ಅರಣ್ಯ ಕಾಯ್ದೆ 1963ರ (1964ನೇ ಇಸವಿಯ ಕಾಯ್ದೆ 5) ಕಲಂ 4 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕು, ಮುರುಗೋಡು ಹೋಬಳಿ, ಹಿರೇಬುದನೂರು ಗ್ರಾಮದ ಸರ್ಕಾರಿ ಜಮೀನುಗಳನ್ನು "ಮೀಸಲು ಅರಣ್ಯ" ಎಂದು ಘೋಷಿಸಿ, ಮೇಲ್ಕಂಡ ಕಾಯ್ದೆಯ ಕಲಂ 4 (1)(ಸಿ) ಪ್ರಕಾರ ಕರ್ನಾಟಕ ಸರ್ಕಾರವು ಉಪ ವಿಭಾಗಾಧಿಕಾರಿ, ಬೆಳಗಾಂ ಉಪ ವಿಭಾಗ ಇವರನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನಾಗಿ ನೇಮಿಸಲಾಗಿರುವುದನ್ನು ಮಾರ್ಪಡಿಸಿ ಉಪ ವಿಭಾಗಾಧಿಕಾರಿ, ಬೈಲಹೊಂಗಲ ಉಪವಿಭಾಗ, ಬೈಲಹೊಂಗಲ ಇವರನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.208

ಎಸ್. ರಾಜು

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿ ಪರಿಸ್ಥಿತಿಶಾಸ್ತ್ರ ಇಲಾಖೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 257 ಪಿಐಎಂ 2010, ಬೆಂಗಳೂರು, ದಿನಾಂಕ:07.03.2011

ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 491 ಪಿಐಎಂ 2008, ದಿನಾಂಕ:01.03.2010ರಲ್ಲಿ ಶೇಕಡಾ 40 ರಷ್ಟು ಮೊತ್ತದ ಆಯುರ್ವೇದ ಮತ್ತು ಯುನಾನಿ ಔಷಧಿಗಳನ್ನು ಕರ್ನಾಟಕ ನಾಗರೀಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ನಿಯಮ 4(ಜಿ) ಪ್ರಕಾರ ವಿನಾಯಿತಿ ಪಡೆದಿರುವ ಕೇಂದ್ರ ಸ್ವಾಮ್ಯದ IMPCL ಕಂಪೆನಿಯಿಂದ 2009-10ನೇ ಸಾಲಿಗೆ ಮಾತ್ರ ಅನ್ವಯವಾಗುವಂತೆ ಖರೀದಿಸುವುದಕ್ಕೆ ಅನುಮತಿ ನೀಡಿರುವುದನ್ನು 2010-11ನೇ ಸಾಲಿಗೆ ಮಾತ್ರ ನವೀಕರಿಸಿದೆ.

ನಿರ್ದೇಶಕರು, ಆಯುಷ್ ಇಲಾಖೆ, ಜಿಲ್ಲಾ ಆಯುಷ್ ಅಧಿಕಾರಿಗಳು ಮತ್ತು ಸರ್ಕಾರಿ ಆಯುಷ್ ಕಾಲೇಜುಗಳ ಪ್ರಾಚಾರ್ಯರನ್ನು ಕರ್ನಾಟಕ ನಾಗರೀಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ನಿಯಮ 2(ಡಿ) ರನ್ವಯ ಈ ಉದ್ದೇಶಕ್ಕಾಗಿ 2010-11ನೇ ಸಾಲಿಗೆ ಮಾತ್ರ "Procurement Entity" ಎಂದು ಘೋಷಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ಇಟಗಿ

ಪಿ.ಆರ್.209

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

LAW, JUSTICE AND HUMAN RIGHTS SECRETARIAT

NOTIFICATION-II

No.LAW 15 LCE 2010, Bangalore, Dated:11.03.2011

In exercise of the powers conferred by proviso to sub-section (1) and sub-section (3) of section 11 of the Code of Criminal Procedure, 1973 (Central Act 2 of 1974) the Government of Karnataka, in consultation with the High Court of Karnataka, hereby establishes, with effect from the date, the Presiding Officer assumes charge of the post, a Court of Senior Civil Judge and Judicial Magistrate First Class at Hungund in Bagalkot District.

By Order and in the name of the Governor of Karnataka,

SYED ABDUL NAZEER

PR-210

Under Secretary to Government (Admn-1),

Law, Justice and Human Rights Department.

LAW, JUSTICE AND HUMAN RIGHTS SECRETARIAT

NOTIFICATION-III

No.LAW 15 LCE 2010, Bangalore, Dated:11.03.2011

In exercise of the powers conferred by sub-section (1) of section 13 of Karnataka Civil Courts Act, 1964 (Karnataka Act 21 of 1964) and in partial modification of the notifications issued earlier in this behalf, the Government of Karnataka, in consultation with the High Court of Karnataka, hereby establishes, with effect from the date, the Presiding Officer assumes the charge of the post of Senior Civil Judge, Hungund, the local limits of the jurisdiction of the Court Senior Civil Judge and Judicial Magistrate First Class at Badami by excluding the revenue taluk of Hungund from the jurisdiction of the said Court.

By Order and in the name of the Governor of Karnataka,

SYED ABDUL NAZEER

PR-211

Under Secretary to Government (Admn-1),

Law, Justice and Human Rights Department.

TRANSPORT SECRETARIAT

CORRIGENDUM

No.SARIE 196 SAEPA 2008, Bangalore, Dated:09.03.2011

"The Karnataka Motor Vehicles taxation (Amendment) Rules-2008" appearing in the Notification No.TRD 196 SAEPA 2008, Dated:26.10.2010. shall be read as "Karnataka Motor Vehicles Taxation Amendment Rules-2010".

By Order and in the name of the Governor of Karnataka,

T.N. NARASHIMHARAJ

PR-213

Desk Officer, (I/c), Transport Department.

KA / :G-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಜೂನ್ ೧೬, ೨೦೧೧ (ಜ್ಯೇಷ್ಠ ೨೬, ಶಕ ವರ್ಷ ೧೯೩೩)	ಸಂಚಿಕೆ ೨೪

ಭಾಗ – ೩

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560 001

ಅಧಿಸೂಚನೆ

ಸಂಖ್ಯೆ: ಪಿಎಸ್‌ಸಿ 1 ಆರ್‌ಟಿ(4)ಬಿ–1/2011, ದಿನಾಂಕ: 06–06–2011

ಭಾಗ–ಎ

1. ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಹಾಗೂ ಆಯ್ಕೆ) (ಸಾಮಾನ್ಯ) ನಿಯಮಗಳು 2006 ರನ್ವಯ ಈ ಕೆಳಕಂಡ ತಾಂತ್ರಿಕೇತರ ಹುದ್ದೆಗಳನ್ನು

ಇಲಾಖೆಯ ಹೆಸರು ಮತ್ತು ಪದನಾಮ	ಹುದ್ದೆಗಳ ಸಂಖ್ಯೆ
ಗ್ರೂಪ್– ' ಬಿ ' ಹುದ್ದೆಗಳು	
1) ಸಾರಿಗೆ ಇಲಾಖೆಯಲ್ಲಿ ಸಹಾಯಕ ಕಾನೂನು ಅಧಿಕಾರಿ	02
ಗ್ರೂಪ್– ' ಸಿ ' ಹುದ್ದೆಗಳು	
2) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಪರಿವೀಕ್ಷಣಾಧಿಕಾರಿ ದರ್ಜೆ–2	54
3) ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿ, ಕಾನೂನು ಮಾಪನಶಾಸ್ತ್ರ ನಿರೀಕ್ಷಕರು.	15
4) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿ ಸಾಂಖ್ಯಿಕ ನಿರೀಕ್ಷಕರು	225
5) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ನಿಲಯ ಮೇಲ್ವಿಚಾರಕರು(ಪುರುಷ)	64
6) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ನಿಲಯ ಮೇಲ್ವಿಚಾರಕರು(ಮಹಿಳೆ)	196
7) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿ ಗಣತಿದಾರರು	30
8) ಕರ್ನಾಟಕ ಸರ್ಕಾರದ ಸಚಿವಾಲಯದ ಗ್ರಂಥಾಲಯದಲ್ಲಿ ಗ್ರಂಥಾಲಯ ಸಹಾಯಕರು	06

ಭಾಗ–ಬಿ

ಹಾಗೂ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು(ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ತುಂಬದೇ ಇರುವ ಸ್ಥಾನಗಳು) (ವಿಶೇಷ ನೇಮಕಾತಿ) ನಿಯಮಗಳು 2001ರಡಿಯಲ್ಲಿ ಈ ಕೆಳಕಂಡ ಬ್ಯಾಕ್‌ಲಾಗ್ ಹುದ್ದೆಗಳನ್ನು

ಇಲಾಖೆಯ ಹೆಸರು ಮತ್ತು ಪದನಾಮ	ಹುದ್ದೆಗಳ ಸಂಖ್ಯೆ
ಗ್ರೂಪ್– ' ಬಿ ' ಹುದ್ದೆಗಳು	
1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಹಾಯಕ ಶಸ್ತ್ರ ಚಿಕಿತ್ಸಕರು (ಅರವಳಿಕೆ ತಜ್ಞರು)	01
2) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ತಮಿಳು ಉಪನ್ಯಾಸಕರು	04
3) ಬಂದರು, ಒಳನಾಡು ಮತ್ತು ಜಲಸಾರಿಗೆ ಇಲಾಖೆಯಲ್ಲಿ ಕಿರಿಯ ಜಲಮೋಜಣೆದಾರರು	02

ಭರ್ತಿ ಮಾಡಲು ಅರ್ಜಿ ಅಭ್ಯರ್ಥಿಗಳಿಂದ ಆಯೋಗವು ONLINE ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

ಅಭ್ಯರ್ಥಿಗಳು ದಿನಾಂಕ: 10-06-2011ರಿಂದ ಆನ್-ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

2. ಅಭ್ಯರ್ಥಿಗಳು ON LINE ಮೂಲಕ ಅರ್ಜಿಗಳನ್ನು ಭರ್ತಿ ಮಾಡಬೇಕು ಹಾಗೂ ಅರ್ಜಿಯನ್ನು ಭರ್ತಿ ಮಾಡುವ ಬಗ್ಗೆ ಸೂಚನೆಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಬಿತ್ತರಿಸಲಾಗಿದೆ. ಅರ್ಜಿ ಭರ್ತಿ ಮಾಡುವ ಮುನ್ನ ಅವರ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಹಾಗೂ ಅವರ ಸಹಿಯನ್ನು ಸ್ಕ್ಯಾನ್ ಮಾಡಿ UPLOAD ಮಾಡಲು ಸಿದ್ಧವಾಗಿಟ್ಟುಕೊಂಡಿರಬೇಕು. ನಂತರ ಆಯೊಗದ ವೆಬ್ ಸೈಟ್ " http://kpsc.kar.nic.in/ HOME PAGE " ನಲ್ಲಿ " ON LINE APPLICATION " ಅನ್ನು ಕ್ಲಿಕ್ ಮಾಡಿ ಅರ್ಜಿಯನ್ನು ಭರ್ತಿ ಮಾಡಿ ನಂತರ ಶುಲ್ಕವನ್ನು (ಭಾಗ 'ಬಿ'ನಲ್ಲಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಹೊರತುಪಡಿಸಿ) ಕರ್ನಾಟಕದ ಯಾವುದೇ ಸಿಂಡಿಕೇಟ್ ಬ್ಯಾಂಕಿನ ಶಾಖೆಗಳಲ್ಲಿ ಈ ಸಂಬಂಧ ಮುದ್ರಿತವಾಗುವ ಚಲನ್(ತ್ರಿ ಪ್ರತಿಯಲ್ಲಿ) ಅನ್ನು ಡೌನ್‌ಲೋಡ್ ಮಾಡಿಕೊಂಡು ಶುಲ್ಕ ಪಾವತಿ ಅಥವಾ ಯಾವುದೇ ಎನ್.ಇ.ಎಫ್.ಟಿ. (N.E.F.T) ಸೌಲಭ್ಯವುಳ್ಳ ಇತರೆ ಬ್ಯಾಂಕಿನ ಶಾಖೆಗಳಲ್ಲಿ(ಸಹಕಾರಿ ಬ್ಯಾಂಕ್‌ಗಳನ್ನು ಹೊರತುಪಡಿಸಿ) ಈ ಸಂಬಂಧ ಮುದ್ರಿತವಾಗುವ ಚಲನ್(ದ್ವಿ ಪ್ರತಿಯಲ್ಲಿ) ಅನ್ನು ಡೌನ್‌ಲೋಡ್ ಮಾಡಿಕೊಂಡು ಶುಲ್ಕ ಪಾವತಿಸಬಹುದು.

*ಎನ್.ಇ.ಎಫ್.ಟಿ(NEFT) ಅಂದರೆ ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್. ಈ ಸೌಲಭ್ಯವುಳ್ಳ ಯಾವುದೇ ಬ್ಯಾಂಕ್‌ನಿಂದ ಹಣವನ್ನು ಇತರೆ ಬ್ಯಾಂಕ್/ವ್ಯಕ್ತಿ/ಸಂಸ್ಥೆಗೆ ವರ್ಗಾಯಿಸಬಹುದು. ಆದ್ದರಿಂದ ಅಭ್ಯರ್ಥಿಗಳು ಅವರಿಗೆ ಅನುಕೂಲವಾಗುವಂತೆ ಯಾವುದೇ ಎನ್.ಇ.ಎಫ್.ಟಿ(NEFT) ಸೌಲಭ್ಯವುಳ್ಳ ಬ್ಯಾಂಕ್‌ನಲ್ಲಿ ಈ ಸಂಬಂಧ ಮುದ್ರಿತವಾಗುವ ಚಲನ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಶುಲ್ಕವನ್ನು ಪಾವತಿಸಿ ಅವರ ಚಲನ್ ಪ್ರತಿಯನ್ನು ಇಟ್ಟುಕೊಳ್ಳಬಹುದು. ಈ ಸೌಲಭ್ಯಕ್ಕಾಗಿ ಅಭ್ಯರ್ಥಿಯು ₹.6/-ರ ಸೇವಾ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಈ ಸೇವಾ ಶುಲ್ಕವು, ಶುಲ್ಕದೊಂದಿಗೆ ಸೇರಿಸಿ ಚಲನ್‌ನಲ್ಲಿ ಮುದ್ರಿತವಾಗಿರುತ್ತದೆ.

- ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 10-06-2011.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 11-07-2011.
- ಪರೀಕ್ಷಾ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 12-07-2011.

ವಿಶೇಷ ಸೂಚನೆ: On-line ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Help line)08202570570, 08202574827, 080-30574957, 30574901, 30574931, 30574940, 30574959,30574910 ಅನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಮ್ಮೆ ಪರೀಕ್ಷಾ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ. ಅಥವಾ ಅದನ್ನು ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

ಟಿಪ್ಪಣಿ: ಅನುಸೂಚಿಯಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ, ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಭರ್ತಿ ಮಾಡಿ ಶುಲ್ಕವನ್ನು ಪಾವತಿಸತಕ್ಕದ್ದು.

ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವ ಮೊದಲು ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕದ್ದು.

ಹಂತ-1

ಇತ್ತೀಚಿನ ಭಾವಚಿತ್ರವನ್ನು ಒಂದು ಬಿಳಿ ಹಾಳೆಯ ಮೇಲಿಟ್ಟು ಇದರ ಕೆಳಗೆ ಕಪ್ಪು ಸ್ಕೆಚ್/ ಮಾರ್ಕರ್ ಪೆನ್‌ನಲ್ಲಿ ನಿಮ್ಮ ಸಹಿಯನ್ನು ಮಾಡಿ, ನಿಮ್ಮ ಸಹಿಯು ಭಾವಚಿತ್ರದ ಕೆಳಗೆ ಇರುವ ಬಗ್ಗೆ ಖಚಿತಪಡಿಸಿಕೊಳ್ಳಿ. ಈ ಕೆಳಗೆ ನಮೂದಿಸಿರುವ ತಾಂತ್ರಿಕ ವಿಶಿಷ್ಟತೆಗಳಂತೆ ನಿಮ್ಮ ಭಾವಚಿತ್ರ ಹಾಗೂ ಸಹಿಯನ್ನು ಸ್ಕ್ಯಾನ್ ಮಾಡಿ.

ಕಡತದ ಗಾತ್ರ < 100 KB

ಡಿಪಿಐ ಸೆಟ್ಟಿಂಗ್=100 ಡಿಪಿಐ

ಪ್ರತಿಬಿಂಬದ ಅಳತೆ=100%

ನಿಜ ಬಣ್ಣ

ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದ ಪರಿಮಾಣ ಮತ್ತು ತಾಂತ್ರಿಕ ವಿಶಿಷ್ಟತೆಗಳು:-

45 ಎಂಎಂ(ಎತ್ತರ) X 35 ಎಂಎಂ(ಅಗಲ)

ಸಹಿಯ ಪರಿಮಾಣ

20 ಎಂಎಂ(ಎತ್ತರ) X 35 ಎಂಎಂ(ಅಗಲ)

ನಂತರ ಅಭ್ಯರ್ಥಿಗಳು ಆನ್-ಲೈನ್ (On-line)ನಲ್ಲಿ ಅರ್ಜಿ ಭರ್ತಿ ಮಾಡಲು ಆಯೋಗದ ವೆಬ್‌ಸೈಟ್ "http://kpsc.kar.nic.in" ನ Home page' ನಲ್ಲಿ On-line Application for Non-Technical Posts/ On-line Application for Back-Log Posts ಮೇಲೆ ಕ್ಲಿಕ್ ಮಾಡಿದ ನಂತರ ಪರದೆಯಲ್ಲಿ ಪ್ರಕಟವಾಗುವ ಹುದ್ದೆಗಳಿಂದ ಅರ್ಜಿ ಸಲ್ಲಿಸುವ ಹುದ್ದೆಯನ್ನು ಆಯ್ಕೆಮಾಡಿಕೊಳ್ಳಬೇಕು. ಹುದ್ದೆಯನ್ನು ಆಯ್ಕೆಕೊಂಡ ನಂತರ ಹುದ್ದೆಗೆ

ಸ್ಕ್ಯಾನ್ ಮಾಡಿದ ವಿದ್ಯಾರ್ಹತೆಯು ಪಾವ್ಯದಲ್ಲಿ ಪ್ರಕಟವಾಗುತ್ತದೆ. ಈ ವಿದ್ಯಾರ್ಹತೆ ಹೊಂದಿರುವ ಬಗ್ಗೆ ಖಚಿತಪಡಿಸಿಕೊಂಡು, ಅಗತ್ಯ ವಿವರಗಳನ್ನು ಭರ್ತಿ ಮಾಡಿ, ಸ್ಕ್ಯಾನ್ ಮಾಡಿರುವ ಭಾವಚಿತ್ರವನ್ನೂ Upload ಮಾಡಬೇಕು. ಪರದೆಯಲ್ಲಿ ನಿಮ್ಮ ಹೆಸರು, ಜನ್ಮ ದಿನಾಂಕ, ಲಿಂಗ, ನಿಮ್ಮ ಅರ್ಜಿಸಂಖ್ಯೆ, ಅರ್ಜಿಯ ಶುಲ್ಕ ಹಾಗೂ Password ಪ್ರಕಟವಾಗುತ್ತದೆ. ಈ ಮಾಹಿತಿಯನ್ನು ಬರೆದಿಟ್ಟುಕೊಂಡು ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡ ನಂತರ ಅರ್ಜಿಯನ್ನು ಭರ್ತಿ ಮಾಡುವುದು.

ಅಭ್ಯರ್ಥಿಗಳಿಗೆ ಅರ್ಜಿ ಭರ್ತಿ ಮಾಡುವ ಸಮಯದಲ್ಲಿ ವಿದ್ಯುತ್ ಕಡಿತಗೊಂಡಲ್ಲಿ ಅಥವಾ ಸರ್ವರ್‌ನಲ್ಲಿ ಏನಾದರೂ ತೊಂದರೆಗಳು ಉಂಟಾದಲ್ಲಿ ಮತ್ತೆ ಅರ್ಜಿ ಭರ್ತಿ ಮಾಡುವ ಕಾರ್ಯವನ್ನು ಮುಂದುವರೆಸಲು ಅವಕಾಶ ಕಲ್ಪಿಸುವುದೇ Password ನೀಡುವ ಉದ್ದೇಶವಾಗಿದೆ.

ಹಂತ–2

On-line ನಲ್ಲಿ ಅರ್ಜಿಯನ್ನು ಭರ್ತಿ ಮಾಡಿದ ನಂತರ Save and Continue ಬಟನ್ ಮೇಲೆ ಕ್ಲಿಕ್ ಮಾಡಿದ ಕೂಡಲೇ ಅಭ್ಯರ್ಥಿಯು ಅರ್ಜಿಯಲ್ಲಿ ಭರ್ತಿ ಮಾಡಿದ ಎಲ್ಲಾ ವಿವರಗಳು ಪರದೆಯ ಮೇಲೆ ಮೂಡುತ್ತವೆ. ಪರದೆಯ ಮೇಲೆ ಮೂಡಿದ ಕೂಡಲೇ ಎಲ್ಲಾ ವಿವರಗಳನ್ನು ಮತ್ತೊಮ್ಮೆ ಪರಿಶೀಲಿಸಿ, ಏನಾದರೂ ತಪ್ಪುಗಳಾಗಿದ್ದಲ್ಲಿ ಅದನ್ನು ಸರಿಪಡಿಸಲು edit ಮೇಲೆ ಕ್ಲಿಕ್ ಮಾಡಿ ನಂತರ ಅಗತ್ಯ ತಿದ್ದುಪಡಿಗಳನ್ನು ಮಾಡಬಹುದು. ಆನಂತರ ಅರ್ಜಿಯಲ್ಲಿ ಭರ್ತಿ ಮಾಡಿರುವ ಎಲ್ಲಾ ವಿವರಗಳು ಸರಿಯಾಗಿರುತ್ತವೆಯೆಂದು ಮನದಟ್ಟು ಮಾಡಿಕೊಂಡು, ನಂತರ Submit ಕ್ಲಿಕ್ ಮಾಡಿದಲ್ಲಿ ಶುಲ್ಕ ಪಾವತಿಸುವ ಆಯ್ಕೆಗಳು ಪ್ರಕಟವಾಗುತ್ತವೆ. ಸಿಂಡಿಕೇಟ್ ಬ್ಯಾಂಕ್‌ಗಳಲ್ಲಿ ಶುಲ್ಕ ಪಾವತಿಸಲು ಅಥವಾ ಎನ್.ಇ.ಎಫ್.ಟಿ. ಮೂಲಕ ಇತರೆ ಬ್ಯಾಂಕ್‌ಗಳಲ್ಲಿ ಶುಲ್ಕ ಪಾವತಿಸಲು (ಬ್ಯಾಕ್ ಲಾಗ್ ಹುದ್ದೆಗಳನ್ನು ಹೊರತುಪಡಿಸಿ) ಚಲನ್ Print ಆಗುತ್ತದೆ. ಈ ಚಲನ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ನಂತರ Print Pre-view ಬಟನ್ ಅನ್ನು ಕ್ಲಿಕ್ ಮಾಡಿ ನೀವು ಭರ್ತಿ ಮಾಡಿರುವ ಅರ್ಜಿಯ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ನಂತರ ಸಂಬಂಧಿತ ಬ್ಯಾಂಕ್‌ಗಳಲ್ಲಿ ಶುಲ್ಕ ಪಾವತಿಸತಕ್ಕದ್ದು. ಒಮ್ಮೆ Submit ಬಟನ್ ಅನ್ನು ಕ್ಲಿಕ್ ಮಾಡಿದ ನಂತರ ಅರ್ಜಿಯಲ್ಲಿ ಯಾವುದೇ ತಿದ್ದುಪಡಿಗಳನ್ನು ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಅಭ್ಯರ್ಥಿಗಳು ಜಾಗರೂಕತೆಯಿಂದ ಅವರು ಭರ್ತಿ ಮಾಡಿರುವ ವಿವರಗಳನ್ನು ಪರಿಶೀಲಿಸಿದ ನಂತರವೇ Submit ಬಟನ್ ಅನ್ನು ಕ್ಲಿಕ್ ಮಾಡತಕ್ಕದ್ದು.

ನೀವು Password ಇರುವ ಪುಟದ ಪ್ರತಿಯನ್ನು, ಭರ್ತಿ ಮಾಡಿರುವ ಅರ್ಜಿಯ ಡೌನ್‌ಲೋಡೆಡ್ ಪ್ರತಿಯನ್ನು ಹಾಗೂ ಶುಲ್ಕ ಪಾವತಿಸಿದ ನಿಮ್ಮ ಪ್ರತಿಯ ಚಲನ್ ಅನ್ನು ಸ್ವೀಕೃತಿಯಂತೆ (ಬ್ಯಾಕ್‌ಲಾಗ್ ಹುದ್ದೆಗಳಿಗೆ Password ಇರುವ ಪುಟದ ಪ್ರತಿ ಹಾಗೂ ಭರ್ತಿ ಮಾಡಿರುವ ಅರ್ಜಿಯ ಡೌನ್‌ಲೋಡೆಡ್ ಪ್ರತಿ ಮಾತ್ರ) ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ಜಾಗರೂಕತೆಯಿಂದ ನಿಮ್ಮಲ್ಲಿ ಇಟ್ಟುಕೊಳ್ಳತಕ್ಕದ್ದು.

ನಿಮ್ಮ ಅರ್ಜಿಯ ಸ್ವೀಕೃತಿ ಬಗ್ಗೆ ಖಚಿತಪಡಿಸಿಕೊಳ್ಳಬೇಕಾದಲ್ಲಿ ಶುಲ್ಕ ಪಾವತಿಸಿದ 2 ದಿನಗಳ ನಂತರ (ತಾಂತ್ರಿಕೇತರ ಹುದ್ದೆಗಳಿಗೆ) ಆಯೋಗದ Home page ನಲ್ಲಿ On-line Application for Non-Technical Posts/ On-line Application for Back-Log Post ಮೇಲೆ ಕ್ಲಿಕ್ ಮಾಡಿ, ನಿಮಗೆ ನೀಡಲಾದ Password ಅನ್ನು ನೀಡಿ Status ಬಟನ್ ಅನ್ನು ಕ್ಲಿಕ್ ಮಾಡಿದಲ್ಲಿ ನಿಮ್ಮ ಅರ್ಜಿಯ ಸ್ವೀಕೃತಿ ಬಗ್ಗೆ ಖಚಿತಪಡಿಸಿಕೊಳ್ಳಬಹುದು.

3.ಶುಲ್ಕ, ಶುಲ್ಕ ಪಾವತಿಸಬೇಕಾದ ವಿಧಾನ ಹಾಗೂ ಸ್ಥಳದ ವಿವರ:–

ಸಾಮಾನ್ಯ ಅರ್ಹತೆ, ಪ್ರವರ್ಗ 2(ಎ), 2(ಬಿ), 3(ಎ), 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ	ರೂ.300/–
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಅಂಗವಿಕಲ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ	ರೂ.25/–

3.1 ದಿನಾಂಕ: 10–06–2011 ರಿಂದ ಅರ್ಜಿಗಳನ್ನು ON LINE ಮೂಲಕ ಭರ್ತಿ ಮಾಡಿ ಶುಲ್ಕವನ್ನು ಕೆಳಕಂಡಂತೆ ಪಾವತಿಸಬಹುದು. ಈ ಕೆಳಗೆ ನಿಗದಿಪಡಿಸಿದ ಯಾವುದಾದರು ಒಂದು ಮಾದರಿಯಲ್ಲಿ ಮಾತ್ರ ಶುಲ್ಕವನ್ನು ಪಾವತಿಸತಕ್ಕದ್ದು. ಇವುಗಳನ್ನು ಹೊರತುಪಡಿಸಿ ಇತರೇ ಸಹಕಾರಿ ಬ್ಯಾಂಕ್ / ಬ್ಯಾಂಕಿನ ಶಾಖೆಗಳಲ್ಲಿ ಶುಲ್ಕ ಸಂದಾಯ ಮಾಡಿದ್ದಲ್ಲಿ ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

(ಅ) ಯಾವುದೇ ಸಿಂಡಿಕೇಟ್ ಬ್ಯಾಂಕಿನ ಶಾಖೆಗಳಲ್ಲಿ ಚಲನ್ ನೀಡಿ ಹಣ ಪಾವತಿಸಬಹುದು.

(ಆ) ಯಾವುದೇ ಇತರೇ ಬ್ಯಾಂಕಿನ ಶಾಖೆಗಳಲ್ಲಿ (ಸಹಕಾರಿ ಬ್ಯಾಂಕ್‌ಗಳನ್ನು ಹೊರತುಪಡಿಸಿ) ಎನ್.ಇ.ಎಫ್.ಟಿ. ಚಲನ್ ನೀಡಿ ಹಣ ಪಾವತಿಸಬಹುದು.

ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಭರ್ತಿ ಮಾಡಿದ ನಂತರ ಎಲ್ಲಾ ವಿವರಗಳು ಕ್ರಮಬದ್ಧವಾಗಿವೆಯೇ ಎಂದು ಖಚಿತಪಡಿಸಿಕೊಂಡು ಅರ್ಜಿಯ ಪ್ರತಿ(Preview)ಯನ್ನು ಡೌನ್ ಲೋಡ್ ಮಾಡಿಕೊಂಡು ಶುಲ್ಕ ಪಾವತಿ ಮಾಡುವ ಮಾದರಿಯನ್ನು ಆಯ್ದುಕೊಳ್ಳಬೇಕು. ಅವರು ಆಯ್ದುಕೊಂಡ ಮಾದರಿಯ ಅನುಸಾರ ಚಲನ್ (ತ್ರಿ ಪ್ರತಿಯಲ್ಲಿ) ಪರದೆಯ ಮೇಲೆ ಪ್ರಕಟಗೊಳ್ಳುವುದು. ಈ ಚಲನ್‌ನ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿಪಡಿಸಿದ ಬ್ಯಾಂಕ್‌ಗಳಲ್ಲಿ ಶುಲ್ಕವನ್ನು ಪಾವತಿಸಿ ಅಭ್ಯರ್ಥಿಯ ಪ್ರತಿಯನ್ನು ಸ್ವೀಕೃತಿಯಂತೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಭದ್ರವಾಗಿ ಇಟ್ಟುಕೊಳ್ಳುವುದು.

4. ಅರ್ಹತಾ ಷರತ್ತುಗಳು:–

ಅ) ಭಾರತೀಯ ನಾಗರೀಕನಾಗಿರತಕ್ಕದ್ದು.

ಆ) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.

ಇ) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

ಈ) ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ರಾಜ್ಯ ಸರ್ಕಾರವು ಕಾದಿರಿಸಿಕೊಂಡಿದೆ ಮತ್ತು ಸರ್ಕಾರದ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.

ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

5. ತಾಂತ್ರಿಕೇತರ ಹುದ್ದೆಗಳ ನೇಮಕಾತಿ ವಿಧಾನ:–ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಸಂದರ್ಶನ ಮೂಲಕ ಆಯ್ಕೆ

ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006 ರಲ್ಲಿ ನಿರ್ದಿಷ್ಟಪಡಿಸಲಾದಂತೆ, ಆಯೋಗದಿಂದ ಅಧಿಸೂಚಿಸಲಾಗಿರುವ ಯಾವುದೇ ತಾಂತ್ರಿಕೇತರ ಹುದ್ದೆಗಳ ಸಂದರ್ಶನಕ್ಕೆ ಅರ್ಹರಾಗಲು ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ.ಯ ಕನ್ನಡ ಪ್ರಥಮ ಭಾಷೆಯ ಮಟ್ಟದ 150 ಅಂಕಗಳಿಗೆ ಪರೀಕ್ಷೆ ನಡೆಸಲಿದ್ದು, ಅದರಲ್ಲಿ ಕನಿಷ್ಠ 50 ಅಂಕಗಳೊಂದಿಗೆ ಕಡ್ಡಾಯವಾಗಿ ತೇರ್ಗಡೆ ಹೊಂದಲೇಬೇಕು. ನಿಗದಿಪಡಿಸಿದ ಕನಿಷ್ಠ 50 ಅಂಕಗಳನ್ನು ಪಡೆಯದ ಅಭ್ಯರ್ಥಿಗಳು ಸಂದರ್ಶನಕ್ಕೆ ಅರ್ಹರಾಗುವುದಿಲ್ಲ ಹಾಗೂ ಈ ಕನ್ನಡ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಯ್ಕೆಗೆ ಪರಿಗಣಿಸುವುದಿಲ್ಲ.

ಆದರೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯ ವಿನಾಯಿತಿ ಬಗ್ಗೆ ಕೆಳಕಂಡ ಷರತ್ತುಗಳನ್ನು ಸೇರ್ಪಡಿಸಲಾಗಿರುತ್ತದೆ.

"ಎಸ್.ಎಸ್.ಎಲ್.ಸಿ. ಅಥವಾ ಇದಕ್ಕೆ ತತ್ಸಮಾನವೆಂದು ರಾಜ್ಯ ಸರ್ಕಾರದಿಂದ ಘೋಷಿಸಲ್ಪಟ್ಟ ಇತರೆ ಯಾವುದೇ ಪರೀಕ್ಷೆಯಲ್ಲಿ ಅಥವಾ ಎಸ್.ಎಸ್.ಎಲ್.ಸಿ.ಪರೀಕ್ಷೆಗಿಂತ ಮೇಲ್ಮಟ್ಟದ ಯಾವುದೇ ಪರೀಕ್ಷೆಯಲ್ಲಿ ಕನ್ನಡವನ್ನು ಮುಖ್ಯ ಭಾಷೆಯಾಗಿ, ಅಥವಾ ದ್ವಿತೀಯ ಭಾಷೆಯಾಗಿ ಅಥವಾ ಐಚ್ಛಿಕ ವಿಷಯವಾಗಿ (ಆದರೆ ಸಂಯುಕ್ತ ಪತ್ರಿಕೆಯ ವಿಷಯಗಳಲ್ಲೊಂದಾಗಿರಬಾರದು) ಅಥವಾ ಮೇಲಿನ ಪರೀಕ್ಷೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ತೇರ್ಗಡೆಯಾಗಿರುವ ಅಥವಾ ಕರ್ನಾಟಕ ಲೋಕ ಸೇವಾ ಆಯೋಗದಿಂದ ಇದೇ ನಿಯಮಗಳಡಿಯಲ್ಲಿ ಈ ಹಿಂದೆ ನಡೆಸಲ್ಪಟ್ಟ ಕಡ್ಡಾಯ ಕನ್ನಡ ಭಾಷೆ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಅಭ್ಯರ್ಥಿಗಳು, ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದರಿಂದ ವಿನಾಯಿತಿ ಹೊಂದಿರುತ್ತಾರೆ".

ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಪಡೆಯಲು ಅರ್ಜಿಯ ನಿಗದಿತ ಸ್ಥಳದಲ್ಲಿ ವಿವರಗಳನ್ನು ನೀಡತಕ್ಕದ್ದು. ಸರಿಯಾದ ಮಾಹಿತಿ ಒದಗಿಸದಿದ್ದಲ್ಲಿ ಮೇಲಿನ ವಿನಾಯಿತಿಗಳನ್ನು ಪಡೆಯಲು ಅರ್ಹತೆ ನೀಡುವುದಿಲ್ಲ.

ವಿ.ಸೂ:– ಎಸ್.ಎಸ್.ಎಲ್.ಸಿ.ಯಲ್ಲಿ ಕನ್ನಡ ಭಾಷೆಯನ್ನು ತೃತೀಯ ಭಾಷೆಯನ್ನಾಗಿ ಅಭ್ಯಸಿಸಿರುವ ಅಭ್ಯರ್ಥಿಗಳಿಗೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಇರುವುದಿಲ್ಲ.

ಸ್ಪರ್ಧಾತ್ಮಕ ಪರೀಕ್ಷಾ ವಿಧಾನ : ಸ್ಪರ್ಧಾತ್ಮಕ ಪರೀಕ್ಷೆಯು ಕೆಳಕಂಡ ಎರಡು ಪತ್ರಿಕೆಗಳನ್ನೊಳಗೊಂಡಿದ್ದು

ವಸ್ತು ನಿಷ್ಠ ಬಹು ಆಯ್ಕೆ (Objective Multiple Choice) ಮಾದರಿಯದಾಗಿರುತ್ತದೆ.

ಪತ್ರಿಕೆ – 1 (ಸಾಮಾನ್ಯ ಪತ್ರಿಕೆ) (General Paper) 200 ಅಂಕಗಳು – 1½ ಘಂಟೆ

(ನಿಗದಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣನಾದ ಒಬ್ಬ ವ್ಯಕ್ತಿಯಿಂದ ನಿರೀಕ್ಷಿಸಬಹುದಾದ ಸಾಮಾನ್ಯಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳಾದ ಪ್ರಚಲಿತ ವಿದ್ಯಮಾನಗಳು, ಸಾಮಾನ್ಯ ವಿಜ್ಞಾನಗಳು, ಭಾರತದ ಇತಿಹಾಸ, ಭಾರತದ ಭೂಗೋಳ, ಸಮಾಜ ವಿಜ್ಞಾನ, ಪ್ರತಿ ದಿನ ಗಮನಿಸುವ ವಿಷಯಗಳು, ಪ್ರಯೋಗಿಕ ಜ್ಞಾನ ಮತ್ತು ಸಾಮಾನ್ಯ ಬೌದ್ಧಿಕ ಸಾಮರ್ಥ್ಯಗಳನ್ನು ಒಳಗೊಂಡಿರುವ ಸಾಮಾನ್ಯ ಪತ್ರಿಕೆ).

ಪತ್ರಿಕೆ – 2 (ನಿರ್ದಿಷ್ಟ ಪತ್ರಿಕೆ) (Specific Paper) – 200 ಅಂಕಗಳು – 2 ಘಂಟೆ

ಸೂಚನೆ– 1) ಕನ್ನಡ ಕಡ್ಡಾಯ ಭಾಷಾ ಪರೀಕ್ಷೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆ ಬಗ್ಗೆ ಪಠ್ಯಕ್ರಮವನ್ನು ಆಯೋಗದ ವೆಬ್ ಸೈಟ್ "http://kpsc.kar.nic.in/SYLLABUS " ನಲ್ಲಿ ಬಿತ್ತರಿಸಲಾಗಿದೆ.

ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲೂ ಇರುತ್ತದೆ. ಕನ್ನಡ ಭಾಷೆಯಲ್ಲಿರುವ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಅಸ್ಪಷ್ಟತೆ ಇದ್ದಲ್ಲಿ ಅಭ್ಯರ್ಥಿಗಳು ಆಂಗ್ಲ ಭಾಷೆಯಲ್ಲಿರುವ ಪ್ರಶ್ನೆಗಳನ್ನು ನೋಡುವುದು.

ಟಿಪ್ಪಣಿ:– ಪ್ರಶ್ನೆ ಪತ್ರಿಕೆ ಬಗ್ಗೆ ಯಾವುದೇ ಬಗೆಯ ಆಕ್ಷೇಪಣೆ ಇದ್ದಲ್ಲಿ, ಪರೀಕ್ಷಾ ಕೇಂದ್ರವನ್ನು ಬಿಡುವ ಮೊದಲು ಪರೀಕ್ಷಾ ದಿನವೇ ಸಂಬಂಧಿತ ಮೇಲ್ವಿಚಾರಕರ ಮುಖಾಂತರ ಅಭ್ಯರ್ಥಿಯ ಹೆಸರು, ವಿಳಾಸ, ನೋಂದಣಿ ಸಂಖ್ಯೆ ಇತ್ಯಾದಿಗಳನ್ನು ನಮೂದಿಸಿರುವ ಲಿಖಿತ ಮನವಿಯನ್ನು ಆಯೋಗಕ್ಕೆ ಸಲ್ಲಿಸಿ ಸ್ವೀಕೃತಿ (Acknowledgement) ಪಡೆಯಬೇಕು. ಪರೀಕ್ಷಾ ಕೇಂದ್ರ ಬಿಟ್ಟ ನಂತರ ಕಳುಹಿಸುವ ಯಾವುದೇ ಆಕ್ಷೇಪಣೆಯನ್ನು ಮಾನ್ಯ ಮಾಡಲಾಗುವುದಿಲ್ಲ.

ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಅರ್ಹರಾದ ನಂತರ ತಿದ್ದುಪಡಿಯಾದ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006ರ ಉಪನಿಯಮ 6(ಬಿ)ರನ್ವಯ ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇಕಡಾವಾರು ಮತ್ತು ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಆಧಾರದ ಮೇಲೆ 1:3 ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಹ್ವಾನಿಸಲಾಗುವುದು. ಅಭ್ಯರ್ಥಿಗಳು ಪರೀಕ್ಷೆಗೆ/ಸಂದರ್ಶನಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು.

ಸಂದರ್ಶನ ನಡೆಸುವ ಉದ್ದೇಶ ಎಂದರೆ ಅಭ್ಯರ್ಥಿಗಳು ಆಯ್ಕೆ ಬಯಸಿದ ಹುದ್ದೆಗೆ ಅವರ ಅರ್ಹತೆ, ವ್ಯಕ್ತಿತ್ವ, ಸಂಬಂಧಿತ ಪಿಷಯದಲ್ಲಿ ವ್ಯಕ್ತಪಡಿಸುವ ಸಾಮರ್ಥ್ಯತೆ, ಸೂಕ್ಷ್ಮತೆ ಮತ್ತು ಕರ್ತೃತ್ವ ಶಕ್ತಿ, ಸಾಮಾನ್ಯ ಜ್ಞಾನ ಹಾಗೂ ಪಿಷಯದಲ್ಲಿನ ಪರಿಜ್ಞಾನ ಹಾಗೂ ಇನ್ನಿತರ ಪಿಶೇಷ ಗುಣಗಳನ್ನು ನಿರ್ಧರಿಸುವುದಾಗಿರುತ್ತದೆ.

ಸಂದರ್ಶನಕ್ಕೆ ನಿಗದಿಪಡಿಸಿದ ಗರಿಷ್ಠ ಅಂಕಗಳು:– ಸ್ಪರ್ಧಾತ್ಮಕ ಪರೀಕ್ಷೆಗೆ ನಿಗದಿಪಡಿಸಿದ ಒಟ್ಟು ಅಂಕಗಳ ಶೇಕಡ 12.5 ಅಂಕಗಳು ಆಯೋಗವು ನಿಯಮಾನುಸಾರ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳು ಮತ್ತು ಸಂದರ್ಶನದಲ್ಲಿ ಗಳಿಸಿದ ಅಂಕಗಳ ಶೇಕಡವಾರರ ಜೇಷ್ಠತೆಯನ್ನು ಆಧರಿಸಿ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ನಿಯಮಗಳನುಸಾರ ಹುದ್ದೆಗಳ ನೇಮಕಾತಿಗಾಗಿ ಇರುವ ಮೀಸಲಾತಿಯನ್ವಯ ಪ್ರಕಟಿಸಲಾದ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಅಭ್ಯರ್ಥಿಗಳನ್ನು ಅಯ್ಕೆ ಮಾಡುತ್ತದೆ.

6. ಶೈಕ್ಷಣಿಕ ವಿದ್ಯಾರ್ಹತೆ ಮತ್ತು ವಯೋಮಿತಿ:–

6.1 ಶೈಕ್ಷಣಿಕ ವಿದ್ಯಾರ್ಹತೆ:– ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅನುಸೂಚಿಯಲ್ಲಿ ಆಯಾ ಹುದ್ದೆಯ ಮುಂದೆ ಸೂಚಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಲೇಬೇಕು. ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದದೇ, ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿದ್ದರೂ ಸಹ ಪರಿಗಣಿಸಲಾಗುವುದಿಲ್ಲ.

6.2 ವಯೋಮಿತಿ:– ಅನುಸೂಚಿಯಲ್ಲಿ ಆಯಾ ಹುದ್ದೆಯ ಮುಂದೆ ಸೂಚಿಸಿದಂತೆ, ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಕನಿಷ್ಠ ವಯೋಮಿತಿಯನ್ನು ಹೊಂದಿರಬೇಕು ಹಾಗೂ ನಿಗದಿತ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

ಈ ಕೆಳಗಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು.

(ಅ) ಅಭ್ಯರ್ಥಿಯು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಯಾದ ಅಥವಾ ರಾಜ್ಯ ಅಧಿನಿಯಮದ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಗೊಂಡು ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣದಲ್ಲಿರುವ ನಿಗಮದಲ್ಲಿ ಹುದ್ದೆ ಹೊಂದಿರುವ ಅಥವಾ ಹಿಂದೆ ಹೊಂದಿದ್ದಲ್ಲಿ ಗರಿಷ್ಠ ವಯೋಮಿತಿಯನ್ನು ಅವನು/ಅವಳು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ ಅಥವಾ ಹಿಂದೆ ಸಲ್ಲಿಸಿದ್ದರೋ ಅಷ್ಟು ವರ್ಷಗಳು ಅಥವಾ 10 ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

(ಆ) ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಕೇಂದ್ರ ಸಶಸ್ತ್ರ ದಳದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಅಷ್ಟು ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು. (ಈ ಉಪ ಕಂಡಿಕೆಗೆ ಸಂಬಂಧಿಸಿದ ವಿವರಣೆಗಳಿಗೆ ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮಗಳು 2 ಮತ್ತು 9 ರನ್ವಯ ಅರ್ಥೈಸಿಕೊಳ್ಳುವುದು)

(ಇ) ಅಭ್ಯರ್ಥಿಗಳು ನ್ಯಾಷನಲ್ ಕ್ಯಾಡೆಟ್ ಕೋರ್‌ನಲ್ಲಿ ಪೂರ್ಣಕಾಲಿಕ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿ ಬಿಡುಗಡೆಯಾಗಿರುವ ವ್ಯಕ್ತಿಯಾಗಿದ್ದರೆ ಅಂಥ ಕ್ಯಾಡೆಟ್ ಪರಿವೀಕ್ಷಕನಾಗಿ ಅವನು ಸೇವೆ ಸಲ್ಲಿಸಿದಷ್ಟು ವರ್ಷಗಳು.

(ಈ) ಅಭ್ಯರ್ಥಿಯು ರಾಜ್ಯ ಸರ್ಕಾರದಿಂದ ಪುರಸ್ಕೃತವಾದ ಗ್ರಾಮೀಣ ಔದ್ಯಮೀಕರಣ ಯೋಜನೆಯ ಮೇರೆಗೆ ನೇಮಕಗೊಂಡ ಗ್ರಾಮ ಸಮೂಹ ಪರಿಶೀಲಕನಾಗಿ ಈಗ ಕೆಲಸ ಮಾಡುತ್ತಿದ್ದರೆ ಅಥವಾ ಹಿಂದೆ ಇದ್ದ ಪಕ್ಷದಲ್ಲಿ ಅವನು / ಅವಳು ಅಂತಹ ಗ್ರಾಮ ಪರಿಶೀಲಕನಾಗಿ ಸೇವೆ ಸಲ್ಲಿಸಿದಷ್ಟು ವರ್ಷಗಳು.

(ಉ) ಅಭ್ಯರ್ಥಿಯು ಅಂಗವಿಕಲನಾಗಿದ್ದರೆ 10 ವರ್ಷಗಳು

(ಊ) ಅಭ್ಯರ್ಥಿಯು ಕರ್ನಾಟಕ ರಾಜ್ಯದಲ್ಲಿರುವ ಭಾರತ ಸರ್ಕಾರದ ಜನಗಣತಿ ಸಂಸ್ಥೆಯಲ್ಲಿ ಈಗ ಹುದ್ದೆಯನ್ನು ಹೊಂದಿದ್ದರೆ ಅಥವಾ ಹಿಂದೆ ಹೊಂದಿದ್ದ ಪಕ್ಷದಲ್ಲಿ ಗರಿಷ್ಠ ವಯೋಮಿತಿಯನ್ನು ಅವನು/ಅವಳು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ ಅಥವಾ ಹಿಂದೆ ಸಲ್ಲಿಸಿದ್ದರೋ ಅಷ್ಟು ವರ್ಷಗಳು ಅಥವಾ 5 ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

(ಋ) ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ 10 ವರ್ಷಗಳು.

(ೠ) ಅಭ್ಯರ್ಥಿಯು ಜೀತ ಕಾರ್ಮಿಕನಾಗಿದ್ದ ಪಕ್ಷದಲ್ಲಿ 10 ವರ್ಷಗಳು.

ಉಪ ಕಂಡಿಕೆ 6.2.(ೠ) ರ ಮೇರೆಗೆ ವಯೋಮಿತಿಯ ಸಡಿಲಿಕೆಯನ್ನು ಕೋರುವ ಅಭ್ಯರ್ಥಿಯು ಜೀತ ಕಾರ್ಮಿಕ ನಾಗಿದ್ದು, ಸದರಿ ಅಧಿನಿಯಮ ಅಥವಾ 1957ರ ಕರ್ನಾಟಕ ಜೀತ ಕಾರ್ಮಿಕ ಪದ್ಧತಿ (ರದ್ದಿಯಾತಿ) ಆದೇಶದ ಮೇರೆಗೆ ಜೀತ ಸಾಲವನ್ನು ಸಂದಾಯ ಮಾಡುವ ಹೊಣೆಯಿಂದ ಬಿಡುಗಡೆಯಾಗಿದ್ದಾನೆಂದು ಪ್ರಮಾಣ ಪತ್ರವನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್‌ರಿಂದ ಪಡೆದಿಟ್ಟುಕೊಂಡಿರಬೇಕು.

7. ಜಾತಿ / ಮೀಸಲಾತಿ ಪ್ರಮಾಣ ಪತ್ರಗಳು :–

ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು:–

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ 'ಡಿ' ರಲ್ಲಿ

ಆ) ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ ' ಇ ' ರಲ್ಲಿ

ಇ) ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ನಮೂನೆ ' ಎಫ್ ' ರಲ್ಲಿ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಸೀಲ್ದಾರ್‌ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಆಯೋಗವು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ನಿಯಮಾನುಸಾರ ಸಾಮಾನ್ಯ ಅರ್ಹತೆಯಡಿಯಲ್ಲಿ ಪರಿಗಣಿಸಲಾಗುವುದು. (ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ. ಈ ನಮೂನೆಗಳನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಸಲ್ಲಿಸಲ್ಪಡುವ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು) (ಮೀಸಲಾತಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದು).

8. ಗ್ರಾಮೀಣ ಅಭ್ಯರ್ಥಿ:–

ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 08 ಸೆನೆನಿ 2001 ದಿನಾಂಕ:13–02–2001 ರನ್ವಯ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು.

* ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕೋರುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ನಮೂನೆ–2ನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜುವಿನೊಂದಿಗೆ ಹಾಗೂ ಈ ಪ್ರಮಾಣ ಪತ್ರವಲ್ಲದೇ ಮೇಲುಸ್ಥರಕ್ಕೆ ಸೇರಲ್ಲದಿರುವ ಬಗ್ಗೆ ನಮೂನೆ–1 ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಿತ ತಹಶೀಲ್ದಾರ್‌ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು.

* ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, 2ಬಿ, 3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ–2ರಲ್ಲಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಪಡೆದಿಟ್ಟುಕೊಂಡಿರತಕ್ಕದ್ದು.

* ಆಯೋಗವು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಗ್ರಾಮೀಣ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಇತರೆ ನಮೂನೆಗಳಲ್ಲಿ ಸಲ್ಲಿಸಲ್ಪಡುವ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಂತಹವರು ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ.)

9. ಕನ್ನಡ ಮಾಧ್ಯಮ ಅಭ್ಯರ್ಥಿ:–

ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಆಸುಇ 71 ಸೆನೆನಿ 2001 ದಿನಾಂಕ 24–10–2002 ರನ್ವಯ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕೋರುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಮೊಹರು ಪಡೆದಿಟ್ಟುಕೊಂಡಿರತಕ್ಕದ್ದು. ಆಯೋಗವು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಕನ್ನಡ ಮಾಧ್ಯಮ ಅಭ್ಯರ್ಥಿ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಈ ಪ್ರಮಾಣ ಪತ್ರದ ನಮೂನೆಯನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ)

10. ಅಂಗವಿಕಲ ಅಭ್ಯರ್ಥಿ:–

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 50 ಎಸ್‌ಆರ್‌ಆರ್ 2000 ದಿನಾಂಕ 03–09–2005 ರಲ್ಲಿ ರಾಜ್ಯ ಸಿವಿಲ್ ಸೇವೆಗಳ ಸಮೂಹ–'ಎ' ಮತ್ತು 'ಬಿ' ಗುಂಪಿನ ಹುದ್ದೆಗಳಿಗೆ ಶೇಕಡ 3 ರಷ್ಟು (ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 21 ಎಸ್‌ಆರ್‌ಆರ್ 2008 ದಿನಾಂಕ 03–08–2009ರ ಅನುಸೂಚಿಯಡಿ ಸೇರ್ಪಡೆ ಮಾಡಲಾಗಿರುವ ಇಲಾಖೆಗಳು) ಮತ್ತು ಸಮೂಹ 'ಸಿ' ಗುಂಪಿನ ಹುದ್ದೆಗಳಿಗೆ ಶೇಕಡ 5 ರಷ್ಟು(ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 52 ಎಸ್‌ಆರ್‌ಆರ್ 99 ದಿನಾಂಕ: 29–11–2002ರ ಅನುಸೂಚಿಯಡಿ ಸೇರ್ಪಡಿಸಲಾಗಿರುವ ಇಲಾಖೆಗಳು) ಹುದ್ದೆಗಳನ್ನು ಅಂಗವಿಕಲರಿಗೆ ಮೀಸಲಾತಿ ಕಲ್ಪಿಸಿದ್ದು, ಇದರನ್ವಯ ಶೇಕಡ 40ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನು ಕೋರಲು ಅರ್ಹರು. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 115 ಸೆನೆನಿ 2005 ದಿನಾಂಕ: 19–11–2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಸಂದರ್ಶನಕ್ಕೆ ಅರ್ಹರಾದಾಗ ಸಂದರ್ಶನ ಸಮಯದಲ್ಲಿ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಅಂಗವಿಕಲ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು ಪರಿಗಣಿಸಲು ಬರುವುದಿಲ್ಲ. ಈ ಪ್ರಮಾಣ ಪತ್ರದ ನಮೂನೆಯನ್ನು ಈ ಸೂಚನೆಗಳಿಗೆ ಅನುಬಂಧಿಸಲಾಗಿದೆ. ಮೀಸಲಾತಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದ್ದು.

ಈಗ ಅಧಿಸೂಚಿಸಿರುವ ತಾಂತ್ರಿಕೇತರ ಹುದ್ದೆಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನಿಲಯ ಮೇಲ್ವಿಚಾರಕರ ಹುದ್ದೆಗಳನ್ನು ದಿನಾಂಕ 29-11-2002ರ ಅಧಿಸೂಚನೆಯಲ್ಲಿ ಗುರುತಿಸಲಾಗಿರುವುದರಿಂದ ಈ ಹುದ್ದೆಗಳಲ್ಲಿ ಅಂಗವಿಕಲರಿಗೆ ಮೀಸಲಿಟ್ಟ ಹುದ್ದೆಗಳಿಗೆ ಶ್ರವಣದೋಷ/ ಚಲನವಲನ ವೈಕಲ್ಯ/ ಮಾನಸಿಕ ಅಸ್ವಸ್ಥ/ ಕುಷ್ಠರೋಗದಿಂದ ಗುಣಮುಖರಾದವರು ಮಾತ್ರ ಅರ್ಜಿ ಸಲ್ಲಿಸಬಹುದು. ಅಂಧ/ದೃಷ್ಟಿಮಾಂದ್ಯ ಹಾಗೂ ಬುದ್ಧಿಮಾಂದ್ಯ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಂತಿಲ್ಲ.

11. ಯೋಜನೆಗಳಿಂದ ನಿರಾಶ್ರಿತ ಅಭ್ಯರ್ಥಿ:–

ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 23 ಸೇನೆನಿ 99 ದಿನಾಂಕ 23–11–2000 ರನ್ವಯ ಯೋಜನೆಗಳಿಂದ ನಿರ್ವಸಿತರಾದ ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು (ಗ್ರೂಪ್ 'ಸಿ' ಹುದ್ದೆಗಳಿಗೆ ಮಾತ್ರ) ಕೋರುವ ಅಭ್ಯರ್ಥಿಗಳು ಸಂಬಂಧಿತ ತಹಶೀಲ್ದಾರ್‌ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಆಯೋಗವು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಯೋಜನೆಗಳಿಂದ ನಿರ್ವಸಿತರಾದ ಕುಟುಂಬದ ಅಭ್ಯರ್ಥಿ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ.)

12. ಕಡ್ಡಾಯ ಕನ್ನಡ ಭಾಷಾ / ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬೆಂಗಳೂರು / ಮೈಸೂರು / ಬೆಳಗಾಂ / ಗುಲ್ಬರ್ಗಾ / ಶಿವಮೊಗ್ಗ ವಿಭಾಗೀಯ ಕೇಂದ್ರವಲ್ಲಿ ಹಾಗೂ ಆಯೋಗವು ನಿಗದಿಪಡಿಸಿರುವ ಇತರೆ ಯಾವುದೇ ಕೇಂದ್ರ ಸ್ಥಳದಲ್ಲಿ ನಡೆಸಲಾಗುವುದು. ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ಅವರು ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸುವ ವಿಭಾಗೀಯ ಕೇಂದ್ರವನ್ನು ನಮೂದಿಸತಕ್ಕದ್ದು. ಪರೀಕ್ಷಾ ಕೇಂದ್ರವನ್ನು ನಿಗದಿಪಡಿಸುವುದು ಆಯೋಗದ ಅಂತಿಮ ತೀರ್ಮಾನವಾಗಿರುತ್ತದೆ. ಸಂದರ್ಶನ / ಪರೀಕ್ಷೆಗಳ ದಿನಾಂಕವನ್ನು ಮುಂದೆ ಪ್ರಕಟಿಸಲಾಗುವುದು ಹಾಗೂ ಆಯೋಗದ ವೆಬ್ ಸೈಟ್ "http://kpsc.kar.nic in/ notification" ನಲ್ಲಿಯೂ ಬಿತ್ತರಿಸಲಾಗುವುದು.

ತಾಂತ್ರಿಕೇತರ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ತಾತ್ಕಾಲಿಕವಾಗಿ (Tentatively) ಸೆಪ್ಟೆಂಬರ್–ಅಕ್ಟೋಬರ್ 2011ರಲ್ಲಿ ನಡೆಸಲು ಉದ್ದೇಶಿಸಿದೆ.

13. ಆಯೋಗದೊಡನೆ ಪತ್ರ ವ್ಯವಹಾರ:–

ಆಯೋಗವು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ಆದಾಗ್ಯೂ ಅಭ್ಯರ್ಥಿಗೆ ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶ ಪತ್ರ / ಸಂದರ್ಶನಕ್ಕೆ ಸೂಚನೆ ಪತ್ರ ಬಾರದಿದ್ದಲ್ಲಿ, ಅಭ್ಯರ್ಥಿಯು ಆಯೋಗದ ಕಛೇರಿಯನ್ನು ಖುದ್ದಾಗಿ ಸಂಪರ್ಕಿಸತಕ್ಕದ್ದು. ಸ್ಪರ್ಧಾತ್ಮಕ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳು ಪ್ರವೇಶ ಪತ್ರ ಬಾರದಿದ್ದಲ್ಲಿ ಆಯೋಗದ ಅಂತರ್ಜಾಲದಿಂದ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು. ಸಂದರ್ಶನಕ್ಕೆ ಅನುಮತಿಸಲಾದ ಅಭ್ಯರ್ಥಿಯಾಗಿದ್ದರೆ ಸಂದರ್ಶನ ಪತ್ರದ ನಕಲನ್ನು ನೀಡಲಾಗುವುದು.

ವಿಳಾಸ ಬದಲಾವಣೆ ಇದ್ದಲ್ಲಿ ಅಭ್ಯರ್ಥಿಗಳು ಲಿಖಿತ ಮೂಲಕ ಆಯೋಗದ ಗಮನಕ್ಕೆ ತರತಕ್ಕದ್ದು. ಈ ವಿಳಾಸ ಬದಲಾವಣೆಯನ್ನು ಪರಿಗಣಿಸಲು ಆಯೋಗವು ಪ್ರಯತ್ನಿಸುವುದು. ಆದಾಗ್ಯೂ ಈ ವಿಚಾರದಲ್ಲಿ ಆಯೋಗವು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರ ವಹಿಸತಕ್ಕದ್ದು. ಅಭ್ಯರ್ಥಿಗಳು ಆಯೋಗದೊಡನೆ ಸಂಪರ್ಕಿಸಲೇಬೇಕಾದ ಸಂದರ್ಭದಲ್ಲಿ ತಮ್ಮ ಮನವಿಯಲ್ಲಿ ಕೆಳಕಂಡ ಮಾಹಿತಿಗಳು ಒಳಗೊಂಡಿರಬೇಕು:–

(i) ಹುದ್ದೆಯ / ವಿಷಯದ ಹೆಸರು

(ii) ಅಭ್ಯರ್ಥಿಯ ಪೂರ್ಣ ಹೆಸರು (ಬಿಡಿ ಅಕ್ಷರಗಳಲ್ಲಿ)

(iii) ಅರ್ಜಿಯಲ್ಲಿ ನಮೂದಿಸಿರುವ ಅಂಚೆ ವಿಳಾಸ

14. ಪ್ರಮುಖವಾದ ಸೂಚನೆಗಳು:–

ಅಭ್ಯರ್ಥಿಯ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಒಂದು ಹಾಳೆಯ ಮೇಲಿಟ್ಟು ಅದರ ಕೆಳಗೆ ಕಪ್ಪು ಶಾಹಿಯ ಸ್ಕೆಚ್ / ಮಾರ್ಕರ್ ಪೆನ್‌ರಲ್ಲಿ ಸಹಿಯನ್ನು ಮಾಡಿ ಇದನ್ನು ಸ್ಕ್ಯಾನ್ ಮಾಡಿ ಅರ್ಜಿಗೆ UPLOAD ಮಾಡಬೇಕು. ON LINE ಮೂಲಕ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಕೋರಿರುವ ಮೀಸಲಾತಿ ಪ್ರಮಾಣ ಪತ್ರಗಳು ಮತ್ತು ಇತರೇ ಪ್ರಮಾಣ ಪತ್ರಗಳನ್ನು ಪಡೆದಿಟ್ಟುಕೊಂಡಿರತಕ್ಕದು ಹಾಗೂ ಅದೇ ಮೀಸಲಾತಿ

ಪ್ರಮಾಣ ಪತ್ರದ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಸಂದರ್ಶನಕ್ಕೆ / ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದಾಗ ಸಂದರ್ಶನ ಸಮಯದಲ್ಲಿ/ ಮೂಲ ದಾಖಲಾತಿಗಳ ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸಬೇಕು. ಇತರೆ ನಮೂನೆಗಳಲ್ಲಿ ಅಥವಾ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ಯಾವುದೇ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. ತಪ್ಪಿದ್ದಲ್ಲಿ ಇವರ ಮೀಸಲಾತಿಯನ್ನು /ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು.

ಇತರೆ ನಮೂನೆಗಳಲ್ಲಿ ಅಥವಾ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ಯಾವುದೇ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

i) ಹುದ್ದೆಗೆ ನಿಗದಿಪಡಿಸಿದ ಶುಲ್ಕ(ಅರ್ಜಿಯನ್ನು ಭರ್ತಿ ಮಾಡಿದ ನಂತರ ಪಾವತಿಸತಕ್ಕದ್ದು) ಪಾವತಿ ರಸೀತಿ.

ii) ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ /ಸೆಮಿಸ್ಟರ್‌ಗಳ ಅಂಕಪಟ್ಟಿಗಳು ಹಾಗೂ ಘಟಿಕೋತ್ಸವದ ಪ್ರಮಾಣ ಪತ್ರಗಳು /ಗ್ರೇಡ್‌ನ್ನು ಶೇಕಡವಾರು ಅಂಕಗಳಿಗೆ ಪರಿವರ್ತಿಸಿದ ಪ್ರಮಾಣ ಪತ್ರ

iii) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ /ವರ್ಗಾವಣೆ ಪ್ರಮಾಣ ಪತ್ರ / ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ.

iv) ಹುದ್ದೆಗೆ ಅನುಭವ / ತರಬೇತಿ ನಿಗದಿಪಡಿಸಿದ್ದಲ್ಲಿ ಅದರ ಪ್ರಮಾಣ ಪತ್ರಗಳು

v) ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ ಸೈನಿಕ ಸೇವೆಯಿಂದ ಬಿಡುಗಡೆಯಾದ / ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಮಾಜಿ ಸೈನಿಕರ ಅವಲಂಬಿತರು, ಮಾಜಿ ಸೈನಿಕರು ಸೇವೆಯಲ್ಲಿರುವಾಗ ಕೊಲ್ಲಲ್ಪಟ್ಟಿರುವ ಬಗ್ಗೆ/ ಶಾಶ್ವತ ಅಂಗವೈಕಲ್ಯ ಹೊಂದಿರುವ ಬಗೆಗಿನ ಪ್ರಮಾಣಪತ್ರ.) ಹಾಜರುಪಡಿಸಬೇಕು.

vi) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ, ಮತ್ತು ಪ್ರವರ್ಗ–3ಬಿ ಮೀಸಲಾತಿ ಪ್ರಮಾಣ ಪತ್ರಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ (ಮೀಸಲಾತಿ ಕೋರಿದ್ದಲ್ಲಿ)

vii) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು 2ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)

viii) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

ix) ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

x) ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿಯ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

xi) ಸೇವಾನುಭವ ಪ್ರಮಾಣ ಪತ್ರಗಳು(ನಿಗದಿಪಡಿಸಿದಲ್ಲಿ)

(ಮೇಲಿನ ಕ್ರಮ ಸಂಖ್ಯೆ vi, vii, viii, ix ಮತ್ತು x ರ ಮೀಸಲಾತಿ ಪ್ರಮಾಣ ಪತ್ರಗಳ ನಮೂನೆಗಳನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ. ನಿಗದಿಪಡಿಸಿದ ನಮೂನೆಗಳಲ್ಲಿ ಮೀಸಲಾತಿಯನ್ನು ಕೋರದೇ ಇತರೆ ನಮೂನೆಗಳಲ್ಲಿ ಕೋರಿದ್ದಲ್ಲಿ ಮೀಸಲಾತಿಯನ್ನು ತಿರಸ್ಕರಿಸಲಾಗುವುದು).

ಭಾಗ–'ಬಿ'

(ವಿಶೇಷ ನೇಮಕಾತಿ ನಿಯಮಗಳು 2001ರನ್ವಯ ಭರ್ತಿ ಮಾಡಲಾಗುವ ಬ್ಯಾಕ್‌ಲಾಗ್ ಹುದ್ದೆಗಳು)

(ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಯಾವುದೇ ಶುಲ್ಕವನ್ನು ಪಾವತಿಸುವಂತಿಲ್ಲ.)

(ಅ) **ನೇಮಕಾತಿ ವಿಧಾನ:–** ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯನ್ನಾಗಲೀ ಅಥವಾ ಸಂದರ್ಶನವನ್ನಾಗಲೀ (Personality Test) ಎದುರಿಸಬೇಕಾಗಿರುವುದಿಲ್ಲ. ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು(ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ತುಂಬದೇ ಇರುವ ಸ್ಥಾನಗಳು) (ವಿಶೇಷ ನೇಮಕಾತಿ) ನಿಯಮಗಳು 2001ರನ್ವಯ, ಆಯಾ ಹುದ್ದೆಗಳಿಗೆ ನಿಗದಿಪಡಿಸಿದ್ದ ವಿದ್ಯಾರ್ಹತೆಯಲ್ಲಿ ಅಭ್ಯರ್ಥಿಗಳು ಗಳಿಸಿದ್ದ ಒಟ್ಟು ಅಂಕಗಳ ಶೇಕಡಾವಾರನ್ನು ಆಧರಿಸಿ 18 ವರ್ಷದಿಂದ 28 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳ ಒಂದು ಜ್ಯೇಷ್ಠತಾ ಪಟ್ಟಿಯನ್ನು ಹಾಗೂ 29 ವರ್ಷದಿಂದ 40 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳ ಇನ್ನೊಂದು ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಿ ಇದರ ಆಧಾರದಂತೆ ಆಯ್ಕೆ ಮಾಡಲಾಗುವುದು. ಆಯ್ಕೆ ಮಾಡುವಾಗ 29 ವರ್ಷದಿಂದ 40 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳ ಜ್ಯೇಷ್ಠತಾ ಪಟ್ಟಿಯಲ್ಲಿರುವವರಿಗೆ ಮೊದಲ ಆದ್ಯತೆ ನೀಡಲಾಗುವುದು.

(ಆ) **ಶೈಕ್ಷಣಿಕ ವಿದ್ಯಾರ್ಹತೆ:–** ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅನುಸೂಚಿಯಲ್ಲಿ ಆಯಾ ಹುದ್ದೆಯ ಮುಂದೆ ಸೂಚಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಲೇಬೇಕು. ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದದೇ, ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿದ್ದರೂ ಸಹ ಪರಿಗಣಿಸಲಾಗುವುದಿಲ್ಲ. ಸದರಿ ಹುದ್ದೆಗಳ ನೇಮಕಾತಿಯನ್ನು ನಿಯಮಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳ ಜ್ಯೇಷ್ಠತೆಯನುಸಾರ ಮಾಡಲಾಗುವುದರಿಂದ ಅಭ್ಯರ್ಥಿಗಳು ಅಂಕಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ತಪ್ಪಿದ್ದಲ್ಲಿ ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

(ಇ) **ವಯೋಮಿತಿ:–** ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಕನಿಷ್ಠ 18 ವರ್ಷ ಹೊಂದಿರಬೇಕು. ಹಾಗೂ ಗರಿಷ್ಠ 40 ವರ್ಷ ವಯೋಮಿತಿಯನ್ನು ಮೀರಿರಬಾರದು. ನಿಯಮಗಳಲ್ಲಿ ವಯೋಮಿತಿ ಸಡಿಲಿಕೆಗೆ ಅವಕಾಶವಿರುವುದಿಲ್ಲ.

ಪ್ರಮುಖವಾದ ಸೂಚನೆಗಳು:-

ಅಭ್ಯರ್ಥಿಯು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಛಾಯಾಚಿತ್ರವನ್ನು ಒಂದು ಹಾಳೆಯ ಮೇಲಿಟ್ಟು ಅದರ ಕೆಳಗೆ ಕಪ್ಪು ಶಾಯಿಯ ಸ್ಕೆಚ್ / ಪೆನ್ನಿನಿಂದ ಸಹಿಯನ್ನು ಮಾಡಿ ಅದನ್ನು ಸ್ಕ್ಯಾನ್ ಮಾಡಿ ಅರ್ಜಿಗೆ UPLOAD ಮಾಡಬೇಕು. ON LINE ಮೂಲಕ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಕೋರಿರುವ ಮೀಸಲಾತಿ ಪ್ರಮಾಣ ಪತ್ರಗಳು ಮತ್ತು ಇತರೇ ಪ್ರಮಾಣ ಪತ್ರಗಳನ್ನು ಪಡೆದಿಟ್ಟುಕೊಂಡಿರತಕ್ಕದು ಹಾಗೂ ಅದೇ ಮೀಸಲಾತಿ ಪ್ರಮಾಣ ಪತ್ರದ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದಾಗ ಮೂಲ ದಾಖಲಾತಿಗಳ ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸಬೇಕು. ಇತರೆ ನಮೂನೆಗಳಲ್ಲಿ ಅಥವಾ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ಯಾವುದೇ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. ತಪ್ಪಿದ್ದಲ್ಲಿ ಇವರ ಮೀಸಲಾತಿಯನ್ನು /ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು.

ಇತರೆ ನಮೂನೆಗಳಲ್ಲಿ ಅಥವಾ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ಯಾವುದೇ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

ಮೂಲ ದಾಖಲಾತಿಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳು:

1) ಅಭ್ಯರ್ಥಿಗಳು ಅವರ ವಯೋಮಿತಿಗೆ ಸಂಬಂಧಿಸಿದ ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರ/ವರ್ಗಾವಣೆ ಪ್ರಮಾಣಪತ್ರ/ಕ್ಯುಮುಲೇಟಿವ್ ರೆಕಾರ್ಡ್‌ನ ಉದ್ಧೃತ ಭಾಗ.

2) ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಗೆ ಸಂಬಂಧಿಸಿದ ಘಟಕೋತ್ಸವ ಪ್ರಮಾಣಪತ್ರ, ಎಲ್ಲಾ ವರ್ಷಗಳ/ ಸೆಮಿಸ್ಟರ್‌ಗಳ ಅಂಕಪಟ್ಟಿಗಳು, ಗ್ರೇಡ್ ಅಂಕಗಳು ಇದ್ದಲ್ಲಿ ವಿಶ್ವವಿದ್ಯಾಲಯದಿಂದ ಗ್ರೇಡ್ ಅಂಕಗಳನ್ನು ಶೇಕಡಾವಾರಿಗೆ ಪರಿವರ್ತಿಸಿದ ಪ್ರಮಾಣಪತ್ರ,

3) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮೀಸಲಾತಿ ಪ್ರಮಾಣಪತ್ರಗಳು ನಮೂನೆ–'ಡಿ'ನಲ್ಲಿ,

4) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–2ರಲ್ಲಿ.

5) ಸ್ಪಷ್ಟವಾಗಿ ಸೇವಾವಧಿ/ಸೇವೆಯ ಸ್ಥಳ ನಮೂದಿಸಲಾದ ಸೇವಾನುಭವ ಪ್ರಮಾಣ ಪತ್ರಗಳು.

6) ಇನ್‌ಟರ್ನ್‌ಷಿಪ್ ಪೂರ್ಣಗೊಳಿಸಿದ ಪ್ರಮಾಣ ಪತ್ರ / ಕೆಎಂಸಿ ನೋಂದಣಿ ಪ್ರಮಾಣ ಪತ್ರ ಕಡ್ಡಾಯವಾಗಿ ಹಾಜರುಪಡಿಸಬೇಕು.(ಸಹಾಯಕ ಶಸ್ತ್ರ ಚಿಕಿತ್ಸಕರ[ಅರವಳಿಕೆ ತಜ್ಞರು] ಹುದ್ದೆಗೆ)

7) ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಅವರ ನೇಮಕಾತಿ ಪ್ರಾಧಿಕಾರದಿಂದ ಪಡೆದ ನಿರಾಕ್ಷೇಪಣಾ ಪ್ರಮಾಣ ಪತ್ರ,

15. ವಿಶೇಷ ಸೂಚನೆಗಳು:–

(1) ON LINE ಮೂಲಕ ಅರ್ಜಿ ಸಲ್ಲಿಸುವಾಗ ಎಲ್ಲಾ ಮಾಹಿತಿಗಳನ್ನು ಸರಿಯಾಗಿ ಭರ್ತಿ ಮಾಡಿರುವ ಬಗ್ಗೆ ಖಚಿತಪಡಿಸಿಕೊಂಡು ನಂತರ ಅದರ ಒಂದು ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ಭದ್ರವಾಗಿ ತೆಗೆದಿಟ್ಟುಕೊಂಡಿರತಕ್ಕದ್ದು.

(2) ಈಗಾಗಲೇ ಸೇವೆಯಲ್ಲಿರುವ / ಸೇವೆ ಸಲ್ಲಿಸಿದ ಅಭ್ಯರ್ಥಿಗಳು ಅವರುಗಳ ನೇಮಕಾತಿ ಪ್ರಾಧಿಕಾರಿಗಳಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಅನುಮತಿಯನ್ನು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ವಿವರಗಳನ್ನು ಅರ್ಜಿಯಲ್ಲಿ ನಮೂದಿಸತಕ್ಕದ್ದು. ಆಯೋಗವು ಸೂಚಿಸಿದಾಗ ಇದರ ಮೂಲ ಪ್ರತಿಯನ್ನು ಪರಿಶೀಲನೆಗೆ ಹಾಜರುಪಡಿಸತಕ್ಕದ್ದು.

(3) ಅರ್ಜಿಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಅರ್ಜಿಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕವಾಗುವುದು.

16. ದುರ್ನಡತೆ:–

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ / ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅವನು / ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ಹುದ್ದೆಯ ಸಂದರ್ಶನದಿಂದ / ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಕಾರ್ಯದರ್ಶಿ,

ಕರ್ನಾಟಕ ಲೋಕ ಸೇವಾ ಆಯೋಗ.

ಅನುಸೂಚಿ

ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 1 ಆರ್‌ಟಿ(4)ಬಿ-1/2011 ದಿನಾಂಕ: 06-06-2011

ಅರ್ಜಿಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕ: 11-07-2011 ಸಂಜೆ 5.30 ಗಂಟೆ ಹಾಗೂ ಶುಲ್ಕ ಪಾವತಿಸಲು ಕೊನೆಯ ದಿನಾಂಕ: 12-07-2011 ಬ್ಯಾಂಕಿನ ವೇಳೆಯೊಳಗೆ

ಭಾಗ-ಎ(ತಾಂತ್ರಿಕೇತರ ಹುದ್ದೆಗಳು)

ಹುದ್ದೆಗಳ ಅನುಕ್ರಮ ಸಂಖ್ಯೆ	ಹುದ್ದೆಯ ಸಂಕೇತ/ POST CODE	ಇಲಾಖೆಯ ಹೆಸರು ಹುದ್ದೆಯ ಪದನಾಮ ಮತ್ತು ಸಂಖ್ಯೆ	ವೇತನ ಶ್ರೇಣಿ	ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ	ವಯೋಮಿತಿ (ವಯಸ್ಸು ವರ್ಷಗಳಲ್ಲಿ)	ಹುದ್ದೆಗಳ ವರ್ಗೀಕರಣ
(1)	(2)	(3)	(4)	(5)	(6)	(7)
			ಗ್ರೂಪ್– ' ಬಿ ' ಹುದ್ದೆಗಳು			
01–02	(01)	ಸಾರಿಗೆ ಇಲಾಖೆಯಲ್ಲಿನ ಸಹಾಯಕ ಕಾನೂನು ಅಧಿಕಾರಿ–02 ಹುದ್ದೆಗಳು Asst. Law Officer in Transport Dept.-02 posts	₹.11,400-21,600	1)Must be holder of a Degree in Law of a University established by Law in India. 2) Must be a person practicing as an Advocate for a period of not less than five years in Courts of Civil and Criminal Jurisdiction. ಟಿಪ್ಪಣಿ: (i) ಅಭ್ಯರ್ಥಿಯು ವಕೀಲರಾಗಿ ಯಾವ ವಕೀಲರ ಸಂಘದಲ್ಲಿ ಸದಸ್ಯರಾಗಿದ್ದಾರೋ, ಆ ಸಂಘದಿಂದ ಅವರು ವಕೀಲರಾಗಿ 5 ವರ್ಷಗಳ ಸೇವಾನುಭವ ಹೊಂದಿದ ಕುರಿತು ಪ್ರಮಾಣ ಪತ್ರವನ್ನು ಪಡೆದುಕೊಳ್ಳಬಹುದು. (ii) ಅಭ್ಯರ್ಥಿಯು ಕಿರಿಯ ವಕೀಲನಾಗಿ ಹಿರಿಯ ವಕೀಲರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ, ಸೇವಾನುಭವದ ಕುರಿತು ಅವರ ಹಿರಿಯ ವಕೀಲರ ಪ್ರಮಾಣಪತ್ರವನ್ನು ಪಡೆದುಕೊಳ್ಳಬಹುದು. (iii) ಅಭ್ಯರ್ಥಿಯು ಯಾವ ನ್ಯಾಯಾಲಯದಲ್ಲಿ ತನ್ನ ವಕೀಲರ ವೃತ್ತಿಯನ್ನು ನಡೆಸುತ್ತಿದ್ದಾರೋ, ಅಂತಹ ನ್ಯಾಯಾಲಯದ ನ್ಯಾಯಾಧೀಶರಿಂದ ಸೇವಾನುಭವದ ಕುರಿತು ಪ್ರಮಾಣ ಪತ್ರವನ್ನು ಪಡೆದುಕೊಳ್ಳಬಹುದಾಗಿರುತ್ತದೆ.	ಕನಿಷ್ಠ – 18 ಗರಿಷ್ಠ – 35 ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ } 38 ಪ.ಜಾ, ಪ.ಪಂ, ಪ್ರ 1 } 40	ಪರಿಶಿಷ್ಟ ಜಾತಿ(ಇತರೆ) – 01 ಹುದ್ದೆ ಸಾಮಾನ್ಯ ಅರ್ಹತೆ (ಇತರೆ) – 01 ಹುದ್ದೆ

ಹುದ್ದೆಗಳ ಅನುಕ್ರಮ ಸಂಖ್ಯೆ	ಹುದ್ದೆಯ ಸಂಕೇತ/ POST CODE	ಇಲಾಖೆಯ ಹೆಸರು ಹುದ್ದೆಯ ಪದನಾಮ ಮತ್ತು ಸಂಖ್ಯೆ	ವೇತನ ಶ್ರೇಣಿ	ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ	ವಯೋಮಿತಿ (ವಯಸ್ಸು ವರ್ಷಗಳಲ್ಲಿ)	ಹುದ್ದೆಗಳ ವರ್ಗೀಕರಣ
(1)	(2)	(3)	(4)	(5)	(6)	(7)
ಗ್ರೂಪ್ - 'ಸಿ' ಹುದ್ದೆಗಳು						
03-56	(02)	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಪರಿವೀಕ್ಷಣಾಧಿಕಾರಿ ದರ್ಜೆ-2 -54 ಹುದ್ದೆಗಳು Probationery Officer Gr-2 in the Department of Women and Child Development-54 Posts.	₹.10,000-18150	Must be holder of a (i) Bachelor's Degree in Social Work or any graduate with Master's Degree in Social Work; OR (ii)M.Sc. (Home Science) with specialisation in Nutrition or Child Development; OR (iii) M.A. in Psychology with Child Development Specialisation.	ಕನಿಷ್ಠ - 18 ಗರಿಷ್ಠ - 35 ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ } 38 ಪ.ಜಾ, ಪ.ಪಂ, ಪ್ರ 1 } 40	See table A below
57-71	(03)	ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿ ಕಾನೂನು ಮಾಪನಶಾಸ್ತ್ರ ನಿರೀಕ್ಷಕರು-15 ಹುದ್ದೆಗಳು Legal Metrology (Weights and Measures) Inspector in the Dept. of Legal Metrology-15 Posts	₹.8825-16000	Must be holder of a Degree in Science with Physics as one of the subjects or Engineering of a recognized University or a Diploma in Mechanical or Electrical Engineering granted by the recognized Board of Technical Education.	ಕನಿಷ್ಠ - 18 ಗರಿಷ್ಠ - 35 ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ } 38 ಪ.ಜಾ, ಪ.ಪಂ, ಪ್ರ 1 } 40	See table B below

Table A (03-56):

ಮೀಸಲಾತಿ	ಇತರೆ	ಮ	ಗ್ರಾ	ಮಾ.ಸೈ.	ಕಮಾಲಅ	ಯೋನಿ	ಒಟ್ಟು
ಪ.ಜಾ	02	03	02	01	01	–	09
ಪ.ಪಂ	–	01	01	–	–	–	02
ಪ್ರ.1	01	–	01	–	–	–	02
ಪ್ರ.2(ಎ)	02	02	02	01	01	–	08
ಪ್ರ.2(ಬಿ)	01	–	01	–	–	–	02
ಪ್ರ.3(ಎ)	–	01	01	–	–	–	02
ಪ್ರ.3(ಬಿ)	01	01	01	–	–	–	03
ಸಾ.ಅ	07	08	07	03	01	01	27
ಒಟ್ಟು	14	15	16	05	03	01	54

Table B (57-71):

ಮೀಸಲಾತಿ	ಇತರೆ	ಮ	ಗ್ರಾ	ಮಾ.ಸೈ.	ಒಟ್ಟು
ಪ.ಜಾ	01	–	01	01	03
ಪ್ರ.1	–	–	01	–	01
ಪ್ರ.2(ಎ)	–	–	01	01	02
ಪ್ರ.3(ಎ)	–	–	01	–	01
ಪ್ರ.3(ಬಿ)	–	–	[illegible]	–	[illegible]
ಸಾ.ಅ	02	02	02	01	07
ಒಟ್ಟು	03	02	07	03	15

ಹುದ್ದೆಗಳ ಅನುಕ್ರಮ ಸಂಖ್ಯೆ	ಹುದ್ದೆಯ ಸಂಕೇತ/ POST CODE	ಇಲಾಖೆಯ ಹೆಸರು ಹುದ್ದೆಯ ಪದನಾಮ ಮತ್ತು ಸಂಖ್ಯೆ	ವೇತನ ಶ್ರೇಣಿ	ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ	ವಯೋಮಿತಿ (ವಯಸ್ಸು ವರ್ಷಗಳಲ್ಲಿ)	ಹುದ್ದೆಗಳ ವರ್ಗೀಕರಣ
(1)	(2)	(3)	(4)	(5)	(6)	(7)
72-296	(04)	ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿ ಸಾಂಖ್ಯಿಕ ನಿರೀಕ್ಷಕರು– 225 ಹುದ್ದೆಗಳು Statistical Inspectors in the Directorate of Economics and Statistics-225 Posts.	₹.7,275-13,350	Must possess a Bachelor's degree with any one of the following subjects:- 1) Economics 2) Statistics 3) Mathematics 4) Computer Science	–ಅದೇ–	(see below)

ಹುದ್ದೆಗಳ ವರ್ಗೀಕರಣ (7):

ಮೀಸಲಾತಿ	ಇ	ಮ	ಗ್ರಾ	ಮಾಸೈ	ಕಮಾಅ	ಯೋ. ನಿ.ಅ	ಒಟ್ಟು
ಪ.ಜಾ	08	10	09	03	02	02	34
ಪ.ಪಂ	02	02	02	–	–	–	06
ಪ್ರ.1	03	03	02	01	–	–	09
ಪ್ರ.2(ಎ)	08	11	08	03	02	02	34
ಪ್ರ.2(ಬಿ)	03	03	02	01	–	–	09
ಪ್ರ.3(ಎ)	03	03	02	01	–	–	09
ಪ್ರ.3(ಬಿ)	03	04	03	01	01	–	12
ಸಾ.ಅ	29	33	28	12	05	05	112
ಒಟ್ಟು	**59**	**69**	**56**	**22**	**10**	**09**	**225**

(1)	(2)	(3)	(4)	(5)	(6)	(7)
297-360	(05)	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿನ ನಿಲಯ ಮೇಲ್ವಿಚಾರಕರು (ಪುರುಷ)–64 ಹುದ್ದೆಗಳು **Hostel Superintendent (Man)- 64 Posts**	₹.7,275-13,350	**Must be a holder of a Degree with Degree in Education**	ಕನಿಷ್ಠ – 18 ಗರಿಷ್ಠ – 35 ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ – 38 ಪ.ಜಾ, ಪ.ಪಂ, ಪ್ರ 1 – 40	(see tables below)
361-556	(06)	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿನ ನಿಲಯ ಮೇಲ್ವಿಚಾರಕರು (ಮಹಿಳೆ)–196 ಹುದ್ದೆಗಳು **Hostel Superintendent (Woman)-196 Posts**				

ನಿಲಯ ಮೇಲ್ವಿಚಾರಕರು (ಪುರುಷ)–64 ಹುದ್ದೆಗಳು

ಮೀಸಲಾತಿ	ಇ	ಗ್ರಾ	ಮಾಸೈ	ಕಮಾಅ	ಯೋ.ಸಿ.ಅ	ಅಂ.ವಿ	ಒಟ್ಟು
ಪ.ಜಾ	05	02	–	01	01	–	09
ಪ.ಪಂ	02	–	–	–	–	–	02
ಪ್ರ.1	01	01	01	–	–	–	03
ಪ್ರ.2(ಎ)	05	02	01	01	01	–	10
ಪ್ರ.2(ಬಿ)	–	01	01	–	–	–	02
ಪ್ರ.3(ಎ)	01	01	01	–	–	–	03
ಪ್ರ.3(ಬಿ)	02	–	01	–	–	–	03
ಸಾ.ಅ	17	08	03	01	01	02#	32
ಒಟ್ಟು	33	15	08	03	03	02	64

ವಿ.ಸೂ:ಇತರೆ ಅಭ್ಯರ್ಥಿಗಳಿಗೆ ಮೀಸಲಿದ್ದ ಹುದ್ದೆಗಳಿಗೆ ಪುರುಷ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

ನಿಲಯ ಮೇಲ್ವಿಚಾರಕರು (ಮಹಿಳೆ)–196 ಹುದ್ದೆಗಳು

ಮೀಸಲಾತಿ	ಇ	ಗ್ರಾ	ಮಾಸೈ	ಕಮಾಅ	ಯೋ.ಸಿ.ಅ	ಅಂ.ವಿ	ಒಟ್ಟು
ಪ.ಜಾ	15	07	03	02	01	01*	29
ಪ.ಪಂ	03	02	01	–	–	–	06
ಪ್ರ.1	04	02	01	01	–	–	08
ಪ್ರ.2(ಎ)	15	07	03	02	01	01*	29
ಪ್ರ.2(ಬಿ)	04	02	01	01	–	–	08
ಪ್ರ.3(ಎ)	04	02	01	01	–	–	08
ಪ್ರ.3(ಬಿ)	04	03	01	01	01	–	10
ಸಾ.ಅ	50	24	10	05	05	04(2#/1*/1**)	98
ಒಟ್ಟು	99	49	21	13	08	06	196

ವಿ.ಸೂ:_ಇತರೆ ಅಭ್ಯರ್ಥಿಗಳಿಗೆ ಮೀಸಲಿದ್ದ ಹುದ್ದೆಗಳಿಗೆ ಮಹಿಳಾ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

ಅಂಗವಿಕಲ ಮೀಸಲಾತಿಯ ವಿವರ: * ಶ್ರವಣದೋಷ/ ** ಚಲನವಲನ ವೈಕಲ/#ಶ್ರವಣದೋಷ/ ಚಲನವಲನ ವೈಕಲ್ಯ/ಕುಷ್ಠರೋಗದಿಂದ ಗುಣಮುಖರಾದವರು / ಮಾನಸಿಕ ಅಸ್ವಸ್ಥ ನಿಗದಿಪಡಿಸಿದ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಹುದ್ದೆಗೆ ನಿಗದಿಪಡಿಸಿದ ಇತರೇ ಅಂಗವಿಕಲತೆಯುಳ್ಳ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

(1)	(2)	(3)	(4)	(5)	(6)	(7)
[illegible]	[illegible]	[illegible] ಗಣತಿದಾರರು–30 ಹುದ್ದೆಗಳು Enumerators in the Directorate of Economics and Statistics-30 Posts.	₹ 5,800-10,500	Must have passed PUC(10+2) Examination	ಕನಿಷ್ಠ – 18 ಗರಿಷ್ಠ – 35 ಪ್ರ 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ } 38 ಪ.ಜಾ, ಪ.ಪಂ, ಪ್ರ 1 } 40	see table below
587-592	(08)	ಕರ್ನಾಟಕ ಸರ್ಕಾರದ ಸಚಿವಾಲಯದ ಗ್ರಂಥಾಲಯದಲ್ಲಿ ಗ್ರಂಥಾಲಯ ಸಹಾಯಕರು–06 ಹುದ್ದೆಗಳು Library Asst. in Karnataka Govt. Secretariat Library- 06 posts	₹.5,800-10,500	ತಾಂತ್ರಿಕ ಶಿಕ್ಷಣ ಮಂಡಳಿಯು, ಅಥವಾ ಯಾವುದೇ ವಿಶ್ವವಿದ್ಯಾಲಯವು ನಡೆಸುವ ಗ್ರಂಥಾಲಯ ವಿಜ್ಞಾನ ಡಿಪ್ಲೋಮ ವಿದ್ಯಾರ್ಹತೆಯನ್ನು ಹೊಂದಿರಬೇಕು. ಎಲ್ಲಾ ಸೆಮಿಸ್ಟರ್‌ಗಳಿಂದ ಒಟ್ಟಾರೆಯಾಗಿ 50% ಅಂಕಗಳನ್ನು ಪಡೆದಿರಬೇಕು.	– ಅದೇ –	see table below

Column (7), Enumerators:

ಮೀಸಲಾತಿ	ಇ	ಮ	ಗ್ರಾ	ಮಾಜಿ ಸೈ	[illegible]	[illegible]	ಒಟ್ಟು
ಪ.ಜಾ	02	01	01	–	–	–	04
ಪ.ಪಂ	–	01	–	–	–	–	01
ಪ್ರ1	–	01	–	–	–	–	01
ಪ್ರ.2(ಎ)	02	01	02	–	–	–	05
ಪ್ರ.2(ಬಿ)	–	01	–	–	–	–	01
ಪ್ರ.3(ಎ)	–	01	–	–	–	–	01
ಪ್ರ.3(ಬಿ)	–	01	–	–	–	–	01
ಸಾ.ಅ	04	05	03	01	01	01	15
ಒಟ್ಟು	08	13	06	01	01	01	30

Column (7), Library Assistants:

ಮೀಸಲಾತಿ	ಇ	ಮ	ಗ್ರಾ	ಒಟ್ಟು
ಪ.ಜಾ	01	–	–	01
ಪ.ಪಂ	01	–	–	01
ಪ್ರ.1	01	–	–	01
ಸಾ.ಅ	01	01	01	03
ಒಟ್ಟು	04	01	01	06

ಭಾಗ–ಬಿ(ವಿಶೇಷ ನೇಮಕಾತಿ ನಿಯಮಗಳು 2001ರನ್ವಯ ಭರ್ತಿ ಮಾಡಬೇಕಾದ ಬ್ಯಾಕ್‌ಲಾಗ್ ಹುದ್ದೆಗಳು)

ಗ್ರೂಪ್ 'ಬಿ' ಬ್ಯಾಕ್‌ಲಾಗ್ ಹುದ್ದೆಗಳು						
(1)	(2)	(3)	(4)	(5)	(6)	(7)
01	(09)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಹಾಯಕ ಶಸ್ತ್ರಚಿಕಿತ್ಸಕರು (ಅರವಳಿಕೆ ತಜ್ಞರು)–01 ಹುದ್ದೆ **Asst. Surgeon (Anaesthesiology) in BBMP- 01 post**	**₹.14,050-25,050**	1)MBBS Degree recognized by MCI/KMC 2) A pass in Degree or Diploma in Anaesthesiology recognized by MCI/KMC	ಕನಿಷ್ಠ – 18 ಗರಿಷ್ಠ – 40	ಪರಿಶಿಷ್ಟ ಜಾತಿ(ಇತರೆ) – 01 ಹುದ್ದೆ
02-05	(10)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ತಮಿಳು ಉಪನ್ಯಾಸಕರು– 04 ಹುದ್ದೆಗಳು **Tamil Lecturer in BBMP-04 posts**	**₹.11,400-21,600**	Master Degree of a recognized University or equivalent qualification in the concerned subject(in this case Tamil) with minimum 3 years teaching experience as High School Teachers.	ಕನಿಷ್ಠ – 18 ಗರಿಷ್ಠ – 40	ಪರಿಶಿಷ್ಟ ಜಾತಿ– 03 ಹುದ್ದೆಗಳು (ಇತರೆ – 01 ಹುದ್ದೆ; ಮಹಿಳೆ–01 ಹುದ್ದೆ; ಗ್ರಾಮೀಣ– 01 ಹುದ್ದೆ) ಪರಿಶಿಷ್ಟ ಪಂಗಡ(ಇತರೆ) – 01 ಹುದ್ದೆ
06-07	(11)	ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಕಿರಿಯ ಜಲಮೋಜಣೆದಾರರು–02 ಹುದ್ದೆಗಳು Jr.Hydrographic Surveyor in the Dept. of Ports & Inland Water Transport-02 posts	**₹.10,800-20,025**	Must be holder of a degree with Mathematics or Physics & must have put in total one year service in Merchant Ships or in any Hydrographic Surveying Service recognized by Government OR Survey Recorder First Class with atleast 5 years experience OR Must be a holder of Diploma in Civil Engineering with three years experience in Hydrographic Surveying Service recognized by Government.	ಕನಿಷ್ಠ – 18 ಗರಿಷ್ಠ – 40	ಪರಿಶಿಷ್ಟ ಜಾತಿ(ಇತರೆ) – 01 ಹುದ್ದೆ ಪರಿಶಿಷ್ಟ ಪಂಗಡ(ಇತರೆ) – 01 ಹುದ್ದೆ

ಸಂಕ್ಷೇಪ:– ಇ – ಇತರೆ / ಮ – ಮಹಿಳೆ / ಗ್ರಾ – ಗ್ರಾಮೀಣ / ಮಾ.ಸೈ – ಮಾಜಿ ಸೈನಿಕ / ಕ.ಮಾ.ಅ. – ಕನ್ನಡ ಮಾಧ್ಯಮದ ಅಭ್ಯರ್ಥಿ/ಪ.ಜಾ – ಪರಿಶಿಷ್ಟ ಜಾತಿ / ಪ.ಪಂ. – ಪರಿಶಿಷ್ಟ ಪಂಗಡ / ಪ್ರ–ಪ್ರವರ್ಗ / ಸಾ.ಅ.–ಸಾಮಾನ್ಯ ಅರ್ಹತೆ / ಅಂ.ವಿ–ಅಂಗ ವಿಕಲ/ಯೋ.ಅ–ಯೋಜನಾ ನಿರಾಶ್ರಿತರು.

ಪಿ.ಆರ್.223

ಡಿ.ಎಸ್.ವಿಶ್ವನಾಥ್
ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ.

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ವಿಷಯ: ಜವಾನನ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಜವಾನರೆಂದು ನೇಮಕಗೊಂಡ ಕೆಲಸಕ್ಕೆ ಹಾಜರಾಗದೇ ಇರುವ ಬ್ಯಾಕ್‌ಲಾಗ್ ಅಭ್ಯರ್ಥಿಗಳ ನೇಮಕಾತಿ ಆದೇಶವನ್ನು ರದ್ದುಪಡಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: DPAR 13 SBC 2001. ದಿನಾಂಕ:21.11.2001 ರನ್ವಯ ಪ್ರಕಟಿಸಿರುವ ಬ್ಯಾಕ್‌ಲಾಗ್ ನೇಮಕಾತಿ ನಿಯಮಗಳು 2001.

2) ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ ಅಲಾಟ್‌ಮೆಂಟ್ ಆರ್ಡರ್ ನಂಬರ್ ಸಿಬ್ಬಂದಿ 2–235/2003–04, ದಿನಾಂಕ:21.09.2010.

3) ಈ ಕಛೇರಿಯ ನೇಮಕಾತಿ ಆದೇಶ ಸಂಖ್ಯೆ: ಸಿಬ್ಬಂದಿ: 20/ 2010–11, ದಿನಾಂಕ:28.02.2011

4) ಬಿ.ಜಿ. ಶಿವಪ್ಪ ಇವರ ಮನವಿ ಪತ್ರ ದಿನಾಂಕ:17.05.2011.

ಪ್ರಸ್ತಾವನೆ:

ಉಲ್ಲೇಖ (2)ರ ಅಲಾಟ್‌ಮೆಂಟ್ ಆರ್ಡರ್ ಮೇರೆಗೆ ಉಲ್ಲೇಖ (3)ರ ಈ ಕಛೇರಿಯ ನೇಮಕಾತಿ ಆದೇಶದಲ್ಲಿ ಕೆಳಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಯನ್ನು ಅವರ ಹೆಸರಿನ ಮುಂದೆ ನಮೂದಿಸಿರುವ ಕಛೇರಿಗೆ ಜವಾನರೆಂದು ನೇಮಕ ಮಾಡಿ ಸದರಿ ಉಲ್ಲೇಖ (3)ರ ನೇಮಕಾತಿ ಆದೇಶವನ್ನು ಕೆಳಕಂಡ ಅಭ್ಯರ್ಥಿಗೆ RPAD ಮೂಲಕ ಕಳುಹಿಸಿ ಸದರಿ ನೇಮಕಾತಿ ಆದೇಶವು ಮುಟ್ಟಿದ ದಿನಾಂಕದಿಂದ ಹದಿನೈದು (15) ದಿನಗಳೊಳಗೆ ನೇಮಕಾತಿ ಮಾಡಿದ ಕಛೇರಿಯಲ್ಲಿ ತಪ್ಪದೇ ಕೆಲಸಕ್ಕೆ ಹಾಜರಾಗುವಂತೆ ಕೆಳಕಂಡ ಅಭ್ಯರ್ಥಿಗೆ ಸೂಚಿಸಲಾಗಿತ್ತು.

ಕ್ರ ಸಂ.	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	SC/ST	ಅಭ್ಯರ್ಥಿಯನ್ನು ಜವಾನರೆಂದು ನೇಮಕ ಮಾಡಿದ ಕಛೇರಿ ಹೆಸರು	ವರ್ಗೀಕರಣ
1.	ಬಿ.ಜಿ. ಶಿವಪ್ಪ ಬಿನ್ ಬಿ.ಎಂ. ಗಂಗುಲಪ್ಪ ಚಿಕ್ಕಬಣಹಳ್ಳಿ ಕಾಲೋನಿ, ಕನ್ನಮಂಗಳ ಪೋಸ್ಟ್, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು.	SC	ಜಿಲ್ಲಾ ನೋಂದಣಿ ಕಛೇರಿ, ಚಾಮರಾಜನಗರ, ಚಾಮರಾಜನಗರ ಜಿಲ್ಲೆ.	ಪರಿಶಿಷ್ಟ ಜಾತಿ ಸಾಮಾನ್ಯ ಅರ್ಹತಾ ಅಭ್ಯರ್ಥಿ ಮುಖ್ಯ ಪಟ್ಟಿ

ಆದರೆ ಮೇಲ್ಕಂಡ ಅಭ್ಯರ್ಥಿಯು ಸದರಿ ಉಲ್ಲೇಖ (3)ರ ನೇಮಕಾತಿ ಆದೇಶವನ್ನು ದಿನಾಂಕ:11.05.2011 ರಂದು ಸ್ವೀಕರಿಸಿದ್ದರೂ ಸಹ ಮೇಲ್ಕಂಡ ಅಭ್ಯರ್ಥಿಯು ಅವರನ್ನು ನೇಮಕ ಮಾಡಿದ ಮೇಲ್ಕಂಡ ಕಛೇರಿಯಲ್ಲಿ ಈ ತಹಲ್‌ವರೆವಿಗೂ ಕೆಲಸಕ್ಕೆ ಹಾಜರಾಗಿರುವುದಿಲ್ಲ.

ಇದಕ್ಕೆ ಬದಲಾಗಿ ಮೇಲ್ಕಂಡ ಅಭ್ಯರ್ಥಿಯು ದಿನಾಂಕ:17.05.2011 ರಂದು ಈ ಕಛೇರಿಗೆ ಲಿಖಿತ ಮನವಿಯನ್ನು ಸಲ್ಲಿಸಿ ಸದರಿ ಮನವಿಯಲ್ಲಿ ತಾವು ಈಗಾಗಲೇ ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಸದರಿ ಪೇಪರ್ ಮಿಲ್ಸ್ ಕಛೇರಿಯಲ್ಲೇ ಮುಂದುವರಿಯಲು ತನಗೆ ಇಚ್ಛೆ ಇರುವುದರಿಂದ ತಾನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಜವಾನರೆಂದು ಈ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಕೆಲಸಕ್ಕೆ ಹಾಜರಾಗಲು ಆಗುವುದಿಲ್ಲವೆಂದು ಉಲ್ಲೇಖ (4)ರನ್ವಯ ಲಿಖಿತ ಮನವಿ ಸಲ್ಲಿಸಿರುತ್ತಾರೆ.

ಆದ್ದರಿಂದ ಮೇಲ್ಕಂಡ ಅಭ್ಯರ್ಥಿಯ ನೇಮಕಾತಿಯನ್ನು ಕಾನೂನು ರೀತ್ಯಾ ರದ್ದುಪಡಿಸುವುದು ಸೂಕ್ತವೆಂದು ಮನಗಂಡು ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಸಿಬ್ಬಂದಿ: 20/2010–11, ದಿನಾಂಕ:30.05.2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಉಲ್ಲೇಖ (1)ರ ಅಧಿಸೂಚನೆ ಅನ್ವಯ ಹಾಗೂ 1977ರ ಕೆ.ಸಿ.ಎಸ್. (ಸಾಮಾನ್ಯ ನೇಮಕಾತಿ) ನಿಯಮಗಳಲ್ಲಿನ 18(3) ನೇ ನಿಯಮದನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ ಮೇಲ್ಕಂಡ ಬಿ.ಜಿ. ಶಿವಪ್ಪ ಎಂಬ ಬ್ಯಾಕ್‌ಲಾಗ್ ಅಭ್ಯರ್ಥಿಗೆ ನೀಡಿದ ಈ ಕಛೇರಿಯ ಉಲ್ಲೇಖ (3)ರ ನೇಮಕಾತಿ ಆದೇಶವನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಸದರಿ ಅಭ್ಯರ್ಥಿಯ ಕೋರಿಕೆ ಮೇರೆಗೆ ರದ್ದುಪಡಿಸಲಾಗಿದೆ.

ಮೇಲ್ಕಂಡ ಅಭ್ಯರ್ಥಿಯು ಈ ತಕ್ಷಣದಿಂದ ಈ ಇಲಾಖೆಯಲ್ಲಿನ ಈ ಜಿಲ್ಲೆಯ ಜವಾನರ ಹುದ್ದೆಯ ನೇಮಕಾತಿ ಹಕ್ಕನ್ನು ಕಳೆದುಕೊಂಡಿರುವರೆಂದು ಹಾಗೂ ಸದರಿ ಹುದ್ದೆಯ ಮೇಲೆ ಯಾವುದೇ ಹಕ್ಕನ್ನು ಹೊಂದಿರತಕ್ಕದ್ದಲ್ಲವೆಂದು ಹಾಗೂ ಸದರಿಯವರು ಸದರಿ ಹುದ್ದೆಯ ಮೇಲೆ ಯಾವುದೇ ಹಕ್ಕನ್ನು ಸಾಧಿಸತಕ್ಕದ್ದಲ್ಲವೆಂದು ಈ ಮೂಲಕ ಆದೇಶಿಸಿದೆ.

ನೇಮಕಾತಿ ಪ್ರಾಧಿಕಾರಿ ಹಾಗೂ
ಜಿಲ್ಲಾ ನೋಂದಣಾಧಿಕಾರಿಗಳು,
ಚಾಮರಾಜನಗರ.

ಪಿ.ಆರ್.221

